ಕನ್ನಡ ವಿಶ್ವವಿದ್ಯಾಲಯ ಹಂಪಿ

೨೦೧೩-೧೪ ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಕುವೆಂಪು ಕಾದಂಬರಿಗಳಲ್ಲಿ ಕೃಷಿಯ ಪರಿಕಲ್ಪನೆ – ಒಂದು ಅಧ್ಯಯನ

ಸಂಶೋಧಕರು
ಯೋಗೇಶ್ ಎಂ.ಡಿ
ಎಂ.ಫಿಲ್. ನೋಂದಣಿ ಸಂಖ್ಯೆ:
KVTMKS-00674

ಮಾರ್ಗದರ್ಶಕರು
ಡಾ. ಎ. ಆರ್. ಮದನಕುಮಾರ್
ಸಹ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು.

೨೦೧೩-೧೪



ಕನ್ನಡ ವಿಶ್ವವಿದ್ಯಾಲಯ ಹಂಪಿ

೨೦೧೩-೧೪ ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಕುವೆಂಪು ಕಾದಂಬರಿಗಳಲ್ಲಿ ಕೃಷಿಯ ಪರಿಕಲ್ಪನೆ - ಒಂದು ಅಧ್ಯಯನ

ಸಂಶೋಧಕರು

ಯೋಗೇಶ್ ಎಂ.ಡಿ

ಎಂ.ಫಿಲ್. ನೋಂದಣಿ ಸಂಖ್ಯೆ:

KVTMKS-00674

ಮಾರ್ಗದರ್ಶಕರು

ಡಾ. ಎ. ಆರ್. ಮದನಕುಮಾರ್

ಸಹ ಪ್ರಾಧ್ಯಾಪಕರು

ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು.

೨೦೧೩-೧೪

ಮಾರ್ಗದರ್ಶಕರ ಪ್ರಮಾಣಪತ್ರ

೨೦೧೩-೧೪ ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00674** ರ ಹಂಪಿ ವಿಶ್ವವಿದ್ಯಾಲಯದ ಎಂ ಫಿಲ್ ಪದವಿಯ ವಿದ್ಯಾರ್ಥಿಯಾದ **ಯೋಗೇಶ್** ಎಂ .ಡಿ. ಅವರು ನನ್ನ ಮಾರ್ಗದರ್ಶನದಲ್ಲಿ **"ಕುವೆಂಪು ಕಾದಂಬರಿಗಳಲ್ಲಿ ಕೃಷಿಯ ಪರಿಕಲ್ಪನೆ – ಒಂದು ಅಧ್ಯಯನ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಸಂಶೋಧನಾ ನಿಬಂಧವನ್ನು ಶ್ರೀಯುತರು ಈ ಮೊದಲು ಭಾಗಶಃವಾಗಲೀ ಪೂರ್ಣವಾಗಿಯಾಗಲೀ ಬೇರಾವುದೇ ಪದವಿ ಅಥವಾ ಡಿಪ್ಲೊಮಗಳಿಗಾಗಲೀ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಡಾ. ಎ. ಆರ್. ಮದನಕುಮಾರ್

(ಮಾರ್ಗದರ್ಶಕರು)

ಸಹ ಪ್ರಾಧ್ಯಾಪಕರು

ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ.

ಸ್ಥಳ : ಮೈಸೂರು

ದಿನಾಂಕ : 15.07.2014

ಅಭ್ಯರ್ಥಿಯ ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಿರುವ ನಾನು **ಡಾ. ಎ. ಆರ್. ಮದನಕುಮಾರ್ ಅವರ ಮಾರ್ಗದರ್ಶನದಲ್ಲಿ** ಎಂ. ಫಿಲ್ ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ **"ಕುವೆಂಪು ಕಾದಂಬರಿಗಳಲ್ಲಿ ಕೃಷಿಯ ಪರಿಕಲ್ಪನೆ – ಒಂದು ಅಧ್ಯಯನ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತೇನೆ. ಈ ಸಂಶೋಧನಾ ನಿಬಂಧವನ್ನು ಈ ಮೊದಲು ಭಾಗಶಃವಾಗಲೀ ಪೂರ್ಣವಾಗಿಯಾಗಲೀ ಬೇರಾವುದೇ ಪದವಿ ಅಥವಾ ಡಿಪ್ಲೊಮಗಳಿಗಾಗಲೀ ಒಪ್ಪಿಸಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಯೋಗೇಶ್ ಎಂ.ಡಿ

ಯೋಗೇಶ್ ಎಂ.ಡಿ

ಸ್ಥಳ : ಮೈಸೂರು

ನೋಂದಣಿ ಸಂಖ್ಯೆ **KVTMKS–00674**

ದಿನಾಂಕ : 15.07.2014

ಕನ್ನಡ ಎಂ.ಫಿಲ್. ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು.

ಪರಿವಿಡಿ

"ಕುವೆಂಪು ಕಾದಂಬರಿಗಳಲ್ಲಿ ಕೃಷಿಯ ಪರಿಕಲ್ಪನೆ – ಒಂದು ಅಧ್ಯಯನ"

ಅಧ್ಯಾಯ – 1	:	ಪೀಠಿಕೆ	1–4
ಅಧ್ಯಾಯ – 2	:	ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ	5–9
ಅಧ್ಯಾಯ – 3	:	ಕುವೆಂಪು ಸಾಹಿತ್ಯ – ಕಿರು ಸಮೀಕ್ಷೆ	10–37
ಅಧ್ಯಾಯ – 4	:	ಕುವೆಂಪು ಸಾಹಿತ್ಯದಲ್ಲಿ ರೈತ ಹಾಗೂ ಕೃಷಿಯ ಉಲ್ಲೇಖಗಳು – ವಿಶ್ಲೇಷಣೆ	38–56
ಅಧ್ಯಾಯ – 5	:	ಕುವೆಂಪು ಅವರ ಕಾದಂಬರಿಗಳು : ಸ್ಥೂಲನೋಟ (ಪರಿಚಯ)	57–75
ಅಧ್ಯಾಯ – 6	:	ಕಾನೂರು ಹೆಗ್ಗಡಿತಿಯಲ್ಲಿ ಕೃಷಿಯ ಪಾತ್ರ	76–96
ಅಧ್ಯಾಯ – 7	:	ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೃಷಿಯ ಪಾತ್ರ	97–126
ಅಧ್ಯಾಯ – 8	:	ಎರಡು ಕಾದಂಬರಿಗಳ ಕೃಷಿಯ ನೆಲೆ 1. ಕೃಷಿಯ ಪ್ರಾಮುಖ್ಯ (ಕಾದಂಬರಿಯೊಳಗೆ) 2. ಕೃಷಿಯ ವೈವಿಧ್ಯ – ಬೇಟೆ – ಹೈನು – ವ್ಯವಸಾಯ – ಪಶುಸಾಕಣೆ	127–148
ಅಧ್ಯಾಯ – 9	:	ಅಧ್ಯಯನದ ಫಲಿತಗಳು	149–154
ಅಧ್ಯಾಯ – 10	:	ಸಮಾರೋಪ	155–163
		ಅನುಬಂಧ 1. ಚಿತ್ರಸಂಪುಟ 2. ಗ್ರಂಥಸೂಚಿ 3. ಲೇಖನಸೂಚಿ 4. ಪತ್ರಿಕಾಸೂಚಿ	164–173

ಅಧ್ಯಾಯ-೧

ಪೀಠಿಕೆ:

ಸೌಂದರ್ಯಾರಾಧನೆ ಪಾಂಡಿತ್ಯ ಪ್ರದರ್ಶನ ಮತ್ತು ರಂಜನೆಯಕಾರವಾಗಿದ್ದು ಸಾಹಿತ್ಯವನ್ನು ಸಮಾಜಮುಖಿಯಾಗಿಸಿದ್ದು, ಆಧುನಿಕ ಕನ್ನಡ ಸಾಹಿತ್ಯದ ಹೆಗ್ಗಳಿಕೆ ಅರಮನೆಗಳಲ್ಲಿ ಅಗ್ರಹಾರಗಳಲ್ಲಿ ಕೇವಲ ಹತ್ತಾರು ಜನರ ಸ್ವತ್ತಾಗಿದ್ದ ಸಾಹಿತ್ಯ ಎಂಬ ಝರಿ, ನದಿಯಾಗಿ ಬೆಳೆದು ಸಮಾಜದತ್ತ ಹರಿಯಲು ಸಾವಿರಾರುವರ್ಷಗಳೇ ಬೇಕಾದವು. ೧೨ನೇ ಶತಮಾನದ ವಚನ ಸಾಹಿತ್ಯ ಹೀಗೆ ಹಿಂದೊಮ್ಮೆ ಸಾಹಿತ್ಯವನ್ನು ಜನಸಾಮಾನ್ಯರ ನಡುವಿನ ಕಾರಂಜಿಯಾಗಿ ತೊರೆಯಾಗಿ ಬೆಳೆಸಿದ್ದು, ಸಾಹಿತ್ಯ ಚರಿತ್ರೆಯ ದೊಡ್ಡ ತಿರುವು ಆನಂತರ ಮತ್ತೊಮ್ಮೆ ಅಂತಹ ಬದಲಾವಣೆ ಕಾಣಲು ಈ ನಾಡು ಸುಮಾರು ೮ ಶತಮಾನಗಳೇ ಕಾಯಬೇಕಾಯಿತು. ಪಾಶ್ಚಾತ್ಯರ ಆಗಮನ ಆಂಗ್ಲಭಾಷೆ, ಸಾಹಿತ್ಯದ ಪರಿಚಯ ಈ ಕಾರ್ಯಕ್ಕೆ ಮತ್ತೆ ನಾಂದಿ ಹಾಡಿತು. ಜಡ್ಡುಗಟ್ಟಿದ ಭಾರತೀಯ ಸಾಹಿತ್ಯ ಮತ್ತು ಸಮಾಜಗಳೇ ಹಲವು ದೃಷ್ಟಿಯಿಂದ ಜೀವಂತವಾದವು. ಅಂತಹ ಜೀವಂತಿಕೆಯನ್ನು ಬಿ.ಎಂ.ಶ್ರೀ ವೆಂಕಣ್ಣಯ್ಯ ಮುಂತಾದ ಮೊದಲ ತಲೆಮಾರಿನ ವಿದ್ವಾಂಸರೇ ನವೋದಯ ಸಾಹಿತ್ಯದ ಉಗಮಕ್ಕೆ ಕಾರಣರಾದವರು ಎನ್ನಬಹುದು. ಆನಂತರದ ಎರಡನೇ ತಲೆಮಾರಿನ ಪ್ರಮುಖರೇ ನವೋದಯ ಸಾಹಿತ್ಯದ ಆಧಾರಸ್ತಂಭಗಳಾದರು.

ಅವರಲ್ಲಿ ಆಧುನಿಕ ಕನ್ನಡ ಸಾಹಿತ್ಯದ ನವೋದಯ ಸಂದರ್ಭವನ್ನು ಪ್ರತಿನಿಧಿಸಿ ಇಡೀ ಕನ್ನಡ ಸಾಹಿತ್ಯವನ್ನು ಆವರಿಸಿಕೊಂಡು ಭಾರತೀಯ ಸಾಹಿತ್ಯದಲ್ಲಿ ಅಗ್ರಗಣ್ಯರೆನಿಸಿ ವಿಶ್ವಸಾಹಿತ್ಯದ ಶ್ರೇಷ್ಠರ ಸಾಲಿನಲ್ಲಿ ನಿಂತವರು ಕುವೆಂಪು.

ಸಾಹಿತ್ಯದ ಬಹುತೇಕ ಎಲ್ಲಾ ಪ್ರಕಾರಗಳಲ್ಲಿ ಕೃಷಿ ಮಾಡಿದವರ ಸಂಖ್ಯೆ ಸಾಕಷ್ಟು ದೊರೆಯುತ್ತದೆ. ಆದರೆ ಎಲ್ಲಾ ಪ್ರಕಾರಗಳಲ್ಲಿ ತಮ್ಮತನದ ಪ್ರತಿಭೆಯ ಛಾಪು ಮೂಡಿಸಿದವರು ವಿರಳ, ಆಧುನಿಕ ಕನ್ನಡ ಸಾಹಿತ್ಯ ಚರಿತೆಯ ಪುಟಗಳಲ್ಲಿ ಸಂಖ್ಯೆಯ ದೃಷ್ಟಿಯಿಂದ ಸ್ಪರ್ಧಿಸದೆ ಮೌಲ್ಯದ ದೃಷ್ಟಿಯಿಂದ ಮೇರು ಮಟ್ಟದ ಸಾಧನೆ ಮಾಡಿದವರು ಕುವೆಂಪು. ಕಾವ್ಯ ಕ್ಷೇತ್ರದಿಂದ ಪ್ರಾರಂಭವಾದ ಇವರ ಬರವಣಿಗೆ ನಂತರ ನಾಟಕ, ಕಾದಂಬರಿ, ಕಥೆ ವಿಮರ್ಶೆ ಮಕ್ಕಳ ಸಾಹಿತ್ಯ ಪ್ರಬಂಧ ಜೀವನ ಚರಿತ್ರೆ ಆತ್ಮಕಥೆ ಭಾಷಣ, ಲೇಖನ, ಅನುವಾದ ಮಹಾಕಾವ್ಯದವರೆಗೂ ವ್ಯಾಪಿಸಿ ಒಟ್ಟು ೬೯ ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಅವರಿಂದ ಅರ್ಪಣೆಯಾಗಿವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಧ್ಯಯನಕ್ಕೆ ಹೊರಟವರು ಕುವೆಂಪು ಕೃತಿಗಳನ್ನು ಅಧ್ಯಯನ ಮಾಡಿಯೇ ಮುಂದುವರೆಯಬೇಕೆಂದರೆ ಅವರ

ಕೃತಿಗಳ ಮಹತ್ವ ಅರಿವಾದೀತು. ಬಿ.ಎಂ.ಶ್ರೀ ಅವರ ಮಾತುಗಳಲ್ಲಿಯೇ ಹೇಳಬೇಕೆಂದರೆ "ಪುಟ್ಟಪ್ಪನವರ ಕವಿತ್ವಗಳಲ್ಲಿ ಹೃದಯದಿಂದ ಬಂದವೇ, ನೇರವಾಗಿ ಹೃದಯಕ್ಕೆ ಹೋಗತಕ್ಕವೇ, ಜೀವಾನಂದ, ಬ್ರಹ್ಮಾನಂದ, ಕಾವ್ಯಾನಂದಗಳನ್ನು ತಮ್ಮ ಶಕ್ತಿಗನುಗುಣವಾಗಿ ಅಂತಃಕರಣದಲ್ಲಿ ತುಂಬಿಕೊಳ್ಳುತ್ತಾ ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವವರು ಪುಟಪ್ಪನವರು" ಎಂಬ ಅಭಿಪ್ರಾಯ ಕೇವಲ ಅಭಿಮಾನದಿಂದ ಹೇಳಿದ ಮಾತಾಗಿ ಉಳಿಯದೆ ಮುಂದಿನ ತಲೆಮಾರಿನ ಓದುಗರಿಂದ ಸಾಹಿತ್ಯಾಭಿಮಾನಿಗಳಿಂದ ಇದು ಪ್ರತಿಧ್ವನಿಸಿದೆ ಆ ಕಾರಣಕ್ಕಾಗಿಯೇ ಕನ್ನಡ ಸಾಹಿತ್ಯ ಲೋಕದ ಹಲವು ಪ್ರಥಮಗಳು ಕುವೆಂಪು ಹೆಸರಿನಲ್ಲಿವೆ. ಕೇಂದ್ರ ಸಾಹಿತ್ಯ ಲೋಕದ ಹಲವು ಪ್ರಥಮಗಳನ್ನು ಕುವೆಂಪು ಹೆಸರಿನಲ್ಲಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರತ್ನ, ರಾಷ್ಟ್ರಕವಿ ಪ್ರಶಸ್ತಿಗಳನ್ನು ಪಡೆದ ಪ್ರಥಮ ಕನ್ನಡಿಗ ಕುವೆಂಪು "ಪಂಪನಿಂದ ಕುವೆಂಪುವರೆಗೆ" ಎಂದು ಕನ್ನಡ ವಾಙ್ಞಯಗ ಎರಡು ಮಹತ್ವದ ವಾದಿಗಳನ್ನು ಗುರುತಿಸುವುದರಲ್ಲಿಯೂ ಮಹತ್ವವಿದೆ. ಕುವೆಂಪು ಸಾಹಿತ್ಯದ ರಾಶಿಯಲ್ಲಿ 'ಬಿಗಿನರ್ಸ್ ಮೂಸ್ ಎಂಬ ಇಂಗ್ಲೀಷ್ ಕವನ ಸಂಕಲನವೂ ಸೇರಿದಂತೆ ೨೫ ಕವನ ಸಂಕಲನಗಳು ೧೨ ನಾಟಕಗಳು, ೨ ಕಥಾ ಸಂಕಲನಗಳು, ೨ ಮಹಾಕಾದಂಬರಿಗಳು ೬ ವಿಮರ್ಶಾ ಕೃತಿಗಳು, ೫ ಭಾಷಣಾ ಕೃತಿಗಳು, ೯ ಜೀವನ ಚರಿತ್ರೆಗಳು, ೨ ಅನುವಾದ ಕೃತಿಗಳು, ೧ ಆತ್ಮಕಥೆ, ೧ ಮಹಾಕಾವ್ಯ, ೨ ಇತರೆ ಕೃತಿಗಳು ಸೇರಿದಂತೆ ಒಟ್ಟು ೬೯ ಕೃತಿಗಳಿವೆ.

ಕುವೆಂಪು ಅವರು ಸಾಹಿತ್ಯ ಕೃಷಿಯ ಜೊತೆಗೆ ಏಕೀಕರಣ ಚಳುವಳಿಯ ಭಾಗವಾಗಿ ತ್ರಿಕರಣ ಪೂರ್ವಕವಾಗಿ ಶ್ರಮಿಸಿದರು. ತಮ್ಮ ಲೇಖನಿಯನ್ನೇ ದಿವ್ಯಾಯುಧವಾಗಿ ಬಳಸಿದರು. ಪ್ರಾದೇಶಿಕ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಆಗಬೇಕೆಂದು ಫಣತೊಟ್ಟು ನಿಂತರು. ಕನ್ನಡ ಆಡಾಳಿತ ಭಾಷೆ ಆಗಬೇಕು ಎಂದು ಆಶಿಸಿದರು. ಆದರೆ ಕುವೆಂಪು ಎಂದೂ ಇತರ ಭಾಷೆಗಳ ಬಗ್ಗೆ ಕುಂದನ್ನಾಡಿರವರಲ್ಲ.

ಶ್ರೇಷ್ಠ ಅಧ್ಯಾಪಕ, ಶಿಕ್ಷಣ ತಜ್ಞ ಕವಿ, ದೇಶಭಕ್ತ ಕನ್ನಡಪರ ನಾಯಕ ಸ್ವಾತಂತ್ರ್ಯ ಪ್ರೇಮಿ, ಆಧ್ಯಾತ್ಮಿಕ ಸಾಧಕ ಹೀಗೆ ಹಲವು ಮುಖಗಳ ವ್ಯಕ್ತಿತ್ವಕ್ಕೆ ಏಕೈಕ ಉದಾಹರಣೆಯಂತಿದ್ದರು ಕುವೆಂಪು. ಅವರ ಜೀವನದ ಸಂಧ್ಯಾಕಾಲದಲ್ಲಿ ಮನುಕುಲಕ್ಕೆ ನೀಡಿದ 'ವಿಶ್ವ ಮಾನವ ಸಂದೇಶ' 'ಮಂತ್ರಮಾಂಗಲ್ಯ', 'ವಿಚಾರ ಕ್ರಾಂತಿಗೆ ಆಹ್ವಾನ'ಗಳು ಇಡೀ ಅವರ ಬದುಕು ಮತ್ತು ಬರವಣಿಗೆಗಳ ರಸಪಾಕದಂತಿವೆ. ಜಿ.ಎಸ್.ಶಿವರುದ್ರಪ್ಪನವರ ಮಾತಿನಲ್ಲೇ ಹೇಳಬೇಕೆಂದರೆ, "ಕುವೆಂಪು ಅವರು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆಗಿ ಹೋದ ಘಟನೆಗಳಿಗೆ ಸ್ಪಂದಿಸಿದ ಹಾಗೆ ಇತರರು ಯಾರು ಸ್ಪಂದಿಸಿಲ್ಲ ಎನ್ನಬಹುದು" ಅಂತೆಯೇ ಕರ್ನಾಟಕ ಸರ್ಕಾರ ೧೯೬೪ ರಲ್ಲಿ ನೀಡಿದ ರಾಷ್ಟ್ರಕವಿ ಪ್ರಶಸ್ತಿ ಅವರ ಪ್ರತಿಭೆ ಸಾಧನೆ ವ್ಯಕ್ತಿತ್ವಗಳಿಗೆ ಸಾರ್ಥಕ ಹೆಸರಾಗಿದೆ.

ತಮ್ಮ ಬಹುಮುಖಿ ಚಿಂತನೆಗಳನ್ನು ಸಾಹಿತ್ಯದ ಎಲ್ಲಾ ಪ್ರಕಾರಗಳ ಮೂಲಕ ತೆರೆದಿಟ್ಟವರು ಕುವೆಂಪು ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ, ಮಹಾಕಾವ್ಯ, ಪ್ರಬಂಧ, ಆತ್ಮಕತೆ, ಜೀವನಚರಿತ್ರೆ ಈ ಎಲ್ಲಾ ಪ್ರಕಾರಗಳಲ್ಲಿ ಗಮನಾರ್ಹ ಕೃತಿಗಳನ್ನು ರಚಿಸಿದ್ದಾರೆ.

೨೦ನೇ ಶತಮಾನ ಮಾನವ ಇತಿಹಾಸದಲ್ಲಿ ಸಂಕೀರ್ಣವಾದ ಕಾಲ ಭಾರತದ ಮಟ್ಟಿಗಂತೂ ಈ ಶತಮಾನ ಇನ್ನೂ ಸಂಕೀರ್ಣವಾದದ್ದು. ಹತ್ತು ಹಲವು ಬಗೆಯ ಸವಾಲುಗಳನ್ನು ಎದುರಿಸಬೇಕಾಗಿದೆ.

ಸೂರ್ಯ ಮುಳಗದ ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಅಹಿಂಸಾ ಮಾರ್ಗದಲ್ಲಿ ಹೋರಾಡಿ ಸ್ವಾತಂತ್ರ್ಯ ಪಡೆಯುವ ಸಾತ್ವಿಕ ಸಂಕಲ್ಪ. ಸ್ವತಂತ್ರ ಪಡೆಯುತ್ತಿರುವ ಸಂಭ್ರಮದೊಂದಿಗೆ ಮತಧರ್ಮದ ಆಧಾರದ ಮೇಲೆ ದೇಶವು ಇಬ್ಭಾಗವಾದ ಯಾತನೆ ಪಾಶ್ಚಾತ್ಯ ಮತ್ತು ಭಾರತೀಯ ಸಂಸ್ಕೃತಿಯ ಮುಖಾಮುಖಿ ಶತಮಾನಗಳಿಂದ ಹುಟ್ಟು ನಿರ್ಧರಿಸುತ್ತಾ ಬಂದ ಜಾತಿ-ಜಾತಿಗಳ ನಡುವಿನ ಮೇಲು-ಕೀಳೆಂಬ ಸಾಮಾಜಿಕ ಅಸಮಾನತೆ ಲಿಂಗಾಧಾರಿತ ಪರಂಪರಾಗತ ಮನಃಸ್ಥಿತಿ ಕಸಬು ಆಧಾರಿತ ವರ್ಗ ಇಂಥ ನೂರಾರು ಸವಾಲುಗಳನ್ನು ಈ ಕಾಲಘಟ್ಟದಲ್ಲಿ ದೇಶ ಎದುರಿಸಬೇಕಾಯಿತು.

ಈ ಎಲ್ಲಾ ಪ್ರೇರಣೆ ಪ್ರಭಾವಗಳೊಂದಿಗೆ ಹುಟ್ಟಿಕೊಂಡ ೨೦ನೇ ಶತಮಾನದ ಆಧುನಿಕ ಕನ್ನಡ ಸಾಹಿತ್ಯ ಮುಖ್ಯವಾಗಿ ನವೋದಯ. ಪ್ರಗತಿಶೀಲ, ನವ್ಯ, ಬಂಡಾಯ-ದಲಿತ ಎಂಬ ಮಾರ್ಗಗಳಲ್ಲಿ ನಮ್ಮ ಸಾಹಿತ್ಯ ಶ್ರೀಮಮಗೊಳ್ಳುತ್ತಾ ಬೆಳೆದುಬಂದಿದೆ.

ಈ ವೈವಿಧ್ಯಮಯ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ ಅನೇಕ ಬರಹಗಾರರು ನಮ್ಮ ನಾಡು-ನುಡಿ, ನೆಲ-ಜಲ, ಜಾತಿ-ಧರ್ಮ ಇತ್ಯಾದಿ ವಿಚಾರಗಳ ಬಗೆಗೆ ಜನರಲ್ಲಿ ವೈಚಾರಿಕ ಮನೋಭಾವನ್ನು ಬೆಳೆಸುವ ಪ್ರಯತ್ನ ಮಾಡಿದ್ದಾರೆ ಹಾಗೂ ಅನೇಕ ವಿದ್ವಾಂಸರು, ನಮ್ಮ ದೇಶದ ರೈತರ ಬಗೆ ಮತ್ತು ಕೃಷಿ ಬಗೆ ಸಾಹಿತ್ಯ ಕಥೆ ಕಾದಂಬರಿಗಳನ್ನು ರಚಿಸಿರುತ್ತಾರೆ. ಅದರಲ್ಲಿ ಕುವೆಂಪು ಅವರು ಪ್ರಮುಖರು ರೈತರ ಸಮಸ್ಯೆಗಳನ್ನೇ ಕೇಂದ್ರಾಗಿಸಿಕೊಂಡು ಕುವೆಂಪು ಅವರ ಕವನಗಳು

೧. ರೈತನ ದೃಷ್ಟಿ [ಕೋಗಿಲೆ ಮತ್ತು ಸೋವಿಯತ್ ರಷ್ಯಾ]

೨. ಗೊಬ್ಬರ [ಕೋಗಿಲೆ ಮತ್ತು ಸೋವಿಯತ್ ರಷ್ಯಾ]

೩. ಮುಂಗಾರು [ಪಕ್ಷಿಕಾಶಿ]

೪. ಹಸರು [ಪಕ್ಷಿಕಾಶಿ]

೫. ಸುಗಿ ಬರುತ್ತಿದೆ [ಕೊಳಲು]

೬. ಧನ್ವಂತರಿ ಚಿಕಿತ್ಸೆ

೭. ಸಾಲದ ಮಗು, ಜಲಗಾರ (ನಾಟಕ) ಇವು ಮುಖ್ಯವಾದವು.

ಕುವೆಂಪು ಕೃತಿಗಳಲ್ಲಿ ಕೃಷಿಯನ್ನು ಗಮನಿಸಬಹುದು.

ಅಧ್ಯಾಯ-೨

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಸ್ವರೂಪ

ಕುವೆಂಪು ಜನತೆಯ ಕವಿ ಜನಸಾಮಾನ್ಯರ ನೋವು ನಲಿವು ಆಶೋತ್ತರಗಳಿಗೆ ಸ್ಪಂದಿಸಿದ ಕವಿ ಕುವೆಂಪು ಅವರ ವೈಚಾರಿಕ ಬರಹಗಳ ಪ್ರಾತಿನಿಧಿಕತೆಯ ದೃಷ್ಟಿಯಿಂದ ಶಲ್ಯದ ವಿವಾಹ ಸಂಹಿತೆ ಮೊದಲಾದವುಗಳು ಮಹತ್ವವಾದವು.

ಕುವೆಂಪು ಅವರ ಸಾಹಿತ್ಯದಲ್ಲಿ ಗಮನ ಸೆಳೆಯುವ ಮಹತ್ವ ವಿಷಯವೆಂದರೆ, ಶ್ರೀ ಸಾಮಾನ್ಯನಿಗೆ ಸಾಹಿತ್ಯದಲ್ಲಿ ದೊರಕಿಸಿಕೊಟ್ಟ ಸ್ಥಾನ, ಕನ್ನಡ ಸಂದರ್ಭದಲ್ಲಿ ಸಾಹಿತ್ಯ ಕೃತಿಗಳಲ್ಲಿ ಪ್ರವಾಹದೋಪಾದಿಯಾಗಿ ಹರಿದಿದ್ದು ಕುವೆಂಪು ಅವರ ಕಾಲದಲ್ಲಿ ಎನ್ನಬಹುದು. ಅದು ಕಾವ್ಯ ನಾಟಕ ಕಾದಂಬರಿ ಗದ್ಯ ಸಣ್ಣಕತೆ ಮೊದಲಾದ ಪ್ರಕಾರಗಳಲ್ಲಿ ನಾವು ಕಾಣಬಹುದು.

ಕುವೆಂಪು ಅವರ ಕೃತಿಗಳು ಕೇವಲ ಸಾಮಾಜಿಕ ಸಂಗತಿಗಳಿಗಾಗಿಯೇ ಶ್ರಮಿಸುವ ಅವು ಈ ಮೌಲ್ಯಗಳ ಸೀಮಾರೇಖೆಯನ್ನು ಮೀರಿ ಬೆಳೆದಿರುವುದೇ ಕಂಡುಬರುತ್ತದೆ. ಆಧ್ಯಾತ್ಮ ಜೀವನ ಪ್ರೇಮ ರಾಷ್ಟ್ರೀಯತೆ ಕೌಟುಂಬಿಕತೆ, ನಾಡುನುಡಿ, ಪ್ರಕೃತಿ, ಪ್ರೀತಿ, ರೈತರ ಬದುಕು, ಕೃಷಿ ಮೊದಲಾದವುಗಳ ದಟ್ಟ ಅನುಭವಗಳನ್ನು ನಾವು ಕುವೆಂಪು ಕೃತಿಗಳಲ್ಲಿ ಕಾಣುತ್ತೇವೆ.

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಪುಲ ಬೆಳವಣಿಗೆ ೨೦ನೇ ಶತಮಾನದ ಮಧ್ಯಭಾಗದಿಂದ ನಿರಂತರವಾಗಿ ಅಡೆತಡೆಯಿಲ್ಲದೆ ಸಾಗಿರುವುದು ಕಂಡುಬರುತ್ತದೆ. ಕನ್ನಡ ಕಾದಂಬರಿಯ ರೂಪುರೇಖೆಗಳು ಶೈಲಿಯ ದೃಷ್ಟಿಯಿಂದ ಇಂಗ್ಲೀಷ್ ಸಾಹಿತ್ಯದಿಂದ ಪ್ರಭಾವಿತಗೊಂಡಿದ್ದರೂ ತನ್ನದೇ ಆದ ಅಂತರಣಿಕೆ ಜೀವಾಳವನ್ನು ಅವು ಕಂಡುಕೊಂಡಿವೆ. ಪರಿಸರದಿಂದ ದೂರವಿಲ್ಲದೆ ಅಲ್ಲಿಯೇ ಹುಟ್ಟಿ ಬೆಳೆದು ಮೆರೆದು ಕನ್ನಡ ನಾಡಿನ ಮೂಲೆ ಮೂಲೆಯ ಸಂಸ್ಕೃತಿಯ ರಸದೌತಣವನ್ನು ಕನ್ನಡಿಗರಿಗೆ ಉಣಬಡಿಸಿವೆ. ಗಾತ್ರದ ದೃಷ್ಟಿಯಿಂದ ೨೦೦ ರಿಂದ ೪೦೦ ಪುಟಗಳ ಕೃತಿಗಳು ಸರ್ವೆಸಾಮಾನ್ಯವಾದರೂ, ಗಾತ್ರದ ಹಿರಿಮೆಯಿಂದಲೂ ವಸ್ತುವಿನ ಮಹತ್ವದಿಂದಲೂ ೬೦೦ ರಿಂದ ೯೦೦ ಪುಟಗಳ ಮಾರಿ ಕೃತಿಗಳು ಪ್ರಕಟವಾಗಿರುವುದು. ಕನ್ನಡಿಗರ ಪುಣ್ಯವೇ ಸರಿ ಹಣ ಎಷ್ಟಾದರೂ ಚಿಂತೆಯಿಲ್ಲದೆ ಪುಟವೆಷ್ಟಿದ್ದರೂ ಅಂಜದೆ ಕನ್ನಡಿಗರು ಬೃಹದ್‌ಕಾದಂಬರಿಗಳನ್ನು ಅಭೂತಪೂರ್ವವಾಗಿ ಸ್ವಾಗತಿಸಿದ್ದಾರೆ. ಇಂತಹ ಕೃತಿಗಳು ಸಂಖ್ಯೆಯ ದೃಷ್ಟಿಯಿಂದ ಬೆರಳಿನಲ್ಲಿ ಎಣಿಸಬಹುದಾದಷ್ಟು ಇರಬಹುದಾದರೂ, ಕನ್ನಡ ಕಾದಂಬರಿ ಚರಿತ್ರೆಯ ದೃಷ್ಟಿಯಿಂದ ಒಂದೊಂದು ವಿಶಿಷ್ಟ ಸ್ಥಾನವನ್ನು ಪಡೆದಿವೆ. ಕೆಲವಂತೂ ಮಹಾ ಕಾದಂಬರಿಗಳ ಔನ್ನತ್ಯಕ್ಕೇರಿವೆ. ಅಂತಹ ಕಾದಂಬರಿಗಳ ಸಾಲಿನಲ್ಲಿ ಮಹಾಕವಿ ಕುವೆಂಪು ಅವರ 'ಕಾನೂರು ಹೆಗ್ಗಡತಿ' ಮತ್ತು ಮಲೆಗಳಲ್ಲಿ ಮದುಮಗಳು ಮಹತ್ವವಾದವು.

ತಮ್ಮ ಗಾತ್ರಕ್ಕೆ ತಕ್ಕನಾದ ಕಥಾ ಬಾಹುಳ್ಯಾನ್ನು ವಸ್ತುವೈವಿಧ್ಯತೆಯನ್ನು ತನ್ನ ವಿಶಾಲ ಕ್ಷೇತ್ರದಲ್ಲಿ ಅತ್ಯಂತ ಸಾಂದ್ರವಾಗಿ ರೂಪಿಸಿಕೊಂಡು, ಓದುಗರ ಮೈಮನಗಳನ್ನು ರೋಮಾಂಚನಗೊಳಿಸುತ್ತವೆ.

ಸಾಹಿತ್ಯ ಸಮಾಜದ ಕನ್ನಡಿಯಾದರು ಕಾದಂಬರಿ ಅಂತಹ ಕನ್ನಡಿಗಳಲ್ಲೇ ಅತ್ಯುತ್ತಮ ಕನ್ನಡಿ. ಇಂತಹ ಕನ್ನಡಿಯ ಪ್ರತಿಫಲನಕ್ಕೆ ಸಿಕ್ಕುವ ವಸ್ತು ಸಮಾಜದ ವಿವಿಧ ಸ್ತರಗಳಿಗೆ ಸಂಬಂಧಿಸಿರಬೇಕಾದುದು ಸೂಕ್ತ. ಹಾಗಾದಾಗಲೇ ಇಡೀ ಸಮಾಜದ ಸಮಗ್ರ ನೋಟ ಕಾದಂಬರಿಗಳಲ್ಲಿ ಸಿಕ್ಕಲು ಸಾಧ್ಯ.

ಆದರೆ ನಮ್ಮ ಲೇಖಕರುಗಳಲ್ಲಿ ಬಹುಪಾಲು ಬ್ರಾಹ್ಮಣ ಸಮಾಜಕ್ಕೆ ಸೇರಿರುವುದರಿಂದಲೋ ಅಥವಾ ಅವರ ದೃಷ್ಟಿ ಆ ವರ್ಗದ ಜನಾಂಗಕ್ಕೆ ಮಾತ್ರ ಸೀಮಿತಗೊಂಡಿರುವುದರಿಂದಲೋ ಏನೋ ಸಮಾಜದ ಕೆಳಸ್ತರದ ವರ್ಗಗಳು ಎಂದು ಭಾವಿಸಲ್ಪಟ್ಟಿರುವ ಬ್ರಾಹ್ಮಣೇತರ ವರ್ಗಗಳ ವಸ್ತುಗಳು ಕನ್ನಡ ಕಾದಂಬರಿಗಳಲ್ಲಿ ಸಿಕ್ಕುವುದು ವಿರಳ.

ಆದರೆ ಈ ಅಪವಾದಕ್ಕೊಂದು ಕೊಲೆಯಾಗಿ ಮಲೆನಾಡಿನ ರಮ್ಯ ದುರ್ಗಮ ರುದ್ರರಮಣೀಯ ನಿಸರ್ಗದಲ್ಲಿ ವಾಸಿಸುತ್ತಿರುವ ಒಕ್ಕಲಿಗರ ಬದುಕಿನ ಬೇರು-ಬೇಡಗಳು, ಒಲವು-ನಲಿವುಗಳು, ನೆಚ್ಚು-ಮೆಚ್ಚುಗಳು, ಆಚಾರ-ವಿಚಾರಗಳು ಕುವೆಂಪು ಕಾದಂಬರಿಗಳಲ್ಲಿ ಮಾಧ್ಯಮದಿಂದ ಹೊರಬಿದ್ದು ಓದುಗನ ಭಿತ್ತಿ ಪರದೆಯ ಮೇಲೆ ಅಚ್ಚಳಿಯದ ಸ್ಥಿರಚಿತ್ರಗಳಾಗಿ ನಿಂತುಬಿಡುತ್ತವೆ.

ಬೆಟ್ಟಗುಡ್ಡಗಳ ನಡುವೆ ದಟ್ಟಾರಣ್ಯದ ಕಂದರದೊಳಗೆ ಸಂಪರ್ಕ ಸಾಧನ ಅಷ್ಟಾಗಿ ಸುಧಾರಿಸಿಲ್ಲದ ಬಾಹ್ಯ ಜನಾಂಗದ ಸಂಸ್ಕೃತಿಯ ಪ್ರಭಾವ ಅಷ್ಟಾಗಿ ನುಸುಳಲು ಸಾಧ್ಯವಾಗದ ಒಂದು ಮತ ಪ್ರದೇಶದ ಜನಾಂಗದ ಜೀವನವನ್ನು ವಸ್ತುವಾಗಿ ಉಳ್ಳ ಈ ಕಾದಂಬರಿ ಮೊದಲಿಗೆ ಪ್ರಾದೇಶಿಕ ಕಾದಂಬರಿ ಎನಿಸಿದರೂ ಒಕ್ಕಲಿಗರ ಜನಾಂಗದೊಂದಿಗೆ ಬೆರೆತ ಅಸ್ಪೃಶ್ಯರ ಬದುಕು, ಹೊಟ್ಟೆಯ ಪಾಡಿಗಾಗಿ ಗಟ್ಟದ ಕೆಳಗಿನಿಂದ ಮೇಲೇರಿ ಬಂದ ಕಲಾವಳಿಯ ಮಕ್ಕಳ ಬದುಕು ಎಲ್ಲವೂ ಇಲ್ಲಿ ಮಲೆನಾಡಿನ ಸುಂದರ ನಿಸರ್ಗದೊಡನೆ ಒಟ್ಟಾಗಿ ಸ್ಪಂದಿಸಿ ಪ್ರತಿಕ್ರಿಯಿಸುವುದರಿಂದ ಇದು ಪ್ರಾದೇಶಿಕತೆಯನ್ನು ಮಾರಿ ಮಹಾಕಾದಂಬರಿ ಎನಿಸುತ್ತದೆ.

ಕುವೆಂಪು ಅವರ ಎರಡು ಕಾದಂಬರಿಗಳ ಘಟನೆಗಳ ಕಾಲ ನಾಗರೀಕತೆಯ ದೃಷ್ಟಿಯಿಂದ ಸುಮಾರು ೮೦ ರಿಂದ ೧೦೦ ವರ್ಷಗಳ ಪ್ರಾಚೀನತೆಯನ್ನು ಕಂಡುಕೊಂಡರು. ಪಾತ್ರಗಳು ಅಭಿವ್ಯಕ್ತಿಸುವ ಸಂವೇದನೆಗಳು ಮನುಷ್ಯನ ಮೂಲಪ್ರವೃತ್ತಿಯಾದ 'ಕಾಮ' ವನ್ನೇ ಸ್ಪಂದಿಸುವುದರಿಂದ ವಸ್ತುವಿಗೆ ಸರ್ವಕಾಲೀನತೆ ಯಾಂತ್ರಿಕವಾಗಿ ಬಂದೊದಗಿದೆ.

ಕುವೆಂಪು ಕಾದಂಬರಿಗಳು ಪ್ರಧಾನವಾಗಿ ಕವಿಯಾದವನ ಕೃತಿಗಳಾಗಿವೆ. ಕುವೆಂಪು ಕಾದಂಬರಿಗಳಲ್ಲಿ ಯಾವುದೇ ಒಂದು ವರ್ಗ ಅಥವಾ ಕೋಮಿನ ಚಿತ್ರಣಕ್ಕೆ ಮಾತ್ರ ಸೀಮಿತಗೊಳ್ಳದೆ ಮಲೆನಾಡಿನ ಎಲ್ಲಾ ಜಾತಿಯ ಎಲ್ಲಾ ಸ್ತರದ ಜನಜೀವನವನ್ನು ಒಳಗೊಳ್ಳಲು ಪ್ರಯತ್ನಿಸಿರುವುದನ್ನು

ಕಾಣಬಹುದು. ದಲಿತರು, ಹಳೇಪೈಕದವರು, ಸಾಬರು, ಒಕ್ಕಲಿಗರು, ಬ್ರಾಹ್ಮಣರು, ಬಿಲ್ಲವರು, ಕ್ರೈಸ್ತರು, ಭೋವಿಗಳು, ಸೆಟ್ಟಿಗಳು. ಹೀಗೆ ಪಾತ್ರಗಳು ಹಾಗೂ ಎಲ್ಲಾ ಕೃಷಿಕ ವರ್ಗದವರು ಮಲೆನಾಡಿನ ವರ್ಗ ಜಾತಿಗಳನ್ನು ಪ್ರತಿನಿಧಿಸಿವೆ. ಕಾದಂಬರಿಗಳನ್ನು ಓದುವ ಓದುಗ ಅಲ್ಲಿನ ಕ್ರಿಯಾಶೀಲ ಜಗತ್ತಿನಲ್ಲಿ ತಾನೂ ಒಂದು ಪಾತ್ರವಾಗಿ ಬರುವಷ್ಟು ಇಲ್ಲಿಯ ಪಾತ್ರ ಸನ್ನಿವೇಶಗಳು ಜೀವಂತವಾಗಿವೆ.

ಕೃಷಿ, ವ್ಯವಸಾಯ, ತೋಟಗಾರಿಕೆ ವಿಶಿಷ್ಟವಾದ ಆಸ್ತಿ ಸಂಸ್ಕೃತಿಯು ನಾಗರೀಕತೆ ಮುಂತಾದ ಅಧ್ಯಯನ ಒಳಗೊಂಡಿದೆ. ಆಹಾರ ಪದ್ಧತಿಯ ಮೇಲೂ ಜಾತಿ ವ್ಯವಸ್ಥೆ ನಿರ್ಬಂಧವನ್ನು ಹೇರಿತು. ಸಮಾಜದಲ್ಲಿ ಸಾಮಾನ್ಯವಾಗಿ ಹಣ್ಣು, ಹಾಲು, ಬೆಣ್ಣೆ, ಒಣಗಿದ ಫಲ ಇತ್ಯಾದಿಗಳನ್ನು ಯಾರಾದರೂ, ಯಾರಿಂದಲಾದರೂ, ಸ್ವೀಕರಿಸಬಹುದಾದರೂ, ಬೇಯಿಸಿದ ಆಹಾರವನ್ನು ಸ್ವೀಕರಿಸಲು ಮೇಲ್ಜಾತಿಯವರು, ಕೆಳಜಾತಿಯವರಿಂದ ಸ್ವೀಕರಿಸಕೂಡದು ಎಂಬ ನಿರ್ಬಂಧವಿತ್ತು.

ಕೃಷಿ ಕ್ಷೇತ್ರವು ಪ್ರಸ್ತುತ ಎದುರಿಸುತ್ತಿರುವ ಸವಾಲುಗಳು ಹಲವು ಉತ್ಪಾದನೆಯಲ್ಲಿಯ ಹೆಚ್ಚಳದ ಮೂಲಕ ಆಹಾರ ಭದ್ರತೆ ಸಾಧಿಸುತ ಜೊತೆಗೆ ಕೃಷಿಕರ ಆರ್ಥಿಕ ಸಾಮಾಜಿಕ ಬದುಕನ್ನು ಹಸನಾಗಿಸಲು ಕೃಷಿ ಕ್ಷೇತ್ರದಲ್ಲಿ ಸರ್ವಾಂಗೀಣ ಪ್ರಗತಿ ಸಾಧಿಸುವುದು ಅನಿವಾರ್ಯವಾಗಿದೆ. ಬದಲಾದ ಜಾಗತಿಕ ಚಿತ್ರಣ ತಾಂತ್ರಿಕತೆಗಳು ಮತ್ತು ಗ್ರಾಹಕರ ಆದ್ಯತೆಗಳ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಕೃಷಿ ಹೊಸ ರೂಪ ಪಡೆದುಕೊಳ್ಳುತ್ತಿದ್ದು, ವಿವಿಧ ಬೆಳೆಗಳ ತಂತ್ರಜ್ಞಾನಗಳ ಹಾಗೂ ಕೃಷಿ ಸಂಬಂಧಿತ ಉಪಕಸುಬುಗಳ ಅರ್ಥಪೂರ್ಣ ಸಮೀಕರಣವಾಗಬೇಕಾಗಿದೆ. ಕೃಷಿಗೆ ಪೂರಕವಾದ ಪ್ರಾಕೃತಿಕ ಸಂಪನ್ಮೂಲಗಳಾದ ನೆಲ, ಜಲ ಪರಿಸರದ ಅವೈಜ್ಞಾನಿಕ ಬಳಕೆಯು ಆತಂಕಕಾರಿಯಾಗಿದ್ದು, ಬೀಳುವ ಮಳೆ, ಮಣ್ಣಿನ ಮಾದರಿ ಹವಾಮಾನ ಈ ರೀತಿ ಅಧ್ಯಯನಕ್ಕೆ ಪ್ರಭಾವ ಬೀರಿದೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಕಾದಂಬರಿಗಳಲ್ಲೂ ಅಭಿವ್ಯಕ್ತಗೊಂಡಿರುವ ಕೃಷಿಯ ಪರಿಕಲ್ಪನೆಯನ್ನು ಅಧ್ಯಯನ ಮಾಡುವ ಮೂಲಕ ಕೃಷಿ ಬದುಕನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ನನ್ನ ನಿಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಕೆಳಕಂಡ ಅಧ್ಯಾಯಗಳಾಗಿ ವಿಂಗಡಿಸಿಕೊಂಡಿರುತ್ತಾರೆ.

ಅಧ್ಯಾಯ-೧ ವೇದಿಕಾ ಭಾಗದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕುವೆಂಪು ಅವರ ಸಾಹಿತ್ಯಿಕ ಕೃಷಿ ಆರಂಭದ ವಿವರಗಳನ್ನು ನೀಡಿ ಅವರ ಸಾಹಿತ್ಯ ಸೇವೆಯನ್ನು ಕುರಿತು ಮಾಹಿತಿಗಳನ್ನು ವಿವರಿಸಲಾಗಿದೆ.

ಅಧ್ಯಾಯ-೨ 'ಅಧ್ಯಯನ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ' ದಲ್ಲಿ ನಾನು 'ಕುವೆಂಪು ಅವರ ಕಾದಂಬರಿಗಳಲ್ಲಿ ಕೃಷಿಯ ಪರಿಕಲ್ಪನೆ' ವಿಷಯದ ಮೇಲೆ ಎಂ.ಫಿಲ್ ಅಧ್ಯಯನ ಕೈಗೊಳ್ಳಲು ಉದ್ದೇಶ, ಅದರ ವ್ಯಾಪ್ತಿ ಮತ್ತು ಸ್ವರೂಪವನ್ನು ಕುರಿತು ವಿವರಿಸಿರುತ್ತವೆ. ಕುವೆಂಪು ಕಾದಂಬರಿಯಲ್ಲಿ ಕೃಷಿ

ಚಟುವಟಿಕೆ ಮತ್ತು ಅದರ ಪರಿಭಾಷೆ, ಬಳಸುವ ಸಲಕರಣೆಗಳು ಮುಂತಾದ ವಿಚಾರಗ್ಳ ವ್ಯಾಪ್ತಿಯಲ್ಲಿ ಅಧ್ಯಯನದ ಸ್ವರೂಪ ಒಳಗೊಂಡಿರುವ ವಿಚಾರಗಳನ್ನು ಈ ಭಾಗದಲ್ಲಿ ನಿರೂಪಿಸಿರುತ್ತವೆ.

ಅಧ್ಯಾಯ–೩ 'ಕುವೆಂಪು ಸಾಹಿತ್ಯ ಕಿರು ಸಮೀಕ್ಷೆ' ಈ ಅಧ್ಯಯನದಲ್ಲಿ ಕುವೆಂಪುರವರ ನಾಡಗೀತೆ, ಕನ್ನಡಗೀತೆ, ಕಾವ್ಯ, ಕವನ, ಕಥೆ, ಶಿಶುನೀತಿ, ನಾಟಕ, ವಿಮರ್ಶೆ, ಕಾದಂಬರಿ, ಮಲೆನಾಡಿನ ಚಿತ್ರಗಳು ಆತ್ಮಚರಿತೆ, ಕಲೆ, ಆಧ್ಯಾತ್ಮ, ಶೃಂಗಾರ, ತತ್ವಶಾಸ್ತ್ರ, ಪ್ರೀತಿ ಪ್ರೇಮ, ಜೀವನ, ನಾಡು–ನುಡಿಗಳು ಇತಿಹಾಸ ಮೊದಲಾದ ಆಯಾಮಗಳಲ್ಲಿ ಅವರ ಬಹುಮುಖ ಪ್ರತಿಭೆಯ ಕೃತಿಗಳು ಹೊರಬಂದಿರುವ ಸಂಕ್ಷೇಪ ಸಮೀಕ್ಷೆಯನ್ನು ಈ ಅಧ್ಯಯದಲ್ಲಿ ವಿಶ್ಲೇಷಣೆಯೊಂದಿಗೆ ವಿವರಿಸಲಾಗಿದೆ.

ಅಧ್ಯಾಯ–೪ 'ಕುವೆಂಪು ಸಾಹಿತ್ಯದಲ್ಲಿ ರೈತ ಹಾಗೂ ಕೃಷಿಯ ಉಲ್ಲೇಖಗಳು– ವಿಶ್ಲೇಷಣೆ' ಈ ಅಧ್ಯಾಯದಲ್ಲಿ ಕಾವ್ಯ ಸ್ವರೂಪ, ಸಾಲದ ಮಗು, ಧನ್ವಂತರಿಯ ಚಿಕಿತ್ಸೆ, ಶ್ರೀ ಸಾಮಾನ್ಯ, ರೈತನ ದೃಷ್ಟಿ, ಗೊಬ್ಬರ, ಯಾರು ಅರಿಯದ ವೀರ, ಉದ್ಯಾನದಲ್ಲಿ ಧ್ಯಾನಯೋಗಿ, ಸುಗ್ಗಿ ಬರುತ್ತಿದೆ. ಈ ಅಧ್ಯಯನದ ವಿಶ್ಲೇಷಣೆಯೊಂದಿಗೆ ನಿರೂಪಿಸಿರುತ್ತೇನೆ.

ಅಧ್ಯಾಯ–೫ 'ಕುವೆಂಪು ಅವರ ಕಾದಂಬರಿಗಳು, ಸ್ಥೂಲನೋಟ (ಪರಿಚಯ)' ಈ ಅಧ್ಯಯನದಲ್ಲಿ ಪಾತ್ರಗಳು, ವೈಚಾರಿಕ, ಮೂಢನಂಬಿಕೆ, ಕೃಷಿ ಸಂಬ್ಂಧಿಸಿದ ಚಟುವಟಿಕೆಗಳ ಬಗ್ಗೆ ಈ ಅಧ್ಯಯನದಲ್ಲಿ ನೋಡಬಹುದು. ಚಿರಮೌಲ್ಯ ಮತ್ತು ಕಲೆಗಾರಿಕೆ ಒಂದು ಕೃತಿಯ ಕಾಲ ಕಾನೂರು ಹೆಗ್ಗಡತಿಯ ಶ್ರೇಷ್ಠ ಗುಣಗಳು, ಈ ಹಿನ್ನೆಲೆಯಲ್ಲಿ ಕಾನೂರು ಹೆಗ್ಗಡತಿ ಕಾದಂಬರಿಯು ಮೂರು ಹಂತಗಳಲ್ಲಿ ಮೈದಾಳುತ್ತವೆ ಎಂಬುದನ್ನು ಕಾಣಬಹುದು. ಪುರೋಹಿತ ಶಾಹಿಯ ವಿರೋಧ, ಮೇಲ್ವರ್ಗದ ಸಾಂಸ್ಕೃತಿಕ ಶೂನ್ಯತೆಯನ್ನು ಬಯಲು ಮಾಡುವುದು ಮತ್ತು ನಿರೀಕ್ಷರಿಗಳಾದ ದಲಿತರನ್ನು ಮಾನವೀಯವಾಗಿ ಕಂಡು ಅದರಿಸುವುದು ಮತ್ತು ಅವರು ಮನುಷ್ಯರಂತೆ ಬದುಕಲು ವಿದ್ಯೆ ಕಲಿಸಿ, ಪರಿಸರ ನಿರ್ಮಾಣ ಮಾಡುವುದು ಕಂಡುಬರುತ್ತದೆ. ಅದೇ ರೀತಿ ಮಲೆಗಳಲ್ಲಿ ಮದುಮಗಳು ಕಥಾಹಂದರವು ಒಂದು ಸೀಮಿತ ಮಲೆನಾಡಿನ ವಿಸ್ತಾರಕ್ಕೆ ಒಳಪಟ್ಟಂತಹ ಇಲ್ಲಿನ ಪಾತ್ರಗಳು ಜೀವನದ ಏರಿಳಿತಗಳ ಹೊಯ್ದಾಟಗಳ ಸಂಕೇತವು ಕೂಡ ಆಗಿರುವುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿತ್ತು.

ಅಧ್ಯಾಯ – ೬ : ಕಾನೂರು ಹೆಗ್ಗಡತಿಯಲ್ಲಿ ಕೃಷಿಯ ಪಾತ್ರ

ಅಡಿಗೆ ತೋಟ, ತೆಂಗಿನ ತೋಟ, ಮಲೆನಾಡು, ಗದ್ದೆಗಳು, ತೋಟಗಳು, ಎತ್ತಿನ ಗಾಡಿ ಎತ್ತುಗಳು, ಹಣ್ಣಿನ ಮರಗಳು, ಕೃಷಿಗೆ ಬೇಕಾದ ಸಲಕರಣೆಗಳು, ಕಬ್ಬಿನ ಗದ್ದೆ ಕಾನೂರಿನಲ್ಲಿ ಧ್ಯೇಯದ ಹರಕೆ ಜಮೀನಿನ ಹಿಸ್ಸೆಯ ಪಂಚಾಯಿತಿ, ಚರಸೊತ್ತಿನ ಹಿಸ್ಸೆ ಭೂಮಿ ಹುಣ್ಣಿಮೆ ಅಗ್ರಹಾರ ದೇವಸ್ಥಾನ, ಕೋಳಿಯಂಕದ ಪಟ್ಟೆ, ಈ ವಿಷಯಗಳನ್ನು ಈ ಅಧ್ಯಾಯನದಲ್ಲಿ ಗಮನಿಸಬಹುದಾಗಿದೆ.

ಅಧ್ಯಾಯ ೭ – ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೃಷಿಯ ಪಾತ್ರ

ಸಿಂಬಾವಿ ಭರಮ್ಮೈ ಹೆಗ್ಗಡೆಯವರ ಹೈನುಗಾರಿಕೆ, ಬಾಳೆ ತೋಟ, ಅಡಿಕೆತೋಟ, ತೆಂಗಿನ ತೋಟ, ಚೆನ್ನಮ್ಮ ಮುಕುಂದಯ್ಯರವರ ಕೃಷಿಯ ಆಸಕ್ತಿ, ನಾಯಿಗುತ್ತಿ ತಿಮ್ಮರವರ ಕೃಷಿ, ನಾಗಕ್ಕ ನಾಗತ್ತೆ ನಾಗಣ್ಣರವರ ಕೃಷಿ, ಐತ, ಪಿಂಚಲು ರವರ ಕೃಷಿ, ಹೆಣ್ಣಾಳುಗಳು, ಗಂಡಾಳುಗಳು, ತರಕಾರಿಯ ಸೊಪ್ಪುಗಳು, ಸಶ್ಮಾನಗಳು ಗಿಡಮರಗಳು, ಮಲೆನಾಡಿನ ಕೃಷಿ, ಹಬ್ಬ ಹರಿದಿನಗಳು ಮದುವೆಗಳು ಈ ಅಧ್ಯಾಯನದಲ್ಲಿ ವಿಶ್ಲೇಷಿಸಲಾಗಿದೆ,

ಅಧ್ಯಾತ – ೮ – ಎರಡೂ ಕಾದಂಬರಿಗಳ ಕೃಷಿಯ ಕಥಾವಸ್ತುವಿನ ಪ್ರಮುಖ ವಿನ್ಯಾಸಗಳು :

(೧) ಕೃಷಿಯ ಪ್ರಾಮುಖ್ಯ – ಕಾದಂಬರಿಯೊಳಗೆ, ಕೃಷಿಯ ನೆಲೆ, ವ್ಯವಸಾಯ, ಹೈನುಗಾರಿಕೆ, ಪಶುಸಾಕಣೆ.

(೨) ಕೃಷಿಯ ವೈವಿಧ್ಯ – ಬೇಟೆ, ಹುಲಿಬೇಟೆ, ಹಂದಿಬೇಟೆ, ಮೀನುಬೇಟೆ, ಏಡಿ ಶಿಕಾರಿ, ಕಾಡು ಕುರಿ ಶಿಕಾರಿ, ಕಾಡುಕೋಳಿ ಶಿಕಾರಿ ಈ ಅಧ್ಯಾಯನದಲ್ಲಿ ಗಮನಿಸಬಹುದಾಗಿದೆ.

ಅಧ್ಯಾಯ – ೯ : ಅಧ್ಯಯನದ ಫಲಿತಗಳು

ಎರಡು ಕಾದಂಬರಿಯ ನೋಟ, ಕೃಷಿ ಸಂಬಂಧಿಸಿದಂತಹ ವಿಷಯಗಳು, ಆಹಾರ, ಪೂಜೆ, ಪುರಸ್ಕಾರಗಳು, ಮದುವೆ ಪ್ರಸಂಗಗಳು ಈ ಅಧ್ಯಾಯನದಲ್ಲಿ ಗಮನಿಸಬಹುದಾಗಿದೆ.

ಅಧ್ಯಾಯ – ೧೦ : ಸಮಾರೋಪ

ಈ ಅಧ್ಯಾಯನದಲ್ಲಿ ಬರುವ ಕೃಷಿಯ ಸಂಬಂಧಿಸಿದ್ದಂತಹ ವಿಷಯಗಳು, ಗದ್ದೆ, ತೋಟ, ಮಲೆನಾಡಿನ ವರ್ಣನೆ, ಹೊಳೆ, ಮದುವೆ, ಬೇಟೆ, ಗಿಡಮರಗಳ ಪ್ರಕೃತಿ ಮುಂತಾದವುಗಳನ್ನು ಈ ಅಧ್ಯಾಯನದಲ್ಲಿ ವಿಶ್ಲೇಷಿಸಲಾಗಿದೆ.

ಅನುಬಂಧ ೧) ಕುವೆಂಪು ಅವರ ಕೃತಿಗಳು,

೨) ಗ್ರಂಥಋಣ

೩) ಲೇಖನಗಳ ಆಕರ ಸೂಚಿ

೪) ಚಿತ್ರಗಳು.

ಇವುಗಳನ್ನು ಗಮನಿಸಹಬಹುದಾಗಿದೆ

ಅಧ್ಯಾಯ – ೨

ಕುವೆಂಪು ಸಾಹಿತ್ಯದ ಕಿರು ಸಮೀಕ್ಷೆ

ಕುವೆಂಪು ಕನ್ನಡ ನಾಡಿನ ಹೆಮ್ಮೆಯ ಕವಿ, ಮೇಲಾಗಿ ವಿಶ್ವಮಾನವ. ಜಗದ ಕವಿ, ಯುಗದ ಕವಿ, 'ಮನುಜಕುಲಂ ತಾನೊಂದೆವಲಂ' ಎಂದು ಮೊದಲು ವಿಶ್ವಕ್ಕೆ ಸಾರಿದವನು. ಕನ್ನಡದ ಆದಿಕವಿ ಪಂಪ (ಕ್ರಿ.ಶ.೯೪೧) ಅನಂತರ ಹದಿಮೂರನೆಯ ಶತಮಾನದಲ್ಲಿ ಶರಣ ಅಣ್ಣ ಬಸವಣ್ಣ 'ಮನುಜ ಕುಲವನ್ನು' ಬೆಳೆಸಲು ಪ್ರಯತ್ನಿಸಿದರಾದರೂ ಅವರ ನಂತರ ಅದು ಒಂದು ಮತವಾಗಿಯೇ ಬೆಳೆಯಿತು, ಅನಂತರ ಇಪ್ಪತ್ತನೆಯ ಶತಮಾನದಲ್ಲಿ ವಿಶ್ವಕವಿ 'ಮನುಜಮತ' ಎಂಬ ಮಾತನ್ನು ಹೇಳಿ ವಿಶ್ವದ ಜನತೆಯನ್ನೆಲ್ಲಾ ವಿಶ್ವಮಾನವರನ್ನಾಗಲು ಕರೆಕೊಟ್ಟರು. ಇಂದು ಅವರ ಅನುಯಾಯಿಗಳು ಅದನ್ನು ಉಳಿಸಿ ಬೆಳೆಸುವ ಹಾದಿಯಲ್ಲಿ ಸಾಗಬೇಕಾಗಿದೆ. ವಿಶ್ವಸಾಹಿತ್ಯದಲ್ಲಿಯೇ ಕನ್ನಡ ಕವಿಗಳು 'ವಿಶ್ವಮಾನವ'ರಾಗಬೇಕೆಂದು ದನಿಯೆತ್ತಿರುವುದು ಕರ್ನಾಟಕಕ್ಕೆ ಸಂದ ಗೌರವವಾಗಿದೆ.

ಕುವೆಂಪು ಹೊಸಗನ್ನಡ ಸಾಹಿತ್ಯದ ಹಿಮಾಚಲ, ಹಿಮಾಚಲ ಅತ್ಯಂತ ಎತ್ತರವೂ ಹೌದು. ಅತ್ಯಂತ ಅಭಿತ್ತರವೂ ಹೌದು, ಹಾಗೆಯೇ ಅದು ದಿವ್ಯವೂ ಹೌದು, ಭವ್ಯವೂ ಹೌದು ಅದಕ್ಕೆ ನೂರಾರು ಮುಖ, ನೂರಾರು ಮಟ್ಟ, ನೂರಾರು ದಾರಿ. ಅದರ ಒಂದೊಂದು ಮುಖದಲ್ಲಿ ಒಂದೊಂದು ಮಟ್ಟದಲ್ಲಿ ಒಂದೊಂದು ದಾರಿಯಲ್ಲಿ ಒಂದೊಂದು ರೀತಿಯ ವಿಶಿಷ್ಟಾನುಭವ ದರ್ಶನಾರ್ಥಿಗಳ ಹೃದಯವನ್ನು ತುಂಬುತ್ತದೆ.

ಭಕ್ತರಿಗೆ, ವಿರಕ್ತರಿಗೆ, ಋಷಿಗಳಿಗೆ, ರಸಿಕರಿಗೆ ವಿಜ್ಞಾನಿಗಳಿಗೆ, ವಿಚಾರವಂತರಿಗೆ ಎಲ್ಲರಿಗೂ ಅವರವರ ಶ್ರದ್ಧೆ, ಸಾಮರ್ಥ್ಯಕ್ಕೆ ಹೃದಯ ಶ್ರೀಮಂತಿಕೆಗೆ ತಕ್ಕಂತೆ ಬಗೆಬಗೆಯ ಆನಂದವನ್ನು ಆತ್ಮ ಸುಖವನ್ನು ಬುದ್ಧಿ ವಿಕಾಸವನ್ನು ಉಂಟು ಮಾಡುತ್ತದೆ. ಅವುಗಳನ್ನು ಪಡೆಯುವ ಪ್ರಯತ್ನ ಸಹೃದಯತೆ ಬೇಕಷ್ಟೆ.

ನಿಸರ್ಗದ ಮಡಿಲಿನ ಶಿಶುವಾಗಿ ಬೆಳೆದ ಕುವೆಂಪುರವರಲ್ಲಿ ಕವಿ ಸಹಜವಾದ ಭಾವುಕತೆ ಏಕಾಂತ ಪ್ರಿಯತೆಗಳಿದ್ದವು.

ಕುವೆಂಪುರವರು ರಾಷ್ಟ್ರಕವಿಯಾದರು ರಸಋಷಿ ಎಂಬ ಅಪರೂಪದ ಮನ್ನಣೆಗೆ ಒಳಗಾದರು.

ಕಾವ್ಯ ಸೃಷ್ಟಿಯ ಬಗ್ಗೆ ಕುವೆಂಪುರವರ ಮಾತುಗಳನ್ನೆ ನೋಡಿ ಬರೆಯುವವನೂ, ಬರೆಸುವವನೂ, ಸರಸ್ವತಿ ಎರಡು ಮುಖಗಳಿದ್ದ ಹಾಗೆ ಸಾಹಿತ್ಯ ಸೃಷ್ಟಿಗೆ ಈ ಎರಡು ಶಕ್ತಿಗಳೂ ಅವಶ್ಯಕ. ಆದ್ದರಿಂದ ಜನತೆಯ ಸಂಸ್ಕೃತಿಯ ಮಟ್ಟವೂ ಮೇಲೇರಬೇಕಾಗಿದೆ. ಲೌಕಿಕವಾಗಿ ಪುಸ್ತಕ ಅಚ್ಚಾದಾಗ

[illegible]

ಕಾವ್ಯ ಸೃಷ್ಟಿ ಆಯಿತೆನ್ನುತ್ತೇವೆ. ಆದರೆ ನಿಜವಾದ ಕಾವ್ಯ ಸೃಷ್ಟಿಯಾಗುವುದು, ಸಹೃದಯಕ ಮನಸ್ಸಿನಲ್ಲಿ ವಿಚಾರ ಮಾಡಿದಾಗ,

ಕುವೆಂಪು ಸಮಸ್ತ ದೇಶದ ಆಸ್ತಿಯಾಗಿರುವಂತೆಯೇ ಕನ್ನಡದಲ್ಲಿ ತಮ್ಮ ಬೇರುಗಳನ್ನು ಉಳಿಸಿಕೊಂಡು ಬೃಹತ್ತಾಗಿ ಬೆಳೆದು ಜಗತ್ತಿನಾದ್ಯಂತ ಒಳಿತನ್ನೆ ಪ್ರಬೋಧಿಸುವ ಸಂದೇಶ ಬೀರಿದರು. ಸಮಗ್ರತೆಯಲ್ಲಿ ಪ್ರಾದೇಶಿಕತೆಯನ್ನು ಉಳಿಸಿಕೊಳ್ಳುವುದನ್ನು ಅವರು ತಪಸ್ಸಿನಂತೆ ಸಿದ್ಧಿಸಿಕೊಂಡವರು.

ಹಲವಾರು ನದಿಗಳು ಒಂದಾಗಿ ಸಮುದ್ರವನ್ನು ಸೇರುವಂತೆ ಒಂದು ಬೃಹತ್ ವೃಕ್ಷ ಹಲವಾರು ಟಿಸಿಲುಗಳೊಡೆದರೂ ಏಕವಾಗಿರುವಂತೆ ದೇಶಾಭಿಮಾನ ಮತ್ತು ಪ್ರಾಂತೀಯತೆಗಳು ಅನನ್ಯತೆಯನ್ನು ಸಾಧಿಸಿಬೇಕಾದಲ್ಲಿ ಕುವೆಂಪುರವರ ಬದುಕು ಬರಹಗಳು ಪಠ್ಯಗಳಾಗಿ ಮಾರ್ಗದರ್ಶನ ನೀಡಬಲ್ಲವು.

ಈಗ ಕುವೆಂಪು ಅವರ ಕಿರು ಸಾಹಿತ್ಯವನ್ನು ನೋಡಬಹುದಾಗಿದೆ.

ಜಯ ಭಾರತ ಜನನಿಯ ತನುಜಾತೆ

ಜಯಹೇ. . . ಕರ್ನಾಟಕ ಮಾತೆ

ಜಯ ಸುಂದರ ನದಿವನಗಳ ನಾಡೆ

ಜಯ ಹೇ ರಸ ಋಷಿಗಳ ಬೀಡೆ

ಇದು ಕರ್ನಾಟಕದ ನಾಡಗೀತೆ ರಚಿಸಿದವರು. ಕುವೆಂಪು ಸತ್ತಿಂತಿಹ ಕನ್ನಡಿಗರನ್ನು ಬಡಿದೆಬ್ಬಿಸಲು ಕನ್ನಡ ಡಿಂಡಿಮ ಬಾರಿಸಿದ ರಾಷ್ಟ್ರಕವಿ.

ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಭಾರತೀಯ ವಿಶ್ವಮಾನವನ ಸಂದೇಶವನ್ನು ನೀಡಿದ ಋಷಿ ಕವಿ.

ಕುವೆಂಪು ಪ್ರತಿಯೊಬ್ಬ ಕನ್ನಡಿಗನ ಮನದಲ್ಲೂ ನೆಲೆಸಿರುವ ಮಹಾ ಕವಿ. ಕರ್ನಾಟಕ ಸರ್ಕಾರ ೧೯೬೪ ರಲ್ಲಿ ರಾಷ್ಟ್ರಕವಿ ಎಂದು ಗೌರವಿಸಿತು.

ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಬೆಕ್ಕನೂರು ಗ್ರಾಮದ ಕುಪ್ಪಳ್ಳಿ ನಮ್ಮ ರಾಷ್ಟ್ರಕವಿಗಳ ವಂಶಜರ ಸ್ಥಳ. ಅವರ ತಂದೆ ವೆಂಕಟಪ್ಪಗೌಡರು, ತಾಯಿ ಸೀತಮ್ಮ. ಪುಟ್ಟಪ್ಪನವರ ಜನ್ಮ ದಿನಾಂಕ: ೨೯-೧೨-೧೯೦೪.

ಕುಪ್ಪಳ್ಳಿ ಮನೆ ಸುಂದರ ನಿಸರ್ಗದ ಮಡಿಲಿನಲ್ಲಿ ಪವಾಡಿಸಿದ್ದ ಪ್ರಶಾಂತ ಗ್ರಾಮ, ಪುಟ್ಟಪ್ಪ ಜನಿಸಿದ್ದು ಹಿರೇಕೂಡಿಗೆಯಲ್ಲಾದರೂ ಅವರ ಬಾಲ್ಯ ಮತ್ತು ಬೆಳವಣಿಗೆಗಳ ಸಿಹಿ ನೆನಪುಗಳು ಅನುಭವಗಳಿಗೆ ಕುಪ್ಪಳ್ಳಿಯೇ ಕೇಂದ್ರವಾಯಿತು.

ಮನೆಯಲ್ಲಿ ರಾಮಾಯಣ ಜೈಮಿನಿ ಭಾರತಗಳ ವಾಚನ ಪಾರಾಯಣಗಳು ನಡೆಯುತ್ತಿದ್ದು, ಪುಟ್ಟಪ್ಪನವರ ಎಳೆ ಹೃದಯದಲ್ಲಿ ಭಾವನಾ ತರಂಗಗಳನ್ನು ಮೀಟಿದವು. ಸುತ್ತಲ ಹಳ್ಳಿಗಳಲ್ಲಿ ನಡೆಯುವ ಯಕ್ಷಗಾನ ಬಯಲಾಟಗಳನ್ನು ನೋಡುನೋಡುತ್ತಾ, ಆ ಭಾವ ತರಂಗಗಳಿಗೆ ನಿರ್ದಿಷ್ಟ ಲಯವೊಂದು ಸೃಷ್ಟಿಗೊಳ್ಳಲಾರಂಭಿಸಿತು.

ವರ್ಡ್ಸ್‌ವರ್ತ್, ಶೆಲ್ಲಿ ಮತ್ತು ಮಿಲ್ಟನ್‌ರಂತಹ ಆಂಗ್ಲ ಕವಿತೆಗಳು ಯುವಕನ ವಯೋಮಾನಕ್ಕೆ ಸುಲಭ ಗ್ರಾಹ್ಯವೆನಿಸುತ್ತಿದ್ದವು. ಸ್ಫೂರ್ತಿ ಹೊಂದಿದ ಪುಟ್ಟಪ್ಪನವರು ಸ್ವತಃ ಆಂಗ್ಲ ಕವಿತೆಗಳನ್ನು ರಚಿಸಿದರು. ಟಾಲ್‌ಸ್ಟಾಯ್ ಕೃತಿಗಳನ್ನು ಓದಿದರು, ವಿವೇಕಾನಂದರ ಭಾಷಣ ಸಂಕಲನ ಮತ್ತು ರಾಮಕೃಷ್ಣ ಪರಮಹಂಸರ ಚರಿತ್ರೆಗಳಿಂದಲೂ ಪ್ರಭಾವಿತರಾದರು. ವಯೋ ಸಹಜವಾದ ಭಾವುಕತೆಗೆ ಪ್ರಿಯವಾಗುವ ಕವಿತೆಗಳೊಂದಿಗೆ ತತ್ವಜ್ಞಾನ, ಆಧ್ಯಾತ್ಮ ಚಿಂತನೆಗಳ ಪರಿಪಾಠವೂ ಬೆರೆತು ಅವರ ಮನೋಭೂಮಿಕೆ ಬಹುಮೂಲ್ಯ ಅದ್ಭುತ ಸಾಹಿತ್ಯ ಕೃಷಿಗೆ ಸಜ್ಜುಗೊಂಡಿತು.

೧೯೨೧ ರಲ್ಲಿ ಜಾತೀಯತೆ, ಭಾರತಕ್ಕಂಟಿದ ಪಿಡುಗು ಎಂಬ ವಸ್ತುವನ್ನು ಕುರಿತು ಚರ್ಚೆಯನ್ನು ಏರ್ಪಡಿಸಲಾಗಿದ್ದಿತು. ಪುಟ್ಟಪ್ಪನವರು ವಿವೇಕಾನಂದರ ಅಧ್ಯಯನದಿಂದಾಗಿ ಜಾತೀಯತೆಯನ್ನು ಕುರಿತು ಪ್ರಬಲ ವಿರೋಧವನ್ನು ಬೆಳೆಸಿಕೊಂಡರು.

ಭಾರತೀಯ ಸಂಸ್ಕೃತಿ ಮತ್ತು ಭಾಷಾಭಿಮಾನಗಳು ಕುವೆಂಪು ಅವರಲ್ಲಿ ಯಥೇಚ್ಛವಾಗಿದ್ದರೂ ವಿದ್ಯಾರ್ಥಿ ದಿಸೆಯಲ್ಲಿ ಇಂಗ್ಲೀಷ್ ವ್ಯಾಮೋಹದಿಂದ ಅವರು ಆಂಗ್ಲ ಭಾಷೆಯಲ್ಲಿ ಕವಿತೆಗಳ ದೊಡ್ಡ ಸಮೂಹವನ್ನು ಕಟ್ಟಿಬಿಟ್ಟಾರು. ಮಿತ್ರರ ಒತ್ತಾಸೆಯೊಂದಿಗೆ 'Beginners Mouse' ಎಂಬ ಶೀರ್ಷಿಕೆಯಡಿಯಲ್ಲಿ ಅವರ ಆರು ಕವನ ಸಂಕಲನ ಪ್ರಕಟಗೊಂಡವು. ಇದು Ballards Descriptive Poems and Sonnets ಎಂಬ ಕವನ ಪ್ರಕಾರಗಳಲ್ಲಿ ವಿಂಗಡಣೆಗೊಂಡ ಸಂಗ್ರಹ.

೧೯೨೪ ರಲ್ಲಿ ಐರಿಷ್ ಕವಿ James Cousins ಅವರೊಂದಿಗಿನ ಭೇಟಿ ಪುಟ್ಟಪ್ಪ ಅವರ ಸಾಹಿತ್ಯ ಕೃಷಿಗೆ ಹೊಸ ತಿರುವೊಂದನ್ನು ನೀಡಿ ಈ ಬೃಹತ್ ಮಹತ್ ಪ್ರತಿಭೆ ಕನ್ನಡ ಸಾಹಿತ್ಯ ಮತ್ತು ಕಾವ್ಯ ಸೃಷ್ಟಿಗೆ ಮುಡುಪಾಗುವಂತೆ ಮಾಡಿತು. James Cousins ಅವರು ಕುವೆಂಪು ಅವರ ಆಂಗ್ಲ

ಕವಿತೆಗಳನ್ನು ಶ್ಲಾಘಿಸಿ, ಪುಟ್ಟಪ್ಪ ಅವರ ಮಾತೃ ಭಾಷೆಯಲ್ಲೆ ಅವರ ಮಡಿಸೇವೆ ಸಾಗಲಿ ಎಂದು ಅಭಿಪ್ರಾಯಪಟ್ಟರು.

ಕೆ.ವಿ. ಪುಟ್ಟಪ್ಪ ಅವರು ಬಾಲ್ಯದಿಂದಲೇ ಪ್ರಕೃತಿಯನ್ನು ಆರಾಧಿಸುತ್ತಾ ಬೆಳೆದವರು, ಅವರು ಗುಡಿ ಗೋಪುರಗಳಿಗೆ ತೆರಳಿ ಪೂಜಿಸಿದ್ದಾಗಲೀ ಜಾತಿ ಸೂಚಕವಾದ ಆಚರಣೆಗಳನ್ನು ಕೈಗೊಂಡಿದ್ದಾಗಲೀ ಇಲ್ಲವೇ ಇಲ್ಲ. ಅವರು ಪ್ರತಿಪಾದಿಸಿ ಅನುಸರಿಸಿದ ಧರ್ಮ ಸರ್ವರಿಗೂ, ಸಮಪಾಲು– ಸಮಬಾಳು ಎಂಬುದರ ಬುನಾದಿಯ ಮೇಲೆ ಕಟ್ಟಲ್ಪಟ್ಟ ವಿಶ್ವಮಾನವ ಧರ್ಮ.

ಸೂತ್ರಧಾರಿಣಿ ನೀನು, ಪಾತ್ರಚಾರನು ನಾನು

ಯಾವ ಪಾತ್ರವನ್ನಿತ್ತರೇನು ನೀನೆನಗೆ

ಚೌವುರಿವಿಡಿದರೆ ಮೇಲೆ? ಪೊರಕೆವಿಡಿದರೆ ಕೀಳೆ

ಮೊಳ್ಪ ಕೆಲಸಗಳೆಲ್ಲ ನೈವೇದ್ಯವಾಗೆ

ಭಗವಂತನ ಸೃಷ್ಟಿಯೇ ಎಲ್ಲವೂ ಎಲ್ಲಾ ಕಾರ್ಯ ಕರ್ಮಗಳೂ ಅವನಿಂದಲೇ ನೇಮಕ ಎಂಬ ನಂಬಿಕೆ ಕುವೆಂಪು ಅವರದಾಗಿತ್ತು.

ಪ್ರಕೃತಿ ಕುವೆಂಪು ಅವರ ಕವನಗಳು ಸಾಂಪ್ರದಾಯಿಕ, ಧಾರ್ಮಿಕ ಪರಿಭಾಷೆಯಲ್ಲಿ ಪ್ರಕೃತಿ ವರ್ಣನೆಯನ್ನು ಕಟ್ಟಿಕೊಡುವ ಕವನಗಳಾಗಿವೆ. ಪ್ರಕೃತಿಯ ಚೆಲುವೆಲ್ಲವನ್ನು ದೈವಿಕ ಪರಿಭಾಷೆಯಲ್ಲಿ ಗುರುತಿಸುವುದು ಕುವೆಂಪು ಅವರ ಪ್ರಕೃತಿ ದರ್ಶನದ ಪ್ರಾಥಮಿಕ ನೆಲೆಯಾಗಿದೆ.

"ಕುವೆಂಪು ಪ್ರಕೃತಿ ದರ್ಶನದ ಪ್ರಾಥಮಿಕ ನೆಲೆ ದೈವಿ ಪರಿವರ್ತನೆ, ಪ್ರಕೃತಿ ಎನ್ನುವುದು ಕುವೆಂಪು ಅವರಿಗೆ ಪರಮಾನಾರಾಧನೆ, ಪ್ರಕೃತಿಯ ಚೆಲುವೆಲ್ಲವೂ ದೈವದ ಸಾಕ್ಷಾತ್ಕಾರವೇ ಅಂತಿಮ ಹಂತದಲ್ಲಿ ಪ್ರಕೃತಿ ಸೌಂದರ್ಯ ಮತ್ತು ದೈವಗಳೆರಡರ ನಡುವೆ ಭಿನ್ನತೆಯನ್ನು ಕಾಣುವುದಿಲ್ಲ ಕುವೆಂಪು ಇಂದ್ರಿಯ ಗಮ್ಯ ಅನುಭವವನ್ನು ದಾಟಿ ದೈವೀ ಅನುಭವದ ಕಡೆಗೆ ಕುವೆಂಪು ನಡೆಯುತ್ತಾರೆ. ಕೆಲವೊಮ್ಮೆ ಸಾಂಪ್ರದಾಯಿಕ ಧಾರ್ಮಿಕ ಪರಿಭಾಷೆಯಲ್ಲೇ ಅನುಭವದ ಮಂಡನೆ ನಡೆದರೂ ಒಟ್ಟಾರೆಯಾಗಿ ಆ ಅನುಭವ ಅದಕ್ಕಿಂತ ಸಾಕಷ್ಟು ಭಿನ್ನವಾದದ್ದು". ಇಲ್ಲಿ ಸಾಂಪ್ರದಾಯಿಕ ಪರಿಭಾಷೆಯಲ್ಲಿ ಎಂದರೆ ನಾವು ಸಾಂಪ್ರದಾಯಿಕವಾಗಿ ದೇವರನ್ನು ಪೂಜಿಸುವ ಮಾತುಗಳಲ್ಲಿ ಪ್ರಕೃತಿಯ ವರ್ಣನೆಯನ್ನು ಕವಿ ಮಾಡುತ್ತಾರೆ. ಇದಕ್ಕೆ ಅತ್ಯಂತ ಸುಸ್ಪಷ್ಟ ನಿದರ್ಶನ; 'ಬಾ ಪಾಲ್ಗುಣ ರವಿ ದರ್ಶನಕೆ' ಕವನ.

ವರ್ಣನದಿಂದ್ರಿಯ ನಂದನವನು ದಾಂಟುತೆ ದರ್ಶನ ಮುಕ್ತಿಯ ಸೇರಿ

ವ್ಯಕ್ತಿತೆ, ಮೈಮರೆವುದು ಸೌಂದರ್ಯ ಸಮಾಧಿಯೊಳಾನಂದವ ಹೀರಿ

ಸರ್ವೇಂದ್ರಿಯ ಸುಖನಿಧಿ ಅಲ್ಲಿ: ಸರ್ವಾತ್ಮನ ಸನ್ನಿಧಿ ಅಲ್ಲಿ
ಸಕಲಾರಾಧನ ಸಾಧನ ಭೋಧನದನುಭವರಸ ತಾನಹುದಲ್ಲಿ

(ಬಾ ಪಾಲ್ಗುಣ ರವಿ ದರ್ಶನಕ್ಕೆ)

ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ: ಬರಲಿ ವಿಜ್ಞಾನ ಬುದ್ಧಿ:
ವೇದ ಪ್ರಮಾಣದ ಮರು ಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ
ತರುಣರಿರ ಎದ್ದೇಳಿ! ಎಚ್ಚರಗೊಳ್ಳಿ! ಬಾಳಿ (ಕಬ್ಬಿಗನ ಕೈ ಬುದ್ಧಿ)

ಎಂದು ಭಾರತೀಯ ತರುಣರನ್ನು ಎಚ್ಚರಿಸಿ ಹಳೆಯ ಸಂಪ್ರದಾಯಗಳನ್ನು ಬದಿ ಹೊತ್ತಿ ಎಂದು ಹೇಳಿ ಹೊಸ ಮನ್ವಂತರಕ್ಕೆ ಯುವಕರನ್ನು ಆಹ್ವಾನಿಸುತ್ತಾರೆ. ಮನುಜಮತ, ವಿಶ್ವಪಥವಾಗಲಿ ಎಂಬುದು ಕುವೆಂಪು ಅವರ ಆಶಯ ಕುವೆಂಪು ಅವರ ವೈಚಾರಿಕತೆ, ಉನ್ನತ ಮಟ್ಟದ್ದು ಅದು ವಿಜ್ಞಾನದ ಸರಿಸ್ವರ್ಗವನ್ನು ಪಡೆದಿರುವುದು. ಈ ಹಿನ್ನೆಲೆಯಲ್ಲಿ ಕಲ್ಕಿ, ತರುಣರ ಎದ್ದೇಳು, ಯಾವ ಕಾಲದ ಶಾಸ್ತ್ರವೇನು, ಹೇಳಿದರೇನು, ಓ ಬನ್ನಿ ಸೋದರರೇ ಬೇಗ ಬನ್ನಿ. ಕ್ರಾಂತಿಕಾಳಿ, ಇಂದಿನ ದೇವರು ಮುಂತಾದ ವಿಚಾರಿಕ ಕವನಗಳನ್ನು ಕಾಣಬಹುದು.

ಕುವೆಂಪು ಅವರ ಕಥೆಗಳಿಗೆ ಹಿನ್ನೆಲೆಯಾಗಿರುವ ರಂಗ ಸಜ್ಜಿಕೆ ಪ್ರಕೃತಿಯೇ ಆಗಿದೆ. ಪ್ರಕೃತಿಯ ಲೀಲಾ ವೈಭವಗಳನ್ನು ವರ್ಣಿಸುವುದೆಂದರೆ, ಕುವೆಂಪುರವರ ಕಾವ್ಯ ಪ್ರತಿಭೆ ಅಡಿಯಿಂದ ಮುಡಿಯವರೆಗೆ ಸಿಂಗಾರಗೊಂಡು ಸಂಭ್ರಮಿಸುತ್ತದೆ. ಅವರಿಗೆ ಪ್ರಕೃತಿ ದೇವಿಯೇ ನಿಜವಾದ ಅರ್ಥದಲ್ಲಿ ದೇವಿಯಾಗಿದ್ದಳು. ಪ್ರಕೃತಿಯನ್ನು ವೈವಿಧ್ಯಮಯ ವರ್ಣನೆಗಳಿಂದ ಅಲಂಕರಿಸಿದ್ದಾರೆ ಈ ಪ್ರಕೃತಿ ಕವಿ.

ಚಂದ್ರಮನನ್ನು ದೇವರ ಪೆಪ್ಪರ್‌ಮೆಂಟ್ ಎಂದು ಮರದಲ್ಲಿ ಮಾಡುವ ಕೆಂದಳಿರುಗಳನ್ನು ಅಪ್ಸರೆಯರೆಂದೂ ಸಂಜೆ ತಂಪಾಗುವ ಸೂರ್ಯ ತಂಪಾಗಿದ್ದು ಕೈವಶನಾಗಬಲ್ಲನೆಂಬ ಮುಗ್ಧತೆಯ ಆಳವನ್ನೂ ಅವರು ಕಲ್ಪಿಸಿಕೊಳ್ಳಬಲ್ಲವರಾದರು.

ನೂರಾರು ಮೈಲುಗಳನ್ನು ಪ್ರಯಾಣಿಸಿ ಕಾಶಿಯಾತ್ರೆ ಮಾಡುವ ಬದಲು ಗಂಗೆಯಲ್ಲಿ ಮೀಯುವ ಬದಲು ಪ್ರಕೃತಿಯೇ ಪುಣ್ಯದಾಲಯ ಇಲ್ಲಿನ ರಸ ತೀರ್ಥದಲ್ಲಿ ಮಿಂದೇಳುವುದೇ ಪವಿತ್ರಯಾತ್ರೆ ಎಂದು ಅವರು ಭಾವಿಸುತ್ತಾರೆ.

ಬಂದನು ಬಾನತಿಥಿ, ನಕ್ಷತ್ರೇಂದು, ಶರದೃತು, ಬಾಬಾ ಸೋಮಾರಿಯ ಹಾಡು, ಅಂಗಳದವರೆಯ ಚಪ್ಪರದ ಅಡಿಯಲ್ಲಿ ಕವನಗಳು ಪ್ರಕೃತಿಯನ್ನು ಆಧರಿಸಿವೆ.

ಬೇಸಿಗೆಯ ಕಾಲದಲ್ಲಿ ಅವರೆಯ ಚಪ್ಪರದ ಅಡಿಯಲ್ಲಿ ಮಲಗುವ ಆನಂದವನ್ನು ದೋಣಿಗನ ಹಾಡಿನಲ್ಲಿ ದೋಣಿಯಾಟ ನೀಡುವ ಮುದವನ್ನು ಅಂಗಳದವರೆಯ ಚಪ್ಪರದಡಿಯಲ್ಲಿ ಮತ್ತು ದೋಣಿಗನ ಹಾಡು ಕವನಗಳು ವಿವರಿಸುತ್ತೇವೆ.

'ನಕ್ಷತ್ರೇಂದು'ವಿನಲ್ಲಿ ಶೃಂಗಾರದ ಹಿನ್ನುಡಿಯಲ್ಲಿ ಚಂದ್ರನನ್ನು ವರ್ಣಿಸಲಾಗಿದೆ. ಕವಿ ಮಳೆಯನ್ನು ಬಾನತಿಥಿ ಎಂದು 'ಬಂದನು ಬಾನುತಿಥಿ'ಯಲ್ಲಿ ಕರೆದಿದ್ದಾರೆ. 'ಶರದೃತು'ವಿನಲ್ಲಿ ಪ್ರಕೃತಿಯ ಚೆಲುವಿನಿಂದ ಆಹ್ಲಾದಗೊಂಡ ಕವಿ

ಸೃಷ್ಟಿಯಲ್ಲಿ ಶಿವನ ಸವಿದು ಪೂಜೆ ಮಾಡುವ

ಗಿರಿಜೆ ಬಾರೆ ವನಗಳಲ್ಲಿ ತಿರುಗಿ ನಲಿಯುವ

ಎಂಬ ಸೃಷ್ಟಿಯಲ್ಲಿ ಶಿವನನ್ನು ಕಾಣುವ ಪರಿಯನ್ನು ಮೆರೆದಿದ್ದಾರೆ.

ಬಾಬಾ ಕವನದಲ್ಲಿ ಕೂಡ ಪ್ರಕೃತಿ ಪ್ರೇಮ ಶೃಂಗಾರದ ಹಿನ್ನೆಲೆಯಲ್ಲಿ ವರ್ಣಿಸಿದ್ದಾರೆ.

ತಣ್ಣೆಲರಲಿ ಹೂಗಳ ಬಳಿ

ಸೊಕ್ಕಿದ ಅಳಿ ನೋಡು ಬಾ

ಹೊಸತಳಿರೊಳು ಇಂಗೊರಲೊಳು

ಕೋಗಿಲೆಗಳು ಸರಗೈಯಲು

ಹಾಡು, ಬಾ! ಕೂಡು ಬಾ!

ಬೇಗ ಬಾ ! ಬಾ! ಬಾ !

ಕರ್ಮಯೋಗಿಯಾದ ಕೃಷಿಕ ಉತ್ತುಬಿತ್ತನೆ ಹಾಕಿ ಬಂಗಾರದ ಬೆಳೆಯನ್ನು ಪಡೆಯುತ್ತಾನೆ. ಚರಾಚರ ಪ್ರಪಂಚದಲ್ಲಿ ದೃಷ್ಟಿಗೊಚರವಾದ ನಿತ್ಯಸತ್ಯ ಚೈತನ್ಯದ ಸ್ವರೂಪವನ್ನು ಕಂಡುಕೊಳ್ಳಲು ಪ್ರಯತ್ನ ಮಾಡುತ್ತಾನೆ. ದಾರ್ಶನಿಕ ಜೀವಸತ್ವವಿಲ್ಲದ ಶಬ್ಧ ಜಾಲದಿಂದ ರಸಮಯ ಕಾವ್ಯ ಪ್ರಪಂಚವನ್ನೇ ನಿರ್ಮಿಸುತ್ತಾನೆ. ಮಹಾಕವಿ, ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ಕೇವಲ ಭೌತಿಕ ಮೌಲ್ಯವುಳ್ಳ ಸಸ್ಯರಾಶಿಯನ್ನು ಪವಿತ್ರ ದೃಷ್ಟಿಯಿಂದ ರಸಋಷಿಯಾಗಿ ಕಂಡು ಸಸ್ಯಕಾಶಿಯ ಪುಣ್ಯಯಾತ್ರೆಗೆ ನಮ್ಮನ್ನು ಕರೆದೊಯ್ಯುವ ಕೃಷಿಕ, ದಾರ್ಶನಿಕ ಹಾಗೂ ಮಹಾಕವಿ ಕುವೆಂಪು.

"ಅತ್ತ ಕಾಡು, ಇತ್ತ ಕಾಡು, ದಟ್ಟವಾದ ಅರಣ್ಯ ಶ್ರೇಣಿ, ಎತ್ತರವಾಗಿದ್ದ ಮರಗಳಿದ್ದೆಡೆ ಆಕಾಶವೇ ಒಂದು ನೀಲಿಯ ಓಣಿ" ಯಾಗಿ ಕಾಣುವ ಕನ್ನಡ ನಾಡಿನ ಕಾಶ್ಮೀರವಾದ ಮಲೆನಾಡಿನ ಮಡಿಲಿನಲ್ಲಿ ಹುಟ್ಟಿ ಬೆಳೆದ ಕುವೆಂಪು ಅವರಿಗೆ ಸಸ್ಯಕಾಶಿ ಸೌಂದರ್ಯರೂಪಿಯಾಗಿ, ಮಂತ್ರವನುಸಿರುವ ರಸಯೋಗಿಯಾಗಿ ಬಂಧಿಸಿದ್ದಾರೆ. ಕುವೆಂಪು ಅವರು, ಸಸ್ಯಗಳನ್ನು ನವಿಲು, ದುಂಬಿ, ಹಿಮಬಿಂದು ಮುಂತಾದ ಚೇತನಾಚೇತನ ವಸ್ತುಗಳ ಜತೆಗೆ ಅನುಸಂಧಿಸಿ ಅಖಂಡ ಪ್ರಕೃತಿ ದರ್ಶನ ಮಾಡಿದ್ದು, ಇನ್ನೊಂದು ಮುಖ ಬುದ್ಧಿ ಜೀವಿಯಾದ ಮಾನವ್ಯಾಂತೆಯೇ ಸಸ್ಯಗಳನ್ನು ವ್ಯಕ್ತಿಕರಿಸಿದ ಮುಖ ಇನ್ನೊಂದು, ಮಲೆನಾಡು ರುದ್ರರಮಣೀಯ ಭೂಮಿ, ದೇವೇಂದ್ರನ ನಂದನವನ್ನು ಸ್ವರ್ಗದಿಂದಿಳಿಸಿ, ಭೂಲೋಕದಲ್ಲಿ ಸಂಸ್ಥಾಪಿಸಿರುವಂತೆ, ಗಂಧರ್ವ ಲೋಕವನ್ನಣಕಿಸುವಂತೆ ಮೈಸೂರು ದೇಶದ ಮಲೆನಾಡು ಕಂಗೊಳಿಸುತ್ತದೆ.

"ರುದ್ರರಮಣೀಯ ಪ್ರಕೃತಿಯನ್ನು ಕಂಡಾಗ ಕವಿ ಮನಸ್ಸು ಕಡಲಿನ ಅಲೆಗಳಂತೆ ಉದ್ವೇಗದಿಂದ ನರ್ತನವಾಡುವುದುಂಟು, ಹಸಿರು ಜೋಳದ ಹೊಲದ ಗಾಳಿಯು ತೀಡಿ ತಣ್ಣಗೆ ಬರುತ್ತಿದೆ". "ಗದ್ದೆಗಳು, ಹಸುರಾಗಿ ಎದೆ ನಿಮಿರಿ ಎದೆ ನಿಮಿರಿ ಎದೆಯತ್ತರಂ ಬೆಳೆದು ತೆನೆಮೂಡಿ ಹಸರ್ ಮಲೆಗಳ ಹದುಳ ತೆಕ್ಕೆಯಲ್ಲಿ ಸೆರೆಸಿಕ್ಕಿ ಮೃದು ಪವನಹತಿಗೆ ತೆರೆತೆರೆಯಾಗಿ ತಲೆದೂಗಿ ಶಾಲಿವನವನಧಿಯೊಲು ಮುದ್ದಾಗಿ ಮೆರೆವ ಬಿತರದ ಗದ್ದೆಗಳಂ" ದು ವರ್ಣಿಸಿದ್ದಾರೆ.

ಹೆಬ್ಬಿದಿರು ಕಿರಿಬಿದಿರು ಬೀಡುಗಳ ಬನದ ಕಾಲ್ದೆನೆಯಲ್ಲಿ ಧೀರವಾಗೆದ್ದಿರುವ ಗುಡಿಯ ಗೋಪುರದಂತಹ ಹುತ್ತಗಳು ಅವರ ಕಣ್ಣಿಗೆ ಬಿದ್ದಿವೆ.

ಅಡಿ ಟಿಪ್ಪಣಿಗಳು

೧) ನೆನಪಿನ ದೋಣಿಯಲ್ಲಿ, ಸಹ್ಯಾದ್ರಿ ಪ್ರಕಾಶನ ೧೯೮೦- ಪು-೧೧೨.

೨) ಪಕ್ಷಿ ಕಾಶಿ ಉದಯರವಿ ೧೯೫೪

೩) ನವಿಲು (ರಸಋಷಿ) ೧೯೩೩

೪) ರಾಷ್ಟ್ರಕವಿ ಕುವೆಂಪು, ದೇಜಗೌ, ಸುರುಚಿ ೬೧೭೦, ಪು-೧

ಕುವೆಂಪುರವರ ಬಹುತೇಕ ಕವನಗಳಲ್ಲಿ ವ್ಯಕ್ತವಾಗುವ ಮುಖ್ಯ ಅನುಭವದ ಸ್ವರೂಪವೊಂದನ್ನು 'ಬಾ ಫಾಲ್ಗುಣ ರವಿದರ್ಶನಕೆ' ಕವನದ ಈ ಅಂತಿಮ ಸಾಲುಗಳು ಸೂಚಿಸುತ್ತಿವೆ. ಕುವೆಂಪುರವರ ಪ್ರಕೃತಿ ಕವನಗಳಲ್ಲಿ ಪ್ರಕೃತಿಯನ್ನು ಕುರಿತು ಕವಿಯ ಅನುಭವ ವ್ಯಕ್ತವಾಗುವ ಜಾಡು ಇದು, ಇದನ್ನೇ ಕವಿ 'ದರ್ಶನ ಮುಕ್ತಿ', 'ಸೌಂದರ್ಯ ಸಮಾಧಿ' ಎಂದೆಲ್ಲಾ ವರ್ಣಿಸುತ್ತಾರೆ. 'ಆನಂದಮಯ ಈ ಜನ ಹೃದಯ', 'ಇಂತಹ ಸುಂದರ ಪ್ರಾತಃಕಾಲದಿ', 'ಉದ್ಯಾನವನದಲ್ಲಿ ಧಾನ್ಯಯೋಗಿ', 'ದೋಣಿ ಹಾಡು', 'ಹಸರು', 'ರಸಸಿದ್ಧಿ', 'ಕವಿಶೈಲದಲ್ಲಿ ಸಂಧ್ಯೆ', 'ಶರತ್ಕಾಲದ ಸೂರ್ಯೋದಯದಲ್ಲಿ', 'ಪಕ್ಷಿ' ಮತ್ತು 'ಶಿಲಾತಪಸ್ವಿ' ಮೊದಲದ ಕವನಗಳನ್ನು ಕಾಣಬಹುದು.

ಕುವೆಂಪು ಅವರು ಪ್ರಕೃತಿ ಗೀತೆಗಳಷ್ಟೆ ಪ್ರಣಯ ಗೀತೆಗಳು, ಮಹತ್ವವಾದವು. ಡಿ.ವಿ.ಜಿ. ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಅನ್ನದಾತುರಕ್ಕಿಂತ ಚಿನ್ನದಾತುರ ತೀಕ್ಷ್ಣ ಚಿನ್ನದಾತುರಕ್ಕಿಂತ ಹೆಣುಗಂಡೌಮೆ ಎಂದು ಹೇಳಿದ್ದಾರೆ. ಹಾಗಾಗಿ ಪ್ರಣಯಕ್ಕೆ ಹಲವು ಆಯಾಮಗಳಿವೆ.

ಕುವೆಂಪು ತಮ್ಮ ಪ್ರೇಮ ಭಾವವನ್ನು ದಿವ್ಯ ಭಾಷೆಯಲ್ಲಿ ವರ್ಣಿಸುವುದನ್ನು ನೋಡಬಹುದು. ಪ್ರಣಯಗಳು, ರಸದೇವಗಂಗೆಯಲ್ಲಿ ಮೀನಿನಂತೆ ಈಜಾಡಲು ಬಯಸುತ್ತಾರೆ. ಗಂಗೆಯನ್ನು ದೇವ ಗಂಗೆಯೆಂದು ಕರೆಯುತ್ತಾರೆ. ಕುಟುಂಬ ರಸದೇವಗಂಗೆಯೆಂಬ ಹೊಸ ನುಡಿಗಟ್ಟನ್ನೂ ಸೃಷ್ಟಿಸಿದ್ದಾರೆ.

'ಮಧುಮಂಚಕ್ಕೆ ಬಾ ಮಧುಮಗಳೇ', 'ಗುರುಕೃಪೆ', 'ಪ್ರೇಮಾಗಣಿತ' 'ಅನಂಗ ರಂಗ', 'ಎಂತು ನೂಂಕಲಿ ನಾಳೆಯೊಂದು ದಿನವನು ಚೆನ್ನಾ' ಕವನಗಳು ಕುವೆಂಪು ಅವರ ಉತ್ತಮ ಪ್ರಣಯ ಗೀತೆಗಳು ಆಗಿವೆ. ಕುವೆಂಪು ಶ್ರೇಷ್ಠ ಕವಿಯಾಗಿದ್ದುದ್ದರಿಂದ ಪ್ರಣಯ ಕವನಗಳನ್ನು ಸಹ ಭಕ್ತಿಗೀತೆಗಳ ಎತ್ತರಕ್ಕೆ ಕೊಂಡೊಯ್ದಿದ್ದಾರೆ.

ಬಾಳು ಹುಣ್ಣಾದಂದು

ಬಳಲಿ ಬೆಂಡಾದಂದು

ಹೆಣ್ಣೆ ಹರಿಣವ ತಂದು

ಹೊರೆವಳಯ್ಯ (ಚಂದ್ರ ಮಂಚಕೆ ಬಾ ಚಕೋರಿ)

ಗಂಡು ಹೆಣ್ಣಿನ ಪ್ರೇಮದ ಮಿಲನವನ್ನು ಶಿವ ಮತ್ತು ಶಕ್ತಿಯರ ಮಿಲನವೆಂದು ಭಾವಿಸುತ್ತಾರೆ. ಪ್ರಿಯತಮೆಯ ಸಹಕಾರವು ಗುರುಕೃಪೆಯ ಇನ್ನೊಂದು ರೂಪವೆಂದು ತಿಳಿಯುತ್ತಾರೆ. ಇಲ್ಲಿನ ಕವನಗಳಲ್ಲಿ ಹೆಣ್ಣಿನ ದೇಹದ ಅಂಗಾಂಗಗಳ ಅಸಭ್ಯವೆನಿಸುವ ವರ್ಣನೆಗಳಿಲ್ಲ ಎಲ್ಲವೂ ಪರಿಶುದ್ಧವಾದ ಭಾವಲೋಕದಲ್ಲಿ ಮಧುರವಾದ ರಸವಿಹಾರದಂತೆ ತೋರುತ್ತದೆ. ಕಾಮದ ಕೆಸರು ಇಲ್ಲಿ ಕಂಡುಬರುವುದಿಲ್ಲ. ಜೀವನದ ಸುಖ ಭೋಗಗಳನ್ನು ತಿರಸ್ಕರಿಸುವ ವಿಚಾರವೂ ಇಲ್ಲಿಲ್ಲ. ಆದ್ದರಿಂದ ಈ

ಕವನಗಳಲ್ಲಿರುವ ಶುದ್ಧ ಶೃಂಗಾರದ ನಿರೂಪಣೆಯನ್ನು ವಿಮುಖವಾಗಿಸದೆ ಎಲ್ಲರೂ ಕವಿಯ ಅನುಭವವನ್ನು ಹಂಚಿಕೊಳ್ಳುತ್ತಾರೆ.

ಕುವೆಂಪು ಅವರ ಜ್ಞಾನಸಹಿತ ಭಕ್ತಿ ಮಾರ್ಗದಲ್ಲಿ ನಡೆದು ಆಧ್ಯಾತ್ಮಿಕ ನೆಲೆಯ ಕಾವ್ಯವನ್ನು ರಚಿಸಿದ್ದಾರೆ. ಕುವೆಂಪು ಅವರ ಆಧ್ಯಾತ್ಮಿಕ ಕವನಗಳು, ಮತಕ್ಕೆ ಸಂಬಂಧಿಸಿಲ್ಲ. ಲೋಕ ಸಾಧಾರಣ ಧರ್ಮಕ್ಕೂ ಸಂಬಂಧಿಸಿಲ್ಲ ಮತ ಮತ್ತು ಧರ್ಮ ಎರಡನ್ನೂ ದಾಟಿದರೆ ಆಧ್ಯಾತ್ಮ ಕ್ಷೇತ್ರ ಪ್ರಾರಂಭವಾಗುತ್ತದೆ. ಇಂದ್ರಿಯಗಳು ಮನಸ್ಸು, ಚಿತ್ತ, ಅಹಂಕಾರ, ಪ್ರಾಣ, ಬುದ್ಧಿ, ಆತ್ಮ ಮುಂತಾದವು ಸಂಶೋಧನೆಗೆ ಒಳಗಾಗುತ್ತವೆ. ಇದೊಂದು ವ್ಯಕ್ತಿ ನಿಷ್ಠ ಶೋಧನೆಯ ಕಾರ್ಯ ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸುವ ಸಾಧನೆಯೇ ಮುಖ್ಯವಾದುದು, ಇದನ್ನು ಸಾಧಿಸಲು ಇರುವ ನಾಲ್ಕು ಮಾರ್ಗಗಳಲ್ಲಿ ಭಕ್ತಿ ಮಾರ್ಗವೂ ಒಂದು,

> ಓ ನನ್ನ ಚೇತನ
>
> ಆಗು ನೀ ಅನಿಕೇತನ
>
> ರೂಪ ರೂಪಗಳನ್ನು ದಾಟಿ
>
> ನಾಮ ಕೋಟಿಗಳನ್ನು ಮೀಟಿ
>
> ಎದೆಯ ಬಿರಿಯೆ ಭಾವ ದೀಟಿ
>
> ಓ ನನ್ನ ಚೇತನ
>
> ಆಗು ನೀ ಅನಿಕೇತನ . . . . . .
>
> ಅನಂತ ತಾನ್ ಅನಂತವಾಗಿ
>
> ಆಗುತಿಹನೆ ನಿತ್ಯಯೋಗಿ
>
> ಅನಂತ ನೀ ಅನಂತವಾಗು
>
> ಆಗು ಆಗು ಆಗು ಆಗು
>
> ಓ ನನ್ನ ಚೇತನ
>
> ಆಗು ನೀ ಅನಿಕೇತನ (ಅನಿಕೇತನ)

ಎಲ್ಲೆ ಚೈತನ್ಯ ರೂಪಿಯಾದ ಮನಸ್ಸೇ ನೀನು ನಿನ್ನದೇ ಆದ ಯಾವ ಎಲ್ಲೆಯನ್ನೂ ನಿರ್ಮಿಸಿಕೊಳ್ಳಬೇಡ ನೀನು ಯಾವ ಎಲ್ಲೆಗೂ ಯಾವ ಕಟ್ಟಿಗೂ ಒಳಪಟ್ಟವನಲ್ಲ, ನೀನು ಸ್ವತಂತ್ರ, ಸರ್ವತಂತ್ರ, ನೀನು ಯಾರಿಗೂ ಅಧೀನನಲ್ಲ. ನಿನಗೆ ಯಾರೂ ಅಧೀನರಲ್ಲ. ಸರ್ವರೂ ಸ್ವತಂತ್ರರು ಎಂದಿದ್ದಾರೆ. ದೇವರು ಅನಾದಿ ಅನಂತ ಮನುಷ್ಯನ ಆತ್ಮವೂ ಅನಾದಿ ಅನಂತ ನೀನು ಅನಂತ ಎಂಬುದನ್ನು ತಿಳಿದು ಅನಂತವಾಗು ಎಂದು ಕವಿ ಹೇಳಿದ್ದಾರೆ. ಪಕ್ಷಿ, ಗಗನಗುರು, ಅಂತರತಮ ನೀ ಗುರು, ಮನ್ಮನೋಮಂದಿರಕೆ, ಮುಚ್ಚು ಮರೆಯಿಲ್ಲದೆಯೆ, ಆಕ್ರಮಿಸು, ತೇನವಿನಾ, ಶರಣು, ನಿನ್ನಿಚ್ಛೆಯಪ್ಪನ್ನೆಗಂ, ತನವು ನಿನ್ನದು, ಸದಾ, ಅನಿಶ್ಚಯ–ನಿಶ್ಚಯ, ಧ್ರುವತಾರೆ, ಅನಿಕೇತನ,, ಹಾರೈಸು, ಮೇಲಿನ ಹದಿನಾಲ್ಕು ಕವನಗಳಲ್ಲಿ ಮೊದಲಿನ ಎರಡು ಕವನಗಳು ಆಧ್ಯಾತ್ಮಿಕ ದೃಷ್ಟಿಯುಳ್ಳ ಪ್ರಕೃತಿ ಪ್ರಧಾನ ಕವನಗಳು ಪ್ರಕೃತಿಯಾರಾಧನೆಯ ಪರಮನಾರಾಧನೆ ಎನ್ನುವ ಕುವೆಂಪು ಅವರು ಎಲ್ಲಾ ಕವನಗಳಲ್ಲಿಯೂ ಆಧ್ಯಾತ್ಮದ ಬೆಳಕನ್ನು ತೋರಿಸುತ್ತಾರೆ. ಆತ್ಮ ಶಾಶ್ವತವಾದುದು, ದೇಹ ಅಶಾಶ್ವತವಾದುದು ಎಂಬ ತತ್ವವನ್ನು ಬೌದ್ಧಿಕವಾಗಿ ಮಾತ್ರ ಗ್ರಹಿಸದೆ ಅನುಭವಕ್ಕೆ ತಂದುಕೊಳ್ಳುವುದಾದರೆ ಮಾತ್ರ ಅದರ ನೆಲೆ ಬೆಲೆಗಳು ತಿಳಿಯುತ್ತದೆ.

ಕುವೆಂಪು ಅವರು, ಪ್ರಕೃತಿ ಪ್ರಣಯ, ಆಧ್ಯಾತ್ಮಿಕ, ವೈಚಾರಿಕ, ನೆಲೆಯ ಕವನಗಳ ಜೊತೆಗೆ ಬೇರೆ ಬೇರೆ ವಿಭಿನ್ನ ವಸ್ತು ವಿಷಯಗಳನ್ನು ಹಲವಾರು ಕವನಗಳನ್ನು ಕಾಣಬಹುದು.

ಕೂಸಿನ ಕನಸು, ಯಂತ್ರರ್ಷಿ, ಖಗೋಳ, ವಿಜ್ಞಾನದ ಪ್ರಥಮ ಪರಿಚಯ, ಜಡವಾದಿ, ಸಾಮಾನ್ಯತೆ ಭಗವಂತನ ರೀತಿ, ಶ್ರೀ ಸಾಮಾನ್ಯರ ದೀಕ್ಷಾಗೀತೆ, ರೈತನ ದೃಷ್ಟಿ, ಗೊಬ್ಬರ, ಅಲ್ಲಿ–ಇಲ್ಲಿ, ಪ್ರೇತ–ಕ್ಯೂ, ಶಿಲಾಭೇರಿ, ತೆರೆದಿದೆ ಮನೆ ಓ ಬಾ ಅತಿಥಿ, ಜೀವರಥೋತ್ಸವ, ಒಬ್ಬ ತಾಯಿಗೆ, ನಮಸ್ಕಾರ, ಮೊದಲಾದ ಕವಿತೆಗಳು ವಿಭಿನ್ನ ವಸ್ತು ವೈವಿಧ್ಯತೆಯನ್ನು ಒಳಗೊಂಡಿದೆ. ಸರ್ವೋದಯ ತತ್ವ, ಶ್ರೀ ಸಾಮಾನ್ಯನ ಮಹತ್ವ, ನೇಗಿಲಯೋಗಿಯ ಬದುಕು, ಗೊಬ್ಬರದ ಜೀವಸತ್ವ ಮೌಲ್ಯ, ಗತ ಇತಿಹಾಸವನ್ನು ಸಾರುವ ವೀರಗಲ್ಲು ಮಾಸ್ತಿಕಲ್ಲುಗಳ ಸ್ಥಿತಿಗತಿ ಮೊದಲಾದ ವಿಷಯಗಳು ಒಳಗೊಂಡಂತೆ ಹಲವಾರು ಸಂಕೀರ್ಣ ಕವನಗಳನ್ನು ಕುವೆಂಪು ಅವರು ರಚಿಸಿದ್ದಾರೆ.

ಕುವೆಂಪು ಅವರು ಕರ್ನಾಟಕ ಮತ್ತು ಕನ್ನದ ಬಗ್ಗೆ ವರ್ಣಿಸಿದ್ದಾರೆ, ಕರ್ನಾಟಕಕ್ಕೆ ಸಾವಿರ ವರ್ಷಕ್ಕೂ ಮೀರಿದ ಇತಿಹಾಸವಿದೆ. ರಾಮಾಯಣದಲ್ಲಿ ಬರುವ ಕಿಷ್ಕಿಂದೆ, ಪಂಪಸರೋವರಗಳು ಕುವೆಂಪು ವಿವರಿಸಿದ್ದಾರೆ.

೧. ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದಿರಿರ

೨. ಮೆಟ್ಟುವ ನೆಲ ಕರ್ನಾಟಕ

೩. ಕನ್ನಡಮ್ಮನ ಹರಕೆ

ಈ ಮೂರು ಕವನಗಳ ಕೇಂದ್ರ ಕನ್ನಡ ಭಾಷೆ ಮತ್ತು ಬದುಕು. ಕನ್ನಡ ಎಂದರೆ ಬರಿ ಭಾಷೆ ಅಲ್ಲ. ಅದರಿಂದ ಏನೇನೂ ಆಗಲು ಸಾಧ್ಯವೋ ಅವೆಲ್ಲವೂ ಕನ್ನಡದ ಪ್ರಪಂಚ ಕನ್ನಡವನ್ನು ಕಟ್ಟಲು ಏನೇನೂ ಮಾಡಬಹುದೋ ಅದೆಲ್ಲವೂ ಕನ್ನಡವಾಗಿರುತ್ತದೆ.

ಯಾವುದೇ ಪರದೇಶದಲ್ಲಿದ್ದರೂ ನಮ್ಮ ಚೈತನ್ಯ ಕನ್ನಡವಾಗಿರಲು ಸಾಧ್ಯ ಎಂಬ ವಿಶ್ವಮಾನವ ಪ್ರಜ್ಞೆ ಕಡೆಗೆ ಓದುಗರನ್ನು ಕರೆದೊಯ್ಯುತ್ತಾರೆ.

ಅದಕ್ಕೆ 'ಮೆಟ್ಟುವ ನೆಲ ಕರ್ನಾಟಕ' ಕವನದ ಗಮನಿಸಬಹುದು.

ಎಲ್ಲಾದರೂ ಇರು, ಎಂತಾದರು ಇರು!

ಎಂದೆಂದಿಗೂ ನೀ ಕನ್ನಡವಾಗಿರು

ಕನ್ನಡ ಗೋವಿನ ಓ ಮುದ್ದಿನ ಕರು

ಕನ್ನಡತನವೊಂದಿದ್ದರೆ ನೀ ನಮಗೆ ಕಲ್ಪತರು!

ನೀನು ಎಲ್ಲಿರುತ್ತೀಯಾ ಹೇಗಿರುತ್ತೀಯಾ ಎಂಬುದು ಮುಖ್ಯವಲ್ಲ. ನೀನು ಕನ್ನಡವಾಗಿದ್ದರೆ ಅದಷ್ಟೆ ಮುಖ್ಯ.

ನೀ ಮೆಟ್ಟುವ ನೆಲ– ಅದೆ ಕರ್ನಾಟಕ

ನೀ ನೇರುವ ಮಲೆ– ಸಹ್ಯಾದ್ರಿ

ಕನ್ನಡ ವ್ಯೋಮ ದಿಗಂತವಾಗಿ ಸಂಚರಿಸುತ್ತದೆ. ಕವಿಯ ದೃಷ್ಟಿ ವಿಶಾಲವಾಗಿರುತ್ತದೆ ಎಂಬುದಕ್ಕೆ ಇದು ಸಾಕ್ಷಿ.

ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದಿರಿರ

ಹೊರ ನುಡಿಯ ಹೊರೆಯಿಂದ ಕುಸಿದು ಕುಗ್ಗಿ!

ಕನ್ನಡದ ಚಿಂತನೆ, ಬೇರೆ ಭಾಷೆಯೊಂದು ಸ್ಥಳೀಯ ಭಾಷೆಯ ಮೇಲೆ ಆಕ್ರಮಣ ಮಾಡಿದರೆ ಅದನ್ನು ಸಹಿಸಿಕೊಳ್ಳಬಾರದು, ಎಂದು ವಿವರಿಸಬಹುದು.

ಕುವೆಂಪು ಮತ್ತು ಕನ್ನಡವನ್ನು ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ ಎನ್ನುವ ಮಟ್ಟಿಗೆ ಕುವೆಂಪು ಕನ್ನಡವನ್ನು ಪ್ರೀತಿಸುತ್ತಾರೆ.

ಕುವೆಂಪು ಅವರು ಕನ್ನಡ ಎಂಬುದೊಂದು ವ್ರತ, ಬದುಕು, ದೃಷ್ಟಿಕೋನ, ಉಸಿರು ಹೀಗಾಗಿ ಪ್ರತಿ ಕಣದಲ್ಲೂ ಕನ್ನಡದ ಉಳಿವಿನ ಬಗ್ಗೆ ಚಿಂತಿಸುತ್ತಾರೆ. ಕನ್ನಡಿಗರನ್ನು ಎಚ್ಚರಿಸುತ್ತಾರೆ, ವಿನಂತಿಸುತ್ತಾರೆ, ಆದೇಶಿಸುತ್ತಾರೆ, ಕನ್ನಡವೇ ಸರ್ವಸ್ವವೆನ್ನುವರು, ಗ್ರಹಿಸಿದ್ದರಿಂದಲೇ ಕನ್ನಡದ ಮೂಲಕವೇ ಗಡಿಯನ್ನು ನಿರ್ದೇಶಿಸಬಯಸುತ್ತಾರೆ.

ನೀ ಮುಟ್ಟುವ ನೆಲ– ಅದೆ ಕರ್ನಾಟಕ

ನೀ ನೇರುವ ಮಲೆ– ಸಹ್ಯಾದ್ರಿ

ನೀ ಮುಟ್ಟುವ ಮರ– ಶ್ರೀಗಂಧದ ಮರ

ನೀ ಕುಡಿಯುವ ನೀರ್– ಕಾವೇರಿ

ಈ ರೀತಿ ಕವಿ ಕುವೆಂಪು ಅವರು ಕನ್ನಡದ ಬಗ್ಗೆ ಪ್ರೀತಿ, ವಿಶ್ವಾಸ, ಕನ್ನಡ ಸಂಸ್ಕೃತಿ, ಕರ್ನಾಟಕ ಭೂಮಿ, ಸಹ್ಯಾದ್ರಿಯ ತಪ್ಪಲು, ಪ್ರಕೃತಿ, ಹರಿವಜಲ ಎಲ್ಲದರಲ್ಲೂ ಕನ್ನಡ ಸಂಸ್ಕೃತಿಯಿದೆ ಎಂದು ತಿಳಿಸಿದ್ದಾರೆ.

ಆಧ್ಯಾತ್ಮ ನಿಸರ್ಗಗಳನ್ನು ಕುವೆಂಪು ಎಷ್ಟು ಪ್ರೀತಿಸಿದರೂ ಎಷ್ಟು ಗೌರವಿಸಿದರೂ ಮಾತೃಭಾಷೆಯಾದ ಕನ್ನಡವನ್ನು ಅಷ್ಟೆ ಪ್ರೀತಿಸಿ ಗೌರವಿಸಿದರು. ಕುವೆಂಪು ಅವರಂತಹ ಅನರ್ಘ್ಯ ರತ್ನವು ಕನ್ನಡ ಸಾಹಿತ್ಯ ಭಂಡಾರಕ್ಕೆ ಸೇರ್ಪಡೆಯಾಗಿದ್ದು, ಅವರ ಮೊದಲ ಕೃತಿ 'ಅಮಲನ ಕಥೆ' ೧೯೨೧ ರಲ್ಲಿ ಪ್ರಕಟಗೊಂಡು ಕನ್ನಡವೇ ಅವರ ಉಸಿರಾಯಿತು. ಕನ್ನಡಕ್ಕಾಗಿ ಕೈ ಎತ್ತು! ನಿನ್ನ ಕೈ ಕಲ್ಪವೃಕ್ಷವಾಗುವುದು ಎಂದರು ಕುವೆಂಪು.

ಅಡಿ ಟಿಪ್ಪಣಿಗಳು

ಶಕ್ತಿ ಶಾರದೆಯ ಮೇಳ– ಡಿ.ಆರ್.ನಾಗರಾಜ್

ಹಾಡೆ ಹಾದಿಯ ತೋರಿತು– ಎಚ್.ಎಸ್.ರಾಘವೇಂದ್ರರಾವ್

ಕನ್ನಡದಲ್ಲಿ ಭಾವಗೀತೆ– ಡಾ॥ ಪ್ರಭುಶಂಕರ್

ಕುವೆಂಪುರವರ ಕಥನಕವನಗಳು:

ಕಥೆಯನ್ನು ಹೇಳುವುದು, ಕೇಳುವುದು ಮಾನವ ಸಹಜಗುಣ. ಭಾರತೀಯ ಪುರಸೊತ್ತಿನ ಹವ್ಯಾಸಗಳಲ್ಲಿ ಒಂದು. ಬೃಹತ್ಕಥಾಕೋಶ, ಕಥಾಸರಿತ್ಸಾಗರ, ಪಂಚತಂತ್ರ ಮುಂತಾದವು ಜನಪದರಲ್ಲಿದ್ದ ಕಥೆಗಳ ಸಂಗ್ರಹ, ಮಹಾಭಾರತ, ರಾಮಾಯಣ, ಭಾಗವತಗಳು ಈ ಬಗೆಯ ಕಥನಸಾಹಿತ್ಯದ ಬೆಳೆದ ರೂಪಗಳು ಇಂದಿಗೂ ಜನಪದ ವೃತ್ತಿಗಾಯಕರು, ಮಹದೇಶ್ವರ ಕೊಂಗಳ್ಳಿ ಮಲ್ಲಪ್ಪ, ಹೇಮರೆಡ್ಡಿಮಲ್ಲಮ್ಮ, ಮದಕರಿನಾಯಕ, ಪಿರಿಯಾಪಟ್ಟಣದ ಕಾಳಗಗಳನ್ನು ಕುರಿತು ಹಾಡುತ್ತಾರೆ.

ಕನ್ನಡ ಸಾಹಿತ್ಯದ ಶಿಷ್ಯ ರೂಪದಲ್ಲಿ ಎಂದರೆ ಹರಿಹರನ ರಗಳೆಗಳಲ್ಲಿ ಕಥನಕವನದ ಮೂಲವನ್ನು ಗುರುತಿಸಬಹುದು. ಗೋವಿನ ಕಥೆ ಅತ್ಯಂತ ಪ್ರಸಿದ್ಧವಾದ ಕಥನ ಕವನ.

ಕುವೆಂಪು ಅವರು ಕಥನ ಕವನ ಕ್ಷೇತ್ರದಲ್ಲಿ ೧೯೨೫ ರಿಂದ ಕೆಲಸ ಮಾಡಿದ್ದಾರೆ The Ground seller, Thimma or the Dying Cowherd, The lady of the lake scott. The Mascre of Delhi, The Death of Tippu ಎನ್ನುವುದು ಅವರ ಇಂಗ್ಲೀಷ್ ಕಥನ ಕವನಗಳು, ಕೆಸಬಿಯಂಕ, ಕುಮುದಿನಿ, ಜಯಸಿಂಹನ ಕೊನೆಗಾಲ, ಬೊಮ್ಮನಹಳ್ಳಿಯ ಕಿಂದರಜೋಗಿ ಕಥನಕವನಗಳು ಇಂಗ್ಲೀಷ್ ಕಥನ ಕವನಗಳನ್ನು ಆಧರಿಸಿ ರಚಿತವಾದವು.

ತಾನಾಜಿಯನ್ನು ಕುರಿತ ಇಂಗ್ಲೀಷಿನಲ್ಲಿ ಹೆಸರಿಲ್ಲದ ಕಥನ ಕವನ ಮತ್ತು ಅದರ ಅನುವಾದವಾದ 'ಸಿಂಹಗಡ'ಗಳು ಇಂಗ್ಲೀಷ್ ಮತ್ತು ಕನ್ನಡಗಳಲ್ಲಿ ರಚಿತವಾದ ಕಥನಕವನಗಳು, ಈ ಕಥನ ಕವನಗಳ ಪುನರ್‌ಸೃಷ್ಟಿ ಕಥನಕವನಗಳು ಸಂಕಲನದಲ್ಲಿ ಪ್ರಕಟಿತವಾಗಿರುವ ತಾನಾಜಿ, ಕರಿಸಿದ್ದ, ಮರಸುಬೇಟೆ, ಘಂಟಾಕರ್ಣ ಮಂಜಣ್ಣ ಹೇಳಿದ ಸ್ಥಳಗತೆ, ಡೂಲಿ, ನಾಗಿ, ರಕ್ತರಜನಿ, ಪ್ರತಾಪಸಿಂಹ, ಕುವೆಂಪು ಸ್ವತಂತ್ರ ಕಥನ ಕವನಗಳು,

ಬೇಟೆಗಾರನು ಮುತ್ತುಕೊಟ್ಟು
ಹಟವ ಹಿಡಿದರೆ ಕೊಡುವೆ ಪೆಟ್ಟು
ಎಂದು ಕೋವಿಯ ಹೆಗಲೊಳಿಟ್ಟು
ಏರಿದನು ಬನಕೆ . . . . (ಮರಸುಬೇಟೆ)

ಈ ರೀತಿ ಸಾಲನ್ನು ಕುವೆಂಪು ಅವರಲ್ಲಿ ಕಾಣಬಹುದು.

ಕುವೆಂಪು ಅವರ ಶಿಶು ಸಾಹಿತ್ಯ ಯಾವುದೇ ಭಾಷೆಯಲ್ಲಿ ಶಿಶುಸಾಹಿತ್ಯ ಪ್ರಕಾರವೊಂದು ಇರುವುದು ಅತ್ಯಂತ ಅವಶ್ಯಕ.

ಇದು ಮಾನವ ಬಾಳಿನ ಮಂದಾರಗಳಂತಿರುವ ಮಕ್ಕಳ ಮಾನಸಿಕ ಬೆಳವಣಿಗೆಗೆ ತುಂಬಾ ನೆರವಾಗುತ್ತದೆ. "ಬೆಳೆಯುವ ಪೈರು ಮೊಳಕೆಯಲ್ಲಿಯೇ" ಎಂಬ ನಾಡಗಾದೆಯನ್ನು ಮನಗಂಡು ಮಕ್ಕಳನ್ನು ಶೈಶವದಿಂದಲೇ ಸದ್ಗುಣಗಳ ತೌರನ್ನಾಗಿ ಮಾಡಬೇಕು. ಕುವೆಂಪು ಅವರು ಶಿಶು ಸಾಹಿತ್ಯಕ್ಕೆ ಅಮಲನಕಥೆ, ಬೊಮ್ಮನಹಳ್ಳಿ ಕಿಂದರಿಜೋಗಿ, ಹಾಳೂರು, ನನ್ನಮನೆ, ಮೇಘಪುರ, ಮರಿವಿಜ್ಞಾನಿ, ಮೊಡಣ್ಣನ ತಮ್ಮ, ನನ್ನ ಗೋಪಾಲ, ನರಿಗಳಿಗೇಕೆ ಕೋಡಿಲ್ಲ ಈ ಶಿಶು ಸಾಹಿತ್ಯಗಳನ್ನು ರಚಿಸಿದ್ದಾರೆ.

ಕುವೆಂಪು ಅವರು ಮಕ್ಕಳ ಮನಸ್ಸನ್ನು ಮನಸಾರೆ ತಣಿಸುವುದರಲ್ಲಿ ಸಂದೇಹವಿನಿತಿರಲಾರದು, ಹಾಗೆಯೇ ಅಲ್ಲಲ್ಲಿ ಬರುವ ಚಿತ್ರಗಳು ಶಿಶು ಹೃದಯಕ್ಕೆ ತುಂಬಾ ಆಕರ್ಷಕವಾದವುಗಳಾಗಿವೆ.

ಕುವೆಂಪು ಅವರ ಮಕ್ಕಳ ನಾಟಕಗಳು ಮಕ್ಕಳ ಸಾಹಿತ್ಯೇತಿಹಾಸದಲ್ಲಿ ಚಿರಂತನವಾಗಿ ನಿಲ್ಲುತ್ತದೆ. ವಸ್ತು, ಶಿಲ್ಪ, ನಿರೂಪಣಾ ವಿಧಾನಗಳಲ್ಲಿ ಮಕ್ಕಳ ಮನಸ್ಸನ್ನು ಇನ್ನಿಲ್ಲದಂತೆ ಆಕರ್ಷಿಸುವ ಪ್ರಬಲ ಶಕ್ತಿಯಿದೆ. ಒಟ್ಟಿನಲ್ಲಿ ಮಕ್ಕಳ ಭಾವಕೋಶವನ್ನು ವಿಕಾಸಪಡಿಸುವ ಉಜ್ವಲ ನಾಟಕಗಳು, ಅವರ ಗುಪ್ತ ಸತ್ವವನ್ನು ಉದ್ದೀಪಿಸುವ ಮಹತ್ವದ ಕಡೆಗೆ ಗುರಿಯಿಡುವಂತೆ ಮಾಡುವ ಅತ್ಯುತ್ತಮ ನಿದರ್ಶನಗಳು.

ಶಿಶು ಸಹಜವಾದ ಭಾವನೆಗೆ ನಿಲುಕುವಂತೆ ಕವಿ ತಂದಿರುವ ನಾಲ್ಕಾರು ಶ್ರೇಷ್ಠತಮ ಪ್ರಕೃತಿ ಚಿತ್ರಗಳನ್ನಿಲ್ಲಿ ನೋಡಬಹುದು. ಮಗು ಚಂದ್ರನನ್ನು ಕಂಡು ಆನಂದಿಸಿ ಅದು ತನಗಾಗಿ ಮತ್ತು ತನ್ನ ತಾಯಿಗಾಗಿ ಇದೆ ಎಂದು ಭಾವಿಸುವ ಸೊಗಸಾದ ಕಲ್ಪನೆಯನ್ನು 'ಅರ್ಧಚಂದ್ರ' ಮತ್ತು 'ಮೂರ್ತಿಯ ಚಂದ್ರ' ಎಂಬ ಕವನಗಳಲ್ಲಿ ಕಾಣಬಹುದಾಗಿದೆ.

ದೇವರ ಪೆಪ್ಪರಮೆಂಟೇನಮ್ಮಾ,

ಗಗನದೊಳಲೆಯುವ ಚಂದಿರನು?

ಎಷ್ಟೇ ತಿಂದರು ಖರ್ಚೇ ಆಗದ

ಬೆಳೆಯುವ ಪೆಪ್ಪರಮೆಂಟೇನಮ್ಮಾ,

ಶಿಶು ಸಹಜ ಭಾವನೆ ಎಷ್ಟೊಂದು ರಮ್ಯವಾಗಿ ವ್ಯಕ್ತಪಟ್ಟಿದೆ, ಹೀಗೆ ಕುವೆಂಪು ಅವರು ಶಿಶುಸಾಹಿತ್ಯವನ್ನು ಗಮನಿಸಬಹುದಾಗಿದೆ.

ಕುವೆಂಪುರವರ ಸಣ್ಣಕತೆಗಳನ್ನು ಗಮನಿಸಬಹುದು. ಸಾಹಿತ್ಯಲೋಕದಲ್ಲಿ ಕಾದಂಬರಿ ನಾಟಕಗಳಂತೆ ಸಣ್ಣಕಥೆಗಳು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿವೆ. ಸಣ್ಣಕಥೆಗಳು ಎಂದ ಕೂಡಲೇ ಮಾಸ್ತಿಯವರು ಥಟ್ಟನೆ ನೆನಪಿಗೆ ಬರುತ್ತಾರೆ. ಈ ನಿಟ್ಟಿನಲ್ಲಿ ಶ್ರೀ ಕುವೆಂಪುರವರ ಎರಡು

ಕಥಾಸಂಕಲನಗಳನ್ನು ಮರೆಯುವಂತಿಲ್ಲ. ಸಣ್ಣಕಥೆಗಳಿಗೆ ತುಂಬವ ಶಕ್ತಿ ಶ್ರೀ ಕುವೆಂಪುರವರಿಗೆ ಮಾತ್ರ ಸಿದ್ಧಿಸಿದೆ.

ಕುವೆಂಪು ಅವರ "ಸಂನ್ಯಾಸಿ ಮತ್ತು ಇತರ ಕಥೆಗಳು" ಸಂಕಲನ ಒಂಭತ್ತು ಕತೆಗಳನ್ನು ಒಳಗೊಂಡಿದೆ. ಪ್ರತಿಯೊಂದು ಕತೆಗಳು ಕುತೂಹಲ, ಹಾಸ್ಯವಿಡಂಬನೆಯನ್ನು ಪ್ರತಿಪಾದಿಸುತ್ತಿವೆ. ಅಂದಿನ ಮಲೆನಾಡಿನ ಜನಜೀವನವನ್ನು ಪ್ರತಿಬಿಂಬಿಸುವ 'ಯಾರೂ ಅರಿಯದ ವೀರ', 'ದೆವ್ವದ ಮನೆ' ಹಾಗೂ 'ಶ್ರೀ ಮನ್ಮೂಕವಾಗಿತ್ತು' ಕತೆಗಳು ಅತ್ಯಂತ ಸಮರ್ಥವಾಗಿವೆ. 'ಮಾಯದ ಮನೆ', 'ಆರಾಣೆ ಮೂರುಕಾಸು', 'ಹೋಳಿಗೆ ಪ್ರತಿಜ್ಞೆ', 'ಈಶ್ವರನೂ ನಕ್ಕಿರಬೇಕು', 'ಕಂತೆಗೆ ತಕ್ಕ ಬೊಂತೆ', 'ಕ್ರಿಸ್ತನಲ್ಲ ಪಾದ್ರಿಯ ಮಗಳು', 'ಹಾಳಿನ ದುಮ್ಮಾನವೇ ಬಾಳಿನ ಸುಮ್ಮಾನಕ್ಕಿಂತಲೂ ಹಿತಕರು', 'ಸಂನ್ಯಾಸಿ' 'ನನ್ನದೇವರು ಮತ್ತು ಇತರ ಕತೆಗಳು', 'ಸಾಲದ ಮಗು', 'ಗಂಟು ಅಥವಾ ಗುಪ್ತಧನ', 'ವೈರಾಗ್ಯದ ಮಹಿಮೆ', 'ಮೀನಾಕ್ಷಿಯ ಮನೆ ಮೇಷ್ಟರು', 'ಆದರ್ಶ ಸಾಧನೆ', 'ಔದಾರ್ಯ', 'ಧನ್ವಂತರಿಯ ಚಿಕಿತ್ಸೆ'.

ಕಾವ್ಯ, ನಾಟಕ ಕಾದಂಬರಿ ಕ್ಷೇತ್ರಗಳಲ್ಲಿ ಸಮೃದ್ಧವಾದ ಮತ್ತು ಬೆಲೆಬಾಳುವ ಕೃಷಿಯನ್ನು ಮಾಡಿದ ಕುವೆಂಪು, ಕಥೆಗಾರರಾಗಿ ಅದೇಷ್ಟು ಪ್ರಸಿದ್ಧಿಯನ್ನು ಪಡೆದಿಲ್ಲ. ಇದಕ್ಕೆ ಕಾರಣ ಕುವೆಂಪು ಹೆಚ್ಚಿನ ಸಂಖ್ಯೆಯಲ್ಲಿ ಕಥೆಗಳನ್ನು ರಚಿಸಿದೆ ಕೇವಲ ಹದಿನೇಳು ಕಥೆಗಳನ್ನು ಬರೆದರೆಂದೂ ಹೇಳಬಹುದಾದರೂ ಇವರ ಈ ಕಥೆಗಳಲ್ಲಿ ಏಳೆಂಟು ಕಥೆಗಳು ಕನ್ನಡದ ಅತ್ಯುತ್ತಮ ಕಥೆಗಳ ಸಾಲಿಗೆ ಸೇರುತ್ತವೆ ಎಂಬುದು ಮಹತ್ವ ವಿಷಯವಾಗಿದೆ.

ಬದುಕಿನ ಹತ್ತು ಹಲವು ಮುಖಗಳನ್ನೊಳಗೊಂಡಿರುವ ಇಲ್ಲಿನ ಕಥೆಗಳು ಪುಟ್ಟಪ್ಪನವರ ನೇರ ನಿರೂಪಣಾ ಶೈಲಿಯಿಂದಾಗಿ ಸಂದರ್ಭಕ್ಕೆ ಕಳೆಕಟ್ಟುವ ಹಿತಮಿತವಾದ ವರ್ಣನೆಯಿಂದಾಗಿ ಸಂದರ್ಭೋಚಿತ ಮಾತಿನ ಬಳಕೆಯಿಂದಾಗಿ, ಮನಸ್ಸಿಗೆ ಮುದಕೊಡುವ ಹಾಸ್ಯಪ್ರವೃತ್ತಿಯಿಂದಾಗಿ ಓದುಗರ ಮನಸ್ಸನ್ನು ಸೆರೆ ಹಿಡಿಯುತ್ತವೆ. ಕಥನ ಕಲೆಯು ತಂತ್ರವನ್ನು ಚೆನ್ನಾಗಿ ಒಗ್ಗಿಸಿಕೊಂಡು ಕುವೆಂಪು ಇನ್ನಷ್ಟು ಕಥೆಗಳನ್ನು ಬರೆಯಬೇಕಾಗಿತ್ತೆಂಬ ಬಯಕೆ ಇವರ ಕಥೆಗಳನ್ನು ಓದಿದ ಸಹೃದಯರಿಗೆ ಮೂಡದಿರದು, ಈ ರೀತಿ ನಾವು ಕುವೆಂಪು ಅವರ ಸಣ್ಣ ಕಥೆಗಳನ್ನು ಗಮನಿಸಬಹುದು.

ಕುವೆಂಪು ಅವರ ವಿಮರ್ಶ ಕೃತಿಗಳನ್ನು ನಾವು ಗಮನಿಸಬಹುದು. "ಗದ್ಯಂ ಕವಿನಾಂ ನಿಕಷಂ ವದಂತಿ" ಎಂದು ನಮ್ಮ ಹಿಂದಿನವರು ಹೇಳಿದ್ದರೂ, ಇಂದಿನ ಕನ್ನಡ ಗದ್ಯದ ಇತಿಹಾಸದಲ್ಲಿ ಕಾವ್ಯಗುಣಗಳಿರುವ ಗ್ರಂಥಗಳು ಅತ್ಯಂತ ವಿರಳವೆನ್ನಲಡ್ಡಿಯಿಲ್ಲ, ಇಂತಹ ಕಾವ್ಯಮಯವಾದ ಆಧುನಿಕ ಗದ್ಯ ನಿರ್ಮಾತೃಗಳಲ್ಲಿ 'ಕುವೆಂಪು' ಅವರಿಗೆ ಅಗ್ರಸ್ಥಾನವನ್ನು ಕೊಡಬಹುದು. ಅದರಲ್ಲಿಯೂ ಸಾಹಿತ್ಯ ವಿಮರ್ಶೆಯನ್ನು ಕುರಿತು ಗ್ರಂಥಗಳ ಸಂಖ್ಯೆ, ಸಣ್ಣದು, ನಮಗೀಗ ಸುಪರಿಚಿತವಾಗಿರುವ ಅಸಂಖ್ಯ ಕಾವ್ಯ ಪ್ರಕಾರಗಳಿಗೂ ಅಜರಾಮರವಾಗಿರುವ ಪುರಾತನ ಮಹಾಕಾವ್ಯಗಳಿಗೂ ಇರುವ ಮಹದಂತರವನ್ನು

[illegible]

‘ಕುವೆಂಪು’ ಅವರು ಬಹಳ ಹೃದಯಂಗಮವಾಗಿ ಮತ್ತು ಭಾವಪೂರ್ಣವಾಗಿ ತೋರಿಸಿದ್ದಾರೆ. ಮಹಾಶ್ವೇತೆಯ ತಪಸ್ಸು, ಸೌಧರ್ಮೇಂದ್ರನ ಆನಂದ ತಾಂಡವ, ಅಚ್ಛೋದ ಮತ್ತು ವೈಶಂಪಾಯನ ಸರೋವರಗಳ ಭವ್ಯತೆ, ಶ್ರೀ ಮದ್ರಾಮಾಯಣ ಮಹಾತ್ಮೆ, ಕಾಳಿದಾಸ ಪೂರ್ಣದೃಷ್ಟಿ, ಇವೇ ಮೊದಲಾದವುಗಳ ಸೂಕ್ಷ್ಮ ವಿವೇಚನೆಯಿಂದ ಪುರಾತನ ಮಹಾಕೃತಿಗಳ ಅನ್ಯಾದೃಶ್ಯವಾದ ಮೇಲ್ಮೆಯನ್ನು ಸ್ಪಷ್ಟಪಡಿಸಿದ್ದಾರೆ. ಕುವೆಂಪು ಅವರು, ‘ರಸೊ ವೈ ಸಃ’, ‘ದ್ರೌಪದಿಯು ಶ್ರೀಮುಡಿ’, ‘ವಿಭೂತಿ ಪೂಜೆ’, ‘ತಂಪೋನಂದನ’, ‘ಕಾವ್ಯವಿಹಾರ’ ಇತ್ಯಾದಿ’ ಈ ಕೃತಿಗಳು ಸಾಹಿತ್ಯ ವಿಮರ್ಶೆಯ ಲೇಖನವನ್ನೊಳಗೊಂಡ ಕೃತಿಗಳಾಗಿವೆ.

ವಿಭೂತಿಯೆಂದರೆ ವಿಶೇಷವಾಗಿ ಭೂತಿ. ಭೂತಿ ಎಂದರೆ ಆಗುವಿಕೆ ಜಗತ್ತೆಲ್ಲಾ ಈಶ್ವರನ ಭೂತಿಯೆ ಎಂದರೆ ಅವನ ಆಗುವಿಕೆಯ’ ಭಗವಂತನ ಅಂಶ ಸಕಲ ಚರಾಚರಗಳಲ್ಲಿ ವ್ಯಾಪಿಸಿಕೊಂಡಿದ್ದರೂ, ಅದು ಎಲ್ಲಿ ತನ್ನ ಸಾಮಾನ್ಯ ಪ್ರಮಾಣಕ್ಕಿಂತಲೂ ಅಧಿಕತರವಾಗಿ ಅಥವಾ ತನ್ನ ಸಾಮಾನ್ಯ ರೀತಿಗಿಂತಲೂ ಪರತರವಾಗಿ ಕಾಣಿಸಿಕೊಳ್ಳುತ್ತದೆಯೋ ಅದು ವಿಭೂತಿ.

‘ರಸೋ ವೈ ಸಃ’ ಸಾಹಿತ್ಯದ ಶಬ್ದಾರ್ಥಗಳು ಲೋಕೋಪಯೋಗಿಯಾದ ಶಬ್ದಾರ್ಥಗಳೇ ಎಂದು ಮೇಲ್ನೋಟಕ್ಕೆ ತೋರಿದರೂ ಅವುಗಳ ಅರ್ಥವಲಯ ಅಸೀಮ: ಭಾವ ಪರಿವೇಷ ಅಪರಿಮಿತ ಸೌಂದರ್ಯಶಾಸ್ತ್ರದಲ್ಲಿ ಬಳಸುವ ‘ಭಾವ’ ‘ರಸ’ ಪದಗಳಾದರೂ ಹಾಗೆಯೇ ವಿಶಾಲ ವ್ಯಾಪ್ತಿಯ ಅರ್ಥಮಾಧ್ಯಮಗಳು, ಅದರ ಅನಂತ ವಿಸ್ತಾರದ ಕಲ್ಪನೆಯ ವಿಜಯ ಘೋಷಣೆಯೇ ಉಪನಿಷತ್ತಿನ ವಾಕ್ಯ, ‘ರಸೋ ವೈ ಸಃ’ ಕುವೆಂಪು ಈ ರೀತಿ ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳನ್ನು ನಾವು ಗಮನಿಸಬಹುದು.

ಚಂದ್ರ ಮಂಚಕೆ ಬಾ ಚಕೋರಿ ಗಂಡು ಹೆಣ್ಣಿನ ನಡುವಿನ ಆಕರ್ಷಣೆ ಪ್ರಕೃತಿ ಸಹಜವಾದದ್ದು ಮಾನವ ಜೀವನ ಹಲವು ಮುಖಗಳಲ್ಲಿ ವಿಕಾಸವಾಗುತ್ತಾ ಬಂದಂತೆ ಆದಿ ಕಾಲದ ಮುಕ್ತ ಲೈಂಗಿಕ ಜೀವನವೂ ಪರಿಷ್ಕರಣೆ– ಸುಧಾರಣೆಗಳಿಗೆ ಒಳಗಾಗುತ್ತಾ ಬಂದಿತ್ತು.

ಪುಟ್ಟಪ್ಪನವರು ಸಾಹಿತ್ಯ ಅಗೆದಷ್ಟು ಆಳ, ಮೊಗೆದಷ್ಟು ಅಪಾರ ಅವರನ್ನು ಪ್ರಮುಖವಾಗಿ ಪ್ರಕೃತಿ ಕವಿ, ವೈಚಾರಿಕ ಕವಿ, ಕ್ರಾಂತಿ ಕವಿ, ಬಂಡಾಯದ ಹರಿಕಾರ ಎಂದು ಕನ್ನಡ ಸಾರಸ್ವತ ವಿಮರ್ಶೆ ಗುರುತಿಸಿದ್ದು, ಆ ಎಲ್ಲಾ ನಿಷ್ಠೆಗಳಿಗೂ ಅವರು ನ್ಯಾಯ ಒದಗಿಸಿದ್ದಾರೆ. ಕುವೆಂಪು ಅದಕ್ಕೂ ಮೊದಲಾಗಿ ಮತ್ತು ಮಿಗಿಲಾಗಿ ಅವರೊಬ್ಬ ಆಧ್ಯಾತ್ಮಿಕ ಕವಿ, ದಾರ್ಶನಿಕ ಕವಿ, ಅನುಭಾವ ಕವಿ ಅಷ್ಟು ಮಾತ್ರವಲ್ಲದೆ ಪುಟ್ಟಪ್ಪ ಅವರು ಅರವಿಂದ ಘೋಷ್, ಮಹಾತ್ಮಾಗಾಂಧೀಜಿ ಶ್ರೀ ವಿನೋಬಾಜಿ, ರವೀಂದ್ರನಾಥ ಠಾಗೋರ್, ಭಗವಾನ್ ಬುದ್ಧ ಮುಂತಾದ ಭಾರತೀಯ ದಾರ್ಶನಿಕರಿಂದಲೂ ಭಾರತೀಯ ತತ್ವಶಾಸ್ತ್ರದಿಂದಲೂ ಮತ್ತು ಉಪನಿಷತ್ತುಗಳಿಂದಲೂ, ಹಾಗೆಯೇ ಲಿಯೋಟಾಲ್‌ಸ್ಟಾಯ್, ಮಿಲ್ಟನ್,

ವರ್ಡ್ಸ್‌ವರ್ತ್ ಮೊದಲಾದ ಪಾಶ್ಚಾತ್ಯ ಮಹಾಕವಿಗಳಿಂದಲೂ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರದಿಂದಲೂ ಗಾಢ ಪ್ರಭಾವಾಲಿಂಗನಕ್ಕೆ ಒಳಗಾಗಿದ್ದರು. ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ ಮೊದಲಾದವರ ಬಗೆಗೆ ಅವರು ರಚಿಸಿರುವ ಕೃತಿಗಳು ಮಹತ್ವವಾದವು.

ಮಹಾದರ್ಶನ ಮತ್ತು ಪ್ರಾಯಶ್ಚಿತ ಹೆಸರೇ ನಿರ್ದೇಶಿಸುವಂತೆ ಕುವೆಂಪು ಅವರ ಮಹಾದರ್ಶನ ತಾಯ್ನಾಡಿನ ಹಲವು ಮುಖಗಳನ್ನು ದರ್ಶಿಸುವಂತದ್ದು. ಅದರ ವಿಶಾಲ ಅರ್ಥ ಭೂಮಿಕೆಯನ್ನು ಕುರಿತಂತೆ ಸಮನ್ವಯಾಚಾರ್ಯ ಪರಮ ಪರಮಾವತಾರಿ ಯುಗಪುರುಷ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯಗ್ರೇಶರ ಶ್ರೀ ಸ್ವಾಮಿ ವಿವೇಕಾನಂದರು ತಾಯ್ನಾಡಿನ ದರ್ಶನೋದ್ದೇಶದಿಂದ ಪರಿವ್ರಾಜಕ ಸನ್ಯಾಸಿಯಾಗಿ ಹಿಮಾಚಲದಿಂದ ಕನ್ಯಾಕುಮಾರಿಯವರೆಗೆ ಉತ್ತರಾಭಿಮುಖವಾಗಿ ನಿಂತು, ತಾವು ಅಪಾದಮಸ್ತಕವಾಗಿ ದರ್ಶಿಸಿದ ಭಾರತ ಮಾತೆಯ ಸುಂದರ ವಿಗ್ರಹವನ್ನು ಭಾವಾತ್ಮಕವಾಗಿ ಗ್ರಹಿಸುವಾಗ ಪ್ರಾಚೀನೇತಿಹಾಸದ ದೃಶ್ಯಗಳು ನೆನಹು ಕಣ್ಮುಂದೆ ಸುಳಿಯುವಾಗ ಜ್ಯೋತಿ ಸ್ವರೂಪ ಗುರುದೇವರ ಆಶೀರ್ವಾದ ಸಾಕಾರವೆತ್ತು ತಮ್ಮ ಕಣ್ಮುಂದೆ ನಿಂತಂತಿರುವಾಗ ಆ ಧ್ಯಾನಮೂರ್ತಿಯ ಕಲ್ಪನಾ ಪ್ರತಿಭೆ ರೆಕ್ಕೆ ಬಿಚ್ಚಿ ಕಾಲ ದೇಶಾತೀತವಾದ ಲೋಕಲೋಕಾಂತರಗಳಲ್ಲಿ ಉಡ್ಡಯನಗೈಯುತ್ತದೆ. ಈ ರೀತಿ ಕುವೆಂಪು ಅವರು ಸಾಹಿತ್ಯವನ್ನು ತಿಳಿಯಬಹುದು.

ಕಲಾಸುಂದರಿ

೧೯೩೩ ರಲ್ಲಿ ಕುವೆಂಪು ಅವರ ಕವನ ಸಂಕಲನ 'ಕಲಾಸುಂದರಿ' ಪ್ರಕಟವಾಗಿರುತ್ತದೆ. ಈ ಸಂಕಲನಕ್ಕೆ ಅವರು ಬರೆದಿರುವ ಮುನ್ನುಡಿಯಲ್ಲಿ ಕಲೆಯ ಶುದ್ಧ ಸ್ವರೂಪವೇನು ಎಂದು ಚರ್ಚಿಸಿರುತ್ತಾರೆ. ಇಡೀ ಜಗತ್ತು ಕಲಾತ್ಮಕ ಸ್ವರೂಪದಲ್ಲಿದ್ದು, ಅದು ಮೇಲ್ಮುಖದಲ್ಲಿ ಭೋಗಿನಿಯೂ ಅಂತರಂಗದಲ್ಲಿ ಯೋಗಿನಿಯೂ ಆಗಿರುತ್ತದೆಂದು ತಿಳಿಸುತ್ತಾರೆ. ಈ ಭುವನ ಸುಂದರಿಯ ಸೌಂದರ್ಯವನ್ನು ಅತ್ಯಂತ ಕಲಾತ್ಮಕವಾಗಿ ಹಿಡಿದಿಡುವ ಮಾಧ್ಯಮ ಕಾವ್ಯವೇ ಎಂಬುದು ಕುವೆಂಪು ಅವರ ಅಭಿಪ್ರಾಯ.

ಪ್ರಕೃತಿಯ ಮತ್ತು ಜೀವನದ ಒಂದು ಭಾಗವೇ ಆಗಿರಬೇಕು ಎಂದು ಹೇಳುತ್ತಾರೆ. ಹೀಗಾಗಿ ಕಲಾಸುಂದರಿ ಕೃತಿಯ ಮೊದಲ ಕವನವೇ ಒಟ್ಟು ಈ ಭೂಮಿಯ ಸೌಂದರ್ಯದ ಉನ್ಮುಖತೆಯನ್ನು ಹೇಳುತ್ತದೆ.

ಚಿತ್ರಾಂಗದಾ

ಕವಿ ಕುವೆಂಪು ಹೇಳುವಂತೆ ಅಲ್ಲಿ ಆಕೆಯನ್ನು ಶೃಂಗಾರದ ಪರಿಪೂರ್ಣತೆಯಲ್ಲಿ ಚಿರಸ್ಥಾಯಿಯನ್ನಾಗಿ ಮಾಡಿ ಅರ್ಜುನನ ತಾರುಣ್ಯದ ಸಂಯಮರಹಿತ ವ್ರತ ಭ್ರಷ್ಟತೆಗೆ ಪ್ರಾಯಶ್ಚಿತ ವಿಹಸವಾದ ಭೋಗ ಕಿರೀಟವನ್ನಿಕ್ಕಿ ಪ್ರೇಮದ ಮಂಗಳಾರತಿ ಎತ್ತಿ ಕಾವ್ಯವನ್ನು ಬರೆದಿದ್ದಾರೆ.

ಶ್ರೀಕೃಷ್ಣ ಮಹಿಮೆಯ ದಿಗ್ವಿಜಯ ಎಂದು ಹೇಳಬಹುದು. ಈ ದೃಷ್ಟಿಯಿಂದಲೇ ಕಾವ್ಯ ರಚಿತವಾಗಿರುವುದರಿಂದ ಚಿತ್ರಾಂಗದೆ ಅರ್ಜುನ ಬಭ್ರುವಾಹನರ ಕಾಳಗದ ವರ್ಣನೆಯ ನಡುವೆ ಪ್ರಾಸಂಗಿಕವಾಗಿ ಮಾತ್ರ ಬರುತ್ತಾಳೆ. ಅಲ್ಲಿ ಬರುವ ಆಕೆಯ ಚಿತ್ರವನ್ನು ಉತ್ತರ ಚಿಂತ್ರಾಂಗದಾ ಎಂದು ಕರೆಯಬಹುದು.

ನಿನ್ನಾ ಮಡಿಲಲ್ಲಿ ಹೂವಾಗಿರುವುದು ನನಗಿನ್ನೊಂದಾಸೆ ಎಂಬ ಮನೋಭಾವದ ಹಾಡನ್ನು ಕವಿ ಬರೆದಿದ್ದಾರೆ.

ನಿನ್ನಡಿದಾವರೆಯಲ್ಲಿ ಹೂ ಕುಡಿಯುವ ಮರಿದುಂಬಿಯು ನಾನು ಹೇ ಗುರುದೇವನೆ ನೀನೆನ್ನಾತ್ಮಕೆ ಮಧುಮಾಸದ ಜೇನು ಎಂಬುದು ಈ ಕವನ ಸಂಗ್ರಹ ಅಗ್ನಿಹಂಸ ತಮ್ಮ ನಾನಾ ಬಗೆಯ ಕಾವ್ಯ ಪ್ರಯೋಗಗಳಲ್ಲಿ ಕುವೆಂಪು ಅವರು ವಚನಗಳನ್ನು ರಚಿಸಿದ್ದಾರೆ. 'ಕಿಂಕಿಣಿ' ಎಂಬ ಕೃತಿಯಲ್ಲಿ ಅರವತ್ತು ವಚನಗಳು ಸಂಕಲಿತವಾಗಿದೆ. ಪ್ರಾಚೀನ ಕಾವ್ಯ ಪರಂಪರೆಗೆ ಪಂಪ, ಮಧ್ಯಕಾಲೀನಕ್ಕೆ ಬಸವೇಶ್ವರ ಧ್ರುವತಾರೆಯಾಗಿರುವಂತೆ ಆಧುನಿಕ ಸಾಹಿತ್ಯಕ್ಕೆ ಕುವೆಂಪು ಧ್ರುವತಾರೆಯಾಗಿದ್ದಾರೆ. ಕುವೆಂಪು ಅವರ ಭಾಷಣ, ಮುನ್ನುಡಿ, ಪತ್ರಗಳು ಸಹ ರಚಿಸಿದ್ದಾರೆ. ಕುವೆಂಪು ಅವರು ತಮ್ಮ ಒಂದು ಭಾಷಣವನ್ನು 'ವಿಚಾರಕ್ರಾಂತಿಗೆ ಆಹ್ವಾನ' ಎಂಬ ಶೀರ್ಷಿಕೆಯಿಂದಲೇ ಕರೆದಿದ್ದಾರೆ.

"ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ,

ಬಡತನವ ಬುಡಮುಟ್ಟು ಕೀಳಬನ್ನಿ,

ಮೌಢ್ಯತೆಯ ಮಾರಿಯನು ಹೊರದೂಡ್ಲೈಲೈ ತನ್ನಿ

ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ

ಓ ಬನ್ನಿ ಸೋದರರೆ ಬೇಗ ಬನ್ನಿ!"

ಕುವೆಂಪು ಅವರ ವೈಚಾರಿಕ ನಿಲುವನ್ನು ನಾವು ನೋಡಬಹುದು.

"ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?"

ವಿಚಾರ ಕ್ರಾಂತಿಯನ್ನು ಗಮನಿಸಬಹುದಾಗಿದೆ.

"ನಿರಂಕುಶಮತಿಗಳಾಗಿ" ಎಂಬ ಅವರ ಭಾಷಣ ಸಂಪ್ರದಾಯವಾದಿಗಳಲ್ಲಿ ಒಂದು ರೀತಿಯ ಕೋಲಾಹಲವನ್ನು ಉಂಟುಮಾಡಿದುದಾಗಿ ತಿಳಿದುಬರುತ್ತದೆ. ಕೇವಲ "ನಿರಂಕುಶಮತಿಗಳಾಗಿ ಎಂಬುದು

ತಪ್ಪು ಕಲ್ಪನೆಗೂ ಕಾರಣವಾದಂತೆ ತೋರುತ್ತದೆ. ಆನಂತರ ಮುಂದೆ 'ಆತ್ಮಶ್ರೀಗಾಗಿ' ಎಂಬ ವಿಶೇಷವನ್ನು ಸೇರಿಸಿ ಅದು ಸ್ವಚ್ಛಂದತೆಯ ರಹದಾರಿಯಲ್ಲಿ ಎಂಬುದನ್ನು ಸೂಚಿಸಿದರು.

'ಷಷ್ಟಿ ನಮನ' ಕೃತಿಯ ಸ್ವರೂಪ ಬೇರೆ ಬಗೆಯದು, ಸಂಕೀರ್ಣ ಲಕ್ಷಣವುಳ್ಳದ್ದು, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವೂ ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ಮಾಡಿದ ಹತ್ತು ಉಪನ್ಯಾಸಗಳು 'ಮನುಜಮತ– ವಿಶ್ವಪಥ' ಸಂಕಲನವು ಕುವೆಂಪು ಅವರು ಸಾಂದರ್ಭಿಕವಾಗಿ ಮಾಡಿದ ಭಾಷಣಗಳ ಲೇಖನಗಳ ಸಂಗ್ರಹ.

ಕುವೆಂಪು ಪತ್ರಗಳು ಸಹ ನಾವು ಗಮನಿಸಬಹುದು, ಕುವೆಂಪು ಸಾಹಿತ್ಯಕ್ಕೆ ಪ್ರೇರಕವಾದ ಈ ಬಹುಮುಖ ಆಸಕ್ತಿ ಮತ್ತು ಆವೃತ ಪ್ರಜ್ಞೆಯನ್ನು ಈ ಪತ್ರಗಳಿಂದ ಗಮನಿಸಬಹುದು.

ಮುನ್ನುಡಿ ತೋರಣಕ್ಕೊಂದು ಮುನ್ನುಡಿ, ಸಾಹಿತ್ಯ ಕೃತಿಗಳ ಗುಣಕಥನ ಹಾಗೂ ಕೃತಿಕಾರನ ಉತ್ತೇಜನ ಸಾಮಾನ್ಯವಾಗಿ ಮುನ್ನುಡಿಯ ಉದ್ದೇಶ, ಕುವೆಂಪು ಅವರು ಮುನ್ನುಡಿಗಳನ್ನು ಬರೆದದ್ದೇಕಡಿಮೆ, ಅವರೇ ಒಂದು ಕಡೆ ಹೇಳಿಕೊಳ್ಳುತ್ತಾರೆ, 'ನಾನು ಕುಲಪತಿಯಾಗಿ ಪ್ರಸಾರಾಂಗದ ಅಧಿಕೃತ ಪುಸ್ತಕಗಳಿಗೆ ಕರ್ತವ್ಯದ ಅಂಗವಾಗಿ ಬರೆದ ಮುನ್ನುಡಿಗಳನ್ನು ಬಿಟ್ಟರೆ ವ್ಯಕ್ತಿ ಲೇಖಕರ ಕೃತಿಗಳಿಗೆ ಒಂದು ಕೈ ಬೆರಳೆಣಿಕೆಯಷ್ಟು ಮುನ್ನುಡಿಗಳನ್ನು ಬರೆದಿಲ್ಲ ಎಂದು ತೋರುತ್ತದೆ. ಕುವೆಂಪು ಅವರ ಭಾಷಣ ಮುನ್ನುಡಿ ಪತ್ರಗಳು ನಾವು ಗಮನಿಸಬಹುದಾಗಿದೆ.

ಕುವೆಂಪು ಅವರ ಆತ್ಮಚರಿತ್ರೆಯನ್ನು ಗಮನಿಸಬಹುದು.

ಮಲೆನಾಡಿನ ಕುಪ್ಪಳ್ಳಿ ವೆಂಕಟಪ್ಪಗೌಡ ಪುಟ್ಟಪ್ಪ ಸಾರಸ್ವತ ಪ್ರಪಂಚದ ಪರ್ವಪುರುಷ– ಪಂಡಿತೋತ್ತಮ ಪುರುಷ ಕೂಡ– ಕುವೆಂಪುವಾಗಿ ವಿಕಸಿಸಿದುದರ ವೈಜ್ಞಾನಿಕ ಮತ್ತು ಕಲಾತ್ಮಕ ಚಿತ್ರಣೌತವೇ ನೆನಪಿನ ದೋಣಿಯಲ್ಲಿ,

ಆತ್ಮವೃತ್ತವನ್ನು ಬರೆದುಕೂಡಲೇಬೇಕೆಂದು ಪಾಲ್‌ಆರ್ಥರ್‌ಶಿಲ್ಪ್ ಎಂಬುವವರು ಆಲ್ಬರ್ಟ್ ಐನ್‌ಸ್ಟೈನ್‌ರನ್ನು ದುಂಬಾಲು ಬಿದ್ದು ಪೀಡಿಸಿದಾಗ ಇವರು ಬರೆದ ಆತ್ಮವೃತ್ತದ ಪೀಠಿಕಾ ಪರಿಚ್ಛೇದ ಇಲ್ಲಿ ಉಲ್ಲೇಖಾರ್ಹವಾಗಿದೆ.

ಪ್ರಸಕ್ತ ಗ್ರಂಥದಲ್ಲಿ ಈ "ಅನೇಕ ಸಂಗತಿಗಳನ್ನು" ಕೇವಲ ಅಧ್ಯಯನ ದೃಷ್ಟಿಯಿಂದ ಮೂರು ವಿಶಾಲ ವಿಭಾಗಗಳಲ್ಲಿ ಗುರುತಿಸಬಹುದು. ಲೌಕಿಕ ವ್ಯಕ್ತಿ ಕುವೆಂಪು, ಸಾಹಿತಿ ಕುವೆಂಪು, ಆಧ್ಯಾತ್ಮಿಕ ವ್ಯಕ್ತಿ ಕುವೆಂಪು.

ಇಲ್ಲಿ ಗಮನಿಸಬೇಕಾದ ಅಂಶ "ಬೇರೆ ಒಂದು ಪ್ರಜ್ಞೆಗೆ ಗಮ್ಯವಾಗದ ಅನೇಕ ಸಂಗತಿಗಳನ್ನು ಸ್ವಂತಾನುಭವದ ಮೂಸೆಯಿಂದ ಹೊರತೆಗೆಯುವುದು ಸಾಧ್ಯವಿದೆ" ಈ ಮೂಸೆಯಿಂದ ಉದ್ಭವಿಸಿರುವ ಪುತ್ತಳಿಯೇ 'ನೆನಪಿನ ದೋಣಿಯಲ್ಲಿ'.

ನೆನಪಿನ ದೋಣಿಯಲ್ಲಿ ಪ್ರಧಾನವಾಗಿ ಸಾಹಿತ್ಯಿಕ ದಾಖಲೆಗಳಿಂದ ಕೂಡಿರುವ ಕೃತಿ. ಕಾಲ ವ್ಯಾಪ್ತಿಯಲ್ಲಿ ಸುಮಾರು ನಾಲ್ಕು ದಶಕಗಳ ಹರಹನ್ನು ಪಡೆದು ೧೧೩೩ ಪುಟಗಳನ್ನು ಒಳಗೊಂಡ ಬೃಹತ್ ರಸಕೋಶ, ಇದರಲ್ಲಿ ಕವಿಯ ವೈಯಕ್ತಿಕ ಹಾಗೂ ಸಾಹಿತ್ಯಿಕ ಬದುಕಿನ ಅನೇಕ ಸಂಗತಿಗಳು ಪಡಿಮೂಡಿವೆ. ಹೀಗೆ ಮೂಡುವ ಸಂದರ್ಭದಲ್ಲಿ ಕವಿಯ ಸುತ್ತಣ ಪರಿಸರ ಆ ಪರಿಸರದ ಬದುಕಿನ ಚಿತ್ರಣ ಕೂಡ ಪ್ರತಿಬಿಂಬಿತವಾಗಿದೆ. "ಕವಿಯ ಜೀವನ ಚರಿತ್ರೆಯೆಂದರೆ ಅವರ ಕವನಗಳ: ಉಳಿದುದೆಲ್ಲವೂ ಬರಿಯ ಅಡಿ ಟಿಪ್ಪಣಿ, ಎಂಬುದು ಕುವೆಂಪು ಅವರದೇ ಮಾತು, ಈ ರೀತಿ ಕುವೆಂಪು ಅವರ ಆತ್ಮಚರಿತ್ರೆಯನ್ನು ನೋಡಬಹುದಾಗಿದೆ.

ಕುವೆಂಪು ಅವರು ಸಾಮಾಜಿಕ ವಸ್ತುಗಳನ್ನು ತಮ್ಮ ನಾಟಕಕ್ಕೆ ಸಾಮಾಗ್ರಿಯನ್ನಾಗಿ ಕುವೆಂಪುರವರು ಆರಿಸಿಕೊಂಡಿರುವುದು ವಿರಳ, ಮಕ್ಕಳ ನಾಟಕಗಳನ್ನು ಬಿಟ್ಟರೆ ಅವರ ಇತರ ನಾಟಕಗಳಲ್ಲಿ "ಜಲಗಾರ" ಮತ್ತು "ಬಲಿದಾನ" ಇವೆರಡು ಮಾತ್ರ ಸಾಮಾಜಿಕ ವಸ್ತುವನ್ನು ಕುರಿತವುಗಳು, ಇಲ್ಲಿ ಸಾಮಾಜಿಕ ವಸ್ತುವೂ ಪರಿವರ್ತಿತವಾಗಿ ಅರ್ಥಗರ್ಭಿತವಾದ ಪ್ರತಿಮಾರೂಪಧಾರಣೆ ಮೂಡಿಬರುತ್ತದೆ. ಕುವೆಂಪು ಅವರ ಐತಿಹಾಸಿಕ ನಾಟಕಗಳು ಸಹ ರಚಿಸಿದ್ದಾರೆ. ಇವುಗಳಲ್ಲಿ 'ರಕ್ತಾಕ್ಷಿ' ಮತ್ತು 'ಬಿರುಗಾಳಿ'.

ರಕ್ತಾಕ್ಷಿ ಬಹುಮಟ್ಟಿಗೆ ಐತಿಹಾಸಿಕ ಘಟನೆಯನ್ನು ಅವಲಂಬಿಸಿ ಇದರ ಮೇಲೆ ಬೆಳೆದು ನಿಂತು ಕಲಾಕೃತಿ ಷೇಕ್ಸ್‌ಪಿಯರ್‌ನ 'ಹ್ಯಾಮ್ಲೆಟ್' ನಾಟಕದ ಪ್ರಭಾವದಿಂದ ಬಿದನೂರು ಸಂಸ್ಥಾನದ ಚಾರಿತ್ರಿಕ ಕಥೆಯನ್ನು ಬಳಸಿಕೊಂಡು ರುದ್ರನಾಟಕದ ರಚನೆ ಮಾಡಿದ್ದಾರೆ.

ಬಿರುಗಾಳಿ ಐತಿಹಾಸಿಕ ಕಥೆಯಾದರೂ, ಇದು ಕಾಲ್ಪನಿಕ ವಸ್ತುಗಳನ್ನೊಳಗೊಂಡ ಕೃತಿ. ಷೇಕ್ಸ್‌ಪಿಯರ್‌ನ Tempest (ಟೆಂಪೆಸ್ಟ್) ನಾಟಕವನ್ನು ಕನ್ನಡ ವಾತಾವರಣಕ್ಕೆ ಅಳವಡಿಸಿಕೊಳ್ಳುವ ಕುಶಲತೆಯ ಫಲವಾಗಿ ಮೂಡಿಬಂದವುಗಳು ಎಂದು ಹೇಳಬಹುದು.

ಅಪ್ಪಯ್ಯ, ನಿನ್ನ ಮಂತ್ರದ ಬಲದೊಳೀ ದೊಡ್ಡ
ಬಿರುಗಾಳಿ ಎದ್ದಿರುವುದಾದೊಡೆ ತವಿಸದನು (ಬಿರುಗಾಳಿ)

ಸಾಮಾಜಿಕ ವಸ್ತುವನ್ನೊಳಗೊಂಡ 'ಜಲಗಾರ' ನಾಟಕವು ಸಮಾಜದಲ್ಲಿನ ಅಸಮತೋಲನವನ್ನು ಹೋಗಲಾಡಿಸುವ ಪ್ರಯತ್ನವಾಗಿ ಇದಕ್ಕೆ ಪುರಾಣದ ಶಿವನನ್ನೆ ಸಮಾಜದ ಕೆಳಜಾತಿಯ ಜಲಗಾರನ ಜೊತೆ ಸಮೀಕರಿಸಿರುವುದನ್ನು ಕಾಣಬಹುದು.

'ಶೂದ್ರರೊಳ್' ಕವಿವರ್ಯರುದಿಸುವರೆ? ಹುಟ್ಟುವರೆ ಪಂಡಿತರ್? ಆನಿಸುವರೆ ಶಿಲ್ಪಿಗಳ್? ಗಾಯಕರ್? ಯೋಗಿಗಳ್? ಅಸದಳಂ" ಎಂಬ ಪ್ರಶ್ನೆಗೆ ಜಲಗಾರನ ಪಾತ್ರದ ಮೂಲಕ ಉತ್ತರ ನೀಡಿದ್ದಾರೆ. ಶಿವನೇ ಪ್ರತ್ಯಕ್ಷನಾಗಿ ತಾನೊಬ್ಬ ಜಗದ ಕಸದರಾಶಿಯನ್ನು ತೆಗೆಯುವ ಕಾಯಕ ಜೀವಿ ಎಂಬ ಸತ್ಯವನ್ನು ಮನಗಾಣಿಸುವ ಕಾರ್ಯ ಜೀವಿಗಳಲ್ಲಿ ತಾನಿರುವೆ ಎಂದು ಧೃಡಪಡಿಸುವ ಕಾರ್ಯವನ್ನು ಕುವೆಂಪು ತಮ್ಮ ನಾಟಕದ ಮೂಲಕ ನಿರೂಪಿಸಿದ್ದಾರೆ.

ಬಲಿದಾನ ನಾಟಕದಲ್ಲಿ ಕುವೆಂಪು ಅವರು ಸ್ವಾತಂತ್ರ್ಯದ ಪೂರ್ವದಲ್ಲಿದ್ದ ಭಾರತದ ಸ್ಥಿತಿಗತಿ, ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ಮತ್ತು ಸ್ವಾತಂತ್ರ್ಯಾನಂತರದ ಸಮಸ್ಯೆಗಳನ್ನು ಕುರಿತು ವಿಚಾರಣೆಯನ್ನು ಬಳಸಿಕೊಂಡಿದೆ.

ಹೊಟ್ಟೆಗಿಲ್ಲದೆ ಸೊರಗಿ ಸಾಯುತಿಹೆನಯ್ಯೋ

ನನ್ನ ಮನೆಯಲ್ಲಿ ನಾನೆ ತೊತ್ತಾಗಿ ಬಿದ್ದಿರುವೆ,

ಈ ಮಾತುಗಳಲ್ಲಿ ಅಂದಿನ ಭಾರತದ ಪರಿಸ್ಥಿತಿ ಸೂಚಿತವಾಗಿದೆ. ಇಷ್ಟದರೂ ಭಾರತಾಂಬೆಯ ಶಕ್ತಿ ಬಾಡಿ ಹೋಗದ ಚಿರಂತನ ಶಕ್ತಿ ಅದು ಬದುಕಿಯೇ ತೀರುತ್ತದೆ, ಅದಕ್ಕೆ ಬೇಕಾದುದು ಹಣವಲ್ಲ, ಉಡುಗೆ ತೊಡುಗೆಗಳಲ್ಲ "ಒಳಗಿರುವ ಬೆಳಕು" ಆ ಬೆಳಕಿನಿಂದಲೇ ಆಕೆ ಇದುವರೆಗೂ ಬದುಕಿದಳು. ಅದಿದ್ದರೆ, ಉಳಿದುದೆಲ್ಲಾ ಬರುತ್ತದೆ.

ಕುವೆಂಪು ಅವರು ಮಕ್ಕಳಿಗಾಗಿಯೇ ಬರೆದ ನಾಟಕಗಳು,

'ನನ್ನ ಗೋಪಾಲ', 'ಮೋಡಣ್ಣನ ತಮ್ಮ', ನಾವು ಕಾಣಬಹುದಾಗಿದೆ. ನನ್ನ ಗೋಪಾಲ ಸುಲಭವಾದ ಗದ್ಯದಲ್ಲಿದೆ. ಮೋಡಣ್ಣನ ತಮ್ಮ ಮಕ್ಕಳಿಗೆ ಆಕರ್ಷಕವಾದ ಪ್ರಾಸಗಳಿಂದ ಕೂಡಿದ ಲಯಬದ್ಧವಾದ ಮತ್ತು ಸರಳವಾದ ಗೀತೆಯ ರೂಪದಲ್ಲಿದೆ. ಸಾಮಾಜಿಕ ನಾಟಕಗಳಲ್ಲಿರುವಂತೆ ಈ ಮಕ್ಕಳ ನಾಟಕಗಳಲ್ಲಿಯೂ ಕುವೆಂಪು ಅವರ ವೈಶಿಷ್ಟ್ಯ ಗೋಚರವಾಗದೇ ಇಲ್ಲ, ಇವು ಮಕ್ಕಳ ನಾಟಕಗಳನ್ನೆವುದು ಸಹ ಔಪಚಾರಿಕವೋ ಏನೋ, ದೊಡ್ಡವರಿಗೂ ಅವು ಅಸಾಧ್ಯವಾಗುವಂತಹ ಧ್ವನಿಯಿಂದ ಸಮನ್ವಿತವಾಗಿದೆ. ಇಲ್ಲಿ ಗೋಪಾಲನ ತಾಯಿಯ ಭಕ್ತಿ ಚಿತ್ರಿತವಾಗಿವೆ. ಆರಾಧ್ಯದೈವದ ವೇಣುಗೋಪಾಲನೆ ಆಕೆಯ ಸರ್ವಸ್ವ,

ತಿಳಿವಳಿಕೆಗೆ ನಾ ಸಿಲುಕೇ ಮನುಜಾ

ಒಲುಮೆಗೆ ಸೆರೆಯಾಗುವೆನು

ಎಂಬ ಹಾಡನ್ನು ಹೇಳುತ್ತಾ ಕೊಳಲನೂದುತ್ತವೆ. ನಿಜವಾದ ಭಕ್ತಿಯೇ ಸಾಧನೆಯ ಸಾರಸರ್ವಸ್ವೆಂಬುದನ್ನು ಈ ಗೀತೆ ಸುಂದರವಾಗಿ ವ್ಯಕ್ತಗೊಳಿಸಿದೆ.

ಕುವೆಂಪು ಅವರ ಇನ್ನೊಂದು ಮಕ್ಕಳ ನಾಟಕ ಮೋಡಣ್ಣನ ತಮ್ಮ ಇನ್ನೂ ಚಿಕ್ಕವಯಸ್ಸಿನ ಮಕ್ಕಳಿಗಾಗಿ ರಚಿತವಾದುದೆನ್ನಬಹುದು, ಮಕ್ಕಳಲ್ಲಿ ಸಹಜವಾಗಿರುವ ಕಲ್ಪನಾಶಕ್ತಿಯನ್ನು ಪ್ರಚೋದಿಸುವ ವಸ್ತುವನ್ನು ಇಲ್ಲಿ ಆರಿಸಿಕೊಂಡಿದ್ದಾರೆ. ಆಗಸದಲ್ಲಿ ತೇಲುತ್ತಿರುವ ಮೋಡ ಮುನ್ನುಗುತ್ತಿರುವ ನಕ್ಷತ್ರ ಬೀಸುವ ಗಾಳಿ ಉಲಿಯುವ ಹಕ್ಕಿಗಳು ಇವುಗಳನ್ನು ಅಂತಹ ಒಬ್ಬ ಬಾಲಕನನ್ನು ಪ್ರಕೃತಿ ಲೋಕದ ವಿಹಾರಕ್ಕೆ ಕರೆದೊಯ್ದಿದ್ದಾರೆ.

ಓ ಮೋಡಣ್ಣಾ ಓ ಮೋಡಣ್ಣಾ!

ನಾನೂ ಬರುವೆನೋ ಕೈ ನೀಡಣ್ಣಾ

ಎಂದು ಮೋಡದತ್ತ ಕೈಯೆತ್ತಿ ತನ್ನನ್ನು ಕರೆದುಕೊಂಡು ಹೋಗುವಂತೆ ಕೇಳುತ್ತಾನೆ.

ಕುವೆಂಪು ಅವರು ಭಾರತೀಯ ಪರಂಪರೆಯಲ್ಲಿ ಬೆಳೆದು ಬಂದ ಪ್ರಸಿದ್ಧವಾದ ವಸ್ತುವನ್ನು ಯಮನ ಸೋಲು ಒಳಗೊಂಡಿದೆ. ಈ ನಾಟಕವು ಪೌರಾಣಿಕ ನಾಟಕವಾಗಿದೆ. ಮಹಾಸಾಧ್ವಿಮಣಿಯಾದ ಸಾವಿತ್ರಿ ಯಮಪಾಶ ಬಂಧಿತನಾದ ಸತ್ಯವಾನನ ಜೀವವನ್ನು ಮರಳಿ ಪಡೆದ ಕಥೆ ಇದು,

ಎನ್ನಿನಿಯನೊಡನಿಂದು ನರಕವಾದರೆ ನರಕ

ಸಗ್ಗವಾದರೆ ಸಗ್ಗ ನಾಶ್ವಾದರೆ ನಾಶ

ಯಮಲಾಯನೊಡ್ಡುತಿಹ ಪಾಶವಾದರೆ ಪಾಶ

ಮಹಾರಾತ್ರಿ ಐತಿಹಾಸಿಕ ನಾಟಕ, ಕುವೆಂಪುರವರ ಐತಿಹಾಸಿಕ ನಾಟಕವನ್ನು ರಚಿಸಿದ್ದಾರೆ. ಬುದ್ಧನ ಜೀವನದ ಮಹತ್ತರವಾದ ಸನ್ನಿವೇಶವನ್ನು ಚಿತ್ರಿಸುತ್ತದೆ. ಅರಮನೆಯ ರಾಜಭೋಗವನ್ನು ತ್ಯಜಿಸಿ ಸಿದ್ಧಾರ್ಥ ವೈರಾಗ್ಯಪರವಾಗಿ ಒಂದು ರಾತ್ರಿ ಮನೆಯನ್ನು ಬಿಟ್ಟು ಹೊರಡುತ್ತಾನೆ. "ಇದು ಮಹಾರಾತ್ರಿ ಸಿದ್ಧಾರ್ಥ ಬುದ್ಧನಾಗುವ ರಾತ್ರಿ".

ಬಾ ಬೆಳಕೆ ಬಾ ಬೇಗ ನೀನು ಹೊರಗಿನ ಬೆಳಕು

ಜ್ಞಾನ ಒಳಗಿನ ಬೆಳಕು, ನೀ ನಡಿಗಳಿಗೆ ದಾರಿ

ತೋರಿಸುವೆ; ಅರಿವಾದರಾತ್ಮನನು ಕೈ ಹಿಡಿದು

ನಡೆಸುವುದು . . . .

ಎಂಬ ಮಾತುಗಳು ಒಳಗಿನ ಬೆಳಕನ್ನು ಪಡೆಯಲು ಹೋಗುತ್ತಿರುವ ಆತ್ಮದ ಅಭೀಪ್ಸೆಯನ್ನು ವ್ಯಕ್ತಗೊಳಿಸುತ್ತದೆ.

ವಾಲ್ಮೀಕಿಯ ಭಾಗ್ಯ-ಶೂದ್ರತಪಸ್ವಿ ಕುವೆಂಪು ಅವರ ನಾಟಕಗಳು ರಾಮಾಯಣಕ್ಕೆ ಸಂಬಂಧಿಸಿದ ಕಥಾವಸ್ತುವನ್ನುಳ್ಳ ವಾಲ್ಮೀಕಿಯ ಭಾಗ್ಯ ಮತ್ತು ಶೂದ್ರತಪಸ್ವಿ ಈ ನಾಟಕಗಳು ಪರಿಚಯವನ್ನು ಈಗ ಮಾಡಿಕೊಳ್ಳಬಹುದು. ಇವೆರಡೂ ಉತ್ತರ ರಾಮಾಯಣದಿಂದ ಕಥಾವಸ್ತುವನ್ನು ಆರಿಸಿಕೊಂಡು ರಚಿತವಾದವು.

ಒಂದು ಸೀತಾಪರಿತ್ಯಾಗದ ಸನ್ನಿವೇಶವನ್ನು ಚಿತ್ರಿಸಿದರೆ,

ಇನ್ನೊಂದು ಶಂಭೂಕನ ವಧೆಯ ಪ್ರಸಂಗದ ಅಸಂಗತೆಯನ್ನು ತಿದ್ದುವ ಪ್ರಯತ್ನವನ್ನು ಕೈಗೊಂಡಿದೆ. ಈ ಎರಡು ನಾಟಕಗಳು ಪೌರಾಣಿಕ ನಾಟಕಗಳಾಗಿವೆ.

ಓಹೊ! ಈಗಳರಿತೆಂ!

ಅರಮನೆಯ ವಾಸಂ

ಮೇಣೂರ್ಮಿಳೆಯ ಲಲಿತ ಸಹವಾಸಂ

ನಿನ್ನನಿಂತು ಗೈದಿರ್ಪುದ ಸಾಜಂ! (ವಾಲ್ಮೀಕಿಯ ಭಾಗ್ಯ)

ಏಕಾಂಕ ನಾಟಕದ ಏಕಮುಖವಾದ ಓಟ, ಪಾತ್ರಸ್ಥಳ, ಕಾವ್ಯೈಕ್ಯಗಳು, ಈ ನಾಟಕದಲ್ಲಿ ಬಹು ಚೆನ್ನಾಗಿ ರೂಪುಗೊಂಡಿದೆ. ಒಂದು ಕಡೆ ಸೀತೆಯ ಸಂಕಟ ಇನ್ನೊಂದು ಕಡೆ ಲಕ್ಷ್ಮಣನ ಒಳತೋಟಿ, ಬಹಳ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಶೂದ್ರತಪಸ್ವಿ ಒಂದು ವಿಚಾರ ನಾಟಕ ಕನ್ನಡ ಲೋಕದಲ್ಲಿ ಕ್ರಾಂತಿಯನ್ನುಂಟು ಮಾಡಿದ ವಿಚಾರ ಪ್ರಚೋದಕವಾದ ಕೃತಿ

ಶಿವಶಿವಾ! ಏನ್ ಭಯಂಕರ ಪಾಪಂ!

ಶ್ರೀರಾಮನಾಳುತಿರ್ಪ ಧರ್ಮ ರಾಜ್ಯದೊಳ್

ಮೃತ್ಯು ಮತ್ತು ವೃಕ್ಷ ಭೈರವರಿಗೆ ಸಾಕಾರ ರೂಪವನ್ನು ಕೊಟ್ಟು ಕುವೆಂಪುರವರು ಈ ದೃಶ್ಯವನ್ನು ನಿರ್ವಹಿಸಿರುವ ರೀತಿ, ಅದರಿಂದ ಸಾಧಿಸಿರುವ ಪರಿಣಾಮ ಮತ್ತು ಧ್ವನಿಸಿರುವ ಅರ್ಥಗಳು ಅಪೂರ್ವವಾದವು.

ಸ್ಮಶಾನ ಕುರುಕ್ಷೇತ್ರ-ಬೆರಳ್‌ಗೆ ಕೊರಳ್

ಕುವೆಂಪು ವರ ಈ ಎರಡು ನಾಟಕಗಳು ಮಹಾಭಾರತದ ವಸ್ತುವನ್ನು ಒಳಗೊಂಡಿದೆ, ಬೆರಳ್ಗೆಕೊರಳ್ ನಾಟಕ, ಏಕಲವ್ಯನು ದ್ರೋಣರಿಗೆ ತನ್ನ ಹೆಬ್ಬೆರಳಿನ ಗುರುದಕ್ಷಿಣೆಯನ್ನಿತ್ತ ಸನ್ನಿವೇಶವನ್ನು ಕುರಿತದ್ದು.

ಹದಿನೆಂಟು ದಿನಗಳ ಹೋರಾಟದ ಕೋಲಾಹಲದಿಂದ ಕೂಡಿದ ಕುರುಕ್ಷೇತ್ರ, ಸಂಗ್ರಾಮದ ಕೊನೆಯ ರಾತ್ರಿ, ಸ್ಮಶಾನ ಮಾತ್ರವಾಗಿ ಉಳಿದ ಘೋರ ವಿಷಣ್ಣ ಚಿತ್ರವನ್ನು ಕೊಡುತ್ತದೆ. ಶ್ಮಶಾನ ಕುರುಕ್ಷೇತ್ರ.

ಅಗ್ರಜಾ ಮೊದಲ್ ಅವನಾರವನ್

ಕೇಳಿದನ್, ನಮ್ಮವನೊ? ಕೌರವನ ಪಡೆಯವನೊ?

ಕುವೆಂಪು ಅವರ ನಾಟ್ಯ ಪ್ರತಿಭೆ, ಅದ್ಭುತವಾದ ಚಿತ್ರವನ್ನು ಇಲ್ಲಿ ಕಲ್ಪಿಸಿದೆ.

ಕೊಳ್ ದಕ್ಷಿಣೆಯನ್ ಇದನ್! ಗೆಲ್ಗೆ ಧರ್ಮಂ

ಗೆಲ್ಗೆ ದೈವೇಚ್ಛೆ! ನಿಮ್ಮವಚನಂ ನಿಲ್ಗೆ!

ಮೇಣ್ ಅರ್ಜುನನ ಪೆರ್ ಬಯಕೆಯುಂ ಸಲ್ಗೆ!

(ಬೆರಳ್‌ಕೊರಳ್)

ಕುವೆಂಪುರವರ ಪ್ರತಿಮಾ ಕಲ್ಪನೆಯ ಪ್ರತಿಭೆ ಇಲ್ಲಿ ಜಾಗೃತವಾಗಿದೆ.

ಚಂದ್ರಹಾಸ ನಾಟಕ ಪೌರಾಣಿಕ ನಾಟಕವಾಗಿದೆ.

ಈ ನಾಟಕದಲ್ಲಿ ಈಗಿನ ದರ್ಶನಕ್ಕೆ ಒಪ್ಪುವ ಭಾವಾಂಶ ಚಿಂತನಾಂಶ, ಕಲ್ಪನಾಂಶ, ರೂಪಾಂಶಗಳಲ್ಲಿ ಎರಕಹೊಯ್ದು ಅದನ್ನೊಂದು ಹೊಸ ಕೃತಿಯಾಗಿಯೇ ಮರೆಯದಿದ್ದರೆ ಚಂದ್ರಹಾಸ ನಾಟಕ.

ಲೋಕವನು ನಾಕಕ್ಕೆ ಬೆಸೆಯ

ನಾಕವನು ಲೋಕಕ್ಕೆ ಹೊಸೆಯ

ಐತಂದೆ ನಾ ಭಕ್ತಿ ದೇವಿ

ಚಂದ್ರಹಾಸನ ಕಲಾತ್ಮಕವಾದ ಮತ್ತು ದರ್ಶನಾತ್ಮಕವಾದ ಒಂದು ನಾಟಕ ಕೃತಿಯಾಗಿ ರೂಪುಗೊಂಡಿದೆ. ಕುವೆಂಪು ಅವರ ನಾಟ್ಯ ಪ್ರತಿಭೆಯಿಂದ ಕಥಾ ನಿರೂಪಣೆಯಲ್ಲಿ ಪಾತ್ರ ರಚನೆಯಲ್ಲಿ ಬಹುಮಟ್ಟಿಗೆ ನಾಟಕ ಕುವೆಂಪು ರಚಿಸಿದ್ದಾರೆ.

ಕುವೆಂಪು ಅವರು 'ಕಾನೀನ' ಕುವೆಂಪು ಬರೆದ ಕೊನೆಯ ನಾಟಕ-

ಮಹಾಭಾರತದ 'ಕರ್ಣ' ಭಾರತೀಯ ಮನಸ್ಸಿನ ಮೇಲೆ ಗಾಢಪ್ರಭಾವ ಬೀರಿದ ನಮ್ಮನ್ನು ಚಿಂತನೆಗೆ ಚರ್ಚೆಗೆ ಒಡ್ಡಿದ ಒಂದು ಬಹುಮುಖ್ಯ ಪಾತ್ರ, ಕುವೆಂಪುರವರ ಕಾನೀನ ನಾಟಕವನ್ನು ಕರ್ಣನನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿದೆ.

ಗಾಂಗೇಯ ಈ ವೀರ ಬಾಲಕನು ಸಾಮಾನ್ಯ

ನೆಂದರಿಯಬೇಡ, ನೀನೊಂದು ವರ್ಷದಲಿ

ಕಲಿತುದನು ಇವನೊಂದು ತಿಂಗಳಲಿ ಅರಿತಿಹನು,

ಬೌತಿಯಲಿ ಸೂತಜನು

ಗುಣದಲ್ಲಿ ಕ್ಷತ್ರಿಯನು ಇವನೆನ್ನ ಶಿಷ್ಯ,

ರಾಧೇಯನೆಂಬುವನು,

ಶಸ್ತ್ರ ವಿದ್ಯೆಯೊಳೀತನ್

ಅಪ್ರತಿಮನಾಗಿಹನು ಈತನನು ನೀನು

ಗಜಪುರಿಗೆ ಕೊಂಡೊಯ್ದು ಸಲಹಿದರೆ, ಮುಂದೆ

ನಿಮ್ಮ ರಾಜ್ಯದ ಬಲಕೆ ಬಲದ ಕೈಯಾಗುವನು

ಈ ರೀತಿ ಕಾನೀನ ನಾಟಕದಲ್ಲಿ ಕರ್ಣನ ವೃತ್ತಾಂತವನ್ನು ಗಮನಿಸಬಹುದಾಗಿದೆ.

ಅಡಿ ಟಿಪ್ಪಣಿಗಳು:

ಜಲಗಾರ ಮತ್ತು ಸಾಮಾಜಿಕ ಪ್ರಶ್ನೆ	– ಶಿವರಾಮು ಕಾಡನಕುಪ್ಪೆ
ಧರ್ಮಜಿಜ್ಞಾಸೆ (ಯವನಸೋಲು–೧)	– ಪ್ರಭುಶಂಕರ
ಬಿರುಗಾಳಿ	– ಪ್ರಧಾನ ಗುರುದತ್ತ
ಪ್ರಬುದ್ಧ ಕರ್ಣಾಟಕ	– ಕಾಮನ ಸಂಚಿಕೆ
ಕುವೆಂಪು ಕಾವ್ಯಾವಲೋಕ	– ಸದಾಶಿವ ಎಣ್ಣೆಹೊಳೆ
ಯುಗಧರ್ಮ ಹಾಗೂ ಸಾಹಿತ್ಯ ದರ್ಶನ	– ಕೀರ್ತಿನಾಥ ಕುರ್ತಕೋಟಿ
ವಾಲ್ಮೀಕಿಯ ಭಾಗ್ಯ	– ಎಚ್. ತಿಪ್ಪೇರುದ್ರಸ್ವಾಮಿ
ರೂಪಾಂತರ (ಶೂದ್ರತಪಸ್ವಿ)	– ಸುಜನಾ
ದಾರ್ಶನಿಕ ನಾಟಕ (ಬೆರಳ್ಗೆ–ಕೊರಳ್)	– ದೇಜಗೌ
ಸಾರ್ವಕಾಲಿಕ ಪ್ರಶ್ನೆ (ಬಲಿದಾನ)	– ಬಿ.ಎ.ವಿವೇಕರೈ
ಚಂದ್ರಹಾಸನ ಕಥೆ	– ಕೆ.ವೆಂಕಟರಾಮಪ್ಪ
ಕಾನೀನ	– ನರಹಳ್ಳಿ ಬಾಲಸುಬ್ರಹ್ಮಣ್ಯ

ರಾಮಾಯಣ ಮತ್ತು ಮಹಾಭಾರತ ಕೃತಿಗಳು ಭಾರತೀಯರಿಗೆ ಅತ್ಯಂತ ಪ್ರಿಯವೂ ಪೂಜನೀಯವೂ ಆದ ಗ್ರಂಥಗಳಾಗಿವೆ. ಭಾರತೀಯರಿಗೆ ಇವು ಪುರಾಣಗಳೂ ಹೌದು, ಇತಿಹಾಸವೂ ಹೌದು. ಅಂತೆ ಕಾವ್ಯಗಳೂ ಹೌದು, ರಾಮಾಯಣ ಮತ್ತು ಮಹಾಭಾರತಗಳು ರಚನೆಯಾಗುವುದಕ್ಕೆ ಮೊದಲಿಗೆ ಸಂಸ್ಕೃತ ಭಾಷೆಯಲ್ಲಿ ಶ್ರೀಮಂತವಾದ ಸಾಹಿತ್ಯ ಸೃಷ್ಟಿಯಾಗಿತ್ತು. ನಾಲ್ಕು ವೇದಗಳು, ಹಲವು ಉಪನಿಷತ್ತುಗಳು ಧರ್ಮಶಾಸ್ತ್ರ ಗ್ರಂಥಗಳು ಈ ಮೊದಲೇ ರಚನೆಗೊಂಡಿದ್ದವು, ಇವುಗಳಲ್ಲಿ ಧಾರ್ಮಿಕರನ್ನು ತೃಪ್ತಿಗೊಳಿಸುವ ನೀತಿ ಧರ್ಮ ವಿಚಾರಗಳು ಸಾಕಷ್ಟಿತ್ತು. ಆದರೆ ಸಹೃದಯರಿಗೆ ಸಂತೋಷ ನೀಡುವ ರಸಧ್ವನಿ ಕಥಾವಸ್ತು ವರ್ಣನೆಗಳ ಕೊರತೆ ಇತ್ತು. ಈ ಕೊರತೆಯನ್ನು ನೀಗಿಸಿದ ಭಾರತದ ಮೊದಲ ಕಾವ್ಯ ಎಂಬ ಹೆಗ್ಗಳಿಕೆ ರಾಮಾಯಣದ್ದು, ಈ ಕಾವ್ಯವನ್ನು ಬರೆದವರು ವಾಲ್ಮೀಕಿ.

ಕುವೆಂಪು ಅವರು ಸೃಜಿಸಿರುವ ಶ್ರೀ ರಾಮಾಯಣ ದರ್ಶನಂ ಎಂಬ ಮಹಾಕಾವ್ಯಕ್ಕೆ ಮೂಲ ವಾಲ್ಮೀಕಿ ರಚಿಸಿದ ಶ್ರೀ ಮದ್ರಾಮಾಯಣ ಎಂಬ ಸಂಸ್ಕೃತ ಕಾವ್ಯ ಈ ರಾಮಾಯಣವು ಸುಮಾರು ೨೪ ಸಾವಿರ ಶ್ಲೋಕವುಳ್ಳ ಬೃಹತ್ ಕಾವ್ಯ ರಾಮಾಯಣವನ್ನು ಮೊದಲು ನಾರದ ಮಹರ್ಷಿಗಳು ವಾಲ್ಮೀಕಿಗೆ ಹೇಳಿದರೆಂದು ವಾಲ್ಮೀಕಿ ಅದನ್ನು ಕಾವ್ಯವಾಗಿ ರಚಿಸಿ ವಾಮನ ಮಕ್ಕಳಾದ ಲವಕುಶವರಿಗೆ ಕಲಿಸಿದರೆಂದು, ಕುಶಲವರು ಅದನ್ನು ಶ್ರೀರಾಮನ ಮುಂದೆ ಹಾಡಿದರೆಂದು ಹೇಳಲಾಗುತ್ತದೆ.

ಈ ಕಾವ್ಯದಲ್ಲಿ ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂದಾಕಾಂಡ, ಸುಂದರಕಾಂಡ, ಯುದ್ಧಕಾಂಡಗಳೆಂದು ಆರು ಕಾಂಡಗಳಿವೆ. ಸೀತಾ ಪರಿತ್ಯಾಗದ ಕಥೆ ಇರುವ ಉತ್ತರಕಾಂಡ ಎಂಬುದು ವಾಲ್ಮೀಕಿ ರಚಿಸಿದ್ದಲ್ಲ, ಇದನ್ನು ಭವಭೂತಿ ರಚಿಸಿದ್ದು ಎಂದು ಹೇಳಿದ್ದಾರೆ.

ಕುವೆಂಪು ಅವರು ಆರು ಕಾಂಡಗಳಲ್ಲಿ ಹೇಳಲಾದ ರಾಮಕಥೆಯನ್ನು ಶ್ರೀರಾಮಾಯಣ ದರ್ಶನಂ ಎಂಬ ಹೆಸರಿನಲ್ಲಿ ನಾಲ್ಕು ಸಂಪುಟಗಳಲ್ಲಿ ಮಹಾಛಂದಸ್ಸಿನಲ್ಲಿ ಸೃಜಿಸಿದ್ದಾರೆ. ಅಯೋಧ್ಯಾ ಸಂಪುಟಂ, ಕಿಷ್ಕಿಂಧಾ ಸಂಪುಟಂ, ಲಂಕಾ ಸಂಪುಟಂ, ಮತ್ತು ಶ್ರೀ ಸಂಪುಟಂ ಎಂಬುದಾಗಿ ಈ ಸಂಪುಟಗಳಿಗೆ ಶೀರ್ಷಿಕೆ ನೀಡಿದ್ದಾರೆ. ಇದಲ್ಲದೇ ಪ್ರತಿಯೊಂದು ಸಂಪುಟವನ್ನು ಒಳ ವಿಭಾಗಗಳಾಗಿ ವಿಂಗಡಿಸಿ ಅವುಗಳಿಗೆ, ಸಂಚಿಕೆ ಎಂದು ಹೆಸರು ನೀಡಲಾಗಿದೆ. ಒಟ್ಟು ೫೦ ಸಂಚಿಕೆಗಳಿದ್ದು, ೨೨,೩೩೬ ಪಂಕ್ತಿಗಳಲ್ಲಿ ಈ ಕಾವ್ಯ ರಚನೆಗೊಂಡಿದೆ.

ಕತೆ ರಾಮಾಯಣದ್ದೆ ಆದರೂ ಅದರ ಸ್ವರೂಪ ಬೇರೆಯೆಂಬಂತೆ ಇಲ್ಲಿ ಚಿತ್ರಣಗೊಂಡಿದೆ. ಶ್ರೀರಾಮಾಯಣ ದರ್ಶನಂನಲ್ಲಿ ವಸ್ತು ಸಂವಿಧಾನ, ಸನ್ನಿವೇಶ ಪಾತ್ರ ಚಿತ್ರಣ, ವೈಚಾರಿಕತೆ, ದರ್ಶನ ಇತ್ಯಾದಿಗಳಲ್ಲಿ ಮೂಲಕ್ಕಿಂತ ಬೇರೆಯದೆ ಆದ ನಿರ್ವಹಣೆಯಿದೆ. ಇದು ಈ ಕೃತಿಯ ವೈಶಿಷ್ಟ್ಯವೂ ಆಗಿದೆ.

"ಪ್ರಾಚ್ಯ ಪಾಶ್ಚಾತ್ಯ ಪ್ರಾಚೀನ ಅರ್ವಾಚೀನಗಳ ಸಾರ್ವಕಾಲಿಕ ಮತ್ತು ಸಾರ್ವಧಾರ್ಮಿಕ ಸಮಷ್ಟಿರೂಪದ ಯುಗಪ್ರಜ್ಞೆಯ ಆವಿರ್ಭೂತಿಯಂತಿರುವ ಶ್ರೀ ರಾಮಾಯಣದರ್ಶನಂ ಮಹಾಕಾವ್ಯವನ್ನು ವ್ಯವಹಾರಿಕವಾಗಿ ಕುವೆಂಪು ಕೃತಿ ಎಂದು ಕರೆಯಲಾಗಿದ್ದರೂ ಪಾರಮಾರ್ಥಿಕವಾಗಿ ನೋಡಿದರೆ 'ಕುವೆಂಪು' ವನ್ನೇ ಅದು ಸೃಜಿಸಿದೆ ಅದು ಯುಗ ಚೈತನ್ಯದ ಸಮಷ್ಟಿ ಪ್ರಜ್ಞೆಯ ಸೃಷ್ಟಿ, ಅದು ಶ್ರೀ ರಾಮಾಯಣದ ಅತ್ಯಂತ ಆಧುನಿಕ ಅವತಾರ ಅದು ವೈದಿಕ ಸಂಪ್ರದಾಯದ ವಾಲ್ಮೀಕಿ ರಾಮಾಯಣಕ್ಕೆ ಋಣಿಯಾಗಿರುವಂತೆ ಜೈನ ಸಂಪ್ರದಾಯದ ರಾಮಾಯಣಗಳಿಗೂ ಋಣಿಯಾಗಿದೆ ಎಂಬ ಕುವೆಂಪುರವರ ಮಾತುಗಳು ಅವರ ಕಾವ್ಯದ ಮಹತ್ವವನ್ನು ಸಾರುತ್ತವೆ.

ಕುವೆಂಪು ಅವರು ಮೂಲತಃ ಪ್ರಕೃತಿ ಆರಾಧಕ ಕವಿಯಾಗಿದ್ದರೂ, ಸಾಮಾಜಿಕ ಜವಾಬ್ದಾರಿಯನ್ನು ಬಲ್ಲವರಾಗಿದ್ದರು. ತನ್ನ ಬರಹದ ಉದ್ದೇಶ ಮತ್ತು ವ್ಯಾಪ್ತಿಯ ಬಗ್ಗೆ ಅದರಲ್ಲಿ ಖಚಿತತೆ ಇತ್ತು. ಪ್ರಕೃತಿಯ ಸ್ಥಿತ್ಯಂರದಲ್ಲೂ ಬದುಕಿನ ಪಲ್ಲಟಗಳನ್ನು ದರ್ಶಿಸಿದವರು ಕುವೆಂಪು. ಆದ್ದರಿಂದಲೇ ಅವರ ಅಭಿವ್ಯಕ್ತಿ ಸ್ವಾತಂತ್ರ್ಯದ ಹೋರಾಟದ ಸಂದರ್ಭದಲ್ಲಿ ಆರಂಭವಾಗಿದ್ದರೂ, ಸಾಮಾಜಿಕ ಚಿಂತನೆಗೂ ತೆರೆದುಕೊಂಡಿತು. ಸೌಂದರ್ಯವನ್ನು ಕಂಡು ಮೂಕವಿಸ್ಮಿತರಾದಂತೆ ಸಮಾಜದ ಮೌಢ್ಯವನ್ನು ಕಂಡು ಆಕ್ರೋಶಗೊಂಡರು. ಹೊಸ ಸಮಾಜ ಕಟ್ಟುವ ಇಲ್ಲವೇ ಆ ದಿಕ್ಕಿನಲ್ಲಿ ಸಮಾಜವನ್ನು ತಿದ್ದುವ ಪ್ರೇರಕವಾಗಿ ತಮ್ಮ ಕಾವ್ಯಶಕ್ತಿಯನ್ನು ಸಜ್ಜುಗೊಳಿಸಿದರು. ಪರಿಣಾಮವಾಗಿ ತಮ್ಮ ಸುತ್ತಮುತ್ತಲಿನ ದುಃಖ ದಾರಿದ್ರ್ಯಗಳಿಗೆ ಕಾರಣಗಳನ್ನು ಹುಡುಕಿದರು. ಕಾರ್ಯ ಅನ್ಯಾಯಗಳನ್ನು ಕಂಡು ಕ್ರೋಧಗೊಂಡರು. ಜನರ ಅಸಹಾಯಕತೆ ಕಂಡು ಮರುಗಿದರು. ಸಾಮಾನ್ಯರಲ್ಲೂ ಅಸಮಾನ್ಯತೆಯನ್ನು ಪ್ರತಿಯೊಂದು ಜೀವವಸ್ತುವಿನಲ್ಲಿರುವ ಜೀವ ಚೈತನ್ಯವನ್ನು ಗುರುತಿಸುವ ಪ್ರಯತ್ನವನ್ನು ಮಾಡಿದರು. ಸಮಾಜದ ಆಶೋತ್ತರಗಳಿಗೆ ತಾವೇ ಕಿವಿಯಾದರು. ದನಿಯಾದರು. ಜೀವ ವಿರೋಧಿ ನಿಲುವನ್ನು ಹೊಂದಿರುವ ಇಡೀ ವ್ಯವಸ್ಥೆಯನ್ನೇ ನಿರಾಕರಿಸುವಂತೆ ಕರೆಕೊಟ್ಟರು. ವ್ಯವಸ್ಥೆಯ ಲೋಪದೋಷಗಳನ್ನು ಎತ್ತಿ ತೋರಿಸಿ ಜನ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದರು. ಈ ರೀತಿ ಕುವೆಂಪು ಅವರ ಸಾಹಿತ್ಯವನ್ನು ನಾವು ಗಮನಿಸುತ್ತೇವೆ.

ಅಧ್ಯಾಯ–೪

ಕುವೆಂಪು ಸಾಹಿತ್ಯದಲ್ಲಿ ರೈತ ಹಾಗೂ ಕೃಷಿಯ ಉಲ್ಲೇಖಗಳು–ವಿಶ್ಲೇಷಣೆ

ಧನ್ವಂತರಿ ಚಿಕಿತ್ಸೆ

ಋಷಿ ವಿಶ್ವಾಮಿತ್ರನು ನಂದನವನದ ಒಂದು ಮೂಲೆಯಲ್ಲಿ ಕಲ್ಪವೃಕ್ಷದಿಂದ ಸ್ವಲ್ಪ ದೂರವಾಗಿದ್ದು, ಶತಪಥ ತಿರುಗುತ್ತಿದ್ದನು. ನಿಯತೇಂದ್ರಿಯನಾಗಿದ್ದರೂ ಕೂಡ ಬಯಸಿದೊಡನೆ ಬಯಕೆಗಳನ್ನೆಲ್ಲಾ ನೀಡುವಂತಹ ಮರದ ನೆರಳಿನಲ್ಲಿರುವುದು ಅಪಾಯಕರವೆಂದು ಅವನಿಗೆ ಅನುಭವದಿಂದ ಗೊತ್ತಾಗಿತ್ತು.

ಇಂತು ಋಷಿ ಆಲೋಚಿಸಿ ಕನಿಕರದಿಂದ ಕಿರುನಗೆ ನಗುತ್ತಿದ್ದಾಗಲೇ ಆ ದೇವಾಪ್ಸರೆಯರ ನೃತ್ಯವನ್ನು ಮಾರಿ ಆ ಅಮರಗಾನದ ಘೋಷವನ್ನು ಮಾರಿ ಸುದೀರ್ಘವಾದ ಅತಿ ಕ್ಲೇಶಯುತವಾದ ಎದೆಯದುರಿಸುವಂತಹ ನರಳುದನಿಯೊಂದು ನಂದನದ ನೆಲವನ್ನೆ ಮಾಡಿತು ಎಂಬಂತೆ ಕೇಳಿಬಂದಿತು.

ಋಷಿ ಸಿಡಿಲೆರಗಿದವನಂತೆ ಬೆಚ್ಚಿ ಬಿದ್ದು ಬಾಯ್ದೆರೆದು ನಡುಗಿ ನಿಂತು ಮತ್ತೆ? ಅದೇ ನರಳು ದನಿ ಎಂದು ನಿಡುಸುಯ್ದನು.

ಆ ನರಳು ದನಿ ಮಜಾ ಮಾಡುತ್ತಿದ್ದ ದೇವತೆಗಳಿಗೆ ಬಂದಿನಿತೂ ಕೇಳಿಸಿರಲಿಲ್ಲ. ಅವರ ಮಾನರಹಿತ ಪಾನ ರೀತಿ ನಿರಾತಂಕವಾಗಿ ನೀಗಿತ್ತು.

ಆ ನರಳು ದನಿ ವಿಶ್ವಾಮಿತ್ರನನ್ನು ಬಹಳ ದಿನದಿಂದಲೂ ಹಿಂಬಾಲಿಸುತ್ತಿತ್ತು ಮತ್ತೆ ಕೈಲಾಸಕ್ಕೆ ಹೋಗಿದ್ದಾಗ ಅಲ್ಲಿಯೂ ಕೇಳಿಸಿತು ಹಾಗೆಯೇ ವೈಕುಂಠದಲ್ಲಿ ಹಾಗೆಯೇ ಸತ್ಯ ಲೋಕದಲ್ಲಿ ನರಕಕ್ಕೆ ಸಂಚಾರಾರ್ಥವಾಗಿ ಹೋಗಿದ್ದಾಗಲೂ ಅಲ್ಲಿಯ ಗೋಳಾಟವನ್ನು ಮಾರಿ ಕೇಳಿಸಿತು. ರಹಸ್ಯವಾದ ಅನಿರ್ದಿಷ್ಟವಾದ ಆ ಆರ್ತನಾದ.

ವಿಶ್ವಾಮಿತ್ರನು ಆಲೋಚಿಸುತ್ತಾ ತಲೆಯೆತ್ತಿ ನೋಡಿದಾಗ ಪರಶುರಾಮನು ತಾನಿದ್ದಲ್ಲಿಗೆ ಬರುತ್ತಿದ್ದುದನ್ನು ಕಂಡನು. ರೇಣುಕಾತನಯನ ಮುಖದಲ್ಲಿಯೂ ಮೋಡ ಕವಿದಂತಿತ್ತು. ಅವಸರವಾಗಿ ಬಳಿಗೆ ಬಂದನು.

"ರೇಣುಕಾತನಯ ನಿನಗೊಂದು ನರಳು ದನಿ ಕೇಳಿಸಿತೆ?" ಎಂದು ವಿಶ್ವಾಮಿತ್ರ ಹೆಗಲ ಮೇಲೆ ಬಲಗೈಯಿಟ್ಟು ಪ್ರಶ್ನಿಸಿದನು.

ಅವರು ಮಾತನಾಡುತ್ತಿದ್ದಾಗಲೇ ಮತ್ತೆ ದೇವಾಪ್ಸರೆಯರ ಆನಂದ ವಿನೋದಗಳನ್ನೆಲ್ಲಾ ನುಂಗಿ ಮಾರಿ ಈ ನರಳು ನೆತ್ತರು ಹೆಪ್ಪುಗಟ್ಟುವಂತೆ ಕೇಳಿಸಿತು. ಋಷಿಗಳಿಬ್ಬರೂ ದಿಗ್ಭ್ರಾಂತರಾಗಿ ಗದಗದನ್ ನಡುಗುತ್ತಾ ನಿಂತರು.

ಅದೇ ಮಾರ್ಗವಾಗಿ ನಾರದರು ಬಂದರು. ನಾರದನ ಮುಖದಲ್ಲಿ ಕಿರುನಗೆಯೂ ಮಿಂಚಿತು. ಕಣ್ಣುಗಳಲ್ಲಿ ನೀರೂ ಸುರಿದವು. ಆ ಪರಸ್ಪರ ವಿರುದ್ಧ ಭಾವದ ಘಟನೆಗಳನ್ನು ಕಂಡು ವಿಶ್ವಾಮಿತ್ರ ಪರಶುರಾಮರು ಬೆಕ್ಕಸಪಡುತ್ತಿರಲು,

ಭೂಲೋಕದಲ್ಲಿ ಎಂಬುದು ಚೆನ್ನಾಗಿ ಗೊತ್ತು ಎಂಬೊರೆದು ದೇವರ್ಷಿ ಗಾನಗೈಯುತ್ತಾ ಹೊರಟು ಹೋದನು. ಬ್ರಹ್ಮರ್ಷಿಗಳಿಬ್ಬರು ಭೂಲೋಕದ ಕಡೆಗೆ ವೇಗವಾಗಿ ಸಾಗಿದರು.

ಭೂಮಿಯನ್ನು ಸಮೀಪಿಸುತಿದ್ದಾಗಲೇ, ವಿಶ್ವಾಮಿತ್ರ ಪರಶುರಾಮರಿಬ್ಬರೂ ದಂಗು ಬಡಿದರು. ಹಿಂದೆ ಅವರಿದ್ದ ಕಾಲದ ಭೂಮಿಗೂ, ಈಗಿನ ಕಾಲದ ಭೂಮಿಗೂ ನಾಗರಿಕತೆ ಮತ್ತು ಸಂಸ್ಕೃತಿಗಳೊಡನೆ, ಅವುಗಳನ್ನು ಕ್ಷಣಮಾತ್ರದಲ್ಲಿ ಬೇಕಾದರೂ ಹಾಳು ಮಾಡಿಬಿಡುವ ಅನಾಗರಿಕತೆ ಮತ್ತು ಅಸಂಸ್ಕೃತಿಗಳು, ಜೀವವನ್ನು ಸಂರಕ್ಷಿಸುವ ವೈದ್ಯ ವಿದ್ಯೆಯೊಡನೆ ರೋಗಕಾರಿಗಳಾದ, ದುಷ್ಟಪದ್ಧತಿಯು ಸಿರಿಯೊಡನೆ ಬಡತನವೂ ರೈಲು ಮೋಟಾರು, ವಿಮಾನ, ಅಲೆಯಂಚೆ, ವಿದ್ಯುಚ್ಛಕ್ತಿ ಬಂದೂಕ, ಬಾಂಬು, ಕಾಗದ, ಮುದ್ರಾಯಂತ್ರ ಇತ್ಯಾದಿ ಕಾಣುತ್ತಾ ಹೊಗಳುತ್ತಾ ವಿಮರ್ಶಿಸುತ್ತಾ ನವೀನ ನರಕವೇಷದಿಂದ ದೊಡ್ಡ ನಗರವೊಂದಕ್ಕೆ ಬಂದಿಳಿದರು.

ಅಲ್ಲಿದ್ದ ಒಂದು ಸಣ್ಣಗದ್ದೆಯ ಕೋಗಿನ ತುದಿಯಲ್ಲಿ ಬಂದು ಹುಲ್ಲು ಜೋಪಡಿ ಕಣ್ಣಿಗೆ ಬಿದ್ದಿತು. ಆ ಗುಡಿಸಲಿನಿಂದ ಬರುತ್ತಿತ್ತು. ಸತ್ಯಲೋಕ ಕೈಲಾಸ ವೈಕುಂಠಗಳವರೆಗೂ ಏರಿ ವಿಶ್ವವ್ಯಾಪ್ತಿಯಾಗಿದ್ದ ಆ ಭಯಂಕರವಾದ ನರಳುದನಿ ಋಷಿಗಳು ಸಾಮಾನ್ಯ ಅ ಮನುಷ್ಯ ವೇಷದಿಂದ ಅಲ್ಲಿಗೆ ನಡೆದರು.

ಗುಡಿಸಲಿನ ಹೊರಗಡೆ ಮನುಷ್ಯರಾರು ಕಾಣಿಸಲಿಲ್ಲ. ಬೂದಿಗುಡ್ಡೆಯಲ್ಲಿ ಮಲಗಿದ್ದ ಒಂದು ಬಡಕಲು ನಾಯಿ ಮಾತ್ರ ಒಂದೆರಡು ಸೊಲ್ಲು ಕೂಗಿ ದಣಿದು ತಟಸ್ಥವಾಯಿತು. ಒಂದು ಹೇಂಟೆ, ತನ್ನ ಹೂಮರಿಗಳೊಡನೆ, ಕೊಳಚೆಯಲ್ಲಿ ಕೆಸರು ಕೆದರುತಿತ್ತು.

ಗುಡಿಸಲಿನ ಒಳಗಡೆ ಮಬ್ಬುಗತ್ತಲೆ ಕವಿದಿತ್ತು. ಸರ್ವಸ್ವವೂ ಹೊಗೆ ಹಿಡಿದು ಕರಿಬಲೆ ನೇತುಬಿದ್ದು ಕರ್ರಗಾಗಿತ್ತು. ಹಾರೆ ಗುದ್ದಲಿ ಹೆಡಗೆ ಕುಕ್ಕೆ, ಮಡಕೆ, ನೇಗಿಲು, ಕತ್ತಿ- ಇತ್ಯಾದಿ ಬೇಸಾಯದ ಉಪಕರಣಗಳು ಅಲ್ಲಲ್ಲಿ ಅಸ್ತವ್ಯಸ್ತವಾಗಿ ಚೆದುರಿ ಬಿದ್ದಿದ್ದವು.

ಮಧ್ಯ ಹಾಸಿದ್ದಕಂಬಳಿಯ ಮೇಲೆ ತೊಳೆ ಹಿಡಿದ ಸೊಂಟದ ಪಂಚೆಯವಿನಾ ಸಂಪೂರ್ಣವಾಗಿ ನಗ್ನನಾಗಿದ್ದ ರೈತನೊಬ್ಬನು ಅಂಗಾತನೆ ಮಳಗಿ ಎದೆಯನ್ನು ಎರಡು ಕೈಗಳಿಂದಲೂ ಒತ್ತಿಕೊಳ್ಳುತ್ತಾ ಘೋರವಾಗಿ ನರಳುತ್ತಿದ್ದನು.

ಎದೆಯ ಮೇಲಿರುವ ರಾಜ್ಯದ ಭಾರವನ್ನು ತೆಗೆದು ಹಾಕಿದರೆ ಕಾಯಿಲೆ ಸರಿ ಹೋಗುತ್ತದೆ ಎಂದನು, ದೇವತೆ, ಧನ್ವಂತರಿ,

ಈ ರೀತಿ ರೈತನಿಗೆ ಸಾಲದ ಹೊರೆ ತಗ್ಗಿಸಲು ಧನ್ವಂತರಿ ಚಿಕಿತ್ಸೆಯನ್ನು ನೀಡಲಾಯಿತು. ಕುವೆಂಪು ತಮ್ಮ ಕಾವ್ಯ ಕೃತಿಯಲ್ಲಿ ಸೊಗಸುಗಾಗಿ ತಂದಿದ್ದಾರೆ.

ಒಡನೆಯ ರಾಜ್ಯದಲ್ಲಿ ಸಿಡಿಲು ಮಳೆ ಬಿರುಗಾಳಿ ಭೂಕಂಪಗಳು ತೂರಿ ಉತ್ಪಾತವಾಯಿತು. ನೋಡುತ್ತಿದ್ದರಂತೆ ರಾಜವೇಶ್ಮ ಉರಳಿತು. ದೇವಾಲಯದ ಗೋಪುರಗಳೂ ಮಹಾರವರಿಂದ ಕೆಳಗೆ ಬಿದ್ದವು.

ರೈತನ ನರಳುವಿಕೆ ಕ್ರಮೇಣ ಕಡಿಮೆಯಾಗುವಂತೆ ತೋರಿತು.

ಗೊಬ್ಬರ

ಕುವೆಂಪು ೨೦ನೆಯ ಶತಮಾನದ ಯುಗ ಪುರುಷ ಆಧುನಿಕ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ ಕವಿ ಬಿ.ಎಂ.ಶ್ರೀ ಅವರು ಕನ್ನಡ ಕಾವ್ಯದ ಹೊಲವನ್ನು ಹೊಸ ರೀತಿಯಲ್ಲಿ ಉತ್ತುಬೆಳೆ ಮಾಡಬೇಕೆಂದು ಪ್ರಯತ್ನ ಪಡುತ್ತಿರುವವರಲ್ಲಿ. ಶ್ರೀಪುಟ್ಟಪ್ಪನವರ ಸಾಧನೆ ಪ್ರೋತ್ಸಾರ್ಹವಾದುದು ಎಂದು ಹೇಳಿದ ಮಾತು, ನಿಜವಾದವು, ಗೊಬ್ಬರ ಕವನದ ವಸ್ತುಗೊಬ್ಬರ ಎಂಬ ಪದಾರ್ಥವಲ್ಲ ಅದು ಅರ್ಥಾಂತರಕ್ಕೆ ಬಳಕೆಯಾಗಿದೆಯೆ ಹೊರತು ಅದನ್ನೇ ಕುರಿತದ್ದಲ ಇಲ್ಲಿ 'ಗೊಬ್ಬರ' ಒಂದು ಸಂಕೇತವಾಗಿ ಮಾತ್ರ ಬಳಕೆಯಾಗಿದೆ. ಉಪೇಕ್ಷಿಸಲ್ಪಟ್ಟದ್ದು ಅಥವಾ ತುಳಿಯಲ್ಪಟ್ಟದ್ದನ್ನು ಸೂಚಿಸುತ್ತಾರೆ.

ಇಲ್ಲಿ ನಿಷಿದ್ಧ ವಸ್ತುವೇ ಗೊಬ್ಬರ ನಿಷಿದ್ಧ ವ್ಯಕ್ತಿಯೇ ಶೂದ್ರ, ಇಲ್ಲಿಯ ಗೊಬ್ಬರ ಆವರೆಗಿನ ಕಾವ್ಯಕ್ಕೆ ವಸ್ತುವಾಗಿಸಿದೆ. ಹೊರಗಿರಿಸಿದ್ದ ವಸ್ತುವೆಲ್ಲದರ ಪ್ರತಿನಿಧಿಯಾಗುತ್ತದೆ. ಹಾಗೆಯೇ ಶೂದ್ರ ಕೂಡ ಆ ವರ್ಗದ ಸಮರ್ಥ ಪ್ರತಿನಿಧಿಯಾಗಿದ್ದಾನೆ.

'ಗೊಬ್ಬರದ ಮೇಲೆ ಬರೆಯುವುದು, ಕಬ್ಬಮಂ ಹಾ ಕಡುಕಕ್ವ' ಎಂಬ ಕವನದ ಮೊದಲ ಸಾಲೇ ವಸ್ತು ಧ್ವನಿಯನ್ನು ನಿರೂಪಿಸುತ್ತದೆ. ನಂತರ ಕಲಿಕಾಲ, ಪ್ರಲಯ ತಾಂಡವಮೂರ್ತಿ ಕಲ್ಕ್ಯಾವತಾರ ಮುಂತಾದ ಪದಗಳು ಈ ವ್ಯಂಗ್ಯವನ್ನು ಗಟ್ಟಿಗೊಳಿಸುತ್ತಾ ಶೂದ್ರ ಕಾವ್ಯ ಬರೆಯುವುದೇ ಧರ್ಮವಧೆಯಾದಂತೆ

ಗೊಬ್ಬರ ಮತ್ತು ಹೂವಿನ ಸಂಬಂಧದ ಕಲ್ಪನೆಯ ಮೂಲಕ ಗೊಬ್ಬರದ ಮಹತ್ವವನ್ನು ಕವಿ ಕುವೆಂಪು ಸಾರುತ್ತಾರೆ.

"ಬೇರುಗಳಿಗಿಲ್ಲದಿರೆ ಗೊಬ್ಬರಂ ಹೇಳೆನಗೆವ್ರಕ್ಷ ಕೆಲ್ಲಿಯರು ಹೂವಿನ ಹಬ್ಬ"

ಹೂವಿನ ಅಸ್ತಿತ್ವವನ್ನು ಗೊಬ್ಬರ ಉಳಿಸಿದಂತಾಗಿದೆ. ದುಡಿಮೆಗಾರರ ಶ್ರಮದಿಂದ ಶ್ರೀಮಂತ ವರ್ಗದವರು ಸುಖವಾಗಿರುವುದನ್ನು ಸಂತೋಷವಾಗಿರುವುದನ್ನು ಧ್ವನಿಸುತದೆ.

"ಗೊಬ್ಬರದ ಅಜೀವವನೆ ಹಿರಿ ಕೊಬ್ಬಿಹ ಹೂವೆ ಕಬ್ಬಕ್ಕೆ ನೀಂ ಮಾತ್ರ ವಸ್ತುವೇಂ" ಶೂದ್ರತ್ವದ ದುಡಿಮೆಯಿಂದ ಅರಸರ ಹಿರಿಮೆ ಕೀರ್ತಿ ಬರುತ್ತದೆ. ಆದರೆ ಅದು ಶಾಶ್ವತವಲ್ಲ ಒಂದಾನೊಂದು ದಿನ ಆ ಹಿರಿಮೆ ಕೀರ್ತಿ ಈ ಮಣ್ಣನ್ನೇ ಸೇರಬೇಕು. ಈ ರೀತಿ ಕುವೆಂಪು ವರ್ಣನೆ ಮಾಡಿದ್ದಾರೆ.

ಕುವೆಂಪು ಸಾಹಿತ್ಯದಲ್ಲಿ ರೈತ

ಹಿಂದೂ ಪುನರುಜ್ಜೀವನ ದಿನಗಳ ಪ್ರಭಾವದಿಂದ ಈ ನಾಡನ್ನು ಆವರಿಸಿದ ವಿವೇಕಾನಂದರ ಪ್ರಭಾವವನ್ನು 'ನಡೆಮುಂದೆ' 'ವೇದಾಂತ ಕೇಸರಿ'ಯಲ್ಲಿ ಕಾಣಬಹುದಾಗಿದೆ. ರೊಮ್ಯಾಂಟಿಕ್ ಭಾವವನ್ನೂ ಮಾನವೀಕರಣ ಮಾಡಿದ ಅಭಿವ್ಯಕ್ತಿ, ಸಗ್ಗದ ಬಾಗಿಲು ಕವಿತೆಯಲ್ಲಿ ಕಾಣುತ್ತದೆ.

ಸಗ್ಗದ ಬಾಗಿಲು ಎಲ್ಲಿ ಹುದಣ್ಣಾ

ನುಗ್ಗಿದರಲ್ಲೇ ತೆರೆಯುವುದಣ್ಣಾ!

ನೇಗಿಲ ಗೆರೆಯೇ ಸಗ್ಗದ ಹಾದಿ

ಕರ್ಮಲೆ ಬಗಿಲಿ ಗೊಯ್ಯುವ ಬೀದಿ

ಬರೆಯಲು ವೇದವ ರೈತನ ನೇಗಿಲು

ತೆರೆವುದು ದಿನ ದಿನ ಸಗ್ಗದ ಬಾಗಿಲು

ಈ ಬಗೆಯ ಪ್ರಯೋಗಗಳು ಸಾಧ್ಯವಾಗಿದ್ದೇ, ಕುವೆಂಪು ವ್ಯಕ್ತಿತ್ವವನ್ನು ರೂಪಿಸಿದ ಆಧ್ಯಾತ್ಮಿಕ ಅನುಭವದ ನೆಲೆಯಿಂದ ಕುವೆಂಪು ಅವರಲ್ಲಿ ರೊಮ್ಯಾಂಟಿಕ್ ಯುಗ ಕೇವಲ ಪ್ರಕೃತಿ ಆರಾಧನೆಗೆ, ಸೌಂದರ್ಯ ವರ್ಣನೆಗೆ ಸೀಮಿತವಾಗಿದೆ.

ನಾಳಿನ ಸಮಾಜದ ಸುಧಾರಣೆಗು ಆಶಾವಾದವನ್ನು ಬಿತ್ತುತ್ತದೆ. ಏಕೆಂದರೆ ವಿವೇಕಾನಂದರು ಅದ್ವೈತಿಗಳಾದರೂ ಸಮಾಜದ ಸತ್ಯಗಳಿಗೆ ಬೆನ್ನು ಮಾಡಿದವರಲ್ಲ ಬದಲಿಗೆ ಕರ್ಮದ ಮಹತ್ವವನ್ನು ಸಾರಿ

ಸಾರಿ ಹೇಳಿದವರು. ಇಂತಹ ವಿಚಾರಗಳ ಕುಲುಮೆಯಲ್ಲಿ ಕುದಿದು ಪರಿಶುದ್ಧವಾದ ಕುವೆಂಪು 'ನೇಗಿಲ ಯೋಗಿ' ಯಂತಹ ಕವಿತೆಯ ಗಾಢವಾದ ಸಾಮಾಜಿಕ ಪ್ರಜ್ಞೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ.

ನೇಗಿಲ ಕುಳದಲ್ಲಿ ಅಡಗಿದೆ ಕರ್ಮ

ನೇಗಿಲ ಮಲೆಯೇ ನಿಂತಿದೆ ಧರ್ಮ

ಎಂಬ ವಾಸ್ತವಾದವು, ಧಾರ್ಮಿಕ ಆಧ್ಯಾತ್ಮಿಕ ಸಾಮಾಜಿಕ ಚೌಕಟ್ಟುಗಳನ್ನು ಅಗ್ನಿ ಪರೀಕ್ಷೆಗೆ ತಂದು ನಿಲ್ಲಿಸುತ್ತದೆ. ರೈತನಾಗಲಿ ತನ್ಮೂಲಕ ಯಾವುದೇ ವೃತ್ತಿಯಾಗಲಿ ತಪಸ್ಸು ಎಂದು ಭಾವಿಸಿದ ಅವರ ವ್ಯಕ್ತಿತ್ವದ ಸೂಕ್ಷ್ಮ ಸಾಮಾಜಿಕ ಬದ್ಧತೆ ಅನಾವರಣಗೊಳ್ಳುತ್ತವೆ.

ಹೊಸ ಮಳೆಯ ಮಿಂದೆಸೆವ

ಹಸರು ಮಲೆಗಳ ಮೆಲೆ

ನೇಸರುದಾ ರುಚಿಯ

ಸವಿವೆ ಕಂಡು

ಹೊಸ ಮಳೆಯಿಂದ ತೊಯ್ದು ಮೀಯುವ ಹಸಿರು ಬೆಟ್ಟಗುಡ್ಡಗಳ ಮೇಲೆ ಕಾಣುವ ನೇಸರು ದಯದ ಸೌಂದರ್ಯದ ರುಚಿಯನ್ನು ಸವಿಯುತ್ತೇನೆಂದು ತನ್ನ ಸಂಗಾತಿಯೊಂದಿಗಿನ ಸಹ ಜೀವನದ ಪ್ರೇರಣೆಯನ್ನು ಮನತುಂಬಿ ಹೇಳುತ್ತಾರೆ.

ಸುಗ್ಗಿಯ ಹೊಸ ಸಿರಿ ಹೂಗಳ ಕೊಯ್ದು

ತರಲೆನ್ ಒಂದಿನಿ ಮಾಲೆಯ ನೆಯ್ದು?

ಎಂಬ ಸಣ್ಣ ಕಾಣಿಕೆಯಿಂದ ಪ್ರಾರಂಭಿಸಿ ಹಲವು ಮಾರ್ಗಗಳ ಬಗ್ಗೆ ಚಿಂತಿಸುತ್ತಾನೆ. ಕೆಂಪು ಗುಲಾಬಿಯಂತಹ ಚೆಂದುಟಿಯುಳ್ಳ ಪ್ರೇಮಿ ಚೆಲುವೆಗೆ ಸುಗ್ಗಿಯಲ್ಲಿ ಬಂದ ಹೊಸ ಹೂವಿನ ಮಾಲೆಯನ್ನೇ ಅರ್ಪಿಸುವ ಬಯಕೆ ಅ ಪ್ರೇಮಿಯರು ಹೇಗೆ ಅವಳನ್ನು ಗೆಲ್ಲಬೇಕೆಂಬ ಪ್ರಯತ್ನಗಳ ಜೊತೆ ಜೊತೆಗೇ ಅವಳ ರೂಪರಾಶಿಯನ್ನು ಬಣ್ಣಿಸಲಾಗಿದೆ.

ಬಾನಿಗೆ ಹಿಡಿದಿದೆ ಕಿಕ್ಕರೆ ಮಳೆ ಮೋಡದ ಮಬ್ಬು:

ಗಂಟಿಕ್ಕಿದವೊಲಿದೆ ಸೃಷ್ಟಿಯ ಕರಿಹುಬ್ಬು

ಮಿಂಚಿನ ಗುಡುಗಿನ ಗಾಳಿಯ ಸುಳಿವಿನಿತಿಲ್ಲ:

ಚಿತ್ರ ಸ್ಥಗಿತವೋ ಎಂಬಂತಿದೆ ಜಗವೆಲ್ಲ

ಇಡೀ ಬಾನನ್ನು ಆವರಿಸಿದ ಕಪ್ಪು ಮೋಡದಿಂದಾಗಿ ದಿನವಿಡೀ ಸೂರ್ಯನ ದರ್ಶನವಾಗುತ್ತದೆ. ಇಲ್ಲ ಕಳೆಯಿಲ್ಲದ ಪ್ರಕೃತಿಯು ಹುಬ್ಬುಗಂಟಿಕ್ಕಿದಂತೆ ಮಬ್ಬು ಕವಿದಿದೆ ಮಿಂಚು ಗುಡುಗು ಗಾಳಿಗಳಿಲ್ಲದ ಬರಿ ಮೋಡದ ಆವರಣ ನಿಸರ್ಗದ ಸ್ತಬ್ಧತೆಯನ್ನು ಹೆಚ್ಚಿಸಿದೆ. ಇಡೀ ಪ್ರಕೃತಿ ಚಿತ್ರದಲ್ಲಿ ಬಿಡಿಸಿದಂತೆ ನಿಶ್ಚಲವಾಗಿರುವ ವರ್ಣನೆ ಮೋಹಕವಾಗಿದೆ. ಗಿಡಮರಗಳೆಲ್ಲಾ ನಿಶ್ಯಬ್ಧವಾಗಿವೆ. ಅಲ್ಲಿ ಸದ್ದು ಇದ್ದರೂ ಅದು ಕೇವಲ ಮಳೆ ಹನಿಗಳಿದು ಮಾತ್ರ ಮಳೆಹನಿಗಳ ನಡುವೆಯೇ ನಿಶಬ್ಧತೆ ಕಡಲಂತೆ ಆವರಿಸಿದೆ ಎಡಬಿಡದಂತೆ ಸುರಿಯುತ್ತಿರುವ ಜಡಿಸೋನೆ ಮನಸ್ಸಿಗೆ ಕಿರಿಕಿರಿ ಮಾಡುತ್ತಿದೆ. ಅತಿಯಾದ ಆನಂದವೂ ದುಃಖದ ರೂಪದಲ್ಲಿ ಕಾಡುತ್ತಿದೆ ಎಂಬಂತೆ ಸೋಲುವ ಓನೆಯ ಮನಸ್ಸಿನ ಉಲ್ಲಾಸಕ್ಕೆ ಕಡಿವಾಣ ಹಾಕಿದೆ.

ರೈತನ ದೃಷ್ಟಿ:

ನವೋದಯದ ಕವಿಗಳೆಲ್ಲ ಬದುಕನ್ನು ಹಸನಾಗಿಸುವತ್ತ ಕನಸು ಕಂಡವರು ಗಾಂಧೀಜಿ ಅವರ ಗ್ರಾಮಸ್ವರಾಜ್ಯದ ಕನಸಿಗೆ ಬೆಂಬಲವನ್ನು ವ್ಯಕ್ತಪಡಿಸಿದವರು.

ಭಾರತ ಕೃಷಿ ಪ್ರಧಾನ ದೇಶ ಬಹುಪಾಲು ಜನ ಕೃಷಿಯನ್ನೇ ಆಶ್ರಯಿಸಿ ಬದುಕುತ್ತಿದ್ದಾರೆ. ಹೀಗಾಗಿ ರೈತರ ಹಿತವನ್ನು ಕಾಯಬೇಕಾದ್ದು ಸಾಮ್ರಾಜ್ಯ ಶಾಹಿಗಳ ಕರ್ತವ್ಯ, ಆದರೆ ವಾಸ್ತವತೆ ಹಾಗಿಲ್ಲ, ರೈತ ವಿರೋಧಿ ಧೋರಣೆಗಳೇ ಅಧಿಕವಾಗಿವೆ. ಅನ್ನಕೊಡುವ ರೈತ ಬಡತನದ ಬೇಗೆಯಲ್ಲಿ ಬೇಯುತ್ತಿದ್ದಾನೆ. ಬಲಿಷ್ಠರ ಶೋಷಣೆಗೆ ಒಳಗಾಗುತ್ತಿದ್ದಾನೆ. ಅಸಹಾಯಕನಾಗಿ, ನೊಂದು ನಿಂತಿದ್ದಾನೆ. ಇದನ್ನು ಕಂಡು ಕವಿಗೆ ಸಹಿಸಲಾಗುತ್ತಿಲ್ಲ. ನ್ಯಾಯಯುತವಾದ ಸಲ್ಲಬೇಕಾದ ಸೌಲಭ್ಯದ ಪರವಾಗಿ ವಾದಿಸುವ ಈ ಕವಿ, ಸ್ವಗತದಲ್ಲಿ ರೈತನೇ ತನ್ನ ಅಸ್ತಿತ್ವವನ್ನು ಶೋಧಿಸಿಕೊಳ್ಳುವ ಅನಿವಾರ್ಯತೆಯನ್ನು ರೈತನ ದೃಷ್ಟಿ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಕವಿತೆಯ ಆರಂಭವೇ ಗತ ಇತಿಹಾಸದ ವೈಖರಿಯನ್ನು ಎದುರಿಗಿಟ್ಟು ರೈತನ ನೊಂದ ಬದುಕನ್ನು ಅನಾವರಣ ಮಾಡುತ್ತದೆ.

> ಕರಿಯರದೋ ಬಿಳಿಯರದೊ ಯಾರದಾದರೆ ಏನು?
>
> ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!
>
> ವಿಜಯನಗರದಲ್ಲೇ? ಮೊಗಲರಾಳ್ವಿಕೆಯೋ? ಇಂಗ್ಲೀಷರೋ?
>
> ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ!
>
> ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
>
> ನಮ್ಮವರ ಹದ ಹಾಕಿ ತಿವಿದರರು ಹೂವೆ

ರೈತರ ಸುಲಿಗೆಗೆ ಕಪ್ಪು ಬಿಳುಬು ಬಣ್ಣಬೇಧವಿಲ್ಲ. ಸಾಮ್ರಾಜ್ಯ ಯಾವುದೇ ಇರಲಿ. ರೈತರ ಬವಣೆಗೆ ಮುಕ್ತಿಯಿಲ್ಲ. ವಿಜಯನಗರ, ಮೊಗಲರು, ಇಂಗ್ಲೀಷರು ಆಳ್ವಿಕೆಯ ಪಲ್ಲಟಗಳಷ್ಟೇ ಸ್ವರೂಪ ಬೇಧಗಳಷ್ಟೆ ಪರಿಣಾಮದಲ್ಲಿ ಎಲ್ಲರ ದೃಷ್ಟಿಕೋನ ದೌರ್ಜನ್ಯ ಒಂದೇ ಬಗೆಯದು– ಜಿಗಣೆಗಳಂತೆ ರೈತರ ನೆತ್ತರನ್ನು ಹೀರುವುದು ಕತ್ತಿಯ ಕೆಲಸ ಗಾಯ ಮಾಡುವುದೇ ಹೊರತು ಹೂವಂತೆ ಸ್ಪರ್ಶಿಸುವುದಿಲ್ಲ. ಹೀಗಾಗಿ ಕತ್ತಿಯ ಕ್ರಿಯೆ ಮತ್ತು ಪರಿಣಾಮಕ್ಕೆ ಸ್ವದೇಶಿ ವಿದೇಶಿ ಎಂಬ ಹಣೆಪಟ್ಟಿ ಕಟ್ಟುವಂತಿಲ್ಲ. ಹಾಗೆ ಹಳೆ ಸಾಮ್ರಾಜ್ಯ ಉರುಳಿ ಹೊಸ ಸಾಮ್ರಾಜ್ಯ ಬಂದರೂ ರೈತನ ದುಃಸ್ಥಿತಿ ಬದಲಾಗಲೇ ಇಲ್ಲ. ಇಲ್ಲಿ ಕವಿ ಸಾಮ್ರಾಜ್ಯಶಾಹಿ ಧೋರಣೆಯನ್ನು 'ಜಿಗಣೆ' ಗೆ ಹೋಲಿಸಿರುವುದು ವಿಶೇಷ ಮಲೆನಾಡಿನ ಜೌಗು ಪ್ರದೇಶದಲ್ಲಿ ತೋಟಗಳ ಹಸಿತಾಣಗಳಲ್ಲಿ ಯಥೇಚ್ಛವಾಗಿ ಕಂಡುಬರುವ ಜಂತು ಇದು ರಕ್ತ ಹೀರಿಕೊಂಡಷ್ಟೆ ಉದ್ದ ಮತ್ತು ಗಾತ್ರವಾಗಿ ಬೆಳವ ಜಿಗಣೆಯನ್ನು ಕಿತ್ತು ಹಾಕಿದರೂ ಕಚ್ಚಿದ ಜಾಗದಿಂದ ರಕ್ತ ಸೋರುವುದು ಬಡಪಟ್ಟಿಗೆ ನಿಲ್ಲುವುದಿಲ್ಲ. ನಿರಂತರ ದಾಯ ಅದರದು ಇರೈತನನ್ನು ಸುಲಿವ ವಿಚಾರಕ್ಕೆ ಹಿಮ್ದಣ ಆಳ್ವಿಕೆಗಳು ಮಾಡಿದ್ದು ಇದನ್ನೇ.

ಸಾಮ್ರಾಜ್ಯಗಳಿಗೆ ರೈತನ ಸುಲಿಗೆ ಅನಿವಾರ್ಯವಾಗಿತ್ತು. ಏಕೆಂದರೆ, ಇಡೀ ಸಾಮ್ರಾಜ್ಯದ ಬಂಡವಾಳವೇ ರೈತನ ಶ್ರಮದ ಫಲ ಇಲ್ಲಿರುವರಾರು ಶ್ರಮಜೀವಿಗಳಲ್ಲ. ಸೀಮಾರಿಗಳು, ಸುಖಿಗಳು, ರಸಿಕರು, ಸಾಮ್ರಾಜ್ಯ ಬಡವರ ಪಾಲಿಕೆ ಇಷ್ಟಗಳನ್ನು ಪೂರೈಸುವ 'ಕಾಮಧೇನು' ಹೊರನೋಟಕ್ಕವರು ಕಿರೀಟ ತೊಟ್ಟ 'ನೃಪರು' ವಾಸ್ತವರಲ್ಲಿ ಅವರು "ಕಳ್ಳರೊಡೆಯ'ರು ರೈತನ ಪರಿಸ್ಥಿತಿ ಹಾಗಲ್ಲ ಸಾಮ್ರಾಜ್ಯಶಾಹಿಗಳ ಶೋಕಿಗೆ ದುಡಿಮೆಯ ಜೀವತೆತ್ತು ಅವರ ಮೆರವಣಿಗೆಯನ್ನು ಬಾಯ್ದೆರೆದು ಬೆಪ್ಪಾಗಿ ನೋಡುವುದು ಮಾತ್ರ ಇದೆಲ್ಲ ರೈತನಿಗೆ ಗೊತ್ತಿಲ್ಲ ಎಂದಲ್ಲ, ಗೊತ್ತಿದೆ. "ಸಾಮ್ರಾಜ್ಯ ಕಾಳಿಗಾನಲ್ತೆಕುರಿ" ಎಂಬ ಅರಿವೂ ಇದೆ. ಆದರೆ ನೇರವಾಗಿ ಪ್ರತಿಭಟಿಸಲಾದ 'ಕುಯ್ಗುರಿ' ಯತಲೇ ಸಾವು ಬದುಕಿನ ನಡುವೆ ಹೋರಾಡುತ್ತಾನೆ. 'ಕರುಣೆ ಗರಗಸ'ವೂ ಅವನಿಗೆ ಬೇಕಿಲ್ಲ ಎಲ್ಲವನ್ನೂ ಬೆಲೆಯಿಂದಲೇ ಅಳತೆ ಮಾಡುವವರ ಬಗ್ಗೆ ಅವನಲ್ಲು ಆಕ್ರೋಶವಿದೆ. ನಿಧಾನವಾಗಿ ಇತಿಹಾಸದಿಂದ ಪಾಠ ಕಲಿತವನಂತೆ ಎಚ್ಚೆತ್ತುಕೊಳ್ಳುತ್ತಾನೆ.

ನೇಗಿಲಿನ ಮೇಲಾಣೆ! ಬಸವಗಳ ಮೇಲಾಣೆ!

ನೆತ್ತರಿಲ್ಲದ ಸುಕ್ಕಿ ಸೊರಗಿದೆನ್ನಾಣೆ

ರೈತನಿಗೆ ಬದುಕು ಕೊಡುವ ನೇಗಿಲು ಮತ್ತು ಬಸವ ಮುಖ್ಯವಾಗುವಂತೆ ದೇವರೆಂಬ ಅಮೂರ್ತ ಕಲ್ಪನೆ ಮುಖ್ಯವಾಗುವುದಿಲ್ಲ. ಅವುಗಳೆಲ್ಲ ದೇವರನ್ನು ಕಾಣುವ ರೈತ ಅವುಗಳ ಮೇಲೆ ಭರವಸೆ ಇಡುವುದು ಸಹಜ. ಅವುಗಳ ಸಾಕ್ಷಿಯನ್ನು ಮುಂದಿಟ್ಟು ತನ್ನ ತೀರ್ಮಾಕ್ಕೆ ಬದ್ಧವಾಗುವಂತೆ ಪ್ರೇರಣೆ ನೀಡುವ ಕುಡಿಯಲು ಸೆತ್ತಲು ಹೀರಿ ಸೊಕ್ಕಿದ ಸಾಮ್ರಾಜ್ಯಶಾಹಿ ವಸಾಹತುಶಾಹಿ ರಾಜತ್ವಗಳಿಗೆ

"ನೆತ್ತರಿಲ್ಲದೆ ಸುಕ್ಕಿ ಸೊಕ್ಕಿ ಸೊರಗಿದೆ" ರೈತನ ಬದುಕನ್ನು ಪರ್ಯಾಯವಾಗಿಸುವ ಮೂಲಕ ವರ್ತಮಾನದ ಅಗತ್ಯವನ್ನು ಕವಿ ಬಹು ಎಚ್ಚರಿಕೆಯಿಂದ ಪೂರೈಸುತಾರೆ. ಆದ್ದರಿಂದಲೇ 'ಸಾಮ್ರಾಜ್ಯ ಸಿರಿಯ ಕಸ್ತೂರಿಗಿಂತ', 'ಬಡವರ ಗೊಬ್ಬರ' ಪ್ರಾಮುಖ್ಯತೆ ಪಡೆಯುತ್ತವೆ.

ಗೊಬ್ಬರ

"ಬೇರುಗಳಿಗಿಲ್ಲದಿರೆ ಗೊಬ್ಬರಂ ಹೇಳನೆಗೆ

ವೃಕ್ಷ ತೆಲ್ಲಿಯದು ಹುವಿನ ಹಬ್ಬ? ಗೊಬ್ಬರದ

ಜೀವವನೆ ಹೀರಿ ಕೊಬ್ಬಿಹ ಹೂವೆ: ಕಟ್ಟಿಕ್ಕೆ

ನೀಂ ಮಾತ್ರ ವಸ್ತುವೇಂ ನಿನ್ನಂತೆ ಗೊಬ್ಬರಂ

ಕಬ್ಬಕ್ಕೆ ಸಾಮಾಗ್ರಿಯಾಗಬಾರದೆ ಹೇಳು?

ಹಳಿಯದಿರೂ: ಇಂದೋ ನಾಳೆಯೋ ನೀನು ಕೆಳಗುರುಳಿ

ಗೊಬ್ಬರದೊಳೊಂದಾಗುವ ಮುಂದೆ ಕಾದಿಹುದು!"

ಕವಿಗಳು ಹೂವನ್ನೇ ಕಾವ್ಯವಸ್ತುವಾಗಿ ಸ್ವೀಕರಿಸಿದ್ದರು. ಆದರೆ ಗೊಬ್ಬರದ ಮಹತ್ವವನ್ನೆಂದೂ ಗುರುತಿಸಬಾರದು. ಬೇರುಗಳಿಗೆ ಗೊಬ್ಬರ ಶಕ್ತಿ ತುಂಬಿರದೆ ಮಾತ್ರ ಹೂವು, ಮರಕ್ಕೆ, ಚೆಲುವು ಎಂದಿದ್ದಾರೆ. ಮುಂದುವರೆದು ನಾಮ, ಮುದ್ರೆ ವಿಭೂತಿಗಳನ್ನು ಬಳಿದುಕೊಂಡು ಶ್ರೇಷ್ಠತೆಯನ್ನು ಸ್ಥಾಪಿಸುವ ಮಂದಿಗೆ ಗೊಬ್ಬರ ಬಳಿದುಕೊಂಡು ರೈತನನ್ನು ಮುಖಾಮುಖಿಯಾಗಿ ನಿಲ್ಲಿಸಿ, ಮೇಲುಕೀಳು ಭಾವ ಇಲ್ಲಿ ಸಲ್ಲುವಂತದ್ದಲ್ಲ.

ಸಾಲದ ಮಗು

ಮಳೆಗಾಲ ಕಾದಿರುಳು ಕತ್ತಲು ಹೆಪ್ಪುಗಟ್ಟಿಕೊಂಡಿತ್ತು. ಜಗತ್ತೆಲ್ಲಾ ಮಸಿಯಲ್ಲಿ ಅಳಿಸಿ ಹೋದಂತಿತ್ತು. ತಡೆಯಿಲ್ಲದೆ ಜಡಿಮಳೆ ಜೋ ಎಂದು ಬೀಳುತಿತ್ತು. ಬಿರುಸಾದ ಗಾಳಿ ಒಂದೊಂದು ಸಾರಿ ಭರದಿಂದ ಬೀಸುವುದು; ಒಮ್ಮೆ ಮುಗ್ಗರಿಸಿ ನಿಲ್ಲುವುದು.

ಮಲೆನಾಡಿನ ಕಾಡು ತುಂಬಿದ ಮಲೆಗಳು ಕಾರ್ಗತ್ತಲೆಯಲ್ಲಿ ರೂಪು ರೇಖೆ ಕೂಡ ಕಾಣದಂತೆ ನಿಶೇಷವಾಗಿ ಮಾಯವಾಗಿದ್ದವು ಗಾಳಿ ಮೃದುವಾದಾಗ ಕಾಡಿನ ಮರಗಳ ಮೇಲೆಯೂ ಮನೆಯ ಮುಂದಿನ ಅಡಕೆ ಬಾಳೆಯ ತೋಟದ ಮೇಲೆಯೂ ಮನೆಗೆ ಹೊಂದಿಸಿದ ಹೆಂಚುಗಳ ಮೇಲೆಯೂ ತೋರಹನಿಗಳು ಬಿದ್ದುಬಿದ್ದು ಚಟ್‌ಪಟ್ ಟಿಗ್ ಟಿಣ್, ಫಟ್, ಚಟ್, ಬರ್, ಸರ್, ಎಂದು ನಾನಾ ವಿಧವಾಗಿ ಬೀಳತೊಡಗಿದ್ದವು.

ಬ್ರಹ್ಮಾಂಡವೇ ಕೆಳಗೆ ಬಿದ್ದು ಗಂಜಿನ ಬುರುಡೆಯಂತೆ ಪಟಪಟನೆ ಪುಡಿಯಾಯಿತೋ ಎಂಬಂತೆ ಸಿಡಿಲೆರಗಿತ್ತು. ಗೌಡರಿಗೆ ಧಿಗಿಲ್ಲೆಂದು ಎಚ್ಚರವಾಯಿತು.

ಸುಬ್ಬಾ! ಸುಬ್ಬಾ! ಎಂದು ಕೂಗಿ ಕರೆದರು.

ಸುಬ್ಬನಿಗೆ ಎಚ್ಚರವಾಗಲಿಲ್ಲ. ಅವನು ಕೆಳ ಜಗುಲಿಯ ಬಂದು ಮೂಲೆಯಲ್ಲಿ ಯಾರೋ ದಾನ ಮಾಡಿದ್ದ ಎರಡು ಮೂರು ಚಿಂದಿ ಕಂಬಳಿಗಳನ್ನು ಬಲವಾಗಿ ಸುತ್ತಿಕೊಂಡು, ಹೆದೆಯೇರಿಸಿದ ಬಿಲ್ಲಿನಂತೆ ಬಾಗಿ ಬಿದ್ದಿದ್ದನು. ಬಹಳ ಚಿಕ್ಕವನಾದ ಅವನು ಆ ದಿನವೆಲ್ಲಾ ಗದ್ದೆಯಲ್ಲಿ ದೊಡ್ಡವರೊಡನೆ ಕೆಲಸ ಮಾಡಿ ದಣಿದಿದ್ದನು. ಅನಾಥರಿಗೆ ಪರಮಜನನಿಯಾದ ನಿದ್ರಾದೇವಿಯ ಮಡಿಲಲ್ಲಿ ಆ ಪರದೇಶಿ ಬಾಲಕನು ಮರವಟ್ಟು ಬಿದ್ದಿದ್ದನು.

ಸುಬ್ಬನಿಗೆ, ಕೇಳಿಸಲಿಲ್ಲ, ಗೌಡರಿಗೆ ಕೋಪಬಂತು, ಅವನಿಗೆ ಬಂದು ಬೆತ್ತ ತೆಗೆದುಕೊಂಡು ಮೇಲುಜಗಲಿಯಿಂದ ಕೆಳಗಿಳಿದರು. ಗೌಡರು, ಯಜಮಾನರು, ಶ್ರೀಮಂತರು, ಆ ಗ್ರಾಮಕ್ಕೆಲ್ಲಾ ಒಡೆಯರು, ಕಠೋರ ಸ್ವಭಾವದವರು, ಅವರಿಗೆ ವಯಸ್ಸು ಅರವತ್ತರ ಮೇಲಾಗಿತ್ತು. ಮೂರು ಮದುವೆಗಳಾಗಿದ್ದವು. ನಾಲ್ಕೈದು ಮನೆತನಗಳಿಗೆ ಹೆಚ್ಚು ಬಡ್ಡಿಯ ಮೇಲೆ ಕೊಟ್ಟು ಅವುಗಳನ್ನು ಹಾಳಿ ಮಾಡಿದರು.

ಇವರನ್ನು ಕಂಡರೆ ಹುಲಿಯನಂತೆ ಜನರಿಗೆ ಭೀತಿ, ದಿನವೂ ಬ್ರಾಂದಿ ಕುಡಿಯದೆ ಅವರಿಗೆ ನಿದ್ದೆ ಬರುತ್ತಿರಲಿಲ್ಲ, ನಿತ್ಯ ಶಿವ ಪೂಜೆ ಮಾಡುವರು, ಹರಿ ನಾರಾಯಣ ಹರಿನಾರಾಯಣ ಏನು ಮನವೆ ಗಟ್ಟಿಯಾಗಿ ರಾಗದಿಂದ ಹೇಳುವರು.

ಸುಬ್ಬು ಎಂಟು ಹತ್ತು ವರ್ಷದ ಹುಡುಗ ಅವನ ತಂದೆ ರಂಗನು ಗೌಡರ ಒಕ್ಕಲಾಗಿದ್ದನು. ಸುಬ್ಬನ ತಾಯಿ ಮಗನನ್ನು ಹೆತ್ತ ಎರಡು ವರ್ಷಗಳಲ್ಲಿಯೇ ತೀರಿ ಹೋಗಿದ್ದಳು. ನಂತರ ರಂಗ ಇನ್ನೊಂದು ಮದುವೆ ಮಾಡಿಕೊಳ್ಳುವುದಕ್ಕೆ ಅವನ ಹತ್ತಿರ ಹಣ ಇರಲಿಲ್ಲ. ಗೌಡರ ಹತ್ತಿರ ಕೇಳುದರೂ ಇಂದಿನ ಸಾಲ ತೀರಿಸುವವರೆಗೂ ಸಾಲ ಕೊಡುವುದಿಲ್ಲವೆಂದು ಹೇಳಿದರು. ಮದುವೆ ನಿಂತು ಹೋಯಿತು. ನಂತರ ರೇಷ್ಮೆ ಖಾಯಿಲೆ ಬಂದು ತೀರಿ ಹೋದನು. ಗೌಡರು ತಮ್ಮ ಸಾಲಕ್ಕಾಗಿ ಅವನ ಮಗ ಸುಬ್ಬನನ್ನು ಮನೆಯ ಜೀತದಾಳನ್ನಾಗಿ ಮಾಡಿ ಇಟ್ಟುಕೊಂಡರು.

"ಗೌಡರು ಕಠೋರ ಧ್ವನಿಯಿಂದ !ಹೇಗೋ! ನಡಿಯೋ! ಗದ್ದೇಲಿ ಹಾಕಿದ್ದ ಕೂಣೆ ನೋಡಿಕೊಂಡು ಬಾರೋ" ಎಂದು ಮತ್ತೆ ಬೆತ್ತ ಎತ್ತಿದ್ದರು. ಸುಬ್ಬ "ಹೋಗ್ತೀನಯ್ಯ" ಎಂದು ದೀರ್ಘವಾಗಿ ಕೂಗಿದನು. ಮಳೆಗಾಲದಲ್ಲಿ ಹತು ಮಾನಿನ (ಮಾನು ಹತ್ತುವ) ಸಮಯದಲ್ಲಿ ರೈತರು ಕೂಣೆ ಹಾಕಿ ಮೀನು ಹಿಡಿಯುತ್ತಾರೆ. ದಿನಕ್ಕೆ ಏಳೆಂತು ಬುಟ್ಟಿಗಿಂತಲೂ ಹೆಚ್ಚಾಗಿ ಮೀನು ಸಿಕ್ಕುತ್ತೇವೆ.

ಸುಬ್ಬನು ದೊಡ್ಡದೊಂದು ಮೀನುಬುಟ್ಟಿ ಹೊತ್ತುಕೊಂಡು ಕೈಯಲ್ಲಿ ಲಾಟೀನು ಹಿಡಿದುಕೊಂಡು ಕಂಬಳಿ ಕೊಪ್ಪೆ ಹಾಕಿಕೊಂದು ಹೊರಟನು. ಗೌಡರು ಮರಳಿ ಹೋಗಿ ಬೆಚ್ಚಗೆ ಮಲಗಿ ನಿದ್ದೆ ಮಾಡಿದ್ರು.

ಮಳೆ ಸುರಿಯುತ್ತಲೆ ಇತ್ತು. ಗಾಳಿ ಮಿಂಚು ಗುಡುಗುಗಳೂ ನಿಂತಿರಲಿಲ್ಲ. ಕತ್ತಲೆ ಕ್ರೂರವಾಗಿತ್ತು. ಹಾದಿಯ ತುಂಬಾ ಕೆಸರು ಸುಬ್ಬನು ಕಾಲಿಟ್ಟಂತೆಲ್ಲಾ ಪಿಚಪಿಚನೆ ಹಾರುತ್ತಿತ್ತು. ಲಾಟೀನಿಗೆ ಕೆಸರಾದರೆ ಗೌಡರು ಮತ್ತೆ ಎಲ್ಲಿ ಪಡೆಯುತ್ತಾರೋ ಎಂದು ಹೆದರಿ ಅದನ್ನು ಶಕ್ತಿ ಮೀರಿ ಎತ್ತಿ ಹಿಡಿದುಕೊಂಡು ನಡೆದನು. ರುದ್ರ ಪ್ರಕೃತಿಯ ಹೊರತು ಮತ್ತೊಂದು ಜೀವಜಯ ಹೊರಗಿರಲಿಲ್ಲ. ಹೋಗುತ್ತಾ ಸುಬ್ಬನು ಬಂದು ಗದ್ದೆ ಅಂಚಿನಿಂದ ಮತ್ತೊಂದು ಗದ್ದೆ ಅಂಚಿಗೆ ಹಾರುತ್ತಿದ್ದಾಗ ಕೆಸರಿನಲ್ಲಿ ಕಾಲು ಜಾರಿಬಿದ್ದು ಲಾಟೀನು ಒಡೆದು ಹೋಯಿತು. ದೀಪ ನಂದಿತು. ಸುಬ್ಬ ಕಗ್ಗತ್ತಲಲ್ಲಿ ಮುಳುಗಿ ಒಡೆದುದಕ್ಕಾಗಿ ಅತ್ತು ಅತ್ತು ಮನೆಗೆ ಮೀನು ತಾರದೆ ಹಿಂದಿರುಗಿದರೆ ಏನು ಗತಿಯಾಗುವುದೋ ಎಂದು ಹೆದರಿ ಮತ್ತೆ ಆ ಕತ್ತಲಲ್ಲಿಯೇ ಆ ಮಳೆಗಾಳಿಗಳ ಪ್ರಚಂಡ ಪ್ರಳಯದಲ್ಲಿ ಮುಂಬರಿದನು. ಮಿಂಚಿನ ಬೆಳಕಿನಲ್ಲಿ ಊಹೆಯ ಮೇಲೆಯೇ ನಡೆದು ಕೂಣೆಯಿದ್ದ ತಾವನ್ನು ಮಿಂಚಿನ ಬೆಳಕಿನಲ್ಲಿ ಊಹೆಯ ಮೇಲೆಯೇ ನೆಡದು ಕೂಣೆಯಿದ್ದ ತಾವನ್ನು ಕಂಡು ಹಿದಿಯಲೆಂದು ಬೀಳುತ್ತಾ ಏಳುತ್ತಾ ಆಳುತ್ತಾ ಹೋದನು. ಆ ನಿಷ್ಕರುಣ ಪ್ರಕೃತಿಯ ಭಯಂಕರ ಸನ್ನಿವೇಶದಲ್ಲಿ ಬಾಲಕನು ಕಡಲಲ್ಲಿ ತೇಲುವ ಹುಲ್ಲು ಎಸಳಿನಂತೆ ತೀರಿ ಹೋದನು.

ಚಳಿ ಹೆಚ್ಚಾಯಿತು, ಕಂಬಳಿಯನ್ನು ಮತ್ತಷ್ಟು ಬಲವಾಗಿ ಸುತ್ತಿಕೊಂಡನು. ನಡುನಡುವೆ ಏನನ್ನೋ ಕಂಡವನಂತೆ ಬೆಚ್ಚಿ ನಡುಗಿದನು. ಕಡ್ಗೆ ಕೂಣೆಯ ಬಳಿ ಸೇರಿದನು.

ಸುಬ್ಬನು ಕೊಣೆಯ ಬಳಿ ಸೇರಿ ಕೈಯಲ್ಲಿದ್ದ ಬುಟ್ಟಿಯನ್ನು ಕೆಳೈಟ್ಟು ಬಹು ಪ್ರಯಾಸದಿಂದ ಕೂಣೆಯನ್ನೆತ್ತಿದ್ದನು. ಕೊಣೆ ಮೀನಿನಿಂದ ತುಂಬಿ ಹೋಗಿತ್ತು. ಒಳಗೆ ಮೀನು ಚೊಳ್ ಚೊಳ್ ಎಂದು ಸದ್ದು ಮಾಡುತ್ತಿದ್ದವು. ಕೆಲವು ಕೊಣೆಯ ಒಳ ಪಕ್ಕಕ್ಕೆ ಹಾರಿ ಬಡಿದು ಬೀಳುತ್ತಿದ್ದವು. ಸುಬ್ಬ ಕೊಣೆಯನ್ನು ಎತ್ತಿ ಅಂಚಿನ ಮೇಲೆ ಇಟ್ಟನು. ಇಟ್ಟು ಬುಟ್ಟಿಯನ್ನು ಈಚೆಗೆ ತೆಗೆದನು.

ಒಡನೆಯಾ ಮೀನು ತಿನ್ನಲೆಂದು ಬಂದು ಅದರೊಳಗಿದ್ದ ಒಂದು ಕೃಷ್ಣಸರ್ಪ ಬುಸ್ಸೆಂದು ಸುಬ್ಬನನ್ನು ಕಚ್ಚಿ ಓಡಿಹೋಯಿತು. ಅಷ್ಟು ಹೊತ್ತಿಗೆ ಗಾಳಿ ಮಳೆ ಸ್ವಲ್ಪ ಶಮನವಾಗಿದ್ದುದು ಸುಬ್ಬ ಕಿಟ್ಟನೆ ಚೀರಿದನು. ವಿಷವೇರಿ ಕೆಳಗೆ ಬಿದ್ದನು. ನೀರು ಬೋರೆಂದು ಹರಿಯುತ್ತಿತ್ತು.

ಬೆಳಗಾದ ಮೇಲೆ ಗೌಡರು ಸುಬ್ಬ ಬಾರದಿದ್ದನ್ನು ನೋಡಿ ಬಹಳ ರೇಗಿದರು. ರಾತ್ರಿ ಕೋಣೆಗೆ ಹೋಗದೆ ಮನೆಯಲ್ಲಿಯೇ ಎಲ್ಲಿಯೂ ಅಡಗಿರಬೇಕೆಂದು ಕೈಯಲ್ಲಿ ದೊಣ್ಣೆ ಹಿಡಿದು ಹುಡುಕಿದರು, ಎಲ್ಲಿಯೂ ಸಿಕ್ಕಲಿಲ್ಲ ಮತ್ತು ರೇಗಿದರೂ ಪತ್ತೆ ಹಚ್ಚಲು ಹೊರಟರು ದಾರಿಯಲ್ಲಿ ಗದ್ದೆಯಂಚಿನ ಬಳಿ ಒಡೆದ ಲಾಟೀನು ಬಿದ್ದಿತು. ಅಲ್ಲಿಯೂ ರೇಗಿದರು. "ಅವನು ಸಿಕ್ಕಲಿ ಎಲುಬು ಮುರಿಯುತ್ತೇನೆ" ಎಂದು

ಗರ್ಜಿಸಿದರು. ಮುಂದೆ ಹೋದರು. ಕೊಣೆ ಸಮೀಪವಾಯಿತು. ದೂರದಿಂದಲೇ ಕೊಣೆ ಮಗುಚಿಕೊಂಡು ಅಂಚಿನ ಮೇಲೆ ಬಿದ್ದಿದುದನ್ನು ಕಂಡು" ಅಯ್ಯೋ ಹಾಳು ಬಡ್ಡೀ ಮಗ ಮೀನು ಸಿಕ್ಕಿದಂತೆ ಮಾಡಿದನಲ್ಲಾ! ಎಂದು ಕೊಂಡರು. ಸೊಂಟದೆತ್ತರ ಬೆಳದ ಗದ್ದೆಯ ಕಿವಿಯ ನಡುವೆ ಕೆಸರು ಮೆತ್ತಿಕೊಂಡು ಸುಬ್ಬ ಬಿದ್ದಿದ್ದನು. ಗೌಡರಿಗೆ ಸ್ವಲ್ಪ ಗಾಬರಿಯಾಯಿತು ಕರೆದರು ಓಕೊಳ್ಳಲಿಲ್ಲ, ಏಳಲಿಲ್ಲ, ಅಲುಗಆಡಲಿಲ್ಲ ಜೊತೆ ಬಂದಿದ್ದ ಆಳಿನ ಕೈಯಲ್ಲಿ ಎತ್ತಲು ಹೇಳಿದರು. ಅವನು ಹೋಗಿ ಎತ್ತಿದನು. ಹೆಣ ನಿಮರಿ ನಿಂತಿತು. ಗೌಡರ ಬಹಳ ವ್ಯಸನ ಪಟ್ಟಕೊಂಡು "ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು! ಎಂದು ನಿಡುಸುಯ್ದರು.

ಯಾರು ಅರಿಯದ ವೀರ

ನಾನು ಮೊದಲು ಮಾವಿನಹಳ್ಳಿ ರಂಗೇನಾಯ್ಕರ ಮನೇಲಿದ್ದೆ ಕೆಲಸಕ್ಕೆ ಅಲ್ಲೆ ಐದಾರು ವರ್ಷ ಜೀತ ಮಾಡಿದೆ. ತಿಮ್ಮಯ್ಯ ಏನೂ ಮಾಡೋದೋ ಯಾರ‍್ಯಾರ ಜೊತೆಯಲ್ಲೋ ಸೇರಿಕೊಂಡು ಕಳ್ಳು ಕುಡಿಯೋರು ಕಲಿತೆ. ಒಂದು ದಿನ ಬೈಗಿನ ಹೊತ್ತು, ಕಳ್ಳು ಕುಡಿದೆ ತಲೆಗೇರಿತು ಕಳ್ಳಿನವನು ಏನೋ ಸೇರಿಸಿದ್ದನೋ ಅದಕ್ಕೆ ಅಮಲು ಬರಲಿ ಅಂತ, ದಾರೀಲಿ ಬರ‍್ತಾ ಇದ್ದೆ. ರಂಗೇನಾಯ್ಕರ ಮಗ ಶೇಷನಾಯ್ಕ ಅಂತ ಇದ್ದಾರೆ ಅವರಿಗೂ ಕುಡಿಉಬ್ ತಲೆಗೆ ಅಮಲೇರಿತು. ಎಲ್ಲಿಂದಲೋ ಹಿಂದಿನಿಮ್ದ ಬಂದು ಬಾಯಿಗೆ ಬಂದಂತೆ ಬೈದರು ನನಗೂ ಕುಡಿದ ಮತ್ತಿನಲ್ಲಿ ಬಡೇರ ಮಕ್ಕಳು ಅಂತ ಗೊತ್ತಾಗಲಿಲ್ಲ. ಬಾಯಿಗೆ ಬಂದಂತೆ ಬೈದೆ ಆಮೇಲೆ ಇಬ್ಬರಿಗೂ ಒಡೇರ ಮಕ್ಕಳು ಅಂತ ಗೊತ್ತಾಗಲಿಲ್ಲ ಬಾಯಿಗೆ ಬಂದಂತೆ ಬೈದೆ ಆ ಮೇಲೆ ಇಬ್ಬರಿಗೂ ಮಾರಾಮಾರಿಯಾಗಿ ಅವರಿಗೆ ಪೂರಾ ಪೆಟ್ಟಾಯ್ತು ನನ್ನ ಮೇಲೆ ಪಿರ‍್ಯಾದು ಕೊಟ್ಟರು ನಾನು ಬಡವ ಅವರಿಮ್ದ ಜೈಲಾಯ್ತು.

ಲಿಂಗ ಜೈಲುವಾಸ ಅನುಭವಿಸಿದ ಮೇಲೆ ಅವರ ಸಂಬಂಧಿಕರು ಹಾಗೂ ಅವರ ಊರಿನವರು ಅವನಿಗೆ ಕೆಲಸ ಕೊಡಲಿಲ್ಲ. ಮಗನನ್ನು ಕಟ್ಟಿಕೊಂಡು ಅಲೆದು ಅಲೆದು ಸುಟ್ಟು ಸುಣ್ಣಾಗಿದ್ದೆ, ಕಡೆಗೆ ಯಾರೋ ಶಿವನೂರು ಸುಬ್ಬಣ್ಣಗೌಡರಲ್ಲಿಗೆ ಹೋಗು ಎಂದರು.

ಸಿಡಿಲು ಗುಡುಗು ಮಿಂಚು, ಗಾಳಿ, ಇವುಗಳಿಂದ ರಾತ್ರಿ ಹುಚ್ಚೆದ್ದು ಭೈರವಿಯಾಗಿತ್ತು. ಮನೆಯಲ್ಲಿ ಎಲ್ಲರೂ ಮಲಗಿದ್ದರು ಲಿಂಗ ಸುಬ್ಬಣ್ಣಗೌಡರು ಇಬ್ಬರು ಎಚ್ಚರವಾಗಿ ಜಗಲಿಯ ಮೇಲೆ ಕುಳಿತಿದ್ದರು. ಇಬ್ಬರೂ ಆಗಾಗ್ಗೆ ಹೋಗಿ ಹೊಳ ನೋಡಿಕೊಂಡು ಬರುತ್ತಿದ್ದರು. ಕೆರೆಯ ನೀರು ಬೇಗ ಬೇಗನೆ ಏರುತ್ತಿತ್ತು.

ಲಿಂಗಾದೋಣಿ, ಎಲ್ಲಿ ಕಟ್ಟಿದ್ದೀಯಾ? ಮನೆ ಬಿಡಬೇಕಾಗಿ ಬರಬಹುದು. ಲಿಂಗ ಸ್ವಲ್ಪ ಗಾಬರಿಯಾಗಿ ಆ ಹುಳಿ ಮಾವಿನ ಮರದ ಬೇರಿಗೆ ಕಟ್ಟಿದ್ದೆ ಎಂದು ಹೇಳಿದನು. ಇಬ್ಬರು ಓಡಿ ಹೋಗಿ ನೋಡುತ್ತಾರೆ. ನೀರು ಎಲ್ಲವನ್ನು ಆವರಿಸಿಕೊಂಡಿತ್ತು. ನಂತರ ಮನೆಯಲ್ಲಿ ಶಬ್ಧವಾಯಿತು. ಬಂದು

ನೋಡಿದರೆ ಮನೆಯ ಹಿಂಭಾಗದ ಗೋಡೆ ಬಿದ್ದಿತು, ಗೌಡರು ಇದನ್ನು ಅರಿತು ನಾವು ಇಲ್ಲಿ ಇದ್ದರೆ ಅಪಾಯಕ್ಕೆ ಸಿಕ್ಕ ಹಾಗಬೇಕಾಗುತ್ತದೆ ಎಂದು ತಿಳಿದಿದ್ದರು.

ಕೋಣೆ ಕೋಣೆಗೆ ನುಗ್ಗಿ ಮನೆಯವರನ್ನೆಲ್ಲಾ ಉಬ್ಬಿಸಿದರು. ಅವರೆಲ್ಲಾ ಅರೆ ನಿದ್ದೆಯಲ್ಲಿ ಗಾಬರಿಯಿಂದ ಜಗಲಿಗೆ ನುಗ್ಗಿದರು. ಗೌಡರು ಅವರಿಗೆ ಗಾಬರಿ ಪಡಬೇಡಿ ಎಂದು ಸಮಾಧಾನ ಹೇಳಿ ಲಿಂಗನಿಗಾಗಿ ಸುತ್ತಲೂ ನೋಡಿದರು. ಲಿಂಗಾ ಎಂದು ಕೂಗಿದರು, ಲಿಂಗಾ ಅಲ್ಲಿ ಇರಲಿಲ್ಲ ಆಗ ಮನೆಯವರೆಗೆ ಲಿಂಗಾ ಹುಡುಕಿಕೊಂಡು ಬರುತ್ತಾನೆ ಎಂದು ಹೇಳಿದರು, ಗೌಡರು ಲಿಂಗ ಮಾವಿನ ಮರದ ಕೆಳಗೆ ದೋಣಿಯನ್ನು ಬಿಚ್ಚಿತ್ತು ಅದನ್ನು ತರಲು ಪ್ರಯತ್ನ ಪಡೆದಿದ್ದನು. ಆಗ ಗೌಡರು ಬಂದು ಅವನಿಗೆ ಸಹಾಯ ಮಾಡಿ ದೋಣಿಯನ್ನು ತಂದರು.

ಹೊರ ಅಂಗಳದಲ್ಲಿದ್ದ ತೆಂಗಿನ ಮರ ಮುರಿದು ಮನೆಗೆ ಹೊದಿಸಿದ ಸತುವಿನ ತಗಡುಗಳ ಮೇಲೆ ಬಿದ್ದು ಬಹುದೊಡ್ಡ ಶಬ್ಧವಾಯಿತು. ತಿಮ್ಮು ಸೀತೆ ನಾಗ ಮೂವರು ಕಿಟ್ಟನೆ ಕಿರುಚಿಕೊಂಡರು.

ಲಿಂಗಾದೋಣಿ ಬಾಗಿಲಿಗೆ ತೆಗೆದುಕೊಂಡು ಬಾ, ಬೇಗ ಎಂದು ಹೇಳಿ ಒಳಗೆ ನುಗ್ಗಿದರು. ಎಲ್ಲರನ್ನೂ ದೋಣಿಗೆ ಹತ್ತಿಸಿದರು. ಲಿಂಗ ಹಾಗೂ ಗೌಡರು ತನ್ನ ಒಡವೆಗಳು ಐಶ್ವರ್ಯ, ಎಲ್ಲವನ್ನು ತೆಗೆದುಕೊಂಡು ಹತ್ತಿದರು, ದೋಣಿ ಹೋಗುತ್ತಾ ಹೋಗುತ್ತಾ ಮುಳುಗುವ ಸಮಯ ಬಂದಿತ್ತು. ಅಷ್ಟರಲ್ಲಿ, ಲಿಂಗ, ಕೆಳಕ್ಕೆ ಹಾರಿ ದೋಣಿಯನ್ನು ತಳುದಿದ್ದನು. ನಂತರ ಮೆತ್ತ ಮೆತ್ತ, ಮುಳುಗ್ಳು, ಗೌಡರು, ತನ್ನ ಐಶ್ವರ್ಯದ ಪೆಟ್ಟಿಗೆಯನ್ನು ನೀರಿಗೆ ಹಾಕಿದರು. ನಂತರ ಎಲ್ಲವನ್ನೂ ತಡಕೆ ಸೇರಿಸಿ ಲಿಂಗ ಅವರ ಪ್ರಾಣವನ್ನು ಕಾಪಾಡಿದರು, ಆ ಹುಚ್ಚು ಹೊಳೆಯಲ್ಲಿ ದೋಣಿಯನ್ನು ನಡೆಸಿ, ತನ್ನ ಪ್ರಾಣವನ್ನು ಲೆಕ್ಕಿಸದೆ, ಗೌಡರ ಕುಟುಂಬವನ್ನು ಕಾಪಾಡಲು ಯಾರು ಅರಿಯದ ಬೇರ ಬೆಲಯ ಕುವೆಂಪು ತನ್ನ ಕಾವ್ಯದ ಕೃತಿಯಲ್ಲಿ ನಿರೂಪಿಸಿದ್ದಾರೆ.

ಭದ್ರಾವತಿಯ ದವಾಖಾನೆಯಲ್ಲಿ ಹುಟ್ಟಿತ್ತು. ನೇಗಿಲ ಯೋಗಿ ರೈತಗೀತೆ!

ಕುಪ್ಪಳ್ಳಿಯ ಅಡಕೆ ತೋಟಕ್ಕೆ ಸಿಡಿಲು ಹೊಡೆದ ಘಟನೆಯನ್ನು ಕವಿ ನೆನಪಿನ ದೋಣಿಯಲ್ಲಿ ಸವಿವರವಾಗಿ ಕೊಟ್ಟಿದ್ದಾರೆ. ಅದೊಂದು ದುರ್ಘಟನೆ ಎಂದು ಭಾವಿಸಿದ ಮನೆಯವರು ಅದಕ್ಕೆ ಶಾಂತಿ ಮಾಡಿಸುವ ಕಾರ್ಯಕ್ರಮ ಇಟ್ಟುಕೊಳ್ಳುತ್ತಾರೆ. ಆದರೆ ಕವಿಯ ಪಾಲಿಗೆ ಸಿಡಿಲು ಹೊಡೆಯುವುದು ಬರಿಯ ನಿಸರ್ಗವ್ಯಾಪರ ಮಾತ್ರ ಅದನ್ನು ದೋಷ ಎಂದು ಭಾವಿಸುವುದಾಗಲೀ ಅದಕ್ಕೆ ಪುರೋಹಿತರನ್ನು ಕರೆಸಿ, ಶಾಂತಿ ಮಾಡಿಸುವುದಾಗಲೀ ಮೌಢ್ಯವನ್ನು ಒಪ್ಪಿಕೊಂಡಂತೆಯೇ ಸರಿ. ಸಹಜವಾಗಿ ಕವಿ ಶಾಂತಿ ಮಾಡಿಸುವ ಕಾರ್ಯಕ್ರಮವನ್ನು ವಿರೋಧಿಸುತ್ತಾರೆ. ಅವರ ಬೆಂಬಲಕ್ಕೆ ತರುಣವರ್ಗ ನಿಲ್ಲುತ್ತದೆ. "ಹಾರುವರ ಕೈಯಿಂದ ಪೂಜೆ ಮಾಡಿಸಿ ಸಮಾರಾಧನೆಯ ಊಟ

ಹಾಕಿಸುವುದರಿಂದ ಸಿಡಿಲು ಬಡಿದು ಆಗಿರುವ ನಷ್ಟಕ್ಕೆ ಪರಿಹಾರ ದೊರೆಯುವುದಿಲ್ಲ" ಎಂಬ ಇವರ ವಾದ ಮನೆಯವರ ಮೂಢನಂಬಿಕೆಯ ಎದುರಿಗೆ ಶಕ್ತಿ ಕಳೆದುಕೊಳ್ಳುತ್ತದೆ.

ಕಾರ್ಯಕ್ರಮಕ್ಕೆ ವಿರೋಧವಿದ್ದರೂ ಅಂದು ಮಾಡಿದ್ದ ಊಟಕ್ಕೆ ವಿರೋಧ ಇರಬೇಕಿಲ್ಲವಷ್ಟೇ? ಪುಳಿಚಾರಿನ ಸಿಹಿಯೂಟ ಶೂದ್ರವರ್ಗಕ್ಕೆ ಅಷ್ಟೇನು ಆದರಣೀಯವಲ್ಲದಿದ್ದರು, ನೆಂಟರಿಷ್ಟರ ಜೊತೆ ಸೇರಿ ಕವಿಯೂ ಪಟ್ಟಾಗಿ ಹೊಡೆದುಬಿಡುತ್ತಾರೆ. ಮಿತ್ರರೊಂದಿಗೆ ಸ್ಪರ್ಧಿಸಿ ಹೋಳಿಗೆ ತುಪ್ಪ ಪಾಯಸ ವಡೆ ಮುಂತಾದವುಗಳನ್ನು ಮೀರಿ ತಿನ್ನುತ್ತಾರೆ. ಕವಿಯೇ ಹೇಳುವಂತೆ ಪ್ರಚ್ಛನ್ನ ಯೌವನ ಮದವಶನಾಗಿ' ಆದರೆ ಅದರ ಪರಿಣಾಮ ಮಾತ್ರ ಭೀಕರವಾಗಿತ್ತು. 'ಅಶನಿ'ಗಾಗಿ ಮಾಡಿದ ಶಾಂತಿ 'ಶನಿ'ಯಾಗಿ ಕಾಡಿತು. ನ್ಯೂಮೋನಿಯಾ ರೂಪದಲ್ಲಿ

ಇದೊಂದು ಸಾರ್ವಕಾಲಿಕ ಶ್ರೇಷ್ಠ ಕವಿತೆ 'ಗಾಳಿ ಮತ್ತು ನೀರು' ನಂತರದ ಜೀವ ಚೈತನ್ಯವೇ 'ಅನ್ನ' ಅನ್ನದಾತನಾದ ರೈತನ ಸಾರ್ಥಕತೆಯನ್ನು ಸಾಫಲ್ಯತೆಯನ್ನು ಇಷ್ಟೊಂದು ಸರಳವಾಗಿ ಆದರೆ ಅರ್ಥಪೂರ್ಣವಾಗಿ ಹಿಡಿದಿಟ್ಟ ಕವಿತೆ ಬಹುಶಃ ಮತ್ತೊಂದಿರಲಾರದು. ಸರಳವಾಗಿ ಆದರೆ ಅರ್ಥಪೂರ್ಣವಾಗಿ ಹಿಡಿದಿಟ್ಟ ಕವಿತೆ ಬಹುಶಃ ಮತ್ತೊಂದಿರಲಾರದು.

ಈ ಹಾಡನ್ನು 'ಕಾಮನಬಿಲ್ಲು' ಚಿತ್ರದಲ್ಲಿ ಅಳವಡಿಸಿಕೊಳ್ಳಲಾಗಿತ್ತು. ಡಾ.ರಾಜಕುಮಾರ್ (ಮುತ್ತುರಾಜ್) ನೇಗಿಲು ಹಿಡಿದು ಉಳುಮೆ ಮಾಡುವ ದೃಶ್ಯಕ್ಕೆ ಹಿನ್ನೆಲೆಯಾಗಿ ಮೂಡಿಬಂದ ಈ ಹಾಡಿಗೆ ಸಿ.ಅಶ್ವಥ್ ದನಿಗೂಡಿಸಿದ್ದರು. ಉಪೇಂದ್ರ ಕುಮಾರ್ ಅವರು ಸಂಗೀತ ಸಂಯೋಜಿಸಿದ್ದರು.

ಭದ್ರಾವತಿಯ ನದಿ ದಂಡೆಯಲ್ಲಿದ್ದ ಡಾ.ಚೊಕ್ಕಂ ಅವರ ಆಸ್ಪತ್ರೆಯಲ್ಲಿ ನ್ಯೂಮೋನಿಯಾದಿಂದ ಬಳಲಿ ಬೆಂಡಾಗಿದ ಕವಿಯಿಂದ ಸೃಜಿಸಲ್ಪಟ್ಟು ಹಿಂದೂ ಪತ್ರಿಕೆಯ ಅಂಚಿನಲ್ಲಿ ಚಾಕ್ಷುಕ ರೂಪಕ್ಕಿಳಿದ ಕವಿತೆ ನೇಗಿಲಯೋಗಿ ಇದು ಇಂದು ನಮ್ಮ ರೈತಗೀತೆ.

ಕುಪ್ಪಳಿ ಕವಿ ಮನೆಯ ಹಿಂಬದಿಗೆ ದಿಗಂತ ಮುಖಿಯಾಗಿರುವ ಪರ್ವತವೇ ಕವಿ ಶೈಲ ಕಲೆಯೇ ಕಣ್ಣಿಲ್ಲದವರಿಗೆ ಒಂದು ಕಲ್ಲು ಕಾಡು, ಕಲಾವಂತನಿಗೆ ಸಗ್ಗಬೀಡು ಆಗಿರುವ ಕವಿಶೈಲದ ನಿಜನಾಮ ಅಗ್ಗೆ ದಿಬ್ಬಣಕಲ್ಲು ನಂತರ ಅದರ ಕಾಲದಿಮ್ದಲೇ ಪುಟ್ಟಪ್ಪ ಕುವೆಂಪು ಆದ ಮೇಲೆ ಕವಿ ಶೈಲವೆಂದು ಹೆಸರು ಪಡೆದ ಗಿರಿ. ಅಲ್ಲಿಯ ವಸ್ತುಗಳು ದೃಶ್ಯಗಳು, ಭೂತದಸಿಲೇಜು, ಬೂರುಗದ ಮರ, ನಿಲುವುಗಲ್ಲು, ಸೂರ್ಯೋದಯ ಸೂರ್ಯಾಸ್ತ ಎಲ್ಲವು ಕುವೆಂಪು ಸಾಹಿತ್ಯದಲ್ಲಿ ಸ್ಥಾಯಿಯಾಗಿ ಓದುಗರಲ್ಲಿ ಸಂಚಾರಿಯಾಗಿಬಿಟ್ಟಿವೆ "ಸಿಬ್ಬಲುಗುಡ್ಡೆ" ತೀರ್ಥಹಳ್ಳಿಯಿಂದ ಸುಮಾರು ಎರಡೂವರೆ ಮೈಲಿ ದೂರದಲ್ಲಿ ಮೇಳಿಗೆ ಎಂಬ ಹಳ್ಳಿ ಅಲ್ಲಿಂದ ಒಂದೂವರೆ ಮೈಲಿ ಕಾಡಿನ ಕಾಲುದಾರಿಯಲ್ಲಿ ನಡೆದು ಹೋದರೆ ಸಿಬ್ಬಲುಗುದ್ದೆ ಸಿಕ್ಕುತ್ತದೆ. ಈ ಸ್ಥಳ ಹಳ್ಳಿಯೂ ಅಲ್ಲ. ಊರೂ ಅಲ್ಲ. ಅಲ್ಲಿ ಇರುವುದೊಂದೇ ಕಟ್ಟಡ. ಗುಡಿಸಲಿನಂತೆ ತೋರುವ ಗಣೇಶನಗುಡಿ ಅಲ್ಲಿಯ ಗುಡಿಯ ಅಚನಕಾರ ಮನೆ ಬಿಟ್ಟರೆ ಬೇರೆ

ಮನೆಗಳಿಲ್ಲ ಜನವಿಲ್ಲ (ಈಗ ದೇವಾಲಯ ನಿರ್ಮಾಣವಾಗಿದೆ) ನವಿಲು ಕಲ್ಲಿನಿಂದ ಸಿಬ್ಬಲುಗುದ್ದೆಗೆ ಹೋಗಬಹುದು.

ಗುಡಿಯ ಹಿಂದೆ ನಿಬಿಡ ನಿರ್ಜನಾರಣ್ಯಗಳ ನಡುವೆ ಹರಿಯುವ ತುಂಗೆ ಆಚೆ ದಡದಲ್ಲಿ ತುಸು ಹಳದಿ ಬಣ್ಣದ ಮಳಲ ರಾಶಿ ಅದರಂಚಿನಲ್ಲಿ ಹಚ್ಚಹಸುರಿನ ವನಪಂಕ್ತಿ ಗುಡಿಯ ಹಿಂಭಾಗದ ನೀರಿನಲ್ಲಿ ನಿರ್ಭೀತಿಯಿಂದ ಚಲಿಸುವ ಕಾದು ಮಾವಿನ ಹಣ್ಣು, ನೇರಿಲ ಹಣ್ಣು, ಸೂಣೆಹಣ್ಣು, ಕಲ್ಲುಸಂಪಗೆ ಹಣ್ಣು, ಕಣಗಿಲುಹಣ್ಣು, ಗೋಳಮಟೆ ಹಣ್ಣು, ಇಪ್ಪೆಹಣ್ಣು, ಹೆಬ್ಬಲಸಿನ ಹಣ್ಣು, ಹಲಸಿನ ಹಣ್ಣು, ಕಾರೆಹಣ್ಣು ಮುಂತಾದ ಹಣ್ಣುಗಳ ಮರಗಳನ್ನೇ ನೋಡಬಹುದು.

ಗುಲಾಬಿ

ಯಾರೂ ನೋಡದ ಯಾರಿಗೂ ಬೇಡದ

ಹೂದೋಟದ ಈ ಮಾಲೆಯಲಿ

ನೋಡಿದೋ ಬಂದೆ ಗುಲಾಬಿಯ ಹೂವಿದೆ

ಸ್ವರ್ಗ ಸುಮ್ದರಿಯ ಲೀಲೆಯಲಿ

ಹೂವಿನ ಚೆಲುವಿಂದೇ ಮರುಭೂಮಿ

ನಾದನವಾದಂತರೆ, ಕವಿ, ಕಾಮಿ

ಜಡಿಮಳೆ

ಮುಸಲ ವರ್ಷಧಾರೆ

ಮುಗಿಲಿನಿಂದ ಸೋರೆ

ಕುಣಿವ ನವಿಲು ನನ್ನ ಮನಂ

ನಲ್ಮೆಯುಕ್ಕಿ ಮೊರೆ

ಹಸುರು

ಹೊಸ ಹೂವಿನ ಕಂಪು ಹಸರು

ಎಲರಿನ ತಂಪೂ ಹಸುರು

ಹಕ್ಕಿಯ ಕೊರಲಿಂಪು ಹಸುರು

ಹಸುರು ಹಸುರಿಳೆಯುಸಿರೂ

ಮುಂಗಾರು

ಬುಸುಗುಟ್ಟಿತು, ಬೀಸಿತು ಬಿರುಗಾಳಿ
ಸುತ್ತಲು ಮುತ್ತಿತು ಕಾರ್ಮೋಡ
ಹರಿಯುವ ಹಾವಿನ ಲೆರದಲಿ ಕತ್ತಲೆ ಮೆಲ್ಲನೆ
ನುಂಗಿತು, ಮಲೆನಾಡ

ಪಡುವಲ ಕಡಲಿನ ಮಿಂಚನು ಗುಡುಗನು ನುಂಗಿ ಬಸಿರಿನಲಿ, ಮುಡಿಗೆದರಿ ಮುಂಗಾರು ಸುರಿಯು ರಕ್ಕಸವಜ್ಜೆಗಳಿಕ್ಕುತ್ ಬಂದಳು ಬದಗದಂ

ಗುಟುರನು ಹಾಕಿತು ಮುಂಗಾರ್ ಗೂಳಿ!
ಘೀಳಿಬ್ಬೊರಲಿತು ಘನಘಟೆಯೊಳಿ!

ಹೊಲದ ಹುಡುಗಿ

ಹೊಲದೊಳಗೊಬ್ಬಳೆ ಹಳದಿಯ ಪಯಿರನು
ಕೊಯ್ಯುವ ಬಾಲೆಯ ನೋಡಲ್ಲಿ
ತನ್ನೊಳು ತಾನು ಹಾಡುತ ನಲಿವಳು
ಮೆಲ್ಲಡಿಯಿಡು ಬಾ, ನಿಲ್ಲಿಲಿ
ಒಬ್ಬಳೇ ಕೊಯ್ವಳು ಹೊರೆಯನು ಮಾಡಿ
ಎದೆಯನು ಸೆಳೆಯುವ ಹಾಡನು ಹಾಡಿ
ಆಲಿಸು ! ಸದ್ದಿಲಿ ಕಣಿಟಿಯ ಪೆಂಪು
ಹೆಚ್ಚಲು ಹರಿವುದು ಗಾನದ ಇಂಪು

ನೇಗಿಲ ಯೋಗಿ

ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ
ಫಲವನು ಬಯಸದ ಸೇವೆಯ ಪೂಜೆಯು
ಕರ್ಮವೇ ಇಹಪರ ಸಾಧನವು

ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿನಿಯಮದೊಳಗವನೇ ಭೋಗಿ
ಲೋಕದೊಳೇನೇ ನಡೆಯುತಲಿರಲಿ
ತನ್ನೀ ಕಾಯುವ ಬಿಡನೆಂದೂ
ರಾಜ್ಯಗಳು ದಿಸಲಿ ರಾಜ್ಯಗಳಳಿಯಲಿ
ಹಾರಲಿ ಗದ್ದುಗೆ ಮಕುಟಗಳು
ಮುತ್ತಿಗ್ ಎಹಾಕಲಿ ಸೈನಿಕರೆಲ್ಲ
ಬಿತ್ತುಳುವುದನವ ಬಿಡುವುದೆ ಇಲ್ಲ
ಬಾಳಿತು ನಮ್ಮಿ ನಾಗರಿಕ್ತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು
ನೇಗಿಲ ಬಲದೊಳು ವೀರರು ಮೆರೆದರು
ಶಿಲ್ಪಗಳೆಸೆದರು, ಕವಿಗಳು ಬರೆದರು.
ಯಾರೂ ಅರಿಯದ ನೇಗಿಲ ಯೋಗಿಯ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖ ಕೆಳಸದೆ
ದುಡಿವನು ಗೌರವಕಾಶಿಸದೆ
ನೇಗಿಲ ಕುಳದೊಳಗಡಗಿದೆ ಕರ್ಮ
ನೇಗಿಲ ಮೇಲೆಯೆ ನಿಂತಿದೆ ಧರ್ಮ

ಸುಗ್ಗಿಹಾಡು

ಬನ್ನಿರಿ ಬನ್ನಿರಿ, ಮಣ್ಣಿನ ಮಕ್ಕಳೆ,
ರೈತ ನೇಗಿಲ ಯೋಗಿಗಳೆ!

ಕಾಡಿನ ಬಂಟರೆ, ಮುಗಿಲಿನ ನಂಟರೆ,
ಪೈರಿನ ಗೆಳೆಯರೆ, ಭೋಗಿಗಳೆ!
ಸುಗ್ಗಿಯ ಹಬ್ಬದ ಹಾಡನು ಹಾದಿ
ಸುಗ್ಗಿಯ ಸೊಬಗಿನ ಕುನಿತವ ಮಾಡಿ
ಬನ್ನಿರಿ ಬನ್ನಿರಿ ಹೊಳೆಗಳ ಗೆಳೆಯರೆ,
ಭೂಮಿಯು ಹಾಡಿದ ಗೀತೆಗಳೆ
ತೆಂಕಣ ಗಾಳಿಯು ಬೀಸುತಿದೆ
ತೆನೆಗಳ ಕಂಪನು ಸೂಸುತಿದೆ
ಹೊನ್ನಿನ ಹೊಲಗಳು ಮರೆಯುತಿವೆ
ಚಿನ್ನದ ತೆನೆಗಳು ಕರೆಯುತಿವೆ
ಸೊಬಗಿನ ಸುಗ್ಗಿಗೆ ಸ್ವಾಗತವೀಯಲು
ಚೋರೆಯು ಲಾವ್ಗೆ, ಕೋಗಿಲೆ, ಗಿಣಗಳು
ಕನಸಿನ ಪದಗಳ ಹಾಡುತಿವೆ.
ಚಿಗುರಿನ ಹಸುರಿನ ವಸನವ ಹೊದೆದು
ಹೂವಿನ ಮೊಗ್ಗಿನ ಬೆಡಗನು ತಳೆದು
ಬನಗಳು ನಲಿನಲಿದಾಡುತಿವೆ
ಸುಗ್ಗಿಯ ಹಾಡುತ ಕುಣಿಯುತ ಬನ್ನಿ
ಮಣ್ಣಿನ ಮಕ್ಕಳಿರ
ಹಿಗ್ಗುತ ಸುಗ್ಗಿಯ ಸಗ್ಗವ ತನ್ನಿ
ನೆಲಸಿರಿಯೊಕ್ಕಲಿರ

ದೊಡ್ಡದೊಡ್ಡ ಮೀನುಗಳು ಈ ದೇವರ ಮೀನುಗಳನ್ನು ಯಾರು ಹಿಡಿಯುವುದಿಲ್ಲ. ಅವು ವಿಷ್ಲೇಷನ ರಕ್ಷೆಯಲ್ಲಿ ಬೆಳೆದು ವಿಹರಿಸುತ್ತಿವೆ. ಮಲೆನಡುವಣ ಹೊಳೆಯ ಸೊಬಗುದಾಣ ಸಿಬ್ಬಲುಗುಡ್ಡೆಯನ್ನು ವರ್ಣಿಸಲಾಗಿದೆ.

ಹಸುರು, ಹಸುರು, ಸೊಂಪು:

ಹೆಸರಿಲ್ಲದ ತಂಪು:

ತನಗೆ ತಾನೇ ಇಂಪು:

ಇಲ್ಲ ಬೇರೆ ಪೆಂಪು:

ಅಲ್ಲಿ ಬರೀ ಕುವೆಂಪು:

ಹೀಗೆ ಹಸುರತ್ತಲ್ ಹಸುರಿತ್ತಲ್ ಹಸುರೆತ್ತಲ್ ಎಂದು ಸದಾಹಸುರಿಗಾಗಿ ತುಡಿಯುವ ಕವಿಗೆ ತನ್ನ ಮನೆಯ ಉದ್ಯಾನವನದ ಹಸುರು ನಿತ್ಯೋತ್ಸವ ಸರ್ವದಾ ಅಪೇಕ್ಷಣೀಯ ಉದಯ ರವಿಯ ಉದ್ಯಾನವನದಲ್ಲಿ ನಾನಾ ಜಾತಿಯ ಗಿಡ, ಮರ ಹೂ ಗಿಡಗಳು ಇದ್ದವು. ಅವೆಲ್ಲದರ ಜೊತೆಗೆ ಉದ್ಯಾನದ ಎರಡೂ ಕಡೆ ವಿಶಾಲವಾದ ಹುಲ್ಲುಹಾಸನ್ನು ಬೆಳೆಸಲಾಗಿತ್ತು.

ಅಲ್ಲಿ ಪಂಕ್ತಿ ಸೂರ್ಯಕಾಂತಿ: ಇಲ್ಲಿ ಪನ್ನೇರಿಳೆ

ಅಲ್ಲಿ ಹೊಂಗುಲಾಬಿ ಹಂತಿ: ಇಲ್ಲಿ ಚಿನ್ನವೂ ಮಳೆ

ಇಲ್ಲಿ ಕೆಂಪು: ಅಲ್ಲಿ ಹಳದಿ: ಹಸಿರು, ಪಚ್ಚೆ, ನೀಲಿ

ಹೊಸತೆ ಬಂತೊ ತಾಯ ಹರಕೆ ಹೂವ ರೂಪ ತಾಳಿ!

ಹೂವು! ಹೂವು! ಹೂವು! ಹೂವು! ಉಸಿರು ಬಡಲು ಎಲ್ಲ ಹೂವು! ಎಂದು ಹೂವಿನ ಬಗ್ಗೆ ಹಾಡಿರುವ ಕವಿತೆ, ಹೂವಿನ ತೋಟದಲ್ಲಿ ಪುಷ್ಪಸಮಾಧಿ! ಪುಷ್ಪಸಮಾಧಿ ಎಂದಿದ್ದರೂ, ಇಲ್ಲಿ ರಸಸಮಾಧಿಯಲ್ಲಿ ಮುಳುಗುವುದು ಕವಿಯೆ! ಒಂದೊಂದು ಬಣ್ಣದ ಹೂವನ್ನು ಧ್ಯಾನಿಸುವಾಗಲೆಲ್ಲಾ ಕವಿಯೂ ಆ ಬಣ್ಣದೊಳಗೆ ಮುಳುಗಿ ಬಿಡುತ್ತಾರೆ.

ಮನೆಯ ಉದ್ಯಾನವನದಲ್ಲಿ

ಅಗೆದಗೆದು ಹಸನು ಮಾಡಿದ ಈ ಮಣ್ಣಿನಲಿ

ನೀರು ಗೊಬ್ಬರವಿಟ್ಟು

ಗೆಡ್ಡೆನಟ್ಟು

ಮೂಡಿದೀ ಡಾಲಿಯಾ ಗಿಡದ ಹಸುರು ಕೈಯಲ್ಲಿ

ಕುವೆಂಪು ಕಾವ್ಯಯಾನ, ಡಾ. ಬಿ.ಆರ್.ಸತ್ಯನಾರಾಯಣ

ಕಟ್ಟ ಕಡೆಯಲಿ ದೇವರ ಗುಡಿಯಲಿ

ಪೂಜಾರಿಯೆ ದಿಟದ ನಿವಾಸಿ
ದೇವರೆ ಪರದೇಶಿ!
ಕಲ್ಲು ರೊಟ್ಟಿಯಾದರೆ ಮಾತ್ರ ಅದು ಪವಾಡವೇನು?
ಕಲ್ಲು ಕಲ್ಲಾಗಿರುವುದೇ ಮಹತ್ತರ ಪವಾಡವಲ್ಲವೇನು?
ಮನೆ ಮನೆಯಲಿ ನೀನಾಗಿಹೆ ಗೃಹಶ್ರೀ
ಹೆಸರಿಲ್ಲದ ಹೆಸರು ನಿನಗೆ ಗೃಹಸ್ತ್ರೀ
ಪೂಜಿಸುವರೆಲ್ಲರೂ ಪೂಜ್ಯರೆನಗೆ
ಪೂಜ್ಯರನು ಪೂಜಿಸುವುದೂ ಪೂಜೆ ನಿನಗೆ
ಎಲ್ಲಿಯೂ ನಿಲ್ಲದಿರು ಮನೆಯನೆಂದೂ ಕಟ್ಟದಿರು
ಕೊನೆಯನೆಂದೂ ಮುಟ್ಟದಿರು ಓ ಅನಂತವಾಗಿರು
ಶಿವನ ಕಾಣಲು ನೀನು ಗುಡಿಗೆ ಹೋಗುವೆಯೇನು
ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ
ಶಿವನ ಕಾಣೆಯ ನೀನು?

ಅಧ್ಯಾಯ – ೫

ಕುವೆಂಪು ಅವರ ಕಾದಂಬರಿಗಳು: ಸ್ಥೂಲ ನೋಟ (ಪರಿಚಯ)

ಕಾದಂಬರಿಕರನ ಸಮಾಜ ವ್ಯಕ್ತಿಗಳ ಬಾಳಿನೊಂದಿಗೆ ಹಾಸುಹೊಕ್ಕಾಗಿ ಬೆರೆತ ಚೌಕಟ್ಟು ಕುವೆಂಪುರವರ ಎರಡು ಕಾದಂಬರಿಗಳೂ ಪುಟಗಳ ಸಂಖ್ಯೆಯಿಂದಲ್ಲದೆ, ಅಂತಃಸತ್ವದ ದೃಷ್ಟಿಯಿಂದಲೂ ಬೃಹತ್ತಾದವು ಇವು ನಿಜವಾಗಿಯೂ ಸಾಮಾಜಿಕ ಹಾಗೂ ಪ್ರಾದೇಶಿಕ ಕಾದಂಬರಿಗಳು, ಮೂವತ್ತು ವರ್ಷಗಳ ಹಿಂದಿನ ಮಲೆನಾಡಿನ ಜೀವನವೇ ಇವುಗಳಲ್ಲಿ ಪ್ರತಿಬಿಂಬಿತವಾಗಿದ್ದರೂ ಕಾಲ ದೇಶಗಳನ್ನೇ ಮೀರಿ ನಿಲ್ಲುವಂತಹದ್ದು, ಎರಡು ಪಾತ್ರಗಳಿಂದ ಕಿಕ್ಕಿರದ ಕಾದಂಬರಿಗಳು.

'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಹೂವಯ್ಯನ ಪಾತ್ರದಲ್ಲಿ ವಸ್ತುನಿಷ್ಠತೆ ಕಾಣಬರುತ್ತಿಲ್ಲ ಎಂಬುದಕ್ಕೆ ಕೆಲವರು ಎತ್ತಿರುವ ಪ್ರಮುಖ ಆಕ್ಷೇಪಗಳಲ್ಲಿ ಅವನು, ಕಾನೂರು ಲೋಕಕ್ಕೆ ಭಿನ್ನವಾಗಿರುವುದು ಹಾಗೂ ಅವನ ಪಾತ್ರದಲ್ಲಿ ಭಾವುಕವಾದ ಪ್ರವೃತ್ತಿ ಮತ್ತು ಆಧ್ಯಾತ್ಮಿಕ ಧೋರಣೆಗಳು ಥಳಥಳ ಹೊಳೆಯುತ್ತಿರುವುದು. ಆತ ಮೂಲತಃ ಕಾನೂರಿನಲ್ಲಿಯೇ ಹುಟ್ಟಿ ಬೆಳೆದವನಾದರೂ, ಅದರ ಮಡಿಲಲ್ಲೇ ತನ್ನ ಬಾಲ್ಯ ಬದುಕನ್ನು ಅನುಭವಿಸಿರುವನಾದರೂ ತನ್ನ ವಾಸ್ತವ ಬದುಕನ್ನು ರೂಪಿಸಿಕೊಂಡಿದ್ದು ಹಾಗೂ ಮನಃ ಪರಿಪಾಕವನ್ನು ಕಂಡುಕೊಂಡದ್ದು ತನ್ನ ವ್ಯಾಪ್ತ ಓದಿನಲ್ಲಿ ಎಂದು ಹೇಳಬಹುದು.

ಮೊದಲಿನಿಂದ ಕೊನೆಯವರೆಗೂ ಹೆಚ್ಚು ಕಡಿಮೆ ಎಲ್ಲವೂ ಭಾವದ ಒಂದು ಮಟ್ಟದಲ್ಲಿ ಮುಂದುವರೆಯುತ್ತದೆ. ಒಲ್ಲದ ಮದುವೆಗಳಿಂದ ಪಾರಾದ ಇಬ್ಬರು ಮದುಮಕ್ಕಳು ಮನೆಗಳಿಂದ ಹೊರಬಿದ್ದು, ರಾತ್ರಿಯ ಕಡುಗತ್ತಲಲ್ಲಿ ಹುಲಿಕಲ್ಲು ನೆತ್ತಿಯನ್ನು ತಲುಪುತ್ತಾರೆ. ಈ ಎರಡು ಸಮಾನ ಸನ್ನಿವೇಶಗಳು ನವಿರಾಗಿ ಕುತೂಹಲಕಾರಿಯಾಗಿ ಬೆಳೆಯುತ್ತದೆ.

ಕಾನೂರು ಕಾದಂಬರಿಯಲ್ಲಿ ಪರಿಸರ ಪಾತ್ರ ಮತ್ತು ಅವುಗಳ ಅಕ್ರಿಯೆಗಳು. ಮೂರು ಒಂದರಿಂದೊಂದನ್ನು ಬೇರ್ಪಡಿಸಲಾಗದಂತೆ ಮುಪ್ಪುರಿಗೊಂಡು ನಿಂತಿವೆ. ಕಾದಂಬರಿ ಪಾತ್ರಗಳ ಕಥೆಯಾಗಿದ್ದಷ್ಟು ಪರಿಸರದ ಕಥೆಯೂ ಆಗಿದೆ. ಒಂದು ಕಡೆಗೆ ಕಾಡು, ಇನ್ನೊಂದು ಕಡೆಗೆ ಮನುಷ್ಯ ಇದಕ್ಕೆ ಸಂವಾದಿಯಾಗಿ ಒಂದು ಕಡೆಗೆ ಅರಣ್ಯಕ ಪ್ರವೃತ್ತಿಗಳಾದರೆ, ಇನ್ನೊಂದು ಕಡೆಗೆ ಮಾನವೀಯ ಮೌಲ್ಯಗಳು ಇವನ್ನು ಪ್ರತಿನಿಧಿಸುವಂತೆ ಒಂದು ಕಡೆಗೆ ಚಂದ್ರಯ್ಯಗೌಡರು ಮತ್ತು ಸಿಂಗಪ್ಪಗೌಡರಾದರೆ ಇನ್ನೊಂದು ಕಡೆಗೆ ಹೂವಯ್ಯ ಮತ್ತು ಶಾಮಯ್ಯಗೌಡರು ಈ ರೀತಿಯ ಸುವ್ಯವಸ್ಥಿತವಾದ ಒಂದು ಕ್ರಮದಲ್ಲಿ ಕಾದಂಬರಿಯಲ್ಲಿ ಪರಿಸರ ಪಾತ್ರ ಮತ್ತು ಕ್ರಿಯೆಗಳ ವಿನ್ಯಾಸ ಏರ್ಪಟ್ಟಿರುವುದರಿಂದ ಕಥಾನಕದ

[illegible]

ರಚನೆ ಅಚ್ಚುಕಟ್ಟಿನದಾಗಿ ನೇರವಾದ ಅನಿವಾರ್ಯವಾದ ದಾರಿಯಲ್ಲಿ ಮುನ್ನಡೆಯುತ್ತದೆ. ತೀವ್ರವಾದ ಪರಿಣಾಮವನ್ನು ಸಾಧಿಸುತ್ತದೆ.

ಎರಡೂ ಕಾದಂಬರಿಗಳು ಮಲೆನಾಡ ಪರಿಸರವೇ ಬಳಸಿಕೊಂಡಿವೆ. ಮೊದಲನೆಯದು ತೀರ್ಥಹಳ್ಳಿಯ ಹತ್ತಿರದ ಕಾನೂರಿನ ಸಮೀಪದ ಒಂದೆರಡು ಹಳ್ಳಿಗಳಾದರೆ, ಎರಡನೆಯವರಲ್ಲಿ ಮೇಗರವಳ್ಳಿಯ ಆಸುಪಾಸಿನಲ್ಲಿಯೇ ನಾಲ್ಕಾರು ಹಳ್ಳಿಗಳ ಸುತ್ತಲಿನ ಪ್ರಕೃತಿ ವೈಭವ ಜೀವಂತವಾಗಿ ಚಿತ್ರಿತವಾಗಿದೆ. ಕಾದಂಬರಿಗಳು ಈ ಭೂ ಪ್ರದೇಶದಲ್ಲಿಯೇ ನಿಬಿಡವಾದ ಕಾಡುಮೇಡುಗಳು ಹೊಳೆಹಳ್ಳಗಳು ಅಲ್ಲಿಯ ಪ್ರಾಕೃತಿಕ ಸ್ವರೂಪದ ನಿಕಟ ಪರಿಚಯವನ್ನು ಮಾಡಿಕೊಡುತ್ತವಲ್ಲದೆ, ಅಲ್ಲಿ ಬದುಕುವ ಜನರ ನಿತ್ಯ ಹೋರಾಟದ ಬದುಕಿನ ನೂರಾರು ವಿವರಗಳನ್ನು ತಿಳಿಸಿಕೊಡುತ್ತವೆ.

ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿಯ ಕಾಡುಮೇಡುಗಳು ಹೆಚ್ಚು ರುದ್ರಭೀಷಣವಾಗಿದ್ದಂತೆ ಭಾಸವಾಗುತ್ತದೆ. ಚಂದ್ರಯ್ಯಗೌಡರ ಮನೆ ಕಿಕ್ಕಿರಿದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ಮಹಾವಟವೃಕ್ಷದ ಬುಡದಲ್ಲಿ ಎದ್ದಿರುವ ಹುತ್ತದ ನೆನಪು ತರುವಂತೆ ಏಕಾಂತವಾಗಿತ್ತು.

ಇದಕ್ಕೆ ಪ್ರತಿಯಾಗಿ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹುಲಿಕಲ್ಲು, ನೆತ್ತಿ ಮತ್ತು ಕೆಲಮಟ್ಟಿಗೆ ದಾರಿಯಲ್ಲಿಯ 'ಚಿತ್ತದ ಸರ'ವನ್ನು ಬಿಟ್ಟರೆ ಕಾಡಿನ ನಿಬಿಡತ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವುದಿಲ್ಲ.

ತಿಮ್ಮಯ್ಯನ್ನು ಕರೆದುಕೊಂಡು ಕಲ್ಲುಮಂಟಪಕ್ಕೆ ಹೋಗುತ್ತಿದ್ದಾಗ ಗುತ್ತಿ ಎದುರಿಸಿದ ಕಾಡು ಪ್ರಾಣಿಗಳ ನುಗ್ಗಲನ್ನು ಹೊರತುಪಡಿಸಿದರೆ, ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದಂತೆ ಭೀಕರ ಸನ್ನಿವೇಶಗಳು ಕಂಡುಬರುತ್ತದೆ.

ಎರಡೂ ಕಾದಂಬರಿಗಳಲ್ಲಿ ಎದ್ದು ಕಾಣುವ ಪಾತ್ರ ಸೃಷ್ಟಿಯ ವೈವಿಧ್ಯ ಹಾಗೂ ಜೀವಂತಿಕೆ ಅಚ್ಚರಿಗೊಳಿಸುವಂತಹವು ಎಲ್ಲಾ ಬಗೆಯ ಎಲ್ಲಾ ವಯಸ್ಸಿನ ಎಲ್ಲಾ ಸ್ತರಗಳ ಜನಗಳಿದ್ದಾರೆ ಒಬ್ಬರಂತೆ ಇನ್ನೊಬ್ಬರಿಲ್ಲ ತಮ್ಮ ತಮ್ಮ ಸ್ವಭಾವ ಸತ್ವಗಳಿಗನುಗುಣವಾಗಿ ವ್ಯವಹರಿಸುವ ಪಾತ್ರಗಲ ಕ್ರಿಯೆಯೇ ಕಥೆಯಾಗಿ ರೂಪುಗೊಳ್ಳುತ್ತದೆ.

'ಮಲೆಗಳಲ್ಲಿ'ಯ ಪಾತ್ರ ವೈವಿಧ್ಯ ಜೀವನದ ವೈವಿಧ್ಯದ ಕಲ್ಪನೆಯನ್ನು ತಂದುಕೊಡುತ್ತದಾದರೂ ಕಾದಂಬರಿಯನ್ನು ಒಂದು ಕಲಾಕೃತಿ ಎಂಬ ದೃಷ್ಟಿಯಿಂದ ನೋಡಿದಾಗ ಅದರಲ್ಲಿ ಚಂದ್ರಯ್ಯಗೌಡ ಅಥ್ವಾ ಹೂವಯ್ಯನ ಎತ್ತರದ ಪಾತ್ರಗಳಿಲ್ಲದಿರುವುದರಿಂದ ಕಾದಂಬರಿಯ ಒಟ್ಟು ಪರಿಣಾಮ ಚದುರಿ ಹೋಗುತ್ತದೆ. ಹೂವಯ್ಯ ಮತ್ತು ಚಂದ್ರಯ್ಯಗೌಡರ ಏಳುಬೀಳುಗಳಲ್ಲಿ ಕಾದಂಬರಿಕಾರರ ದೃಷ್ಟಿ ಕೇಂದ್ರಿತವಾಗಿದ್ದರಿಂದ ಅವರಿಬ್ಬರು ಓದುಗನ ಆಸಕ್ತಿಗೂ ಕೇಂದ್ರವಾಗುತ್ತಾರೆ.

ತನ್ನಲ್ಲಿಯೇ ದುಷ್ಟ ವೃತ್ತಿಗಳಿಗೆ ತಾನೇ ಬಲಿಯಾಗುವ ಚಂದ್ರಯ್ಯನ ಸಾವಿನ ಸನ್ನಿವೇಶದಲ್ಲಿ ಹಾಗೆಯೇ ಅವನಿಮ್ದುಗಿಯೇ ಕಷ್ಟ ಪರಂಪರೆಗೆ ಸಿಲುಕಿಕೊಂಡು ದುರಂತಕ್ಕೀಡಾಗುವ ಸುಬ್ಬಮ್ಮನ ಕೊನೆಯಲ್ಲಿ ಕಾದಂಬರಿ ಒಂದು ತೀವ್ರವಾದ ಭಾವೋಜ್ವಲವಾದ ಪರಾಕಾಷ್ಠೆಯ ಸನ್ನಿವೇಶವನ್ನು ತಲುಪಿದಂತೆ ಮಲೆನಾಡ ಜೀವನದ ಚಿತ್ರವನ್ನು ಕೊಡುವುದು ಕಾನೂರು ಕಾದಂಬರಿಯ ಮೂಲೋದ್ದೇಶವಾಗಿದ್ದರೆ, ಮನುಷ್ಯ ವ್ಯಾಪಾರಗಳ ಜಟಿಲ ಅಂತರ್ ಸಂಬಂಧಗಳನ್ನು ಗುರುತಿಸಿ ಬದುಕಿನಲ್ಲಿಯ ಬೆಳವಣಿಗೆಗಳ ಚಿತ್ರ ವಿಚಿತ್ರ ಗತಿಯನ್ನು ಚಿತ್ರಿಸುವುದು ಮಲೆಗಳಲ್ಲಿ ಮದುಮಗಳ ಕಾದಂಬರಿಯ ಉದ್ದೇಶವಾಗಿದೆ.

ಮೈಸೂರಿನಿಂದ ಬೇಸಿಗೆ ರಜಾಕ್ಕೆ ಹಿಂದಿರುಗಿದ ಹೂವಯ್ಯ ತುಂಗಾನದಿ ದಾಟಿದ ನಂತರ ರಾಮಯ್ಯ ಮುಂತಾದವರೊಂದಿಗೆ ಗಾಡಿಯಲ್ಲಿ ಹೋಗುತ್ತಿದ್ದಾಗ ಗಾಡಿಬಿದ್ದು. ಆತನ ಬೆನ್ನಿಗೆ ಟ್ರಂಕು ತಗುಲಿ ನೋವಾಗಿ ದಾರಿಯಲ್ಲಿ ಸಿಕ್ಕಿದ ನೆಂಟರ ಮನೆ ಮುತ್ತಳ್ಳಿಯಲ್ಲಿ ಉಳಿದುಕೊಂಡಿದ್ದಾರೆ. ಶ್ಯಾಮಯ್ಯಗೌಡರಿಂದ ದುಡ್ಡು ಬರಮಾಡಿಕೊಳ್ಳುವ ಉದ್ದೇಶದಿಂದ ಅಲ್ಲಿಗೆ ಜೋಯಿಸರು ಬರುತ್ತಾರೆ.

ಈ ಕಾದಂಬರಿಯಲ್ಲಿ ಸಂಪ್ರದಾಯಕ್ಕೂ ಆಧುನಿಕತೆಗೂ ಘರ್ಷಣೆ ಉಂಟಾಗುತ್ತದೆ. ಹಿರಿಯರಾದ ಸಿಂಗಪ್ಪಗೌಡರು, ಶ್ಯಾಮಯ್ಯಗೌಡರು ಜೋಯಿಸರ ಪರವಾದಿಸುತ್ತಾರೆ. ಕಿರಿಯರಾದ ರಾಮಯ್ಯ ಮತ್ತು ಚಿನ್ನಯ್ಯ ಹೂವಯ್ಯನನ್ನು ಬೆಂಬಲಿಸುತ್ತಾರೆ. ಇದು ಅವಿಚಾರಕ್ಕೂ ಸುವಿಚಾರಕ್ಕೂ ನಡೆಯುವ ತಿಕ್ಕಾಟ, ಮುಪ್ಪು ಮತ್ತು ಯೌವ್ವನಗಳ ನಡುವಿನ ನಿರಂತರ ಘರ್ಷಣೆ ಸಂಕೇತ. ಇದು ಹೊಸ ಜನಾಂಗ ಹಳೆಯ ಜನಾಂಗದಮೇಲೆ ವಿಜಯ ಸಾಧಿಸುವುದನ್ನೂ ಕಾದಂಬರಿ ವೈಭವೀಕರಿಸುತ್ತದೆ.

ಕಾನೂರು ಚಂದ್ರಯ್ಯಗೌಡರು ಮುತ್ತಳ್ಳಿ ಶ್ಯಾಮಯ್ಯಗೌಡರು ಸೀತೆ ಮನೆ ಸಿಂಗಪ್ಪಗೌಡರು ಕೆಳನೂರು ಅಣ್ಣಯ್ಯಗೌಡರು ಮುಂತಾದ ಮೇಲುವರ್ಗಕ್ಕೆ ಸೇರಿದ ಜನರಿಂದ ಹಿಡಿದು ಅತ್ಯಂತ ಕೆಳವರ್ಗದ ಮಂದಿಯವರೆಗೂ ವೆಂಕಟಪ್ಪಯ್ಯ ಜೋಯಿಸರ ಪ್ರಭಾವ ತಾನೇತಾನಾಗಿ ಪ್ರಬಲವಾಗಿ ಹರಡಿಕೊಂಡಿದೆ.

ಗಾಯದ ಹುಲಿ ಹೊಡೆಯಲು ಹೋಗಿ ಅದಕ್ಕೆ ಬಲಿಯಾದ ತಮ್ಮ ಕೃಷ್ಣಪ್ಪನಿಗೆ ಗೊತ್ತಾಗಿದ್ದ ಹೆಣ್ಣು ಸೀತೆಯನ್ನು ತಮ್ಮ ಹೆಂಡತಿಯ ಅಕ್ಕನ ಮಗನಾದ ಹೂವಯ್ಯನಿಗೆ ಹೇಗಾದರೂ ಸರಿ ಮದುವೆ ಮಾಡಿಸಬೇಕೆಂದು ನಾನಾ ಹುನ್ನಾರುಗಳನ್ನು ಹಾಕಿ ಸಿಂಗಪ್ಪಗೌಡರು ಸರ್ವಪ್ರಯತ್ನಪಟ್ಟರೂ ಸಫಲರಾಗುವುದಿಲ್ಲ. ಜೋಯಿಸರು ಹೂವಯ್ಯ ಸೀತೆಯರಿಗೆ ಜಾತಕ ಎಷ್ಟು ಮಾತ್ರವೋ ಬರುವುದಿಲ್ಲವೆಂದೂ ಕಂಟಕಗಳಿಂದ ತುಂಬಿದೆಯೆಂದೂ ರಾಮಯ್ಯ ಸೀತೆಯರಿಗೆ ಉತ್ತಮವಾಗಿ ಜಾತಕ ಬರುತ್ತದೆ ಶ್ಯಾಮಯ್ಯಗೌಡರಿಗೆ ತಿಳಿಸಿದರು.

ವೆಂಕಟಪ್ಪಯ್ಯ ಜೋಯಿಸರನ್ನು ಬಿಟ್ಟರೆ ಈ ಕಾದಂಬರಿಯ ಲೋಕದಲ್ಲಿ ಬದುಕುವ ಚಂದ್ರಯ್ಯಗೌಡ, ಶ್ಯಾಮಯ್ಯಗೌಡ, ಸಿಂಗಪ್ಪಗೌಡ ಮುಂತಾದವರು ಶೂದ್ರರಲ್ಲಿ ಮೇಲುವರ್ಗಕ್ಕೆ ಸೇರಿದವರು. ಈ ಮೂವರು ಗೌಡರುಗಳಲ್ಲಿ ಚಂದ್ರಯ್ಯಗೌಡರು ಮೇಲುಗತಿ ಮೃದು ಸ್ವಭಾವದವರು ಶ್ಯಾಮಯ್ಯಗೌಡ ಸಿಂಗಪ್ಪಗೌಡರು, ಆದ್ದರಿಂದ ಅವರನ್ನು ನಿಯಂತ್ರಿಸುವ ದರ್ಪ ಮತ್ತು ಬಲ ಯಾರಿಗೂ ಇಲ್ಲ. ಜೊತೆಗೆ ಲೇವಾದೇವಿಗಾರರು, ಚಂದ್ರಯ್ಯಗೌಡರು ಹುಟ್ಟಾ ಹಟದ ಸ್ವಭಾವದವರು ಜೊತೆಗೆ ಅವಿವೇಕಿ ಬೇರೆ, ಅಕ್ಷರಸ್ಥರಾಗಿದ್ದರೂ, ಅವಿದ್ಯಾವಂತ ಅವರಿಗೆ ಶ್ರೀಮಂತಿಕೆಯಿದ್ದರೂ ಸಂಸ್ಕೃತಿ ಇಲ್ಲ. ಆದ್ದರಿಂದ ಎಲ್ಲಾ ದುರಂತಗಳಿಗೆ ಅವರೇ ಕೇಂದ್ರಬಿಂದುವಾಗುತ್ತಾರೆ. ಸರಿಯಾದ ಮಾರ್ಗದರ್ಶನ ಮಾಡದೆ ವೆಂಕಟಪ್ಪಯ್ಯ ಜೋಯಿಸರು ಅವರನ್ನು ಅಪಮಾರ್ಗದಲ್ಲಿ ನಡೆಸಿ ಭೀಕರ ನೋವು ಸಾವುಗಳ ಮಹಾದುರಂತಕ್ಕೆ ಬೀಜಬಿತ್ತುತ್ತಾರೆ.

ಚಂದ್ರಯ್ಯಗೌಡರ ಅನಾಗರೀಕತೆಯನ್ನು ಮೀರಿಸಲು ಯಾರಿಗೂ ಸಾಧ್ಯವಿಲ್ಲ. ಅದು ಹೆಂಡತಿ ಸುಬ್ಬಮ್ಮನನ್ನು ರಾಕ್ಷಸವಾಗಿ ಹೊಡೆಯುವುದರಿಂದ ಹಿಡಿದು, ಸೊಸೆ ಕುಸುಮ ಕೋಮಲೆ ಸೀತೆಗೆ ಕೆಂಪಗೆ ಕಾಯಿಸಿದ ಬರೆಗುಳದಲ್ಲಿ ಬರೆ ಹಾಕುವವರೆಗೆ ಭಯಂಕರವಾಗಿ ಹರಡಿಕೊಂಡಿದೆ. ಈ ಬರ್ಬರತೆಯಲ್ಲಿ ಸೇರಿರುವ ಕ್ರೂರ ಶೋಷಣೆಯನ್ನು ಗಮನಿಸಬಹುದು.

ಚಂದ್ರಯ್ಯಗೌಡರಿಗೆ ನಮ್ಮವರು ಎಂಬ ಮಮಕಾರವಿಲ್ಲ. ಬಡವ ಓಬಯ್ಯನನ್ನು ರಕ್ತ ಬರುವಂತೆ ಥಳಿಸುತ್ತಾರೆ. ಮಗನಿಗೊದಗಿದ ಚಿತ್ರ ಹಿಂಸೆಯನ್ನು ಕಂಡು ತಬ್ಬಲಿ ಮುದುಕ ಅಣ್ಣಯ್ಯಗೌಡರು, ಸಾಲ ತೀರಿಸದೆ ರಾತ್ರೋರಾತ್ರಿ ಕೆಳಕಾನೂರು ಮನೆ ಬಿಟ್ಟು ಹೋಗಲು ನಿರ್ಧರಿಸುತ್ತಾರೆ. ಆದರೆ ಆ ವಿಷಯದಲ್ಲಿಯೂ ಅವರು ಚಂದ್ರಯ್ಯಗೌಡರ ಕ್ರೂರ ಹಿಂಸೆಗೆ ಗುರಿಯಾಗುತ್ತಾರೆ. ಚಂದ್ರಯ್ಯಗೌಡರು ಕೆಳಕಾನೂರು ಅಣ್ಣಯ್ಯಗೌಡರ ಪಾತ್ರೆ ಪರಟೆ ಸರಕು ಸಾಮಾನು ದನಕರುಗಳು ಜಾನುವಾರುಗಳನ್ನೆಲ್ಲಾ ತಮ್ಮ ಸಾಲಕ್ಕೆ ಮುಟ್ಟುಗೋಲು ಹಾಕಿಕೊಂಡು ಅಣ್ಣಯ್ಯಗೌದರನ್ನು ಅವರ ಮಗ ಮತ್ತು ಮಗಳು ಸಮೇತರಾಗಿ ಊರಿನಿಂದ ಹೊರಡಿಸಿದರು. ಅವರ ಕೋಳಿಗಳನ್ನು ಕೂಡ ಬಿಡಲಿಲ್ಲ. ಅವರಿಗೆ ಉಳಿದುವೆಂದರೆ ಕರಿಯ ಬಣ್ಣದ ಕುರೂಪಿಯಂತಹ ಅವರ ಕಂತ್ರಿ ನಾಯಿ ಉಳಿದಿದ್ದು.

ಸುಬ್ಬಮ್ಮ ಚಂದ್ರಯ್ಯಗೌಡರಿಗೆ ಮೂರನೆಯ ಹೆಂಡತಿ ಚಂದ್ರಯ್ಯಗೌಡರು ದೃಢಕಾಯರಾಗಿ ಶ್ರೀಮಂತರಾಗಿದ್ದರೂ ನಡುವಯಸ್ಸು ಮೀರಿದ್ದುದರಿಂದಲೂ ಮೂರು ಮಕ್ಕಳ ತಂದೆಯಾಗಿದ್ದುದರಿಂದಲೂ, ಸುಸಂಸ್ಕೃತರಾದ ಶ್ರೀಮಂತರೆಲ್ಲರೂ ಅವರಿಗೆ ಹೆಣ್ಣು ಕೊಡಲು ಹಿಂಜರಿದರು. ಗೌಡರು ಅಪ್ರತಿಬೆರಾಗದ ನೆಲ್ಲುಹಳ್ಳಿಗೆ ಹೋಗಿ ಹೆಣ್ಣು ಕೇಳಿದರು. ಅಸಂಸ್ಕೃತರೂ, ಒರಟು ಜೀವಿಗಳೂ ಬಡವರೂ, ಆಗಿದ್ದ ನೆಲ್ಲುಹಳ್ಳಿಯವರು ಹಿಗ್ಗಿ ಮರುಮಾತಾಡದೆ ಹೆಣ್ಣು ಕೊಡಲು ಒಪ್ಪಿದರು. ಚಂದ್ರಯ್ಯಗೌಡರು ತಮ್ಮ ಮನೆಗೆ ಹೆಣ್ಣು ಕೇಳಲು ಬಂದಾಗ ಸುಬ್ಬಮ್ಮ ತನ್ನನ್ನು ಹೂವಯ್ಯನಿಗೆ ಕೇಳಲು

ಬಂದಿದ್ದಾರೆ ಎಂದು ಭಾವಿಸಿದ್ದಳು. ಆಸರೆ ನಿಜವಾದ ಸಂಗತಿ ತಿಳಿದ ಮೇಲೆ ಆಕೆಗೆ ಹತಾಶೆಯಾದರೂ ಹೆಚ್ಚೇನೂ ವ್ಯಸನಪಡಲಿಲ್ಲ. ಚಂದ್ರಯ್ಯಗೌಡರು ತೃತೀಯ ವಧುವಾಗಿ ಕಾನೂರಿಗೆ ಬಂದಿದ್ದಳು.

"ದಾರಿದ್ರ್ಯದಲ್ಲೇ ಹುಟ್ಟಿ ಬೆಳೆದು ಅಸಂಸ್ಕೃತರಿಂದ ಪೋಷಿತವಾಗಿ ಅವರ ನಡೆನುಡಿ ಆಚಾರ ವ್ಯವಹಾರ ಶೀಲಗಳನ್ನು ಕಲಿತ ಸುಬ್ಬಮ್ಮನ್ನಲ್ಲೆ ಸುಸಂಸ್ಕೃತ ಸ್ತ್ರೀ ಸಹಜವಾದ ಔದಾರ್ಯ ಗಾಂಭೀರ್ಯ ನಯವಿನಯ ಸಂಯಮ ಸಂಚಲನಗಳು ಒಂದಿನಿತೂ ಇರಲಿಲ್ಲ. ಆದ ಕಾರಣ ಅದುವರೆಗೂ ಅವಕಾಶ ಸಿಕ್ಕದೆ ಸುಪ್ತವಾಗಿದ್ದ ಅಹಂಕಾರ ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮೊದಲಾದ ಕಾಡುಭಾವಗಳು ಆಕೆ ಯಜಮಾನರ ಪತ್ನಿಯಾಗಿ ಕಾನೂರಿಗೆ ಹೆಗ್ಗಡತಿಯಾದ ಕೂಡಲೇ ಭಯಾನಕವಾಗಿ ಹೆಡೆಯೆತ್ತಿ ನಿಂತವು. ಆಕೆ ಎಲ್ಲದರಲ್ಲಿಯೂ ಎಲ್ಲರ ಮೇಲೆಯೂ ನಿರ್ದಾಕ್ಷಿಣ್ಯವಾಗಿ ಹುಕುಂ ಚಲಾಯಿಸತೊಡಗಿದಳು.

ಆಕೆ ಒಂದು ಸಾರಿ ನಾಗಮ್ಮನವರು ವಾಸುವಿನ ಮೈಗೆ ತನ್ನ ಸಾಬೂನನ್ನು ಹಚ್ಚಿದರೆಂದು ಕೇಳಿ, ಬಾಯಿಗೆ ಬಂದಂತೆ ಬಯ್ದು ಬಿಟ್ಟಳಂತೆ.

ಪುಟ್ಟಮ್ಮನಿಗಂತೂ ಸುಬ್ಬಮ್ಮನ ನೆರಳೂ ಕಂಡರೂ ಆಗದಂತಾಯಿತು. ತುಪ್ಪ, ಬೆಣ್ಣೆ ಮೊದಲಾದ ಪದಾರ್ಥಗಳಿಂದಲೂ ಆ ಹೆಗ್ಗಡತಿ ಬೀಗಮುದ್ರೆ ಮಾಡಿಬಿಟ್ಟಳು. ಹೀಗಾಗಿ ಮನೆಯಲ್ಲಿ ಮೂರು ಹೊತ್ತು ಕದನವಾಗಿ ನೆಮ್ಮದಿ ತಪ್ಪಿ ಹೋಗಿತ್ತು.

ಹೂವಯ್ಯನ ತಾಯಿ ನಾಗಮ್ಮನವರ ಮೇಲೆಯೂ ಸವಾರಿ ಮಾಡತೊಡಗಿದಳು. ಆಳು ಕಾಳುಗಳೊಂದಿಗೆ ಅದೇ ರೀತಿಯಾಗಿ ಚೇಳಿಗೆ ಪಾರುಪತ್ತೆ ಕೊಟ್ಟಂತೆ ವರ್ತಿಸಿದ್ದಳು. ಆದರೆ ಆಟಾಟೋಪವೆಲ್ಲ ಮುಗಿದು ಸ್ವಲ್ಪ ಕಾಲದಲ್ಲಿ ಇರುಳಿನಲ್ಲಿಯೇ ಕಾನೂರನ್ನು ಬಿಟ್ಟು ತನ್ನನ್ನು ಕತ್ತರಿಸಿ ಹಾಕುವುದರಲ್ಲಿದ್ದ ಗೌಡರ ಕತ್ತಿಯಿಂದ ಪಾರಾಗಿ ತವರೂರಿಗೆ ಓಡಿ ಹೋಗಬೇಕಾಯಿತು. ಚಂದ್ರಯ್ಯಗೌಡರು ಹಾಸಿಗೆ ಹಿಡಿದ ತರುವಾಯ ಮತ್ತೆ ಕಾನೂರಿಗೆ ಬಂದಾಗಲೂ ಸುಬ್ಬಮ್ಮಗೆ ಗೌಡರ ಮೇಲಿದ್ದುದುದು ಕನಿಕರವಾಗಿದ್ದಿತೆ ಹೊರತು ಪ್ರಣಯಭಾವವಾಗಿರಲಿಲ್ಲ. ಅಲ್ಲದೆ ತವರು ಮನೆಯ ಪೀಡನೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಹಾಯ ಮಾಡಿದ್ದ ಆಕೆಗೆ ಕೃತಜ್ಞತೆಯಿತ್ತು, ಗೌಡರು ತೀರಿಹೋದ ಮೇಲೆ ತವರುಮನೆಯವರು ಕರೆದರೂ ಅಲ್ಲಿಗೆ ಕಾಲಿಡದೆ, ಕಾನೂರಿನ ಹೆಗ್ಗಡತಿತನವನ್ನು ಮತ್ತೊಮ್ಮೆ ಇಮ್ಮಡಿ ಉತ್ಸಾಹದಿಂದ ಕೈಗೊಂಡಿದ್ದಳು.

ಸೀತೆಯು ಪ್ರತಿಭಟನೆ ಅನಾರೋಗ್ಯದ ಮೂಲಕ ಪ್ರಕಟವಾಗುವುದು, ಒಂದು ಘಟ್ಟವನ್ನು ಸೂಚಿಸಿದರೆ ಅವಳು ಹೂವಯ್ಯನಿಗೆ ಪ್ರೇಮಪತ್ರವನ್ನು ಬರೆಯುವುದು ಮುಂದಿನ ಘಟ್ಟ (ಅದು ಸೀತೆಯ ಜೀವಮಾನದಲ್ಲಿ ಆಕೆ ಬರೆದಮೊದಲನೆ ಕಾಗದವಾಗಿತು) ಸೀತೆ ಹೆಚ್ಚು ಪ್ರಬುದ್ಧಳಾಗಿದ್ದಾಳೆ. ತನ್ನ ವ್ಯಕ್ತಿತ್ವದ

ಪರಿಸರದ ಮಿತಿಯಲ್ಲಿ ಅವಳು ಹೂವಯ್ಯನಿಗಿಂತ ಹೆಚ್ಚು ಸತ್ವಶಾಲಿಯಾಗಿ ತೋರಿದರೆ ಆಶ್ಚರ್ಯವೇನೂ ಅಲ್ಲ, ಇದಕ್ಕೆ ಒಂದು ಕಾರಣ ಅವಳು ಹೂವಯ್ಯನ ಮುಂದಿನ ಘಟ್ಟವನ್ನು ಪ್ರತಿನಿಧಿಸುತ್ತಾಳೆ.

ಹೂವಯ್ಯನ ಒಂದು ಪ್ರಮಾಣ ಹೂವಯ್ಯ ಸೀತೆಗೊಂದು ಹಿನ್ನೆಲೆ ಆದರ್ಶ ಈ ದೃಷ್ಟಿಯಿಂದ ರಾಮಯ್ಯ ಸತ್ತ ಮೇಲೆ ಸೀತೆ ಲಕ್ಷ್ಮಿಯೊಂದಿಗೆ ಕಾನೂರಿಗೆ ಬಂದು ಹೂವಯ್ಯನೊಡನೆ ವಾಸಿಸುವ ನಿರ್ಧಾರ ಮಾಡುವುದು, ತೀರಾ ಆಧುನಿಕವಾಗಿ ಕಾಣುತ್ತದೆ.

ಗಂಗೆಯ ಜೊತೆ ಗೌಡರ ಅನೈತಿಕ ಸಂಬಂಧವನ್ನು ಬಯಲು ಮಾಡಿರುವಂತೆಯೇ ಗೌಡರ ಹೆಂಡತಿ ಸುಬ್ಬಮ್ಮ ವಿಧವೆಯಾದ ನಂತರ ಸೇರೆಗಾರ ರಂಗಪ್ಪ, ಶೆಟ್ಟರ ಸಹವಾಸ ಮಆಡಿ ಬಸುರಾಗಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನೂ ನಿರ್ವಿಕಾರವಾಗಿ ಚಿತ್ರಿಸಿದ್ದಾರೆ. ನಂತರ ರಾಮಯ್ಯ ತೀರಿಕೊಂಡರು. ಹೂವಯ್ಯ ಐದು ದಿನ ಊಟ ನಿದ್ರೆ ಬಿಟ್ಟು ಸನ್ಯಾಸಿಯಾಗಿ ಬಿಡುತ್ತಾನೆ.

ಹತ್ತು ವರ್ಷಗಳಾದ ಮೇಲೆ "ಮಲೆನಾಡಿಗೆ ನವಜೀವನ ಕಾಲಿಟ್ಟಿತು. ಅದಕ್ಕೆ ಮುಖ್ಯ ಕಾರಣ ಕಾಲ ಮಹಿಮೆಯಾಗಿದ್ದರೂ ಕೂಡ ಕಾನೂರು, ಮುತಳ್ಳಿ, ಸೀತೆ ಮನೆ ಮತ್ತು ಸುತ್ತಣ ಹಳ್ಳಿಗಳಲ್ಲಿ ಹೂವಯ್ಯನ ಪ್ರಭಾವವೂ ಗಣ್ಯವಾಗಿತ್ತು. ಮಹಿಳೆಯರಲ್ಲಿ ತಪಸ್ವಿನಿಯ ಸ್ಥಾನಮಾನ ಗೌರವಗಳಿಗೆ ಪಾತ್ರಳಾಗಿದ್ದ ಸೀತೆಯ ಪ್ರಭಾವವೂ ಸದ್ದುಗದ್ದಲವಿಲ್ಲದೆ ಕೆಲಸ ಮಾಡಿತ್ತು. ಎಂದು ದಾಖಲಿಸುವ ಅಲ್ಲಿ ಆದ ಬದಲಾವಣೆಗಳನ್ನು ಹೀಗೆ ಪಟ್ಟಿ ಮಾಡುತ್ತದೆ.

"ಕಾನೂರು ಮುತ್ತಳ್ಳಿಗಳಿಗೆ ಮಧ್ಯೆ ರಸ್ತೆಗೆ ಸಮೀಪವಾಗಿ ಕಾಡಿನ ನಡುವೆ ಇದ್ದ ಕಳ್ಳಂಗದಿ ಕುಸಿದು ಬಿದ್ದು ಬರಲೆ ಹಿಡಿದು ಹಾಳಾಗಿತ್ತು. ನಾಲ್ಕಾರು ಗ್ರಾಮಗಳಿಗೆ ಅನುಕೂಲವಾಗುವಂತೆ, ಒಂದು ಆಸ್ಪತ್ರೆ, ಸ್ಕೂಲು, ಪೋಸ್ಟಾಪೀಸು, ಅಂಗಡಿಗಳು ಮಾಡಿ ವರ್ಧಿಸುತ್ತಿದ್ದವು. ಹಿಂದೆ ಬೈಸಿಕಲ್ಲಿನ ಪರಿಚಯಕ್ಕೂ ಪರದೇಶಿಯಾದ ಆ ರಸ್ತೆ ಮೋಟಾರು ಕಾರು ಬಸ್ಸುಗಳ ಕೋಟಲೆಯಿಂದ ಬೇಸರಗೊಂಡಿತ್ತು. ಸ್ವದೇಶ ಖಾದಿಗಳ ಪ್ರಚಾರವೂ ತಕ್ಕಮಟಿಗೆ ನಡೆದಿತ್ತು. ಗಾಂಧಿಟೋಪಿಗಳೂ ಆಗಾಗ ಒಂದು ಉಪನ್ಯಾಸ ಕೊಡುತ್ತಿದ್ದವು. ಅಕ್ಷರ ಬಲ್ಲವರು ಪತ್ರಿಕೆಗಳ್ನನು ಓದುವ ಅಭ್ಯಾಸ ಮಾಡಿ, ವಿಶಾಲ ಪ್ರಪಂಚದ ವಿಚಾರಗಳನ್ನು ಕುರಿತು ಮಾತಾಡುತ್ತಿದ್ದರು. ಮಾರಿಯ ಹರಕೆ ದೆವ್ವದ ಪೂಜೆ ಮೊದಲಾದ ಮೂಡಾಚಾರಗಳಿಗೆ ಬದಲಾಗಿ ಉತ್ಕೃಷ್ಟವಾದ ಮತ ವಿಧಾನಗಳು ಆಚರಣೆಗೆ ಬರುತ್ತಿದ್ದವು. ಕಾಡಿಗೆ ನಾಗರಿಕತೆ ಕಾಲಿಟ್ಟಿತು".

"ಕಾನೂರಿನಲ್ಲಿ ಹೂವಯ್ಯನ ಪ್ರಯತ್ನದಿಂದ ಬೇಲರೂ, ಸೇರೆಗಾರ ಸೋಮಯ್ಯ ಸೆಟ್ಟರೂ, ಗಟ್ಟದವರೂ, ಕುರಿಮಂದೆಯಂತೆ ಬಿಡಾರಗಳನ್ನು ಕಟ್ಟಿಕೊಂಡು ಹಂದಿಗಳಂತೆ ವಾಸಮಾಡುವ ಬದಲು ಸುವ್ಯವಸ್ಥಿತವಾದ ಸಣ್ಣಸಣ್ಣ ಮನೆಗಳಲ್ಲಿ ಅದೆಷ್ಟು ಚೊಕ್ಕಟವಾಗಿ ಬದುಕುತ್ತಿದ್ದರು ಕಾಯಿಲೆ ಬಂದರೆ ಜೋಯಿಸರಲ್ಲಿಗೆ ಹೋಗುವುದಕ್ಕೆ ಬದಲಾಗಿ ಆಸ್ಪತ್ರೆಗೆ ಹೋಗುವುದನ್ನು ಕಲಿತರು."

ಈ ರೀತಿ ಕಾನೂರು ಹೆಗ್ಗಡಿತಿಯ ಕಾದಂಬರಿಯನ್ನು ಗಮನಿಸುತ್ತೇವೆ.

ಕಾನೂರು ಹೆಗ್ಗಡಿತಿ:

ಚಂದ್ರಯ್ಯಗೌಡರು	: ಕಾನೂರಿನ ಗೌಡ, ಜಮೀನುದಾರ, ಲೇವಾದೇವಿಗಾರ
ಶ್ಯಾಮಯ್ಯಗೌಡರು	: ಮುತ್ತಳ್ಳಿ ತೀರ್ಥಹಳ್ಳಿಗೆ ಸುಮಾರು ಮೂರುಮೂರುವರೆ ಮೈಲಿಯ ದೂರದಲ್ಲಿರುವ ಮನೆಯೇ ಸಾಹುಕಾರರೂ, ಪಟೇಲರೂ ಆಗಿದ್ದರು.
ಹೂವಯ್ಯ	: ಚಂದ್ರಯ್ಯಗೌಡರ ಅಣ್ಣನ ಮಗ, ಹೂವಯ್ಯ ಕಾನೂರಿಗೆ ಒಳ್ಳೆ ಕೆಲಸ ಮಾಡಿದವನು.
ಪುಟ್ಟಣ್ಣ	: ಹೂವಯ್ಯನ ತಮ್ಮ ಪುಟ್ಟಣ್ಣನಗೆ ಬೇಟೆ ಎಂದರೆ ಪ್ರಾಣ
ಚಿನ್ನಯ್ಯ	:ಶ್ಯಾಮಯ್ಯಗೌಡರ ಮಗ, ಮೀನು ಶಿಕಾರಿ ಮಾಡುವುದು ಅಂದರೆ ಪ್ರಾಣ
ನಿಂಗನು	: ಚಂದ್ರಯ್ಯಗೌಡನ ಜೀತದಾಳು
ರಾಮಯ್ಯ	: ಚಂದ್ರಯ್ಯಗೌಡರ ಮಗ, ಮೊದಲನೆಯ ಹೆಂಡತಿ ಮಗ
ಗೌರಮ್ಮ	: ಶ್ಯಾಮಯ್ಯಗೌಡರ ಹೆಂಡತಿ
ಲಕ್ಷ್ಮಿ	: ಶ್ಯಾಮಯ್ಯಗೌಡರ, ಗೌರಮ್ಮರ ಮಗಳು, ಚಿನ್ನಯ್ಯನ ತಂಗಿ
ಸೀತೆ	: ಶ್ಯಾಮಯ್ಯಗೌಡರ ಗೌರಮ್ಮರ ಮಗಳು ಚಿನ್ನಯ್ಯನ ತಂಗಿ ಹಾಗೂ ರಾಮಯ್ಯನ ಪತ್ನಿ
ಸುಬ್ಬಮ್ಮ	: ಚಂದ್ರಯ್ಯಗೌಡರ ಮೂರನೆಯ ಹೆಂಡತಿ
ಸುಬ್ಬಯ್ಯಗೌಡರು	: ಚಂದ್ರಯ್ಯಗೌಡರ ಅಣ್ಣ ಹೂವಯ್ಯನ ತಂದೆ
ನಾಗಮ್ಮ	: ಸುಬ್ಬಯ್ಯಗೌಡರ ಹೆಂಡತಿ ಹೂವಯ್ಯನ ತಾಯಿ
ಪುಟ್ಟಮ್ಮ ವಾಸು	: ಚಂದ್ರಯ್ಯಗೌಡರ ಎರಡನೇ ಹೆಂಡತಿ ಮಕ್ಕಳು
ರಂಗಪ್ಪಸೆಟ್ಟರು	: ಕಾನೂರು ಸೇರೆಗಾರ

ಬೈರ, ಸಿದ್ದ	: ಹೊಲೆಯರ ಜೀತದಾಳುಗಳು
ಗಂಗ	: ಬೇಲರ ಬೈರನ ಮಗ
ಸೇಸಿಯೂ	: ಬೈರನ ಹೆಂಡತಿ
ವೆಂಕಪ್ಪಯ್ಯ	: ಅಗ್ರಹಾರದ ಜೋಯಿಸರು
ಅಣ್ಣಯ್ಯಗೌಡರು	: ಆ ಊರಿನ ಹಿರಿಯ ತಲೆಯವರು
ಸಿಂಗಪ್ಪಗೌಡ್ರು	: ಸೀತೆಮನೆ ಗೌಡ್ರು ಬಾಳೂರು
ತಿಮ್ಮ	: ಜೀತದಾಳುಗಳು
ಓಬಯ್ಯ	: ಅಣ್ಣಯ್ಯಗೌಡರ ಮಗ
ಗಂಗೆ	: ರಂಗಪ್ಪಸೆಟ್ಟರ ಪ್ರೇಯಸಿ
ಕಿಲಸ್ತರ ಜಾಕಿ	: ಸಿಂಗಪ್ಪಗೌಡರ ಆಳು
ಕೃಷ್ಣಪ್ಪ	: ಸೀತೆಮನೆ ಸಿಂಗಪ್ಪಗೌಡರ ಮಗ,
ನೆಲ್ಲಳ್ಳಿ ನಿಮ್ಮಪ್ಪಯ್ಯ	: ಸುಬ್ಬಮ್ಮನ ತಂದೆ
ಸೋಮ	: ಜೀತದಾಲು
ಕಾನೂರು	: ಈ ಕಾದಂಬರಿಯಲ್ಲಿ ಗ್ರಾಮವಾಗಿದೆ.
ಮುತ್ತಹಳ್ಳಿ	: ಈ ಕಾದಂಬರಿಯಲ್ಲಿ ಬರುವ ಊರಾಗಿದೆ.
ಬಾಳೂರು	: ಈ ಕಾದಂಬರಿಯಲ್ಲಿ ಬರುವ ಸಂಬಂಧ ಊರಾಗಿದೆ.
ತೀರ್ಥಹಳ್ಳಿ	: ಈ ಗ್ರಾಮಗಳಿಗೆ ಹೋಗುವ ದಾರಿಯಾಗಿದೆ.

ಈ ಎರಡು ಕಾದಂಬರಿಗಳಲ್ಲಿಯ ನಿಸರ್ಗ ಒಂದು ಸ್ವತಂತ್ರವಾದ ಶಕ್ತಿಸ್ರೋತ್ರವಾಗಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯ ಜಗತ್ತು ಕೂಡ ಹೆಚ್ಚು ಕಡಿಮೆ ಇದೇ ಆಗಿದೆ. ಕಾನೂರು, ಮುತ್ತಳ್ಳಿ, ಸೀತೆಮನೆಗಳಿಗೆ ಕೋಣೂರು, ಹಳೆಮನೆ, ಸಿಂಬಾವಿಗಳಿಗೂ, ಏನೂ ಅಂತರವಿಲ್ಲ. ಮುಕುಂದಯ್ಯನ ಪ್ರಣಯ, ದೇವಯ್ಯನ ಮತಾಂತರ, ದೊಡ್ಡಣ್ಣ ಹೆಗ್ಗಡೆಯ ಯಾತ್ರೆ, ನಾಯಿಗುತ್ತಿ ಮತ್ತು ತಿಮ್ಮಯ್ಯರ ಮದುವೆಯ ಪ್ರಸಂಗ, ಅಂತಕ್ಕನ ಮಗಳು ಕಾವೇರಿಯ ಆತ್ಮಹತ್ಯೆ ಪ್ರಸಂಗ, ಪೋಲೀಸರ ಪ್ರಸಂಗ, ಐತ ಮತ್ತು ಪಿಂಜಲುರವರ ಪ್ರಸಂಗ ಮೊದಲಾದ ಮಹತ್ವದ ಪ್ರಸಂಅಗಳು ಕಾಲಕ್ರಮದ ಸಾತತ್ಯದಲ್ಲಿ ನಡೆಯದೆ ಸಮಾನಾಂತರವಾಗಿ ನಡೆಯುತ್ತದೆ. ಇಲ್ಲಿಯೂ ನಿಸರ್ಗ ಮನುಷ್ಯನ ವ್ಯವಹಾರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ. ಹುಲಿಕಲ್ಲು ಶಿಖರವಿಲ್ಲದಿದ್ದರೆ, ಬಹುಶಃ ಚಿನ್ನಮ್ಮ ಮತ್ತು ಮುಕುಂದಯ್ಯನ ಪ್ರಣಯ ಸಫಲಗೊಳ್ಳುತ್ತಿರಲಿಲ್ಲ.

ಮುಕುಂದಯ್ಯ ಮತ್ತು ಚಿನ್ನಮ್ಮನ ಮದುವೆ ಪೂರ್ವಜನ್ಮದ ಪ್ರಣಯದ ಪರಿಣತಿ ಆದರೆ ಅದು ಅವರಿಗೆ ಗೊತ್ತಿಲ್ಲ ಈಗ ಮದುವೆಯಾಗಬೇಕಾದರೆ ಸಾಹಸದಿಂದ ಮಾತ್ರ ಸಾಧ್ಯ. ಅಥ ಸಾಹಸವನ್ನು ಅವರಿಬ್ಬರೂ ಮಾಡುತ್ತಾರೆ. ಇನ್ನೊಬ್ಬರ ಜೊತೆಗೆ ಆಗಬೇಕಾದ ಮದುವೆಯ ಹಿಂದಿನ ರಾತ್ರಿ ಮುಕುಂದಯ್ಯ ಅವಳನ್ನು ಅಪಹರಿಸಿಕೊಂದು ಹೋಗಿ ಹುಲಿಕಲ್ಲು ಗುಡ್ಡದ ಮೇಲೆ ಇಡುತ್ತಾನೆ. ಅಲ್ಲಿ ಕಾವಲಿರುವವರು ನಾಯಿಗುತ್ತಿ ಮತ್ತು ತಿಮ್ಮಿ ಗುತ್ತಿ ತಿಮ್ಮಿಯೊಬ್ಬಳನ್ನು ಅಲ್ಲಿ ತನ್ನ ನಾಯಿಯ ಕಾವಲಿನಲ್ಲಿ ಬಿಟ್ಟು ಹೊರಟು ಹೋಗುತ್ತಾನೆ. ಆ ರಾತ್ರಿಯ ನೀರವತೆಯಲ್ಲಿ ತಿಮ್ಮಿ ಒಂದು ನೋಟವನ್ನು ಕಾಣುತ್ತಾಲೆ. ಒಂದು ಕುದುರೆಯನ್ನೇರಿ ಬಂದ ರಾಜಕುಮಾರ ತನ್ನ ಪ್ರೇಯಸಿಯನ್ನು ಕರೆದುಕೊಂಡು ಕುದುರೆಯೋಡಿಸುತ್ತಾ ಹೋಗಿಬಿಡುತ್ತಾನೆ. ಆ ದೃಶ್ಯವನ್ನು ಕಂಡ ತಿಮ್ಮಿ ಬೆಚ್ಚಿ ಬೀಳುತ್ತಾಳೆ.

ಮುಕುಂದಯ್ಯ– ಚಿನ್ನಮ್ಮ ಚಿಕ್ಕಂದಿನಿಂದಲೂ ಪರಸ್ಪರ ಆಕರ್ಷಿತರಾಗುತ್ತಾರೆ. ಹಕ್ಕಿಗೂಡು ಕಂಡು ಹಿಡಿಯುವ ಜೇನು ಕೀಳುವ, ಗಾಳ ಹಾಕಿ ಮೀನು ಹಿಡವ, ಹೊಂಡಿ ತೊಣಕುವ ಸೆಬೆ ಒಡ್ಡಿ ಕಾಡುಕೋಳಿ, ಚಿಟ್ಟುಕೋಳಿ ಹಿಡಿವ ಇತ್ಯಾದಿ ಶೂದ್ರ ಮಕ್ಕಳ ಬಾಲ್ಯ ಸಹಜ ವೃತ್ತಿಗಳಲ್ಲಿ ತೊಡಗಿ ಅವರ ಬದುಕಾಗುತ್ತದೆ. ಹಳ್ಳಕೊಳ್ಳಗಳು ಬೆಟ್ಟಗುಡ್ಡಗಳು ಗಿಡಮರಗಳು ಮೃಗ ಪಕ್ಷಿಗಳು ಸಂಗಾತಿಗಳಾಗುತ್ತವೆ.

ಹೀಗೆ ಕಾದಂಬರಿಯ ಮೊದಲ ಘಟ್ಟದಲ್ಲಿ ಯಾವ ವಿಘ್ನಕ್ಕೂ ಒಳಗಾಗದೆ ತಿಳಿಯಾಗಿದ್ದ ಇವಾ ಹೃದಯದಲ್ಲಿ ಪ್ರೀತಿ ಘನವಾಗುತ್ತಿದ್ದಂತೆ ಕೇಳಬಾರದ ಕೆಟ್ಟ ಸುದ್ಧಿಯೊಂದು ಕದಡಿಬಿಡುತ್ತದೆ. ಸಮಾಜದತ್ತ ಕಣ್ಣು ಹಾಯಿಸದೆ ತಮ್ಮ ಪಾಡಿಗೆ ತಾವು ಹಾಯಾಗಿದ್ದ ಮುಕುಂದಯ್ಯ–ಚಿನ್ನಮ್ಮ ಇದ್ದಕ್ಕಿದ್ದಂತೆ ಜಟಿಲ ಸಮಸ್ಯೆಗಳಿಗೆ ಸಿಕ್ಕಿ ಬೀಳುತ್ತಾರೆ. ಮೊದಲ ಆಘಾತಕ್ಕೆ ತತ್ತರಿಸುತ್ತಾರೆ. ಸಮಾಜ ತನ್ನ ಕರಾಳತೆಯನ್ನು

ತೆರೆದು ತೋರುತ್ತದೆ. ಸರಳ ಹೃದಯಗಳು ತೀವ್ರ ಸಂಘರ್ಷಕ್ಕೊಳಗಾಗುತ್ತವೆ. ಮಲೆನಾಡಿನಲ್ಲಿ ಇದೇ ಸಮಯಕ್ಕೆ ಜಡಿಮಳೆ ಹಿಡಿಯುತ್ತದೆ.

ಮುಖ್ಯವಾಗಿ ಕಾದಂಬರಿಯ ಬದುಕು- ಹೂವಳ್ಳಿ ಕೋಣೂರು, ಸಿಂಬಾವಿ, ಹಳೆಮನೆ ಮತ್ತು ಬೆಟ್ಟಳ್ಳಿಯ ಗೌಡರ ಬದುಕು ಈ ಹಳ್ಳಿಗಳ ಬದುಕಿನೊಡನೆ ರಕ್ತ ಸಂಬಂಧವುಳ್ಳ ಮುಕುಂದಯ್ಯ-ಚಿನ್ನಮ್ಮರ ಬದುಕು ವ್ಯಕ್ತಿನಿಷ್ಠ ಬದುಕಲ್ಲ.

ಗುತ್ತಿ ಮತ್ತು ತಿಮ್ಮಿ

ನಾಟಕದ ಪೂರ್ಣ ಪರಿಚಯವಿರುವ ಸೂತ್ರಧಾರ ನಾಟಕದ ಮೊದಲಿಗೆ ಬರುವ ಹಾಗೆ ತನ್ನ ಅಂಗಾಂಗಗಳ ಪರಿಚಯವಿದ್ದಷ್ಟೆ ಮಲೆನಾಡಿನ ಅರಣ್ಯದೊಳಗೆ ಹುದುಗಿರುವ ಬದುಕಿನ ನಿಕಟ ಪರಿಚಯವಿರುವ ಗುತ್ತಿ ಕಾದಂಬರಿಯ ಪ್ರಾರಂಭದಲ್ಲಿಯೇ ಬರುವುದು ಅರ್ಥಪೂರ್ಣವಾಗಿದೆ. ಒಡೆಯ ಸಿಂಬಾವಿ ಭರಮೈ ಹೆಗ್ಗಡೆಯವರ ರಹಸ್ಯ ಪತ್ರವನ್ನು ಹಳೆಮನೆಯ ಸುಬ್ಬಣ್ಣ ಹೆಗ್ಗಡೆಯವರಿಗೆ ಮುಟ್ಟಿಸುವ, ಅದಕ್ಕಿಂತ ಮುಖ್ಯವಾಗಿ ತಾನು ಇಷ್ಟಪಟ್ಟಿರುವ ಬೆಟ್ಟಳ್ಳಿ ದೊಡ್ಡ ಬೀರನ ಮಗಳು ತಿಮ್ಮಿಯನ್ನು ಹಾರಸಿಕೊಂದು ಬರುವುದರ ಸಲುವಾಗಿ ಉತ್ಸಾಹಿತನಾಗಿ ಹೊರಟ ಗುತ್ತಿ ಕಾದಂಬರಿಯ ಉದ್ದಕ್ಕೂ ಕ್ರಿಯಾಶೀಲ ಪಾತ್ರವಾಗಿದ್ದಾನೆ. ಅವನ ಮೂಲಕ ಮಲೆನಾಡು ಅಲ್ಲಿನ ಬದುಕು ಪ್ರಕಟಗೊಳ್ಳತೊಡಗುತ್ತದೆ.

ಹೊಲೆಯರ ಗುತ್ತಿ ನಿಸರ್ಗದಲ್ಲಿ ಒಂದಾಗಿ ಬಿಟ್ಟವನು, ಲೇಖಕರ ಮಾತಿನಲ್ಲೆ ಹೇಳುವುದಾದರೆ 'ಅವನೂ ಪ್ರಕೃತಿಯ ಒಂದಂಶವಾಗಿದ್ದನು, ಕಾಡಿನಲ್ಲಿ ಮರದಂತೆ, ಬೆಟ್ಟದಲ್ಲಿ ಬಂಡೆಯಂತೆ ಅದರ ಒಂದಂಗವಾಗಿದ್ದನು' ಅವನ ಬದುಕಿನಲ್ಲಿ ಬರುವ ಸಂಗಾತಿಗಳೆಂದರೆ, ಹುಲಿಯ ಮತ್ತು ತಿಮ್ಮಿ, ಗುತ್ತಿಗೆ ತನ್ನ ಬದುಕಿಗಂಟಿಕೊಂಡ ಹುಲಿಯ ಬರಿಯ ನಾಯಿ ಮಾತ್ರವಲ್ಲ ಜೀವದ ಒಂದು ಭಾಗ.

ಹುಲಿಯು ಕಾದಂಬರಿಯ ನಿಸರ್ಗದ ಸಂಕೇತವಾಗಿದೆ. ಗುತ್ತಿಯನ್ನು ಬಿಟ್ಟು ಹುಲಿಯನಾಗಲಿ ಹುಲಿಯನ್ನನ್ನು ಬಿಟ್ಟು ಗುತ್ತಿಯಾಗಲಿ ಎಲ್ಲೂ ಕಾಣುವುದಿಲ್ಲ.

ತನಗೆ ಬೇಡವಾಗಿದ್ದ ಬಚ್ಚನೊಡನೆ ತನ್ನ ಮದುವೆಯಾಗಿ ಬಿಡುತ್ತದಲ್ಲ ಎಂಬ ಭಯದಿಮ್ದ ಕುದಿಯುತ್ತಿದ ತಿಮ್ಮಿಗೆ ಗುತ್ತಿಯ ಅನಿರೀಕ್ಷಿತ ಆಗಮನ ಸ್ವರ್ಗವನ್ನೇ ತೆರೆಯುತ್ತದೆ. ಮದುಮಗಳಾಗಿದ್ದ ತಿಮ್ಮಿ ತನ್ನೆಲ್ಲಾ ಒಡವೆಗಳನ್ನು ಕಳಚಿಅವ್ವ ಕೊಟ್ಟ ಬುತ್ತಿಯೊಡನೆ ಪ್ರಣಯೋತ್ಸಾಹದಿಂದ ತಾನೂ ಬಯಸಿದ್ದವನೊಡನೆ ರಾತ್ರೋರಾತ್ರಿ ಹೊರಟು ಬಿಡುತ್ತಾಳೆ.

ಆದರೆ ನಿಸರ್ಗದಿಂದ ದೂರವಾದುದಲ್ಲ ಗುತ್ತಿ ಮತ್ತು ತಿಮ್ಮಿಯರು ದೇಶಾಂತರವಾಗುವುದು ತಮ್ಮ ಸಮಾಜದ ಬಹಿಷ್ಕಾರಕ್ಕೆ ಭಯತಟ್ಟಿಲ್ಲ, ಪೋಲೀಸರ ಭಯದಿಂದ ಮಾತ್ರ, ಗುತ್ತಿ ಮತ್ತು ತಿಮ್ಮಿಯರ

ಪಾತ್ರಗಳ ಅಭ್ಯಾಸದಿಂದ ಹೊ ಳೆಯುವ ಸತ್ಯವೆಂದರೆ ಅವರಿಬ್ಬರೂ ನಿಸರ್ಗದಲ್ಲಿ ಹೇಗೆ ಒಂದಾಗಿ ಬೆರೆತು ಹೋಗಿದ್ದಾರೆ ಎನ್ನುವುದು, ಜೊತೆಗೆ ಈ ಪಾತ್ರಗಳ ಮುಖಾಂತರ ಅವು ಪ್ರತಿನಿಧಿಸುವ ನಾಗರಿಕ ದೃಷ್ಟಿಯಲ್ಲಿ ಕೀಳುವರ್ಗವೆಂದು ಪರಿಗಣಿಸಲ್ಪಟ್ಟಿರುವ ಅವರ ಜನಾಂಗ ಕೂಡ ನಿಸರ್ಗಕ್ಕೆ ಬೆಸೆದುಕೊಂಡಿರುವುದು ಸ್ಪಷ್ಟವಾಗುತ್ತದೆ.

ಐತ ಮತ್ತು ಪಿಂಚಲು

ಹೊಟ್ಟೆಪಾಡಿಗಾಗಿ ಗಟ್ಟದ ತಗ್ಗಿನಿಂದ ಬಂದ ಬಿಲ್ಲವರ ಜಾತಿಯ ಐತ ಮತ್ತು ಪೀಂಚಲು ಗುತ್ತಿ ಮತ್ತು ತಿಮ್ಮಿಯರ ಹಾಗೆ ಮಲೆನಾಡ ಗಟ್ಟಿ ನೆಲದಲ್ಲಿ ಬೇರು ಬಿಟ್ಟಿದ್ದರೂ ಅಲ್ಲಿನ ಬದುಕಿಗೆ ಪರಕೀಯರಾಗಿ ಉಳಿಯುವುದಿಲ್ಲ, ಗಟ್ಟದ ತಗ್ಗಿನವರಾದರೂ ಶೂದ್ರರಾದ ಇವರ ಗುಣಗಳು ಪ್ರಕೃತಿಯ ಗುಣಗಳೇ ಆಗಿರುವುದರಿಂದ ಇವರು ಮಲೆನಾಡಿನ ಬದುಕಿನಲ್ಲಿ ಸಹಜವಾಗಿ ಒಂದಾಗಿ ಜೀವಂತ ಪಾತ್ರಗಳಾಗಿ ಬಿಡುತ್ತಾರೆ.

ಐತ ಮತ್ತು ಪೀಂಚಲು ಆರೇಳು ವರ್ಷ ಮುಕುಂದಯ್ಯನ ಸಂಗಾತಿಗಳಾಗಿರುತ್ತಾರೆ. ಅವನ ಜೊತೆ ಹಕ್ಕಿ ಬೇಟೆ, ಮೀನು ಬೇಟೆ, ಉರುಳು ಬೇಟೆ ಇವುಗಳಲ್ಲಿ ಭಾಗಿಯಾಗುತ್ತಿದ್ದ ಐತ ಬೇಟೆಯೆಂದರೆ, ಪ್ರಾಣ ಬಿಡತೊಡಗುತ್ತಾನೆ. ಬಿಲದಲ್ಲಿ ಮತ್ತು ಕಪ್ಪೆಗೋಲು ಹಾಕಿ ಕಾರೇಡಿ ಹಿಡಿಯುವುದರಲ್ಲಿ ಪರಿಣಿತನಾಗುತ್ತಾನೆ. ಪೀಂಚಲು ಕೂಡ ಗಂಡು ಹುಡುಗರ ಹಾಗೆ ಅಡಿಕೆ ಮರ ಹತ್ತಿರ ಹೊಂಬಾಳೆ ಕೀಳುತ್ತಾಳೆ. ಐತ ಮುಕುಂದಯ್ಯನ ಹುಳುಗಳಿಗೆ ಹೆದರದೆ ಓಡಿದರೂ ತಾನು ಹೆದರದೆ ಜೇನು ಹುಳುಗಳೂ ಕಚ್ಚಿದರೂ ಬಿಡದೆ ಹುತ್ತದೊಳಗೆ ಕೈ ತುರುಕಿ ತುಡವೆ ಜೇನು ಕೀಳುತ್ತಾಳೆ. ತಾವು ಜೀತದಾಳುಗಳು ಹೊಟ್ಟೆಪಾಡಿಗಾಗಿ ಹೊರಗಿನಿಂದ ಬಂದವರು ಎನ್ನುವ ಭಾವನೆಗಳನ್ನು ಕಿಂಚಿತ್ತೂ ಸುಳಿಸುವುದಿಲ್ಲ ಐತ ಮತ್ತು ಪೀಂಚಲು ಮಲೆನಾಡ ಮಣ್ಣೀನ ಮಕ್ಕಳಾಗಿ ಬಿಡುತ್ತಾರೆ.

ಐತ ಕೂಡ ಆಗೀಗ ಧೂರ್ತ ಚೀಂಕ್ರನ ಚಾಡಿಮಾತುಗಳಿಂದ ಅಸ್ವಸ್ಥನಾದರೂ ಪಿಂಚಲು ಮನೆಯೊಳಗೆ ಕಾಲಿಟ್ಟು ಮುಗುಳ್ನಕ್ಕೂ ಒಂದು ಮಾತಾಡಿದರೆ ಸಾಕು ನಟಕ್ಕನೆ ಎಲ್ಲ ಮರೆತು ಪ್ರಪುಲ್ಲವಾಗುತ್ತಾನೆ. ಕತ್ತಲಲ್ಲಿ ಶೂನ್ಯ ಮನಸ್ಕನಾಗಿ ಪೀಂಚಲು ತನಗೆ ದ್ರೋಹ ಮಾಡುತ್ತಿದ್ದಾಳಲ್ಲ ಎಂದು ಬೆಳಕು ಕಾಣದೆ ತಡವರಿಸುತ್ತಿದ್ದಾಗ, ಪೀಂಚಲು ಆಗಮನದಿಂದ ಬಾಳು ಹಿಗ್ಗಿತು.

ಹುಟ್ಟಿನಿಂದ ನೆಲ, ಬಾನು, ಕಾಡು, ಮಲೆ ವಿಧವಿಧ ಪಕ್ಷಿ ಮೃಗಗಳು ಹೀಗೆ ಪ್ರಕೃತಿಯ ಸಹಜ ವಸ್ತುಗಳಲ್ಲಿ ಒಂದಾಗಿ ಅವೇ ಬದುಕಾಗಿಬಿಟ್ಟಿದ್ದ ಮಲೆನಾಡಿನ ಜನಕ್ಕೆ ಪಾದ್ರಿ ಜೀವರತ್ನಯ್ಯನ ಬೈಸಿಕಲ್ ಒಂದು ಅದ್ಭುತ ಪವಾಡ ಹಾಗೆ ಮಲೆನಾಡಿಗೆ ಕಾಲಿಡುತ್ತಿರುವ ನಾಗರೀಕತೆಯ ಸಂಕೇತ, ಬೈಸಿಕಲ್ ಸವಾರಿ ನೋಡಲು ಸುತ್ತಮುತಿನ ಊರ ಜನರೊಡನೆ ಐತ ಮತ್ತು ಗುತ್ತಿ ಕೂಡ ನೆರೆದಿರುತ್ತಾರೆ.

ಐತ ಪೀಂಚಲು ಇವರ ಜೀವನಕ್ಕೆ ನೇರ ವೈದ್ಯಶ್ಯದಂತಿರುವುದು ಅಕ್ಕಣಿ– ತಿಜಗಾರೆ ಜೀವನ ಅಕ್ಕಣಿಯ ಕಷ್ಟಗಳಿಗೆ ಮತ್ತು ಆಕೆ ಚೀಂಕ್ರನಿಗೆ ತನ್ನ ದೇಹ ಒಪ್ಪಿಕೊಳ್ಳುವುದಕ್ಕೆ ಕಾರಣ ಸ್ಪಷ್ಟವಾಗಿದೆ. "ಆಕೆ ಸೇರೆಗಾರನಿಗೆ ಮನಸ್ಸು ಸೋತು ಒಡಲನ್ನು ಒಪ್ಪಿಸಿರಲಿಲ್ಲ. ಆಕೆ ಕಾಲು ಜಾರುವುದಕ್ಕೆ ಕಾರಣಗಳು ಸಮಯ ಸನ್ನಿವೇಶ ಮತ್ತು ದಾಕ್ಷಿಣ್ಯ ಆಕೆ ರಂಗಪ್ಪಗೌಡರಿಗೆ ದೇಹ ಒಪ್ಪಿಸುವುದಕ್ಕೂ ಸನ್ನಿವೇಶವೆ ಕಾರಣವೆನ್ನಬಹುದು. ಆಕೆಯ ಗಂಡ ಪಿಜಿಣ, ಹೆಣ್ಣಿನ ಜೀವನದಲ್ಲಿ ಗಂಡು ವಹಿಸಬೇಕಾದ ಪಾತ್ರವನ್ನು ವಹಿಸುವ ಸ್ಥಿತಿಯಲ್ಲಿಲಿಲ್ಲದಿರುವುದು ಆದರೆ ನಾವು ಆಕೆಯ ಜೀವನವನ್ನು ಕೇವಲ ಒಂದು ವೈಯಕ್ತಿಕ ಜೀವನವೆಂದು ಗಣಿಸದೆ, ಕಾದಂಬರಿಯ ವಸ್ತುವಿನ ಬೆಳವಣಿಗೆಗೆ ಸಹಾಯ ಮಾಡುವ ಘಟನೆಯೆಂದು ಗಣಿಸಿದರೆ, ಕೆಲವು ಮುಖ್ಯ ಸಮಸ್ಯೆಗಳನ್ನು ಎದುರಿಸಬಹುದಾಗಿದೆ.

ಗೌಡ ಕುಟುಂಬಗಳಲ್ಲಿ ಕಾಣುವ ಸಿಂಬಾವಿ ಜಟ್ಟಮ್ಮ– ಲಕ್ಷ್ಮಮ್ಮ ಹಳೆಮನೆ ರಂಗಮ್ಮ ಮಂಜಮ್ಮ ಸೀತಮ್ಮ ಬೆಟ್ಟಳ್ಳಿಯ ದೇವಮ್ಮ ದೊಡ್ಡಮ್ಮ, ಹೆಗ್ಗಡತಿ– ಗೌಡಮನೆತನಕ್ಕೆ ಸೇರದಿದ್ದರೂ ಬಾವಿ ಕೊಪ್ಪದ ಸೀರುಡಿಕ ಜೋಡಿ ಎನಿಸಿಕೊಂಡು ನಾಗಕ್ಕೆ–ನಾಗತ್ತೆ ಹಾಗೂ ಇವರ ಮಟ್ಟಕ್ಕೇರಲಾದ ಕೂಲಿಯಾಳುಗಳೆನಿಸಿಕೊಂಡ ಬೇಲರ, ಹಲಸ ಹೊಲೆಯರ ಹೆಣ್ಣುಗಳಾದ ಪಿಂಚಲು ಅಕ್ಕಗೆ ತಿಮ್ಮಿ ಸೇಸಿ ಎಲ್ಲಾರು ಯಾವ ಬೇಧಭಾವವೂ ಇಲ್ಲದೇ ತಮ್ಮ ತಮ್ಮ ಸ್ಥಾನದಲ್ಲಿಯೇ ಸ್ಥಿರತೆಯನ್ನು ಕಂಡುಕೊಂಡಿದ್ದಾರೆ.

ಸಿಂಬಾವಿ ಭರಮ್ಮೈ ಹೆಗ್ಗಡೆಯವರ ಮನೆಯಲ್ಲಿ ಅತ್ತಿಗೆ ನಾದಿನಿಯರು ಎಣ್ಣೆ ಸೀಗೆಕಾಯಿಯಾಗಿದ್ದರು.

ಜಟ್ಟಮ್ಮ ತನ್ನ ಗಂಡ ಎರಡನೇ ಮದುವೆಯಾಗುತ್ತಿರುವುದಕ್ಕೆ ತನ್ನ ಬಂಜೆತನವೇ ಕಾರಣವಿರಬಹುದೆಂದು ಗಂಡನ ಮೇಲೆ ಕೋಪ, ಇನೂ ಮದುವೆಯಾಗದ ಲಕ್ಕಮ್ಮನ ಮೇಲೆ ತೀರಿಸಿಕೊಂಡು ಹೃದಯವನ್ನು ತಂಪು ಮಾಡಿಕೊಳ್ಳುತ್ತಿದ್ದರು.

ಹಳೆಮನೆಯ ಹೆಂಚಿನ ಮನೆಯಲ್ಲಿ ನಾಗರಿಕ ಪ್ರಭಾವಕ್ಕೊಳಗಾದ ಗಂಡನಿಗೆ ಹೊಂದಿಕೊಂಡು ಬಾಳುವೆ ಮಾಡಿದ ಸೀತಮ್ಮ ಆದರ್ಶ ಪತ್ನಿ –ಅಚಿ–ರುಚಿ–ಜೀವನವನ್ನು ಸಾಗಿಸುತ್ತಿದ್ದರೂ ಗಂಡನ ದೇಹದಾಸೆಗೆ ತುತ್ತಾಗಿ ಶರೀರ ಕಡ್ಡಿಯಾಗಿದ್ದರೂ ಗಂಡನನ್ನು ಎದುರಿಸಲಾರದೆ, ಹೆರುವ ಯಂತ್ರವಾಗಿ ಮಾನಸಿಕ ತೃಪ್ತಿ ಕಾಣದೆ ಬಂಧು–ಬಳಗ ಪ್ರೀತಿಯನ್ನು ಸಂಪಾದಿಸಲಾರದೆ, ಪಾಲಿಗೆ ಬಂದದ್ದೇ ಪಂಚಾಮೃತವೆಂದು ತಿಳಿದು ಬಾಳುವೆ ಮಾಡಿದವಳು ಸೀತಮ್ಮ.

ಹಳೆಮನೆ ಅತ್ತಿಗೆ ನಾದಿನಿಯರಲ್ಲಿ ಮದುವೆಯಾಗದ ತರುಣಿ ಮಂಜಮ್ಮ ಗಂಡನನ್ನು ಕಾಣುವ ಬಯಕೆಯ ಕಾತುರದಲ್ಲಿಯೇ ಹುಚ್ಚ ಹೆಗ್ಗಡ್ತಿ ಎನಿಸಿಕೊಂಡು ಮೈದುನನಿಂದ ಪಡಬಾರದ ಕಷ್ಟಪಟ್ಟು ಗಂಡನ ಶವಸಂಸ್ಕಾರದಲ್ಲೇ ತನ್ನ ಅಂತ್ಯ ಕಂಡ ಸಾಧ್ವಿ ರಂಗಮ್ಮ ಹೆಗ್ಗಡತಿ– ಮಂಜಮ್ಮ ತನ್ನ ಆಸೆ

ಆಕಾಂಕ್ಷೆಗಳನ್ನೆಲ್ಲಾ ಮನಸ್ಸಿನಲ್ಲಿಯೇ ಅದುಮಿಟ್ಟು ತನ್ನ ತಂದೆಯ ಮಾತಿಗೆ ಎದುರಾಡದೆ ತಂದೆಯ ಜಿಪುಣತನದಿಂದ ಇಳಿವಯಸ್ಸಿನ ಭರಮ್ಮೆ ಹೆಗ್ಗಡೆಗೆ ಎರಡನೆಯ ಹೆಂಡತಿಯಾಗುತ್ತಾಳೆ.

ಬೆಟ್ಟಳ್ಳಿಯ ದೇವಮ್ಮನಂತೂ ತನ್ನ ಗಂಡ ದೇವಯ್ಯ ಜಾತಿಯಲ್ಲದ ಜಾತಿ ಕ್ರಿಶ್ಚಿಯನ್ ಪ್ರಭಾವಕ್ಕೊಳಗಾಗಿ ತನ್ನನ್ನೂ ಜಾತಿ ಕೆಡಿಸಲು ಪ್ರಯತ್ನಿಸುತ್ತಿದ್ದಾನೆಂದು ತಿಳಿದಾಗ ನಮ್ಮನ್ನು ಬಾವಿಗೊ ಕೆರೆಗೋ ತಳ್ಳಿ ಆಮೇಲೆ ಏನು ಬೇಕಾದ್ರೂ ಮಾಡಿ ಎಂದೊ ಒಮ್ಮೊಮ್ಮೆ ಎದುರಿನಲ್ಲಿ ಆಡಿದರೂ ತನ್ನ ಗಂಡ ಪಾದ್ರಿ ಮಗಳ ಮೋಹಜಾಲಕ್ಕೆ ಬೀಳುತ್ತಿದ್ದಾನೆಂದು ಅಂತರೂ ಏನೂ ಹೇಳಲಾಗದೆ ಮೌನವಾಗಿಯೇ ಕಣ್ಣೀರು ಸುರಿಸುತ್ತಾಳೆ.

ದೇವಮ್ಮನ ಅತ್ತೆ ದೊಡ್ಡಮ್ಮ ಹೆಗ್ಗಡತಿಯಂತು ಅಲ್ಲಲ್ಲಿ ಕಾಣಿಸಿಕೊಂಡರು ತಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ಉಳಿಯುತ್ತಾರೆ.

ಹೂವಳ್ಳಿಯ ಚೆನ್ನಮ್ಮನ ತಾಯಿಯ ಅಕಾಲ ಮರಣಕ್ಕೆ ಗಂಡ ವೆಂಕಣ್ಣನ ಸಂಸ್ಕೃತಿ ಅಭಾವ ಪಶುಬಲಿಷ್ಠತೆಗಳು ಪ್ರಮುಖ ಕಾರಣವಾಗಿದ್ದವು.

ಕಾದಂಬರಿಯಲ್ಲಿ ಕಾಣುವ ಅಸಹಾಯ ಕುಟುಂಬವೆಂದರೆ ಅಂತಕ್ಕ ಸೆಟ್ಟಿಯದು, ಅದರಲ್ಲಿಯೂ ಆಕೆಯ ಮಗಳು ಕಾವೇರಿಯಂತೂ ತನ್ನನ್ನು ಕಡೆಯವರೆಗೂ ಕೈಬಿಡಲಾರನೆಂದು ದೇವಯ್ಯನನನ್ನು ನಂಬಿ ಕೆಟ್ಟಳು. ಆತನೊಬ್ಬನನ್ನು ಬಿಟ್ಟರೆ, ಆಕೆ ಗುತ್ತಿಯನ್ನಾಗಲೀ ಸಾಬರನ್ನಾಗಲೀ ಪ್ರಶಂಸನೀಯ ದೃಷ್ಟಿಯಿಂದ ಕಾಣುತ್ತಿದ್ದಳೇ ಹೊರತು, ಅನ್ಯದೃಷ್ಟಿಯಿಂದಲ್ಲ, ಅದಕ್ಕೆ ಅವರ ಅಡ್ಡಗೋಡೆ ಭದ್ರವಾಗಿದ್ದುದರಿಂದ ಅದೇ ಅವಳ ಧೈರ್ಯವನ್ನು ಪುಷ್ಟೀಕರಿಸಿತು. ಆದರೆ ದೇವಯ್ಯನ ಪ್ರೀತಿಯನ್ನು ಸಂಪಾದಿಸಲು ವಿದುರನಿಗೆ ಹೆಂಡತಿಯಾಗುವುದನ್ನು ತಪ್ಪಿಸಿಕೊಳ್ಳಲು ಹೋಗಿ ಯಾರು ತನ್ನಿಂದ ದೂರ ತಿಳಿದಿದ್ದಳೋ ಅವರೆಲ್ಲದಿಂದಲೇ ದುರಂತ ಮರಣವನ್ನುಪ್ಪುತ್ತಾಳೆ. ಆಕೆಯೂ ಚಿನ್ನಮ್ಮನಂತೆಯೇ ಓಡಿ ಹೋಗಲು ಮನಸ್ಸು ಮಾಡಿದರೂ ಧೈರ್ಯವಿಲ್ಲದೇ ತನ್ನ ಅನಿಸಿಕೆಗಳನ್ನು ಅಲ್ಲಿಯೇ ಚಿವುಟುತ್ತಾಳೆ. ಮಗಳು ಅತ್ಯಾಚಾರಕ್ಕೊಳಗಾಗಿ ದುರಂತವನ್ನಪ್ಪಿದರೂ ತಾಯಿಯಾದ ಅಂತಕ್ಕ ಬಾಯ್ಬಿಟ್ಟು ಹೇಳುವವಳಾಗುತ್ತಾಳೆ. ಆಕೆ ಮಗಳನ್ನು ಕಳೆದುಕೊಂಡು ನಿರಾಶೆಯ ಬದುಕನ್ನು ಬಾಳುತ್ತಾಳೆ.

ಚೀಂಕ್ರನ ಹೆಂಡತಿ ದೇಯಿಯ ಸ್ಥಿತಿಯಲ್ಲಿ ನೆರೆಹೊರೆಯ ಪೀಂಚಲು-ಅಕ್ಕಗೆ ಸಹಾಯಕರಾಗಿ ನಿಲ್ಲುತ್ತಾರೆ. ತಾಯಿ ಸತ್ತ ಚೀಂಕ್ರನ ಮಕ್ಕಳನ್ನು ಅಕ್ಕಗೆ ರಕ್ಷಿಸುತ್ತಾಳೆ. ಸೀತೆ ಮಾನಸಿಕ ರೋಗಿಯಾಗಿದ್ದಾಗ ಗೌರಮ್ಮ ಹರಕೆಯ ಮೇಲೆ ಹರಕೆ ಕಟ್ಟುವಲ್ಲಿ ತೊಡಗಿದ್ದರು. ನಾಗಮ್ಮ ಮಗನಿಗಾಗಿ ಮುಡಿಪು ಕಟ್ಟುವಲ್ಲಿ ತನ್ನ ಗಂಡನನ್ನು ರಕ್ಷಿಸಿಕೊಳ್ಳಲು ದೇವಮ್ಮ ದೇವರ ಮೊರೆ ಹೊಕ್ಕಲಿ ಕಾಣಬಹುದು.

ಗುತ್ತಿ ತಿಮ್ಮಿಯನ್ನು ಹಾರಿಸಿಕೊಂಡು ಬರುವುದು ಗುತ್ತಿ ಪೋಲೀಸರಿಂದ ತಪ್ಪಿಸಿಕೊಂಡು ಹೋಗುವುದು, ಕಲ್ಲೇಗೌಡರ ಆಜ್ಞೆ ಪ್ರಕಾರ ಇಜಾರದ ಸಾಬು ಸಣ್ಣ ಬೀರನನ್ನು ಕಟ್ಟಿ ಹುಣಸೆ

ಬರಲಿನಿಂದ ಹೊಡೆಯುವುದು, ಗುತ್ತಿನಾಯಿ ಹುಲಿಯ ಪ್ರವಾಹದಲ್ಲಿ ಕೊಚ್ಚಿ ಹೋಗುವುದು, ಸುಬ್ಬಣ್ಣ ಹೆಗ್ಗಡೆ ಮಗನಿಗಾಗಿ ಪಡುವ ವ್ಯಥೆಯನ್ನು ಗಂಡನನ್ನು ಕಳೆದುಕೊಂಡು ರಂಗಮ್ಮನ ದುಃಖ ಮುಕುಂದಯ್ಯ –ಚಿನ್ನಮ್ಮರ ಮಾನಸಿಕ ಏರಿಳಿತ ನೋಡಬಹುದಾಗಿದೆ.

ಈ ಎರಡೂ ಕಾದಂಬರಿಗಳಲ್ಲಿ ಕಥೆಗಳು ನಡೆಯುವ ಕಾಲ ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ಅತ್ಯಂತ ಮಹತ್ವದ ಸಂಧಿಕಾಲ ನಿಧಾನವಾಗಿಯಾದರೂ ಸ್ಪಷ್ಟವಾಗಿ ಹಳೆಯ ಕಾಲದ್ದೆನ್ನಬೇಕಾದ ಬದುಕಿನ ರೀತಿ ನೀತಿಗಳು, ರೂಢಿ ಸಂಪ್ರದಾಯಗಳು, ಹೊಸ ಕಾಲದ ಪ್ರಭಾವ ಒತ್ತಡಗಳಿಗೆ ಒಳಗಾಗುತ್ತಿದ್ದ ಕಾಲಾವಧಿ ಅದು, ಕಾನೂರು ಕಾದಂಬರಿ ಮೊದಲು ಬರದಿದ್ದಾರೂ ಕಥೆಯ್ ಕಾಲದ ದೃಷ್ಟಿಯಿಂದ ಮಲೆಗಳಲ್ಲಿ ಮದುಮಗಳುಗಿಂತ ಈಚಿನದು. ಕಾನೂರು ಕಾದಂಬರಿಯ ಕಥೆಯ ಕಾಲ ಇಪ್ಪತ್ತನೆಯ ಶತಮಾನದ ಎರಡನೆಯ ದಶಕದ ಮೊದಲಿನ ಒಂದೆರಡು ವರ್ಷಗಳು ಎಂದು ಕಾಣುತ್ತದೆ. ಮುಂದೆ ಮೂರು ವರ್ಷಗಳಲ್ಲಿ ಮಹಾಯುದ್ಧ ನಡೆಯಲಿದ್ದಿತೆಂಬ ಅರಿವು ಕಾದಂಬರಿಯ ಪಾತ್ರವೊಂದಕ್ಕೆ ಇರಲಿಲ್ಲ ಎಂಬ ಮಾತು ಒಂದು ಸಂದರ್ಭದಲ್ಲಿ ಬರುತ್ತದೆ. ಈ ಮಹಾಯುದ್ಧ ಮೊದಲನೆಯ ಜಾಗತಿಕ ಯುದ್ಧವಾಗಿರಲೇಬೇಕಾಗಿದ್ದರಿಂದ ಕಾನೂರಿನ ಕಥೆ ಸಾವಿರದೊಂಬೈನೂರ ಹನ್ನೊಂದರ ಸುಮಾರಿನದಾಗುತ್ತದೆ. ಇದಲ್ಲದೆ ಹೂವಯ್ಯ ಮತ್ತು ರಾಮಯ್ಯ ಮೈಸೂರಿನಲ್ಲಿ ಕಾಲೇಜು ವ್ಯಾಸಂಗದಲ್ಲಿರುತ್ತಾರೆ. ಚಿನ್ನಯ್ಯ ವಿದ್ಯಾಭ್ಯಾಸವನ್ನು ನಿಲ್ಲಿಸಿದವನಾದರೂ ಸಿಗರೇಟು ಸೇದುವ ಅಭ್ಯಾಸವನ್ನಿರಿಸಿಕೊಂಡಿದ್ದಾನೆ. ಹೂವಯ್ಯನ ವೇಷದ ರೀತಿಯಾದರೂ ಅದೇ ಕಾಲವನ್ನು ಸೂಚಿಸುತ್ತದೆ. ಮಹಾಯುದ್ಧದ ನಂತರ ನಮ್ಮ ದೇಶದಲ್ಲಿ ನಡೆದ ಮಹತ್ತರವಾದ ಯಾವ ಘಟನೆಯ ನಿರ್ದೇಶವೂ ಕಾದಂಬರಿಯಲ್ಲಿ ಬರುವುದಿಲ್ಲ ಎನ್ನುವುದನ್ನು ಮತ್ತು ಅನುಕೂಲವಂತರು ಉಚ್ಛ ಶಿಕ್ಷಣಕ್ಕಾಗಿ ಮಕ್ಕಳನ್ನು ಮೈಸೂರಿನಂತಹ ದೂರದ ಊರಿಗೆ ಕಳುಹಿಸುತ್ತಿದ್ದರು. ಅಂಥ ವಿದ್ಯಾಭ್ಯಾಸದ ಅಗತ್ಯ ಮತ್ತು ಮಹತ್ವ ಸಾಕಷ್ಟು ಪ್ರಚಾರಗೊಂಡು ಯುವಕ, ಜನಾಂಗವನ್ನು ಪ್ರಭಾವಿಸುವ ಮಟ್ಟಿಗೆ ಬೆಳೆದಿದ್ದವು, ಎನ್ನುವುದನ್ನು ಗಮನಿಸಿದಾಗ ಮೇಲೆ ನಿರ್ದೇಶಿಸಿದ ಕಾಲಾವಧಿ ಖಚಿತವಾಗುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಾಲ ನಿರ್ದೇಶಕ ಸ್ಪಷ್ಟವಾಗಿದೆ. ತೀರ್ಥಹಳ್ಳಿಯ ಪಾದ್ರಿ ಜೀವರತ್ನಯ್ಯ ಸಿಂಧುವಳ್ಳಿ ಚಿನ್ನಪ್ಪನ ಮನೆಯನ್ನು ಪ್ರವೇಶಿಸಿದ ದಿನವೇ ಕ್ರೈಸ್ತ ಮತದ ಶ್ರದ್ಧೆಯ ಮತ್ತು ಮಿಶನರಿ ಮತಾಂಧತೆಯ ಶಕ್ತಿಕೇಂದ್ರವಾಗಿದ್ದ ಅಮೆರಿಕಾ ದೇಶದ ಚಿಕಾಗೊ ನಗರದಲ್ಲಿ ನೆರೆದಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದ ಮತ್ತು ವೇದಾಂತದರ್ಶನದ ಮಹೋನ್ನತಿಯನ್ನೂ ವಿಶ್ವವೈಶಾಲ್ಯವನ್ನೂ ತಮ್ಮ ಸಿಂಹಕಂಠದಿಂದ ಘೋಷಿಸಿದರು. ಇದು ನಡೆದದ್ದು ೧೮೯೩ ನೆಯ ಇಸವಿ ಸೆಪ್ಟೆಂಬರ್ ೧೧ನೆಯ ತೇದಿ, ಸೋಮವಾರ ಸಿಂಧುವಳ್ಳಿ ಚೆನ್ನಪ್ಪ ಪಾದ್ರಿಯ ಮೊತ್ತಮೊದಲ ಬೇಟಿಯಾಗಿದ್ದ ಈ ಕಥೆ ನಡೆಯುತ್ತಿದ್ದ ಕಾಲಕ್ಕೆ ಸುಮಾರು ಎರಡು ಮೂರು ವರ್ಷಗಳ ಹಿಂದೆ ಅಂದರೆ ಸ್ವಾಮಿ ವಿವೇಕಾನಂದರ ಭಾರತ ಖಂಡಕ್ಕೆ ಹಿಂದಿರುಗಿ ಕೊಲಂಬೋ ಇಂದ

ಅಲ್ಮೋರದವರೆಗೂ ಭಾಷಣ ಯಾತ್ರೆ ಮಾಡಿ ರಾಷ್ಟ್ರ ಕುಂಡಲಿನೀ ಶಕ್ತಿಯನ್ನು ಉದ್ಬೋಧನಗೊಳಿಸಿದ ಕಾಲಕ್ಕೂ ನಾಲ್ಕಾರು ವರ್ಷಗಳ ಪೂರ್ವದಲ್ಲಿ ಇರಬಹುದು. ಈ ರೀತಿ ನಾವು ಕುವೆಂಪು ಅವರ ಮಹಾಕಾದಂಬರಿಗಳ ಸ್ಥೂಲನೋಟವಾಗಿ ನೋಡಬಹುದಾಗಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯ ಸ್ಥೂಲನೋಟ:

ಪರಿಚಯ

೧. ಸಿಂಬಾವಿ

ಭರಮೈ ಹೆಗ್ಗಡೆ

- → ಜಟ್ಟಮ್ಮ (ಹೆಂಡತಿ– ಹಳೆಮನೆ ಶಂಕರಪ್ಪ ಹೆಗ್ಗಡೆಯ ತಂಗಿ)
- → ಲಕ್ಷ್ಮಮ್ಮ (ತಂಗಿ)
- → ಮಂಜಮ್ಮ (ಎರಡನೆಯ ಹೆಂಡತಿಯಾಗಿ ಬರುವ ಹಳೆಮನೆ ಸುಬ್ಬಣ್ಣ ಹೆಗ್ಗಡೆಯ ಮಗಳು)

ಜೀತದಾಳುಗಳು

- → ಕರಿಸಿದ್ದ
- → ಗುತ್ತಿ
- → ಮರಾಟಿ ಮಂಜ
- → ದೊಳ್ಳ
- → ಸಣ್ಣತಿಮ್ಮ
- → ಬುಲ್ಡ

೨. ಕೋನೂರು

ರಂಗಪ್ಪಗೌಡ

→ ದಾನಮ್ಮ (ತಾಯ, ಕಾಗಿನ ಹಳ್ಳಿಯ ಅಮ್ಮ)

→ ಮುಕುಂದಯ್ಯ (ತಮ್ಮ –ಹೂವಳ್ಳಿ ಚಿನ್ನಮ್ಮನೊಡನೆ ವಿವಾಹ)

→ ರಂಗಮ್ಮ (ಅಕ್ಕ –ಹಳೆಮನೆ ದೊಡ್ಡಣ್ಣ ಹೆಗ್ಗಡೆ ಪತ್ನಿ)

→ ತಿಮ್ಮು (ಮಗ)

ಜೀತದಾಳುಗಳು

ಚೀಂಕ್ರ   ಪಿಜಣ   ಐತ   ಮೊಡಂಕಿಲ

→ ದೇಯಿ(ಹೆಂಡತಿ) – ಅಕ್ಕಣಿ (ಹೆಂಡತಿ) ಪೀಚಲು (ಹೆಂಡತಿ) ಬಾಗಿ (ಹೆಂಡತಿ)

→ ಮೂವರು ಮಕ್ಕಳು

೩. ಹಳೆಮನೆ

ರಂಗಪ್ಪಗೌಡ		ಶಂಕರಪ್ಪ ಹೆಗ್ಗಡೆ
→ ಸುಬ್ಬಣ್ಣ ಹೆಗ್ಗಡೆ	→	ಸೀತಮ್ಮ (ಹೆಂಡಾತಿ)
→ ದೊಡ್ಡಣ್ಣ ಹೆಗ್ಗಡೆ (ಹಿರಿಮಗ)	→	ರಾಮು (ಮಗ)
→ ರಂಗಮ್ಮ (ಹೆಂಡತಿ) ಧರ್ಮು(ಮಗ)	→	ಕೆಂಪಿ (ಆಳು)
→ ತಿಮ್ಮಪ್ಪ ಹೆಗ್ಗಡೆ (ಕಿರಿಮಗ)		
→ ಮಂಜಮ್ಮ (ಮಗಳು ಸಿಂಬಾವಿ ಭರಮೈ ಹೆಗ್ಗಡೆ ಜೊತೆ ವಿವಾಹ)		

ಜೀತದಾಳುಗಳು

ಮಂಜ ತಿಮ್ಮ ಕುಳಿವಾಣಿಸಣ್ಣ ಭೈರ ಬಚ್ಚ ಸಣ್ಣತಿಮ್ಮ ಪುಟ್ಟ

ಸಿದ್ದಿ(ಹೆಂಡತಿ) ಪುಟ್ಟಿ (ಮಗಳು)

ಗಂಗ (ಮಗ)

೪. ಬೆಟ್ಟಳ್ಳಿ

→ ದೊಡ್ಡಮ್ಮ ಹೆಗ್ಗಡತಿ (ಹೆಂಡತಿ)

→ ದೇವಯ್ಯ (ಮಗ)

→ ದೇವಮ್ಮ (ಹೆಂಡತಿ–ಕೊಲಿಬಾರು ಮುಕುಂದಯ್ಯನ ತಂಗಿ)

→ ಚಲುವಯ್ಯ (ಮಗು)

→ ಕಾಡು (ಕಿರಿಯಮಗ)

ಜೀತದಾಳುಗಳು

→ ದೊಡ್ಡಬೀರ

→ ಸೇಸಿ (ಹೆಂಡತಿ)

→ ಸಣ್ಣಬೀರ (ದೊಡ್ಡಮಗ)

→ ಪುಟ್ಟಂಬೀರ (ಕಿರಿ ಮಗ)

→ ಚಿಕ್ಕಪುಟ್ಟಿ (ಹೆಂಡತಿ)

→ ತಿಮ್ಮಿ (ಮಗಳು) (ಗುತ್ತಿಯೊಂದಿಗೆ ಮದುವೆ)

→ ಬಚ್ಚ

೫. ಮೇಗರವಳ್ಳಿ

→ ಕಣ್ಣಾಪಂಡಿತ

→ ಇಜಾರದ ಸಾಬು

→ ಕರೀಂ ಸಾಬು (ಕರಿಮೀನು ಸಾಬು)

→ ಲುಂಗಿ ಸಾಬು

→ ಪುಡಿ ಸಾಬಿ

→ ಅಂತಕ ಸೆಟ್ಟಿ

→ ಕಾವೇರಿ (ಮಗಳು)

→ ಸುಬ್ಬಯ್ಯ ಸೇಟ್ಟಿ (ಗಂಡ)

→ ಕಿಟ್ಟಯ್ಯಶೆಟ್ಟಿ (ಸೋದರಳಿಯ)

→ ಜೀವರತ್ನಯ್ಯ (ಪಾದ್ರಿ)

→ ಜ್ಯೋತಿರ್ಮಣಿಯಮ್ಮ (ಮಗಳು)

೬. ಲಕ್ಕುಂದ

→ ಸೇಸನಾಯ್ಕ ರಂಗಾ ಪುಟ್ಟಾನಾಯ್ಕ

→ ಹಮೀರ ನಾಯ್ಕ (ಮಗ) ಚೌಡಿ (ಹೆಂಡತಿ)

→ ಕಾಡಿ (ಅತ್ತೆ)

→ ಸಿತೂರು ತಿಮ್ಮಾನಾಯ್ಕ (ಸೇಸಾನಾಯ್ಕನ ಸಂಬಾನಿ)

೭. ಕಲ್ಲೂರು

→ ಸಾಹುಕಾರ ಮಂಜಾಭಟ್ಟ

ಕಿಟ್ಟೆತಾಳ

→ ನಾರಾಯಣ ಭಟ್ಟ (ಮಗ)

೮. ಹೂವಳ್ಳಿ

ವೆಂಕಟಣ್ಣ

→ ನಾಗಕ್ಕ (ವೆಂಕಟಣ್ಣನ ಎರಡನೆಯ ಹೆಂಡತಿ)

→ ಚಿನ್ನಮ್ಮ (ವೆಂಕಟಣ್ಣನ ಮೊದಲನೆ ಹೆಂಡತಿ ಮಗಳು)

→ ಅಜ್ಜಿ (ಚಿನ್ನಮ್ಮನ ತಾಯಿಯ ತಾಯಿ)

೯. ಇತರೆ ಪಾತ್ರಗಳು

→ ಗಡ್ಡದಯ್ಯ

→ ಕಾನೂರು ಚಂದ್ರಯ್ಯಗೌಡ

→ ಸೀತೆಮನೆ ಸಿಂಗಪ್ಪಗೌಡ

→ ಮಾಯಿಂದಪ್ಪ (ಪೋಲೀಸಿನವನು)

→ ಹಳೆಪೈಕದ ವೆಂಕಿ

→ ನಾಗತ್ತೆ (ನಾಗಕ್ಕನ ಮೊದಲನೆ ಗಂಡನ ತಾಯಿ)

→ ಹೊಸಕೇರಿ ಬಸಪ್ಪನಾಯಕ

→ ಐಗಳು ಅನಂತಯ್ಯ

→ ಮೂಗೂರು ಗಣಮಗ

ಅಧ್ಯಾಯ-೬

ಕಾನೂರು ಹೆಗ್ಗಡತಿಯಲ್ಲಿ ಕೃಷಿಯ ಪಾತ್ರ

ರಾಮತೀರ್ಥದೆಡೆಗೆ ಕಲ್ಲುಸಾರದ ಮೇಲೆ ಗಾಡಿ (ಮರದ ಗಾಡಿ ಅಥವಾ ಕಮಾನುಗಾಡಿ) ಕೃಷಿಯ ಕೆಲಸಕ್ಕೆ ಉಪಯೋಗಿಸುತ್ತಿದ್ದರು. ಎತ್ತುಗಳು ಇದ್ದವು, ಎತ್ತುಗಳಿಗೂ ಹೆಸರಿಟ್ಟಿದ್ದರು. ನಂದಿ, ಲಚ್ಚ, ಕುರುವಳ್ಳಿಯ ಅರಳಿಕಟ್ಟೆಯ ಬುಡದಲ್ಲಿ ಅವರ ಮನೆಯ ಕಮಾನು ಗಾಡಿ ನಿಂತಿತ್ತು. ನೊಗಕ್ಕೆ ಕಟ್ಟಿದ ಎತ್ತುಗಳೆರಡೂ ಮಲಗಿ ಅರೆಗಣ್ಣು ಮಾಡಿಕೊಂಡು ಮೆಲುಕು ಹಾಕುತ್ತಿದ್ದವು. ಆಗಾಗ ಹಾರಿಬಂದು ಮೈ ಮೇಲೆ ಕೂರುತ್ತಿದ್ದ ನೊಣಗಳನ್ನು ಬಾಲದಿಂದ ಅಟ್ಟಿಕೊಳ್ಳುತ್ತಿದ್ದವು. ಕೆಲವು ಸಾರಿ ಕುತ್ತಿಗೆಯ ಬುಡದಲ್ಲಿಯೂ ತಲೆಯ ಮೇಲೆಯೂ ಕೂರುತ್ತಿದ್ದ ನೊಣಗಳನ್ನು ತಲೆಯಲ್ಲಾಡಿಸಿ ಅಟ್ಟಿಕೊಳ್ಳುವಾಗ ಗಂಟೆಯ ಸರವು ಹತ್ತಾರು ಗಾನದ ಹನಿಗಳನ್ನುಸೂಸಿ ಮತ್ತೆ ನಿಶಬ್ಧವಾಗುತ್ತಿತ್ತು. ಅವುಗಳಲ್ಲಿ ಒಂದು ಎತ್ತು ಕಪ್ಪಾಗಿತ್ತು. ಮತ್ತೊಂದು ಬೂದು ಬಣ್ಣದ್ದು, ಇಬ್ಬರೂ ಗಾಡಿಯ ಬುಡಕ್ಕೆ ಹೋದಾಗ, ಕಪ್ಪು ಎತ್ತು ಗಂಟೆಯ ಸರವನ್ನು ಗಾನಗೈಯುತ್ತಾ ಎಂದು ನಿಂತಿತ್ತು.

ರಾಮ ಮತ್ತು ಪುಟ್ಟಣ ಅವರಿಬ್ಬರಿಗೂ ಆ ಗಾಡಿ ಮತ್ತು ಎತ್ತುಗಳನ್ನು ನೋಡಿ ಮನೆಯವರನ್ನೇ ಕಂಡಂತಾಗಿ ಸಂತೋಷಗೊಂಡರು. ಅವುಗಳನ್ನು ನೋಡಿದ ಅವರ ಮನಸ್ಸಿನಿಂದ ಮೈಸೂರು, ಚಾಮುಂಡಿಬೆಟ್ಟ, ಅರಮನೆ, ಕುಕ್ಕರಹಳ್ಳಿಯ ಕೆರೆ, ಅಠಾರ ಕಛೇರಿ, ಹೈಸ್ಕೂಲು, ಕಾಲೇಜು, ಜನಸಂದಣಿ ಎಲ್ಲವೂ ಮಾಯವಾಗಿ ಅದಕ್ಕೆ ಬದಲಾಗಿ ತಮ್ಮ ಮನೆ ಕಾಡು ಕೊಟ್ಟಿಗೆ, ಗದ್ದೆ, ದನಕರು, ತೋಟ, ಕೂಲಿಯಾಳುಗಳು ಮೊದಲಾದವು ಸುಳಿದವು.

ತಮ್ಮನ್ನು ಮನೆಗೊಯ್ಯುವ ಪ್ರಾಣಿಗಳ ವಿಚಾರದಲ್ಲಿ ಅವರಿಗೆ ಪ್ರೀತಿಯಲ್ಲದೆ ಬೇರೆ ಯಾವ ಭಾವಕ್ಕೂ ಸ್ಥಳವಿರಲಿಲ್ಲ.

ಈ ಸಂದರ್ಭದಲ್ಲಿ ಮರದ ಮೇಲೆ ಕೋಗಿಲೆಯೊಂದು, ಕುಹೂ, ಕುಹೂ ಎಂದು ಕೂಗಿತು. ಹಸರು ಎಲೆಗಳ ಮಧ್ಯೆ ಕರ್ರಗೆ ಕುಳಿತು ಕೂಗುತ್ತಿತ್ತು. ಮನೆಯೊಂದರಲ್ಲಿ ಎರಡು ಬೀದಿ ನಾಯಿಗಳು ಎಂಜಲೆಲೆಗಾಗಿ ಕಚ್ಚಾಡಿ ಗಲಬೆ ಎಬ್ಬಿಸಿದವು.

ಎತ್ತುಗಳು ಕೊರಳ ಕಿರುಗಂಟೇಗಳ ಟಿಂಟಣೆಯ ದನಿಯೊಡನೆ ಭಾರದಿಂದ ಸಾಗಿದವು. ಗಾಡಿಯ ನೆಳಲು ಕುರುವಳ್ಳಿಯ ಕಿರುಪೇಟೆಯ ರೆಂಬೂದಿ ಬಣ್ಣದ ಬೀದಿಯಲ್ಲಿ ಗಾದಿಯ ಅಡಿಯಲ್ಲಿಯೇ ಮಸಿಯ ಮುದ್ದೆಯಾಗಿ ಎತ್ತಿನ ನೆಳಲೊಡನೆ ಸಾಗಿತ್ತು.

ರಸ್ತೆಯಲ್ಲಿ ಚಕ್ರಗಳ ಸಮೂದ್ರವಾದ ಸ್ಫುಟವಾದ ಅವಿಚ್ಛನ್ನ ರೇಖಾ ಮುದ್ರೆ ಗಾಡಿ ಚಲಿಸಿದಂತೆಲ್ಲಾ ಅದನ್ನು ಸರ್ಪಗಮನದಿಂದ ಹಿಂಬಾಲಿಸುವಂತಿತ್ತು.

ಬೇಸಗೆಯ ಮದ್ಯಾಹ್ನದ ಸೂರ್ಯನ ತಾಪ ತಾಮ್ರ ಬಿಂಬವು ಕಠೋರ ನಿಷ್ಕಾರುಣ್ಯದಿಂದ ಕರೆಯುತ್ತಿದ್ದ ಪ್ರಖರ ಕಿರಣ ವರ್ಷದಲ್ಲಿ ದಟ್ಟವಾಗಿ ಕಾಡು ಬೆಳೆದು ತೆರೆತೆರೆಯಾಗಿ ಹಬ್ಬಿದ ಮಲೆನಾಡಿನ ಬೆಟ್ಟಗುಡ್ಡಗಳು ಆಯಾಸದಿಂದ ಮೂರ್ಛೆಗೊಂಡಂತೆ ಶ್ಯಾಮಲ ನಿದ್ರಾಸಕ್ತವಾಗಿದ್ದವು. ಧೂಳುಗೆಂಪಿನ ರಸ್ತೆ ಸಹ್ಯಾದ್ರಿಯ ಅರಣ್ಯದೇವಿಯ ಮಹಾಮಸ್ತಕದ ಸುದೀರ್ಘವಾದ ಬೈತಲೆಯ ಸರಳ ವಕ್ರ ನಿಮ್ನೋನ್ನತ ರೇಖಾ ವಿನ್ಯಾಸದಂತೆ ಮೆರೆದಿತ್ತು.

ರಸ್ತೆಯಲ್ಲಿ ಅಲ್ಲಲ್ಲಿ ತಂತಿ ಕಂಬಗಳಿದ್ದು, ಬಾನಿಗೆದುರಾಗಿ ತಂತಿಯ ಕರಿಯ ಗೆರೆ ಕಂಬೈಂದ ಕಂಬಕ್ಕೆ ಪ್ರವಹಿಸಿ ಓಡುವಂತಿತ್ತು. ಆಗಾಗ ನೇರಿಲೆಯ ಪೊದರು ಮರಗಳಲ್ಲಿ ಪಿಕಳಾರ ಹಕ್ಕಿಗಳು ಮಾತ್ರ ಚಿಮ್ಮುತ್ತಿದ್ದುದು ಕಾಣಬರುತ್ತಿತ್ತು.

ಎರಡು ಎತ್ತುಗಳ ಕುತ್ತಿಗೆಯಲ್ಲಿದ್ದ ಸುಮಾರು ನಲ್ವತ್ತು ಐವತ್ತು ಕಿರುಗಂಟೆಗಳು ಇಂಪಾಗಿ ನಾದಗೈದು ಮಹಾರಣ್ಯ ಮೌನವನ್ನು ಮಥಿಸುತ್ತಿದ್ದವು. ಆ ಹಗಲು, ಆ ಬಿಸಿಲು, ಆ ಕಾಡಿನ ಹಸಿರು ಶಾಂತಿ, ಆ ವಿಜನತೆ, ಆ ಗಾಡಿಯ ಡೋಲಾಯಮಾನತೆ, ಆ ಘಾಂಟಾನಾದದ ಜೋಗುಳದಲ್ಲಿ ವುಗಳಲ್ಲಿ ಗಾಡಿಯೊಳಗಿದ್ದ ಹಸಿರು, ಆ ಮಹಾ ನಿಶ್ಚಲ ಜಗತ್ತಿನಲ್ಲಿ ಗಾಡಿಯೊಂದೇ ಚಲಿಸುವ ಕ್ಷುತ್ರವಸ್ತುವಾಗಿತ್ತು.

ಇಲ್ಲಿ ಒಂದು ಅಚಾತುರ್ಯ ನಡೆದಿತ್ತು, ನಿಂಗನು ಹೊರಡುವ ಗಡಿಬಿಡಿಯಲ್ಲಿ ಎತ್ತುಗಳಿಗೆ ನೀರು ಕುಡಿಸುವುದನ್ನು ಮರೆತುಬಿಟ್ಟಿದ್ದನು. ಗಾಡಿ ಹದಿನಾಲ್ಕನೆ ಮೈಲಿ ಕಲ್ಲನ್ನು ದಾಟಿ ತೀರ್ಥಹಳ್ಳಿಯಿಂದ ಒಂದೂವರೆ ಅಥವಾ ಎರಡು ಮೈಲಿ ಹೋಗಿತ್ತು. ಲಚ್ಚನಿಗೆ ಬಹಳ ಬಾಯಾರಿಕೆಯಾಗಿ ನೀರು ಕಂಡರೆ ಸಾಕು ಎನ್ನುವಷ್ಟಾಗಿತ್ತು. ಅನತಿ ದೂರದಲ್ಲಿ ಹಾದಿಯ ಪಕ್ಕದಲ್ಲಿ ಒಂದು ಕೆರೆಯಿದ್ದುದು ಅದರ ಕಣ್ಣಿಗೆ ಬಿತ್ತು. ಕೂಡಲೇ ನಡಿಗೆಯನ್ನು ಚುರುಕು ಮಾಡಿತು. ನಂದಿಗೆ ಅಷ್ಟು ಬಾಯಾರಿಕೆಯಾಗದಿದ್ದರೂ ಜೊತೆಯ ಎತ್ತು ಜೋರಾಗಿ ಎಳೆದುದರಿಂದ ಅದೋ ಜೋರಾಗಿಯೇ ಕಾಲು ಹಾಕಿತು.

ಏರಿಯೇ ರಸ್ತೆಯಾಗಿದ್ದುದರಿಂದ ಕರೆ ಸ್ವಲ್ಪ ಕಡಿದಾಗಿತ್ತು. ಎತ್ತುಗಳು ಒಂದೇ ಸಮನೆ ನೀರಿನ ಕಡೆಗೆ ಭಾರದಿಂದ ಸಾಗಿದವು, ಬಲಗಡೆ ಚಕ್ರವೂ ಮೊದಲು ಥಕ್ಕನೆ ಕೆಳಗಿಳಿದುದರಿಂದ ಗಾಡಿಯು ಬಲವಾಗಿ ಜಗ್ಗಿತು.

ನಿಂಗನೂ ಎದ್ದು ಮೂಗುದಾರವನ್ನು ಬಲವಾಗಿ ಜಗ್ಗಿ ಎಳೆದನು. ಆದರೆ ಆಗಲೇ ಕಾಲ ಮಿಂಚಿದ್ದುದರಿಂದ ಗಾಡಿ ಉರುಳಿತು, ಏರಿಯ ಕೆಳಭಾಗದಲ್ಲಿದ್ದ ಒಂದು ಕಾದಿನ ಮಾವಿನ ಮರಕ್ಕೆ ಕಮಾನು ಡಿಕ್ಕಿ ಹೊಡೆಯಿತು.

ನಂದಿಗೆ ಕುತ್ತಿಗೆ ನೇಣು ಬಿಗಿಯಾಗಿ ಭೋರ್ಗರ್ಲೆಯಲಾರಂಭಿಸಿತು. ಗಾಡಿ ಮರಕ್ಕೆ ತಾಗಿ ನಿಂತ ಕೂಡಲೇ ಪುಟ್ಟಣ್ಣ, ಸಿಂಗಪ್ಪಗೌಡ, ರಾಮಯ್ಯ ಹೊರಗೆ ಹಾರಿದರು. ನಿಂಗಮ ಗಾಡಿಯ ಕತ್ತರಿಯಿಂದ ಕೆಳಕ್ಕೆ ನೆಗೆದು ನಂದಿಯ ಕೊರಳ ಕಣ್ಣೆಯನ್ನು ಬಿಚ್ಚಿ ಬಿಡಿಸತಿಳಿಸಿದನು. ಆದರೆ ಸಾಧ್ಯವಾಗಲಿಲ್ಲ. ನಂದಿ ಮೆಳ್ಳಗಣ್ಣು ಮಾಡಿಕೊಂಡು ಬುಸುಗುಟ್ಟುತ್ತಿತ್ತು. ನೇಣು ಅದರ ಕುತ್ತಿಗೆಯನ್ನು ಕ್ಷಣಕ್ಷಣಕ್ಕೂ ಬಿಗಿಯುತ್ತಿತ್ತು. ನೇಣನ್ನು ಕೊಯ್ದು ಹಾಕಲು ಗಾಡಿ ಚೀಲದಲ್ಲಿ ಕತ್ತಿ ಹುಡುಕಿದನು, ದುರಾದೃಷ್ಟದಿಂದ ಅದೂ ಇರಲಿಲ್ಲ. ಎಲ್ಲರೂ ಗಾಬರಿಯಿಂದ ಏನೂ ಮಾಡಲೂ ಸಾಧ್ಯವಾಗಲಿಲ್ಲ. ಕಡೆಗೆ ಪುಟ್ಟಣ್ಣನು, ಒಂದು ದಪ್ಪ ಕಗ್ಗಲ್ಲನ್ನು ತೆಗೆದುಕೊಂಡು ಬಂದು ನೊಗಕ್ಕೆ ಬಿಗಿದಿದ್ದ ನೇಣನ್ನು ಜಜ್ಜಿ, ಜಜ್ಜಿ ತುಂಡು ಮಾಡಿದನು, ನಂದಿ ಕತ್ತನ್ನು ಇಳಿಸಿತು.

ಎತ್ತುಗಳೆರಡೂ ಕೆರೆಯ ಮೂಲೆಯ ಕೆಸರಿನಲ್ಲಿ ಮೊಳಕಾಲು ಮುಚ್ಚುವವರೆಗೂ ನಿಂತು ಹಾಯಾಗಿ ನೀರನ್ನು ಸೇದಿ ಕುಡಿಯುತ್ತಿದ್ದವು. ಲಚ್ಚನ ಮೂಗುದಾರದ ನೇಣು ಹಸುರಾದ ಜೊಂಡು ಹುಲ್ಲಿನ ಮೇಲೆ ಜೋತಾಡುತ್ತಿತ್ತು.

ಸೀತೆಯು ಒಬ್ಬ ಕೃಷಿಕಳಾಗಿದ್ದಿ ಗೌರಮ್ಮನವರ ದನದ ಕೊಟ್ಟಿಗೆಯಿಂದ ಹಾಲು ತುಂಬಿದ್ದ ಹಿತ್ತಾಳೆಯ ತಂಬಿಗೆಯೊಂದನ್ನು ಕೈಯಲ್ಲಿ ಹಿಡಿದುಕೊಂಡು ಬರುತ್ತಿದ್ದರು. ಇವಳ ಕಾಲುಗಳು, ಅಂಗಾಲು, ಮೇಗಾಲು ಬೆರಳ ಸಂದುಗಳು ಹಸಿಹಸಿಯಾದ ಹಸಿರು ಮಿಶ್ರವಾದ ಕರಿಬಣ್ಣದ ಸಗಣಿ ಮೆತ್ತಿಕೊಂಡಿತ್ತು.

ಕಾನೂರು ಚಂದ್ರಯ್ಯಗೌಡರ ಮಂಗಳೂರು ಹೆಂಚಿನ ದೊಡ್ಡ ಮನೆ ಕಾಡು ಕಿಕ್ಕಿರಿದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ, ಮಹಾ ವಟವೃಕ್ಷದ ಬುಡದಲ್ಲಿ ಎದ್ದಿರುವ ಹುತ್ತದ ನೆನಪು ತರುವಂತೆ ಏಕಾಂತವಾಗಿತ್ತು. ಮನೆಯ ಪೂರ್ವೋತ್ತರ ದಿಕ್ಕುಗಳಲ್ಲಂತೂ ಕಾಡುಬೆಟ್ಟಗಳ ಹೆಗ್ಗೋಡೆ ಭಯಂಕರ ಸಮೀಪವಾಗಿ ಮೇಲೆದ್ದಿತು.

ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿ ಅವರ ಗದ್ದೆ ತೋಟಗಳೂ ಒಕ್ಕಲು ಮತ್ತು ಆಳುಗಳ ಹುಲ್ಲುಮನೆ ಮತ್ತು ಬಿಡಾರಗಳು, ಕಣ, ಕೊಟ್ಟಿಗೆ, ಹಟ್ಟಿಗಳೂ ಇದ್ದವು. ಮನೆಗೆ ಹೊದಿಸಿದ್ದ ಮಂಗಳೂರು ಹೆಂಚುಗಳು ಮಳೆ ಬಿಸಿಲುಗಳಲ್ಲಿ ಹಾವಸೆ ಹಬ್ಬ, ಬಣಗಿ ತಮಗೆ ಸಹಜವಾಗಿ ಮಣ್ಣಿನ ಕೆಂಬಣ್ಣಾನ್ನು ತೊರೆದು ಕಪ್ಪಾಗಿದ್ದವು. ಮನೆಗೆ ಉಪಯೋಗಿಸಿದ್ದ ಮರಮುಟ್ಟುಗಳೆಲ್ಲ ಅನೇಕ ವರ್ಷಗಳಿಂದ ಹೊಗೆ ಹಿಡಿದು ತಾರೆಣ್ಣೆ ಬಳಿದಂತೆ ಕರ್‍ರಗಾಗಿದ್ದವು. ಗೋಡೆಗಳಲ್ಲಿ ಒಂದೆರಡು ಎಡೆ ಹುತ್ತಗಳು ದೊಡ್ಡದಾಗಿ ಬೆಳೆದಿದ್ದವು.

ಒಂದು ದೊಡ್ಡ ತುಳಸಿ ಪೀಠವು ಶಿರದಲ್ಲಿ ಪುಷ್ಪವಾಗಿ ಬೆಳೆದಿದ್ದ ಒಂದು ತುಳಸಿಯ ಗಿಡವನ್ನು ಹೊತ್ತು 'ಅಂಗಳ ದೇವರಾಗಿ ಕುಳಿತಿತ್ತು. ಪಕ್ಕದಲ್ಲಿ ಮಣ್ಣಾದ ನೇಗಿಲು ಮತಿಗೆ ಹತ್ತಿಕೊಂಡೇ ಇದ್ದ

[illegible]

ಕರೆಯುವ ಕೊಟ್ಟಿಗೆಯಿಂದ ವಿಶ್ರುಂಬಲವಾದ ದನಕರುಗಳು, ಆ ಮನೆಯ 'ಮುಂಚೆ ಕಡೆಯ ಚಿತ್ರ', 'ಹಿತ್ತಲು ಕಡೆಯ' ಚಿತ್ರವೇ ಬೇರೆ, ಬಿಳಿ ಬಟ್ಟೆಯವರೂ ಆಳುಕಾಳುಗಳೂ ಬಂದು ಹೋಗುತ್ತಿದ್ದರು. ತಮ್ಮ ಪ್ರಪಂಚವನ್ನು ಅತಿಕ್ರಮಿಸಿ ಬಂದ ಕೋಳಿಗಳು– ಹುಂಜ, ಹೇಂಟೆ ಮರಿ ಡೊಳ್ಳೇರಿ ಕಾಲು ಚಾಚಿಕೊಂಡು ಬಿದ್ದಿರುವ ಕುನ್ನಿ ಮರಿಗಳು ದೊಡ್ಡದಾದ ಮುರುವಿನ ಬಲೆ, ಅಟ್ಟದ ಮೇಲೆ ಕರಿ ಹಿಡಿದ ಪೊರಕೆಗಳು ದೊಡ್ಡಕಟ್ಟು, ಒಂದು ಕಡೆ ಗೋಡೆಗೆ ಅನಿಸಿ ನಿಲ್ಲಿಸಿರುವ ಒಂದೆರಡು ಒನಕೆಗಳು, ಬಳಿಯಲ್ಲಿ ಕಲ್ಲಿನ ಒರಳು ಮತ್ತು ಎಂದ ಬೈರ ಹೇಳುತ್ತಿದ್ದಂತೆ ಸಿದ್ದ "ನೋಡೇಇದಿರಾ, ಆಗಲೆ ಕಣ್ಣು ಮುಳ್ಳಾಸ್ತದೆ ಪುಟ್ರಾಮ!" ಎಂದು ಬೆದರುಗಣ್ಣಿನಿಂದ ಹೂವಯ್ಯನ ಬಿಳಿ ಬಟ್ಟೆಯ ಕಡೆಗೆ ನೋಡುತ್ತಿದ್ದ ಪುಟ್ಟರಾಮ ಎಂಬ ಎತ್ತನ್ನು ಗದರಿಸಿದನು. ಅದನ್ನು ನೋಡಿ ರಾಮಯ್ಯನೂ "ಹೌದು ಕಣೋ, ಅಣ್ಣಯ್ಯ, ನಿನ್ನ ಎತ್ತು ಯಾಕೋ ಕಣ್ಣು ಕೆಂಪಗೆ ಮಾಡಿಕೊಂಡಿದೆ, ಸ್ವಲ್ಪ ಹುಷಾರಾಗಿರು! ಎಂದನು.

ಅದಕ್ಕೆ ಹೂವಯ್ಯ "ಹಾಗೇನಾದರೂ ಜೋರು ಮಾಡಿದರೆ ನೇಗಿಲು ಬಲವಾಗಿ ಒತ್ತಿ ಹಿಡಿದರೆ ಸರಿ ಆಟ ನಿಂತು ಹೋಗ್ತದೆ" ಎಂದನು.

ಯಾವಾಗಲೂ ಮಾಸಲು ಬಟ್ಟೆಯ ಮಂದಿಗಳನ್ನೆ ನೋಡಿ ನೋಡಿ ಅಭ್ಯಾಸವಾಗಿದ್ದ ಆ ಎತ್ತುಗಳು ಈ ಶ್ವೇತವಸ್ತ್ರಧಾರಿಗಳನ್ನು ಕಂಡಾಗಣೆಂದಲೂ ಬೆಚ್ಚಿದ್ದವು. ಅವರು ನೇಗಿಲು ಹಿಡಿದು ತಮ್ಮನ್ನು ಹಿಂಬಾಲಿಸಿ ಉಳಲು ತೊಡಗಿದ ಒಡನೆ ಕ್ರಮ ತಪ್ಪಿ ಸಾಗತೊಡಗಿದವು. 'ಹುಮ', 'ಚಿಗ' ಹುಮ ಹುಮ ಹುಮ' 'ಚಿಗ ಚಿಗ ಚಿಗ' ಎಂದು ಎಷ್ಟು ಕೂಗಿಕೊಂಡರೂ ಎತ್ತುಗಳು ವ್ಯವಸಾಯ ವಿದ್ಯೆಯ ಪಾರಿಭಾಷಿಕ ಪದಗಳನ್ನು ಒಂದಿನಿತೂ ಲೆಕ್ಕಿಸದೆ, ಗದ್ದೆಯಲ್ಲಿ ಸಿಕ್ಕಿದ ಕಡೆಗೆ ನುಗ್ಗ ತೊಡಗಿದವು. ವಾಸು, ಬೈರ ಸಿದ್ಧರು, ಹೂವಯ್ಯ ರಾಮಯ್ಯರ ಪೇಚಾಟ ಕೂಗಾಟಗಳನ್ನು ನೋಡಿ ಗಟ್ಟಿಯಾಗಿ ನಗುತ್ತಿದ್ದರು. ನಡುನಡುವೆ ಸಲಹೆಗಳನ್ನು ಕೂಗಿ ಎಸೆಯುತ್ತಿದ್ದರು. ಎತ್ತುಗಳು ಇನ್ನೂ ಬೆಚ್ಚಿ ಧಾವಿಸಿದವು. ಗಡಿಬಿಡಿಯಲ್ಲಿ ಹೂವಯ್ಯನ ಕಬ್ಬಿಣದ ನೇಗಿಲಿನ ಹರಿತವಾದ ಕುಳದಬಾಯಿ ಬಂದು ಎತ್ತಿನ ಕೊಳಗಿನ ಮೇಲ್ಭಾಗಕ್ಕೆ ತಗುಲಿ ಕತ್ತಿಯಿಂದ ಕಡಿದಂತೆ ಗಾಯವಾಗಿ ನೆತ್ತರು ಹಾರಿತು. ಅದನ್ನು ನೋಡಿದ ಹೂವಯ್ಯನಿಗೆ ಗಾಬರಿಯಾಗಿ ತನ್ನ ಬಲವನ್ನೆಲ್ಲಾ ವೆಚ್ಚ ಮಾಡಿ ನೇಗಿಲನ್ನು ನೆಲಕ್ಕೆ ಅದುಮಿದನು. ಕಬ್ಬಿಣದ ನೇಗಿಲು ಆಳವಾಗಿ ನೆಲದಲ್ಲಿ ಹೂತುಕೊಂಡಿದ್ದರಿಂದ ಎಳೆಯಲಾರದೆ ಎತ್ತು ನಿಂತವು.

ಆ ಹೊತ್ತಿಗೆ ಸರಿಯಾಗಿ ಹೊರಸಲು ಹಕ್ಕಿಗಳಿಗಾಗಿ ಹೊಂಚು ಹಾಕುತ್ತಿದ್ದ ಪುಟ್ಟಣ್ಣ ಸಮೀಪದಲ್ಲಿಯೇ ಒಂದು ಈಡು ಹಾರಿಸಿದನು.

ಇನ್ನೂ ಹತೋಟಿಗೆ ಬಾರದೆ ಗದ್ದೆಯಲ್ಲಿ ನೇಗಿಲನ್ನೂ ರಾಮಯ್ಯನನ್ನೂ ಎಳೆದುಕೊಂಡು ಓಡಾಡುತ್ತಿದ್ದ ಎತ್ತುಗಳು 'ಡಾಂ' ಎಂಬ ಶಬ್ಧಕ್ಕೆ ಮತ್ತಷ್ಟು ಬೆದರಿ ರಭಸದಿಂದ ಆ ಗದ್ದೆಯನ್ನೇ ಬಿಟ್ಟು ಮತ್ತೊಂದು ಗದ್ದೆಯ ಕಡೆಗೆ ನುಗ್ಗಿದವು. ರಾಮಯ್ಯ ಹಿಡಿದಿದ್ದು ಮರದ ನೇಗಿಲಾದ್ದರಿಂದ ಎಷ್ಟು

ಅದುಮಿದರೂ ಅದು ಎತ್ತುಗಳನ್ನು ತಡೆದು ನಿಲ್ಲಿಸುವಷ್ಟು ಘಾತಕ್ಕೆ ನೆಲದೊಳಗೆ ಹೋಗಲಿಲ್ಲ. ಎತ್ತು ಅವನನ್ನು ನೇಗಿಲನ್ನೂ ಒಂದೇ ಸಮನೆ ಎಳೆದುಕೊಂಡು ಅಂಚಿನೆಡೆಗೆ ಹೋದವು. ಇನ್ನೇನು ಮೆಲಿನ ಗದ್ದೆಯ ಅಂಚಿನಿಂದ ಕೆಳಗಿನ ಗದ್ದೆಗೆ ಹಾರಬೇಕು! ರಾಮಯ್ಯ ಇದೇ ಸಮಯವೆಂದು ಭಾವಿಸಿ ಸುಮಾರು ಒಂದು ಅಡಿ ಎತ್ತರವಾಗಿಯೂ ಎರಡು ಅಡಿ ಅಗಲವಾಗಿಯೂ ಇದ್ದ ಅಂಚಿಗೆ ನೇಗಿಲನ್ನು ಭದ್ರಮುಷ್ಟಿಯಿಂದ ಬಲವಾಗಿ ಒತ್ತಿದನು. ವೇಗದಿಂದ ಓಡಾಡುತ್ತಿದ್ದ ಎತ್ತುಗಳು ಝುಗ್ಗನೆ ನಿಂತವು. ಆದರೆ ಒಂದೇ ಕ್ಷಣ! ಮರು ಕ್ಷಣದಲ್ಲಿ ಮರದ ನೇಗಿಲು ಮುರಿದು, ಈಸು ನೊಗಗಳೊಡನೆ ಎತ್ತುಗಳು ಕೆಳಗದ್ದೆಗೆ ಹಾರಿದವು. ನೇಗಿಲಿನ ಮೇಣೆಯನ್ನು ಮಾತ್ರ ಕೈಯಲ್ಲಿ ಹಿಡಿದುಕೊಂಡು ರಾಮಯ್ಯ ಮೇಲಿನ ಗದ್ದೆಯಲ್ಲಿಯೇ ನಿಂತಿದ್ದನು.

ಗಾಯಗೊಂಡ ಎತ್ತಿನ ಕಾಲಿನಿಂದ ನೆತ್ತರು ಚಿಮ್ಮುತ್ತಿದ್ದದ್ದೂ ನೇಗಿಲು ಮುರಿದು ಹೋದುದೂ ಬೇಸಾಯಗಾರರ ದೃಷ್ಟಿಗೆ ಲಘು ಘಟನೆಗಳಾಗಿ ತೋರಲಿಲ್ಲ. ಅದರಲ್ಲಿಯೂ ಪ್ರಾರಂಭದ ದಿನದಲ್ಲಿ ನೇಗಿಲು ಮುರಿಯುವುದೆಂದರೆ, ಮಹಾ ಅಪಶಕುನವೆಂದು ಅವರೆಲ್ಲರೂ ನಂಬುಗೆಯಾಗಿತು. ಭೈರ, ಸಿದ್ದರೂ ಭಯಭೀತರಾಗಿದ್ದರು. ನಡೆದ ಸಂಗತಿ ಗೌಡರಿಗೆ ತಿಳಿದರೆ ಏನು ಗತಿ ಎಂದರು. ರಾಮಯ್ಯ ಗಟ್ಟಿಯಾಗಿ "ಏ ಬೈರಾ ಆರು ಬಿಟ್ಟು, ಎತ್ತು ಕೊಟ್ಟಿಗೆಗೆ ಹೊಡೆದುಕೊಂಡು ಹೋಗಿ ಕಾಲಿಗೆ ಔಷಧಿ ಹಾಕಿ" ಎಂದು ಸಿದ್ದನ ಕಡೆಗೆ ತಿರುಗಿ "ಯಾಕೋ ತಲೇ ಮೇಲೆ ಕೈ ಹೊತ್ತುಕೊಂಡು ಕೂತೀಯ? ..... ಏಳೋ ಏಳ್ತೀಯೋ ಇಲ್ಲೋ?" ಎಂದು ಅಪ್ಪಣೆ ಮಾಡಿದನು.

ಬೈರ ಗಾಯಗೊಂಡ ಎತ್ತನ್ನು ಹಿಡಿದುಕೊಂಡು ಕೊಟ್ಟಿಗೆಯ ಕಡೆಗೆ ಹೊರಟನು. ಅವನ ಹಿಂದೆ ಸಿದ್ದ ಮುರಿದ ನೇಗಿಲನ್ನು ಹೊತ್ತುಕೊಂಡು ಹೋಗುತ್ತಿದ್ದನು.

ಕಬ್ಬಿನ ಗದ್ದೆಯಲ್ಲಿ ಗಟ್ಟದಾಳುಗಳ ಮೇಲ್ವಿಚಾರಣೆ ತೆಗೆದುಕೊಂಡು ಸೇರೆಗಾರರೊಡನೆ ಬರುತ್ತಿದ್ದ ಚಂದ್ರಯ್ಯ ಗೌಡರು ದೂರದಲ್ಲಿ ಬೈರಸಿದ್ದರು ಆರು ಬಿಟ್ಟು ಹೋಗುತ್ತಿದ್ದುದನ್ನು ಕಂಡು " ಈ ಸೂಳೇ ಮಕ್ಕಳಿಗೆ ಏನು ಮಾಡಬೇಕಾಯ್ತು? ಒಂಬತ್ತು ಗಂಟೆಗೆ ಕೆಲಸಕ್ಕೆ ಹೊರಡ್ತಾರೆ! ಹತ್ತು ಗಂಟೆಗೆ ಕೆಲಸ ಬಿಡ್ತಾರೆ! ಎಂದು ಕೂಗಿದನು.

ಗುಂಡು, ಬೀಸುವ ಕಲ್ಲು, ಮೆಟ್ಟುಗತ್ತಿ, ತಾರ್ಮದ ಹಂಡೆ ಇತ್ಯಾದಿ ಕೆಮ್ಮಣ್ಣು ಬಳಿದಿದ್ದ ಗೋಡೆಗೆ ಒರಗಿ ಮಣೆಯ ಮೇಲೆ ಕೂತು, ನೆಲದ ಮೇಲೆ ಬಾಳೆಯ ಎಲೆಯಲ್ಲಿದ್ದ ಉಪ್ಪಿಟ್ಟನ್ನು ಅನನ್ಯ ಮನಸ್ಕನಾಗಿ ಮುಕ್ಕುತ್ತಿದ ವಾಸು.

ಚಂದ್ರಯ್ಯಗೌಡರ ದರ್ಬಾರು

ಋಣ ಎಂಬುದು ಕುತ್ತಿಗೆಗೆ ಕಲ್ಲುಗುಂಡು ಕಟ್ಟಿಕೊಂಡ ಹಾಗೆ

ಸಾಲವನ್ನು ಕೊಂಬಾಗ ಹಾಲೊಗರುಂಡಾಂತೆ

ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ

ಒಂದು ದಿನ ಸಾಯಂಕಾಲ ಮುಂಗಾರು ಮಳೆ ಚೆನ್ನಾಗಿ ಸುರಿದಿದ್ದರಿಂದ ವಾಯುಮಂಡಲ ನಿರ್ಮಲವಾಗಿತ್ತು. ಆಕಾಶ ಪ್ರಸನ್ನವಾಗಿತ್ತು. ಮಳೆಯಲ್ಲಿ ಮಿಂದ ಮರಗಿಡ ಬಳ್ಳಿಗಳ ಹಸುರೆಲೆಗಳಿಗೆ ಮತ್ತಿನಿತು ಹಸುರೇರಿ ಕಾಡುಗಳೆಲ್ಲಾ ಕಳಕಳಿಸಿ ನಗುವಂತಿದ್ದವು. ನೆಲದ ಹುಲ್ಲಿನ ಮೇಲೆಯೂ ಬಿದಿರು ಮಳೆಗಳಲ್ಲಿಯೂ ಬಳ್ಳಿಯ ಕುಡಿಕುಡಿಗಳಲ್ಲಿಯೂ ಎಲೆಗಳ ತುದಿತುದಿಗಳಲ್ಲಿಯೂ ಜೇಡರ ಬಲೆಗಳಲ್ಲಿಯೂ ನೂರು ಸಾವಿರ ಕೋಟಿ ಕೋಟಿ ಹನಿಗಳು ಮುನ್ನೇಸರ ಹೊಂಬಿಲಲ್ಲಿ ಬಣ್ಣ ಬಣ್ಣದ ಸಣ್ಣ ಸಣ್ಣ ರನ್ನ ಸೊಡರುಗಳಂತೆ ಕಿಡಿ ಕಿಡಿಯಾಗಿ, ಉರಿ ಉರಿಯಾಗಿ ಮಲ್ಲೆಲರಲ್ಲಿ ಮಿಣುಕಿ ಮಿಣುಕಿ ಮಿರುಗುತ್ತಿದ್ದವು. ಗಿಣಿ ಕಳಾರ ಕಾಮಳ್ಳಿ, ಕಾಜಾಣ, ಮಿಂಚುಳ್ಳಿ, ಚೋರೆ, ಕುಟುರ, ಪುರಳಿ– ಮೊದಲಾದ ಹಕ್ಕಿಗಳ ವಸಂತೋದಯ ಗಾನ ಪ್ರಾತರ್ಮೌನ ಸಮುದ್ರವನ್ನು ಮಧುರವತರಿಗಿತವನ್ನಾಗಿ ಮಾಡಿತು. ತೊಯ್ದ ನೆಲದ ತಂಪು ಮಿಂದ ಹಸುರಿನ ತಂಪು, ಮೃದುಗಾಳಿಯ ತಂಪುಗಳಿಂದ ಜಗವೆಲ್ಲಾ ತಂಪಾಗಿತ್ತು ಜೀವಿಸುವುದಕ್ಕಿಂತಲೂ ಹೆಚ್ಚಾದ ಜೀವನದ ಗುರಿ ಮತ್ತೊಂದಿಲ್ಲ ಎಂಬಂತೆ ತೋರುತ್ತಿತ್ತು.

ವಾಸು ನೆಟ್ಟ ಸಾಕಿದ್ದ ಕಿತ್ತಳೆ ಗಿಡಗಳನ್ನು ನೋಡಿದರು. ಅಲ್ಲಿಂದ ತರಕಾರಿಯ ಹಿತ್ತಲಿಗೆ ಹೋಗಿ ಮುಳುಗಾಯಿ, ಹರವೆ ಸೊಪ್ಪು, ಕೊತ್ತಂಬರಿ ಸೊಪ್ಪು, ಮೆಣಸಿನ ಗಿಡ, ಮಾಡಿದರು.

ಇಲ್ಲಿಂದ ತೋಟಕ್ಕೆ ಹೋಗಿ ಅಡಕೆಯ ಮರಗಳ ನಡುವೆ ನಿಬಿಡವಾಗಿ ಬೆಳೆದಿದ್ದ ಬಾಳೆಯ ಪೊದೆಗಳ ಸಂದುಗೊಂದುಗಳಲ್ಲಿ ನುಸುಳಿ ಗದ್ದೆಯ ಕಡೆಗೆ ಬರುತ್ತಿತ್ತು. ತೋಟದಲ್ಲಿದ್ದ ಪೇರಲು ಪನ್ನೇರಲು ಮರಗಳಲ್ಲಿ ಪುಟ್ಟ ಗಂಗ ಮತ್ತು ಹಕ್ಕಿಗಳ ಕಣ್ಣಿಗೆ ತಪ್ಪಿಸಿಕೊಂಡಿದ್ದ ಹಣ್ಣುಗಳನ್ನು ಕುಯ್ದು ತಿನ್ನುತ್ತಾ ಹೂವಯ್ಯ ಮೊದಲಾದವರು,

ಹೂವಯ್ಯ ತೋಟದಲ್ಲಿದ್ದ ಪೇರಲು ಪನ್ನೇರಲು ಮರಗಳಲ್ಲಿ ಪುಟ್ಟ ಗಂಗ ಮತ್ತು ಹಕ್ಕಿಗಳ ಕಣ್ಣಿಗೆ ತಪ್ಪಿಸಿಕೊಂಡಿದ್ದ ಹಣ್ಣುಗಳನ್ನು ಕುಯ್ದು ತಿನ್ನುತ್ತಾ ಹೂವಯ್ಯ ಮೊದಲಾದವರು, ಗದ್ದೆಯ ಬಯಲಿಗೆ ಬರುವಷ್ಟರಲ್ಲಿಯೇ ಬೈರ, ಸಿದ್ಧರು ಆರು ಕಟ್ಟಿದ್ದರು. ಹಿಂದಿನ ದಿನದ ಮಳೆ ಚೆನ್ನಾಗಿ ಹುಯ್ದದರಿಂದ ಬೇಸಗೆಯ ಬಿಸಿಲಿಗೆ ಚೆನ್ನಾಗಿ ಒಣಗಿ ಬಿರಕು ಬಿಟ್ಟಿದ್ದ ಗದ್ದೆಗಳಲ್ಲೆಆ ನೀರು ಕುಡಿದು ಮೆತ್ತಗಾಗಿದ್ದವು. ಕಾಲಿಟ್ಟರೆ ಮಣ್ಣಿನ ಮೃದುತ್ವವೂ ಶೈತ್ಯವೂ ಹರ್ಷಪ್ರದವಾಗಿತ್ತು. ಕಾಳುಗಳನ್ನು ಮೇಯುತಿದ್ದ ಹೊರಸಲು ಹಕ್ಕಿಗಳು ಪಟಪಟನೆ ಹಾರಿ ಗದ್ದೆಯ ಮೇರೆಯಲ್ಲಿದ್ದ ಮರಗಳ ಮೇಲೆ ಕುಳಿತವು.

ಹೂವಯ್ಯ ರಾಮಯ್ಯ ವಾಸು ಮೂವರು ಉಳುತ್ತಿದ್ದ ಗದ್ದೆಯ ಅಂಚಿಗೆ ಹೋದರು.

ಬೈರ ಕಬ್ಬಿಣದ ನೇಗಿಲು ಹಿಡಿದ್ದನು. ಸಿದ್ದ ಮರದಿಂದ ಮಾಡಿದ್ದ ನಾಡು ನೇಗಿಲು ಹಿಡಿದ್ದನು. "ಹುಮಾ ಚಿಗಾ ಹಮ್ ಮ್ ಮ್, ಚಿಗ ಚಿಗ ಚಿಗಾ" ಮೊದಲಾದ ಸಂಕೇತ ಪದಗಳಿಗೆ ಎತ್ತುಗಳು ಚಲಿಸಿದಂತೆಲ್ಲಾ ಕುಳುವು ನೆಲವನ್ನು ಸೀಳಿ ಮಣ್ಣನ್ನು ಇಕ್ಕೆಲಗಳಿಗೂ ಹಾಕುತ್ತಿತ್ತು. ನೇಗಿಲ ಗೆರೆಯ ಸಾಲು ಹಿಂದೆ ಹಿಂದೆ ಹರಿಯುತ್ತಿತ್ತು.

ಹೂವಯ್ಯ ಪಂಚೆ ಎತ್ತಿಕಟ್ಟಿಕೊಂಡು, ಅಂಚಿನಿಂದ ಕೆಳಗಿಳಿದನು. ಬೈರ ತಾನು ಹಿಡಿದಿದ್ದ ನೆಕ್ಕಿಯ ಕೋಲನ್ನು ಹೂವಯ್ಯನಿಗೆ ಕೊಟ್ಟು ನೇಗಿಲಿಂದ ದೂರ ನಿಂತನು. ರಾಮಯ್ಯನೂ ಸಿದ್ದ ಉಳುತ್ತಿದ್ದ ನೇಗಿಲನ್ನು ಹಿಡಿದು ನಿಂತನು. ಬೈರ ಉಳುವ ವಿದ್ಯೆಯ ವಿಚಾರವಾಗಿ ನಾಲ್ಕು ಉಪದೇಶದ ಮಾತು ಹೇಳಿ 'ಹುಮ' 'ಚಿಗ'ಗಳ ರಹಸ್ಯವನ್ನು ತಿಳಿಸಿದನು.

"ನೇಗಿಲು ಬಹಳ ಒತ್ತಬ್ಯಾಡಿ, ಕುಳ ಎತ್ತಿನ ಕೊಳಗಿಗೆ ಹೊಡೀದಿದ್ದಾಂಗೆ ನೋಡಿಕೊಳ್ಳಿ, ಎತ್ತು ಬಲಕ್ಕೆ ಒತ್ತಬೇಕಾದ್ರ 'ಚಿಗ ಚಿಗ ಚಿಗ' ಅಂತಾ ಹೇಳ್ತಾ ನೆಕ್ಕಿ ಬರ್ಲಾಗೆ ಎಡಕ್ಕೆ ತಟ್ಟೆ, ಎಡಕ್ಕೆ ಒತ್ತಬೇಕಾದರೆ 'ಹುಮ ಹುಮ ಹುಮ' ಅಂತ ಹೇಳ್ತಾ ಬಲಕ್ಕೆ ತಟ್ಟೆ . . . . ."

ಭೈರ ನಡೆದುದನ್ನೆಲ್ಲಾ ಚಾಚೂ ತಪ್ಪದೇ ವರದಿ ಹೇಳಿದನು.

ಗೌಡರು ಎತ್ತಿನ ಕಾಲಿಗಾದ ಗಾಯವನು ಮುರಿದ ನೇಗಿಲನ್ನೂ ನೋಡಿ ಮನೆಹಾಳು ಮಕ್ಕಳು . . . ನಿಮಗೆ ಯಾರೋ ಹೇಳಿದವರು. ಅವರು ಕೈಗೆ ನೇಗಿಲ ಕೊಡಾಕೆ? ಎಂದವರೆ ಭೈರನ ಕಪಾಲಕ್ಕೊಂದು ಪಟೀರೆಂದು ಕೊಟ್ಟರು. ಮೇಲಿನ ಗದ್ದೆಯ ಅಂಚಿನ ಮೇಲೆ ನಿಂತಿದ್ದ ಸಿದ್ದ ತನಗೂ ಎಲ್ಲಿ ಏಟು ಬೀಳುತ್ತದೆಯೋ ಎಂದು ಅಂಜಿ ಹಿಂದು ಹಿಂದಕ್ಕೆ ಸರಿದು ಕಾಲುತಪ್ಪಿ ಹೊತ್ತ ನೇಗಿಲೊಡನೆ ಮೂರು ನಾಲ್ಕು ಅಡಿ ತಗ್ಗಾಗಿದ್ದ ಕೆಳಗಿನ ಗದ್ದೆಗೆ ದಿಸಿಲ್ಲನೆ ಉರುಳು ಬಿದ್ದನು!

ಗೌಡರು ರಂಗಪ್ಪಸೆಟ್ಟರ ಕಡೆಗೆ ತಿರುಗು 'ಸೇರಗಾರ್‍ರೆ! ಅವರು ಒಂದು ಕೇಳಿದ್ರೆ ಕೊಡಾದಿಲ್ಲ ಅನ್ನಾಕೆ ಆಗ್ತದೆಯೇ?" ಎಂದು ಬೈರ ಕೆನ್ನೆಯಜ್ಜಿಕೊಳ್ಳತ್ತ ಕಣ್ಣೀರು ಕರೆದನು.

ಗದ್ದೆಯಿಂದ ಮೇಲೆದ್ದ ಸಿದ್ದ ಮೈಕೊಡವಿಕೊಳ್ಳುತ್ತಾ "ನಮ್ಮ ಗಿರಾಚಾರ! ಹಾಳು ಜನ್ಮಾನಾ ಬಿಸಾಕ!" ಎನ್ನುತ್ತಿದ್ದನು.

ಸ್ವಲ್ಪ ಹೊತ್ತಿನ ಮೇಲೆ ಬೈರ ಸಿದ್ದರಿಬ್ಬರೂ ಆ ದಿನ ಕೆಲಸಕ್ಕೆ ಹೋಗಿದ್ದ ಇತರ ಆಳುಗಳೊಡನೆ 'ಪಡಿ' ಇಸುಕೊಳ್ಳಲು ಮನೆಗೆ ಬಂದರು.

ಸೇರೆಗಾರರು ಎಲ್ಲರಿಗೂ ಪಡಿಕೊಟ್ಟು, ಗೌಡರ ಅಪ್ಪಣೆಯ ಪ್ರಕಾರ, ಭೈರ, ಸಿದ್ದರಿಗೆ ಕೊಡಲಿಲ್ಲ, ಅವರಿಬ್ಬರೂ ನಾನಾ ಪ್ರಕಾರವಾಗಿ ಬೇಡಿಕೊಂಡರು.

"ಹಿಂಗೆ ಮಾಡಿದ್ರೆ ಹೇಂಗ್ರೋ? ಅದಕ್ಕೆ (ತನ್ನ ಹೆಂಡತಿ ಸೇಸಿಗೆ) ಜಡ ಬಂದು ಬಿದ್ದುಕೊಂಡದೆ ಗಂಜಿ ಮಾಡಿ ಹಾಕಾಕೆ ಅಕ್ಕಿ ಕಾಳಿಲ್ಲ ಗುಡೀಲಿ" ಎಂದನು. ಭೈರ. "ಗೌಡಕ್ನೀ ಕೇಳ್ಕೊಂಡು ಬನ್ನಿ, ಹೊಟ್ಟೇಗಿಲ್ದೆ ಮಲ್ಲಾನೇನು ರಾತ್ರಿ" ಎಂದನು ಸಿದ್ದ.

ಅಷ್ಟೆ ಹೊತ್ತಿಗೆ ಒಳಗಿನಿಂದ ಜಗಲಿಗೆ ಬಂದ ಪುಟ್ಟಮ್ಮನನ್ನು ಕುರಿತು ಭೈರ ಅಹವಾಲು ಹೇಳಿಕೊಂಡನು.

ಪುಟ್ಟಮ್ಮ "ಸೇರೆಗಾರ್ರೇ ಹೋಗಲಿ ಬಿಡಿ ಇವತ್ತಿಗೆ ಕೊಟ್ಟುಬಿಡಿ ಪಾಪದವರು! ಎಂದಳು.

"ಸೇರೆಗಾರ್ರೇ ಅವರಿಬ್ಬರಿಗೂ 'ಪಡಿ' ಕೊಡಿ" ಎಂದು ಹೂವಯ್ಯ ಗರ್ಜಿಸಿದ ಕೂಡಲೆ ಸಿದ್ದರ ಎದೆ ದಿಗಿಲೊಂದಿತು. ಹೂವಯ್ಯ ಮತ್ತಷ್ಟು ರೇಗಿ ಎರಡು ಹೆಜ್ಜೆ ಮುಂಬರಿದು, ಪುನಃ ಗರ್ಜಿಸಿದನು. ನೀವೇನೂ ಹೇಳುವುದು ಬೇಡ! ಒಳ್ಳೆಯ ಮಾತಿನಲ್ಲಿ ಪಡಿ ಕೊಡುತ್ತೀರೋ ಇಲ್ಲವೋ? ಆ ಭೀಷ್ಮ ವ್ಯಕ್ತಿತ್ವದ ಮುಂದೆ ಸೇರೆಗಾರರು ಕುಗ್ಗಿ ಹೋಗಿ ಬಂದಿನಿತೂ ತಡೆಮಾಡದೆ ಸುಮ್ಮನೆ ಪಡಿ ಅಳೆದು ಕೊಟ್ಟಾರು. ಆಮೆಲೆ 'ಬಾಗಿಗೂ' ಕೊಟ್ಟರು (ಬಾಯಿಗೆ ಕೊಡುವುದೆಂದರೆ ಎಲೆಯಡಕ್ಕೆ ಹೊಗೆಸೊಪ್ಪುಗಳನು ಕೊಡುವುದು ಎಂದರ್ಥ ಮಲೆನಾಡುಗಳಲ್ಲಿ ಜೀತದಾಳುಗಳಿಗೆ ಪ್ರತಿದಿನವೂ ಸಾಯಂಕಾಲ ಪಡಿಕೊಡುವಾಗ ನಾಲ್ಕೈದು ಅಡಕೆಗಳನ್ನು ಸ್ವಲ್ಪ ಹೊಗೆ ಸೊಪ್ಪನ್ನು ಕೊಡುವ ಪದ್ಧತಿ)

ಹೂವಯ್ಯ, ಸರಕ್ಕನೆ ಹಿಂತಿರುಗಿ ಏಣಿ ಮೆಟ್ಟಿಲುಗಳನ್ನು ದಡದಡನೆ ಹತ್ತಿ ಉಪ್ಪರಿಗೆಗೆ ಹೋದನು.

ಕಂಬಳಿಯಲ್ಲಿ ಪಡಿಯ ಭತ್ತವನ್ನು ಸುತ್ತಿ ಬೆನ್ನಿನ ಮೇಲೆ ಹಾಕಿಕೊಂಡು ಭೈರ ಹೆಬ್ಬಾಗಿಲು ದಾಟಿದನು.

"ಯಾರೋ ಅದೋ?" ಎಂದರು.

ಗೌಡರ ಧ್ವನಿಯಲ್ಲಿ ಮದ್ಯದ ರಭಸವೂ ರಸವೂ ಮಿಳಿತವಾಗಿದ್ದವು.

ಧ್ವನಿಯೂ ಅವರ ಮನಸ್ಸಿನಂತೆಯೆ ಕಳ್ಳಿನಲ್ಲಿ ತೇಲುವಂತಿತ್ತು.

ಭೈರ ಭಯದಿಂದ ಕ್ಷೀಣ ಸ್ವರವಾಗಿ "ನಾನಯ್ಯ" ಎಂದನು.

ಸಮಾಪಗತರಾದ ಗೌಡರು ಬೆನ್ನಿನ ಮೇಲಿದ್ದ ಕಂಬಳಿಯ ಗಂಟನ್ನು ನೋಡಿ "ಏನೋ ಅದೋ" ಎಂದರು.

"ಭತ್ತ"

"ಭತ್ತ! ಭತ್ತ! ನಿಮ್ಮಪ್ಪನ್ಮನೇ ಭತ್ತ ! ! ! ಯಾರೊ ನಿನಗೆ ಭತ್ತ ಕೊಟ್ಟೋರು?" ಎಂದು ಗದರಿದ ಗೌಡಾರು ಸೇರೆಗಾರರನ್ನು ನೋಡಿ "ನಾ ಹೇಳಲಿಲ್ಲೇನ್ರೀ ಬತ್ತ ಕೊಡಬೇಡಿ ಅಂತಾ, ಯಾಕೆ ಕೊಟ್ರಿ ನಿನ್ನ ಮಾತು ಮೀರಿ?"

"ಯಾವನೋ ನಾ ಹೇಳಿದ್ದಕ್ಕೆ ಪ್ರತಿಯಾಗಿ ಹೇಳ್ದವನು? ಯಾರ ಮನೆಯೋ ಇದು ಯಾರಪ್ಪನ್ಮನೆ ಗಂಟೋ,ಅಲ್ಲಿಟ್ಟು ಹೋಗು ಆ ಬತ್ತಾನ ! ಇಡ್ತೀಯೋ ಇಲ್ಲೋ!" ಎಂದು ಕೂಗುತ್ತಾ ಗೌಡರು ಓಡಿ ಹೋಗಿ ಗಾಡಿಯ ನೊಗದಲ್ಲಿದ್ದ ಕೊರಳ ಗೂಟವನ್ನು ತುಡುಕಿ ಎಳೆದರು.

ಅವರು ಹಿಂತಿರುಗುವುದರೊಳಗಾಗಿ ಭೈರ ತನ್ನ ಕಂಬಳಿಯಲ್ಲಿ ಸುತ್ತಿದ್ದ ಭತ್ತದ ಗಂಟನ್ನು ಅಲ್ಲಿ ಬಿಸಾಟು ಒಂದೇ ಉಸುರಿನಲ್ಲಿ ಬಿಡಾರದ ಕಡೆಗೆ ಓಡಿ ಬಿದ್ದನು. ಇದನ್ನೆಲ್ಲಾ ನೋಡುತ್ತಾ ನಿಂತು ನಿಂತಿದ್ದ ಸಿದ್ದನೂ ಬೇರೆ ದಾರಿಯಿಲ್ಲ ಭೈರಗಿಂತಲೂ ಹೆಚ್ಚು ಪ್ರಶಾಂತನೂ ಶ್ರೀಮಂತನೂ ಆಗಿ ಬಿಡಾರಕ್ಕೆ ಜುಣುಗಿದನು.

ಒಂದು ದಿನ ಭೈರ ಕೆಲಸಕ್ಕೆ ಹೋಗದೆ ಕೂತನು. ಕೂರುವುದೆಂದರೆ, ರಜಾ ತೆಗೆದುಕೊಳ್ಳುವುದು ಎಂದರ್ಥ. ಬಿಡಾರದಲ್ಲಿಯೇ ಇದ್ದರೆ ಗೌಡರು ಎಲ್ಲಿಯಾದರೂ ಬಂದು ಬಲವಂತದಿಂದ ಕೆಲಸಕ್ಕೆ ಹೊರಡಿಸಿಯಾರೆಂಬ ಭೀತಿಯಿಂದ ಸೂರ್ಯನು ಮಲೆಬನಗಳ ನೆತ್ತಿಯ ಮೇಲೆ ಕಾಣಿಸಿಕೊಂಡು ಮರಗಿಡಗಳಿಗೂ ಮನೆ ಬಿಡಾರಗಳಿಗೂ ನೀಳವಾದ ನೆಳಲನ್ನಿತ್ತು ಹಕ್ಕಿಗಳೆದೆಯ ತುಪ್ಪಗಳನ್ನು ಬೆಚ್ಚಗೆ ಮಾಡುತ್ತಿರಲು ಅವನು ತನ್ನ ಮಗ ಗಂಗನನ್ನು ಜೊತೆಗೆ ಕರೆದುಕೊಂಡು ಕಂಬಳಿ, ಕತ್ತಿ ಹಾಳೆ ಕೊಟ್ಟೆ, ಹಾಳೆ ಮುಂತಾದ 'ಹೊಂಡ ತೋಣಕಿ' ಮೀನು ಹಿಡಿಯಲು ಉಪಯೋಗವಾಗುವ ಸಲಕರಣೆಗಳನ್ನು ತೆಗೆದುಕೊಂಡು ತನ್ನ ಹೆಂಡತಿಗೆ ಸೇಸಿಗೆ ಮೀನು ಮೇಲೋಗರಕ್ಕೆ ಕಾರ ಕಡೆದಿಡುವಂತೆ ಹೇಳಿ ಗದ್ದೆಯ ಕೋಗಿನಾಚೆಯಿದ್ದ ಹಳ್ಳದ ಕಡೆಗೆ ಎಲೆಯಡಕ್ಕೆ ಅಗಿಯುತ್ತಾ ಹೊರಟನು.

ಹಳ್ಳಕ್ಕೆ ಹೋಗಿ ಅಲ್ಲಲ್ಲಿ ನೀರು ನಿಂತಿದ್ದ ಹೊಂಡಗಳನ್ನು ಪರೀಕ್ಷಿಸಿದನು. ಕೆಲವು ಸಣ್ಣಪುಟ್ಟ ಹೊಂಡಗಳು ಎರಡು ದಿನಗಳ ಹಿಂದೆ ಬಂದಿದ್ದ ಮಳೆಯ ನೀರು ಕೊಚ್ಚಿ ತಂದು ಹಾಕಿದ್ದ ಮರಳು ಮಣ್ಣು ಕಲ್ಲುಗಳಿಂದ 'ತೆಂಗಿ' ಹೋಗಿದ್ದವು. ಹಳ್ಳದ ನಡುವೆಯೂ ಅಕ್ಕಪಕ್ಕಗಳಲ್ಲಿಯೂ ಅಲ್ಲಲ್ಲಿ ಬಿದಿರು ಕಣೆ, ಅಡಕೆ ಸೋಗೆ, ಸೊಪ್ಪು ಸೆದೆಗಳು ಹೊನಲಿನ ಹೊಯ್ಲಿಗೆ ತೇಲಿಬಂದು ಸಣ್ಣದೊಡ್ಡ ರಾಶಿಗಳಾಗಿ ಮರದ ಬೇರುಗಳಿಗೂ ಬಂಡೆಯ ಸಂಧಿಗಳಿಗೂ ಸಿಕ್ಕಿಕೊಂಡಿದ್ದು ಮಳೆನೀರು ಎಲ್ಲಿಯವರೆಗೆ ಏರಿತ್ತು ಎಂಬುದಕ್ಕೆ ಸಾಕ್ಷಿಗಳಾಗಿದ್ದವು. ಹೊಂಡ ಹೊಂದಗಳಲ್ಲಿ ನೀರು ನಿಂತಿದ್ದಿತೆ ಹೊರತು ತೊರೆ ಹರಿಯುತ್ತಿರಲಿಲ್ಲ. ತಂದೆ ಮಕ್ಕಳಿಬ್ಬರೂ ತೊರೆಯ ಪಾತ್ರ ಪಥಕ್ಕೆ ಅಲ್ಲಲ್ಲಿ ಅಡ್ಡವಾಗಿ ಬಿದ್ದಿದ್ದ ಮರ

ಮೆಳೆಗಳನ್ನು ಹತ್ತಿ ಹಾರಿ ಕುಸಿದು ನುಸಿದು ಹೊಂಡ ಹೊಂಡಗಳಲ್ಲಿ ಮತ್ಸ್ಯಾನ್ವೇಷಣೆ ಮಾಡುತ್ತಾ, ಕಡಗೆ ಬಂದು ತಾಣಕ್ಕೆ ಬಂದರು.

ತಂದೆ ಮಕ್ಕಳಿಬ್ಬರೂ ಹೊಂಡ ತೋಣಕ (ಹೊಂಡದಲ್ಲಿರುವ ನೀರು ತುಳುಕಿ ಒತ್ತಿಸಿ ಮೀನು ಹಿಡಿಯುವುದು ಎಂದರ್ಥ) ಪ್ರಾರಂಭಿಸಿದರು. ಸ್ವಲ್ಪ ಕಾಲದಲ್ಲಿಯೇ ಹೊಂಡದ ನೀರು ಬತ್ತಿದಂತೆಲ್ಲಾ ಹೆಚ್ಚು ಹೆಚ್ಚು ಬಗ್ಗಡವಾಯಿತು. ಹೊಂಡದಲ್ಲಿ ನೀರು ಕಡಿಮೆಯಾಗಲು ಹಾಳೆಯಿಂದ ತುಳುಕುತ್ತಿದ್ದ ನೀರಿನಲ್ಲಿಯೇ ಸಣ್ಣ ದೊಡ್ಡ ಸೋಸಲು ಮೀನುಗಳು ಹೋಗುತ್ತಿರಲು ಕಂಬಳಿಯನ್ನು ಬಲೆಯನ್ನಾಗಿ ಮಾಡಿ ಗೋಚಿದರು. ಎತ್ತಿದಂತೆಲ್ಲಾ ಸಲಸಲಕ್ಕೂ ಕರಿಯ ಕಂಬಳಿಯಲ್ಲಿ ಗೋರಿ ಬಂದ ಕೆಸರು ಕಡ್ಡಿಗಳ ನಡುವೆ ಹೊಲೆ ಹೊಳೆವ ಬಿಳಿಪೊರೆಯ ಸೋಸಲು ಮೀನು ತಣಕ್ ಪನಾಕ್ ಚಿಣುಕ್ ಮಿಣುಕ್ಕನೆ ಹಾರಾಡುತ್ತಿದ್ದವು. ಕರಿಯ ಕಣ್ಣಿನ ತಣ್ಣನೆ ನುಣ್ಣನೆ ಸಣ್ಣ ಜೀವಿಗಳು ಇಬ್ಬರು ಹಿಡಿದು ಹಿಡಿದು ಹಾಳೆಯ ಕೊಟ್ಟಿಗೆ ತುಮ್ಬಿದರು.

ತುಸು ಹೊತ್ತಿನಲ್ಲಿಯೇ ಹೊಂಡದಲ್ಲಿ ನೀರು ಸಂಪೂರ್ಣವಾಗಿ ಬತ್ತಿ ಹೋಗಿ ಕೆಸರು ನೆಲದ ಮೇಲೆ ಚಟ್ಪಂಗಿ ಸೀಗಡಿಗಳು ಒದ್ದಾಡತೊಡಗಿದವು. ಅವುಗಳನ್ನು ಆಯ್ದು ಆಯ್ದು ಕೊಟ್ಟಿಗೆ ತುಂಬಿದರು.

ಹೊಂಡದಿಂದ ನೀರೆಲ್ಲಾ ಹೋಗಿ ಕೆಸರು ಮಾತ್ರ ಉಳಿಯಲು ಬೇರೆ ಸಂದಿಗಳು ಕಲ್ಲು ಪೊಟರೆಗಳೂ ಉಬ್ಬುತಗ್ಗುಗಳೂ ನೋಡಿ ಕೈ ಹಾಕಿಯೂ ಕಲ್ಲಿನ ಪೊಟರೆಗಳಿಗೆ ಕೋಲು ಹಾಕಿಯೂ ತೊಳ್ಳೆ ಮೀನು ಮುರುಗುಂಡು ಗಿರವಿ ಕೊಚ್ಚಿಲ ಕಾರೇಡಿ ಹಾಗೂ ಏಡಿ ಜಲಜಂತುಗಳನ್ನು ಬೇಟೆಯಾಡಿದರು.

ಗಂಗ ಒಂದು ಸಾರಿ ಡೊಗರಿಗೆ ಕಪ್ಪೆಗೋಲು ಹಾಕಿ ಎಳೆದಾಗ ಏಡಿ ಬರಲಿಲ್ಲ. ಮತ್ತೆ ಅದೇ ತೂತಿಗೆ ಕಪ್ಪೆ ನೋವಿ ಹಾಕಿದನು ಮತ್ತೆ ಎಳೆದನು, ಬರಲಿಲ್ಲ. ಯಾವುದೋ ಉಪಾಯಗಾರನಾದ ದೊಡ್ಡ ಮೀನೋ ಏಡಿಯೋ ಒಳಗಿರಬೇಕೆಂದು ಮಾಹಿತಿ ಅದನ್ನು ಆಕ್ರಮಿಸಲೇಬೇಕೆಂದು ಛಲದಿಂದ ತೊಗರಿಗೆ ಕೈ ಹಾಕಿದನು. ಒಡನೆಯೆ ನೀರು ಹವೊಂದು ಅವನ ಬೆಳ್ಳನ್ನು ಕಚ್ಚಿ ಕೈಗೆ ಸುತ್ತಿಕೊಂಡಿತು. ಹುಡುಗನು ಭಯಭ್ರಾಂತನಾಗಿ ಕಿಟ್ಟನೆ ಕಿರುಚಿಕೊಂಡು ಕುಣಿದಾಡುತ್ತಿರಲು, ಭೈರ ಓಡಿ ಬಂದು ಹಾವನು ಎಳೆದು ಹಾಕಿ ಕೊಂದನು. ಗಂಗನಿಗೂ ಕೆಸರು ಕೈಯಿಂದಲೇ ಬಂದು ಗುದ್ದು ಹಾಕಿ ಕೊಳಕು ನೀರನ್ನು ಕುಡಿಸಿ ಮದ್ದು ಮಾಡಿದನು. ಎಲ್ಲಾ ಪೂರೈಸಿದ ಮೇಲೆ ಭೈರ ಗಂಗನನ್ನು ಕರೆದುಕೊಂಡು ಗುಡಿಗೆ ಹೊರಡಲನುವಾದನು.

ಕಾನೂರಿನಲ್ಲಿ ದೆಯ್ಯದ ಹರಕೆ

ಕಾನೂರಿನಲ್ಲಿ ದೆಯ್ಯದ ಹರಕೆ' ಎಂದರೆ ಅಂದೊಂದು ಮಹಾ ಸಂಭ್ರಮದ ಘಟನೆ ಚಂದ್ರಯ್ಯ ಗೌಡರ ಆಳು ಒಕ್ಕಲು ಸಮೀಪದ ಬಂಧುಗಳು ಎಲ್ಲರೂ ಅದರಲ್ಲಿ ಭಾಗಿಗಳಾಗುವುದು ವಾಡಿಕೆಯಾಗಿತು.

ಕೆಲವು ಕುರಿಗ್ಳು ಅನೇಕ ಕುಕ್ಕುಟೆಗಳೂ ಆ ದಿನ ಭೂತ ರಣ, ಭೇಟೆ ರಣ, ಚೌಡಿ, ಪಂಜೊಳ್ಳಿ ಮೊದಲಾದ 'ದೆಯ್ಯ ದ್ಯಾವರು'ಗಳಿಗೆ ಬಲಿಯಾಗುತ್ತಿದ್ದುದರಿಂದ ಕೆಲವರ ಕಣ್ಣಿಗೂ ಹೊಟ್ಟೆಗೂ ಹಬ್ಬವಾಗುತ್ತಿತ್ತು. ನಂಟರೂ ನಂಟರ ಮನೆಯ ಮಕ್ಕಳೂ ಮನೆಯನ್ನೆಲ್ಲಾ ತುಂಬಿ ಮನಸ್ಸಿಗೆ ಹರ್ಷವಾಗುವಂತೆ ಕಲಕಲರವಾಗುತ್ತಿತ್ತು.

ಕೆಲವು ಬಂಧುಗಳೂ, ಒಕ್ಕಲುಗಳು ಹಿಂದಿನ ದಿನ ಸಾಯಂಕಾಲವೆ ಮನೆಗೆ ಬಂದುಬಿಟ್ಟಿದ್ದರು. ಮರುದಿನ ಬೆಳಿಗ್ಗೆ ಹೊರಗಿನ ಆಳುಗಳೆಲ್ಲಾ ಹಾಜರಾದರು. ಬೇಲರ ಭೈರ, ಸಿದ್ಧ, ಹಳೆಪೈಕದ ತಿಮ್ಮ ಕೆಳಕಾನೂರು ಅಣ್ಣಯ್ಯಗೌಡರು ಅವರ ಮಗಳು, ಬಾಡುಗಳ್ಳ ಡೊಳ್ಳು ಹೊಟ್ಟೆಯ ಸೋಮಗಂಗೆ ಮೊದಲಾದ ರಂಗಪ್ಪಸೆಟ್ಟರ ಕಡೆಯ ಕನ್ನಡ ಜಿಲ್ಲೆಯ ಆಳುಗಳು! ಸ್ವಲ್ಪ ಹೊತ್ತಾಗುವುದರೊಳಗೆ ಇತರ ಹಳ್ಳಿಗಳಿಗೆ ತನ್ನ ಕರ್ತವ್ಯದ ಮೇಲೆ ಹೋಗಿದ್ದ ಮಾರ್ಕನ ಸವಾರಿಯು ದಯಾ ಮಾಡಿಸಿದು. ಊರು ಬಿಟ್ಟು ಸೀತೆ ಮನೆಗೆ ಹೋಗಿದ್ದ ಓಬಯ್ಯನೂ ಬಂದನು.

ಮೇಲುಜಾತಿಯ ಕೆಲವರು ಪಾಕ ಕಾರ್ಯಕ್ಕೆ ನಿಂತರು. ಕಡುಬಿಗೆ ಹಿಟ್ಟು ಕುಟ್ಟುವುದು ಮಾಂಸಕ್ಕೆ ಕಾರ ಕಡೆಯುವುದು, ತೆಂಗಿನ ಕಾಯಿ ತುರಿಯುವುದು ಮಸಾಲೆ ಸಾಮಾನು ಸಜ್ಜುಗೊಳಿಸುವುದು ದೊಡ್ಡ ದೊಡ್ಡ ಕಡಾಯಿಗಳನ್ನು ಸಿದ್ಧಮಾಡುವುದು, ಬಾಳೆ ಎಲೆ ಬಡಿಸುವುದು, ಇತ್ಯಾದಿ ಮತ್ತೆ ಕೆಲವರು ಕೆರೆಯ ಬಳಿ ಕತ್ತಿಗಳನ್ನು ಮಸೆಯುವುದು, ಬಾಳೆಯ ಹೆಡೆಗಳನ್ನು ಹಾಸುವುದು ಕುರಿ ಕೋಳಿಗಳನ್ನು 'ಹಸಿಗೆ' ಮಾಡಲು ಬೆಂಕಿಗಾಗಿ ಕಟ್ಟಿಗೆ ತಂದೊಡ್ಡುವುದು, ಎಲುಬು ಕತ್ತರಿಸು 'ಕೊಚ್ಚುಗೊಲ್ಪಿ' ಗಳನ್ನು ತಯಾರಿಸುವುದು. ಕೆಲವರು ಆಯಾ ದೆವ್ವ ಭೂತಗಳಿಗೆ ಕೊಡಬೇಕಾಗಿದ್ದ ಬಲಿಯ ಕಾರ್ಯಕ್ಕೆ ನಿಯೋಜಿತರಾದರು. ಒಟ್ಟಿನಲ್ಲಿ ಕೆಲಸ ಮೂರು ಕಾಸಿನದಾದರೆ ಗಲಾಟೆ ಒಂದು ರೂಪಾಯಿನದಾಗಿತ್ತು.

ಯಾಂತಿ ದೇವವ್ರತಾ ದೇವಾನ್ ಪಿತ್ರ್ಯನ್ ಯಾಂತಿ ಪಿತೃವ್ರತಾಃ!

ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿ ನೋಪಿ ಮಾಮ್!!

ದೇವತೆಗಳನ್ನು ಪೂಜಿಸುವವರಿಗೆ ದೇವಲೋಕ ಲಭಿಸುತ್ತದೆ. ಪಿತೃ ಪೂಜಕರು ಪಿತೃಲೋಕವನ್ನೈದುತ್ತಾರೆ. ಭೂತಪ್ರೇತ ಪೂಜಕರು ಆ ಭೂತ ಪ್ರೇತಗಳ ಲೋಕವನ್ನೇ ಸೇರುತ್ತಾರೆ. ನನ್ನ ಪೂಜಕರು ನನ್ನಲ್ಲಿಗೆ ಬರುತ್ತಾರೆ.

ಪತ್ರಂ ಪುಷ್ಪಂ, ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ

ತದಹಂ ಭಕ್ತ್ಯು ಪಹೃತಮಶ್ನಾಮಿ ಪ್ರಯತಾತ್ಮನಃ

ಒಂದು ಎಲೆಯನ್ನಾಗಲಿ ಒಂದು ಹೂವನ್ನಾಗಲಿ ಒಂದು ಹಣ್ಣನ್ನಾಗಲೀ ನನಗೆ ಯಾವನಾದರೂ ಭಕ್ತಿಯಿಂದ ನಿವೇದಿಸಿದರೆ ಅದನ್ನು ಆನಂದದಿಂದ ಸ್ವೀಕರಿಸುತ್ತೇನೆ.

ಹೊರಗಡೆ ಹುಣಸೆಯ ಮರದ ಬೇರಿಗೆ ಬಲಿಗಾಗಿ ತಂದಿದ್ದ ಮೂರು ನಾಲ್ಕು ಮೇಕೆಗಳನ್ನು ಕಟ್ಟಿದರು. ಅವುಗಳಲ್ಲಿ ಅಚ್ಚಕಪ್ಪು ಬಣ್ಣದ ಹೋತನೊಂದು ತನಗೆ ಅನತಿ ದೂರದಲ್ಲಿ ಎದುರೆಯೂ ಎದುಕದಂತಿದ್ದ ಅಪೊದೆಯ ಸೋಪ್ಪಿಗಾಗಿ ಕೊರಳ ಹಗ್ಗವನ್ನು ಜಗ್ಗಿ ತುಡಿದು, ಕುತ್ತಿಗೆಯನ್ನು ನೀಡಿ ನಾಲಗೆಯನ್ನು ಚಾಚಿ ಚಾಚಿ ಸಾಹಸ ಮಾಡುತ್ತಿತ್ತು.

ಇತ್ತ ಜೋಯಿಸರ ಭೂತಕ್ಕೆ ಹಣ್ಣುಕಾಯಿ ಹಾಕಿ ತಮಗೆ ಮಾಮೂಲಾಗಿ ಬರಬೇಕಾದ ದಾನ ದಕ್ಷಿಣೆಗಳನ್ನೆಲ್ಲಾ ಮಡಿ ಪಂಚೆಯಲ್ಲಿ ಗಂಟು ಹಾಕಿಕೊಂಡು ಅಗ್ರಹಾರಕ್ಕೆ ಹಿಂತಿರುಗಿದರು.

ಮೇಕೆಗಳು ಆರಚುವಿಕೆಯಿಂದ ಕಾಲು ಕಟ್ಟಿದ ಕೋಳಿಗಳು ನಾನಾ ತೆರನಾದ ಕೂಗುವಿಕೆಯೂ ವಾಯುಮಂಡಲವನ್ನೆಲ್ಲಾ ತುಂಬಿತು. ಹರಕೆ ಹೊತ್ತು ಕೊಂಡಿದ್ದವರೆಲ್ಲಾ, ದೆಯ್ಯದ ಬನಗಳಿಗೆ ಹೋದರು. ಆ ಹರಕೆ ಗೊಲೆಯ ದೃಶ್ಯಗಳನ್ನು ನೋಡಲೆಂದು ಮಕ್ಕಳು ದೊಡ್ಡವರು ಸಣ್ಣ ಸಣ್ಣ ಗುಂಪುಗಳಾಗಿ ನಡೆದರು. ಚೌಡಿ ಎಂಬ ದೆಯ್ಯದ 'ಬನ' ಕ್ಕೆ ಹೋಗುತ್ತಿದ್ದವರೇ ಹೆಚ್ಚು. ಚೌಡಿಗೆ ಬಲಿ ಕೊಡಬೇಕಾಗಿದ್ದ ಮೇಕೆಯನ್ನು ಕತ್ತಿಯಿಂದ ಕತ್ತರಿಸಿ ಕೊಲ್ಲುತ್ತಿರಲಿಲ್ಲ. ಪ್ರಾಣಿಯ ಕಾಲುಗಳನ್ನು ಭದ್ರವಾಗಿ ಕಟ್ಟಿ ಅದನ್ನು ಹೊಟ್ಟೆ ಮೇಲಾಗಿ ಅದುಮಿ ಹಿಡಿದುಕೊಂಡ ಮೇಲೆ ಒಬ್ಬನು ಒನಕೆಯಿಂದ ಪ್ರಾಣಿಯ ವಕ್ಷ ಸ್ಥಳಕ್ಕೆ ಬೀಸಿ ಬೀಸಿ ಹೊಡೆದು ಹೊಡೆದು ಕೊಲ್ಲುತ್ತಿದ್ದನು. ಹಾಗೆ ಕೊಂದರೇನೇ ಆ ಚೌಡಿಗೆ ಸಂತೃಪ್ತಿಯಂತೆ!

ಕುಂಕುಮ ಕೆಂಪುದಾಸವಾಳದ ಹೂ ಮೊದಲಾದವುಗಳ ರುದ್ರ ವಿನಿಯೋಗದೊಡನೆ ಬಲಿಗೆ ಪ್ರಾರಂಭವಾಯಿತು. ಕರಿಯ ಹೋತನಂತೂ ತನ್ನ ಕೊರಳಿಗೆ ಹಾಕಿದ್ದ ದಾಸವಾಳದ ಹೂವುಗಳನ್ನೇ ಕುತ್ತಿಗೆ ಬಗ್ಗಿಸಿ ಬಹು ಶ್ರಮದಿಂದ ತಿನ್ನುತ್ತಿತ್ತು.

ಒಮ್ಮೆ ಕೋಳಿಗಳು ಮಂದೆಗಳನ್ನು ಒಂದನ್ನೊಂದಾಗಿ ಕೊಯ್ದು ಬೇರೆ ಮಾಡಿ ಮರದ ಬುಡದಲ್ಲಿದ್ದ ಭೂತದ ಕಲ್ಲಿಗೆ ರಕ್ತ ಹಚ್ಚ ತೊಡಗಿದನು.

ಬೆಳಿಗ್ಗೆ ಸುಮಾರು ಎಂಟುಗಂಟೆಯ ಸಮಯ ಓರೆ ಬಿಸಲು ಸೀತೆ ಮನೆ ಸಿಂಗಪಗೌಡರ ಮಂಗಳೂರು ಹೆಂಚಿನ ಮನೆಯ ಮುಂದಿದ್ದ ತೋಟದ ಅಡಕೆ ಮರಗಳ ಹಚ್ಚನೆ ಹಸುರಿನ ನೆತ್ತಿಗಳನ್ನು ಚುಂಬಿಸಿತ್ತು. ಬಿಸಿಲು ತೋಟದ ನಡುವೆ ತೂರಿಬಂದು ಅಡಕೆಯ ಸೊಸಿಗಳ ಹಸಿರುಗರಿಗಳ ಮೇಲೆಯೂ ಬಾಳೆ ಮರಗಳ ಹೆಡಲುಗಳ ಮೇಲೆಯೂ ಕೋಲು ಕೋಲಾಗಿ ಬಿದ್ದು ಬಣ್ಣದ ಚಿತ್ರಗಳನ್ನು ಬರೆಯುತ್ತಿತ್ತು.

ತೋಟದ ನೆಲವಂತೂ, ಮೇಲು ಸೊಪು, ಮೇಲುಸೊಪ್ಪಿನ ಜಿಗ್ಗು, ಗೊಬ್ಬರ ಕೆಮ್ಮಣ್ಣು ಇವುಗಳಿಂದ ಕಿಕ್ಕಿರಿದು ಸರಾಗವಾಗಿ ನಡೆಯುವುದಕ್ಕೂ ಕೂಡ ಅಡಚಣೆಯಾಗುತ್ತಿತ್ತು. ಕೆಲ ಮಂದಿ ಆಳುಗಳು ಮುದಿಯಾಗಿದ್ದ ಅಡಕೆ ಮರಗಳನ್ನು ಕೊಡಲಿಯಿಂದ ಕಡಿದುರುಳಿಸುವ ಕಾರ್ಯದಲ್ಲಿ

ತೊಡಗಿದ್ದರು ಕಡಿಯುವ ಸದ್ದು ಧ್ವನಿ ಪ್ರತಿಧ್ವನಿಯಾಗಿ ಆ ಪ್ರದೇಶಗಳನ್ನೆಲ್ಲಾ ಶಬ್ಧಮಯವನ್ನಾಗಿ ಮಾಡಿತು. ಆಯಸ್ಸು ಪೂರೈಸಿದ ಆ ಮಂದಿ ಮಡಕೆಯ ಮರಗಳು ಒಂದೊಂದು ಕೊಡಲಿಯ ಪೆಟ್ಟಿಗೂ ನಡುನಡುಗಿ ಹಸರು ಗರಿಗೆದರಿದ ತಮ್ಮ ತಲೆಗಳನ್ನು ತೂಗಾಡುತ್ತಿದ್ದವು.

ಹೂವಯ್ಯ ಒಂದು ದೊಡ್ಡ ಆಲದ ಮರದ ಬೇರಿನ ಮೇಲೆ ಕುಳಿತುಕೊಂಡನು. ಮುಂದೆ ಏನನ್ನೂ ಆಲೋಚನೆ ಮಾಡದೆ ಮರವನ್ನೇ ನೋಡತೊಡಗಿದನು. ಅದೊಂದು ಭೀಮಾಕಾರದ ಮರವಾಗಿತ್ತು. ನಾಲ್ದೆಸೆಗಳಿಗೂ ಸ್ವಚ್ಛಂದವಾಗಿ ಹರಡಿಕೊಂಡು ತನ್ನದೇ ಒಂದು ಸಂಸಾರ ಹೂಡಿತ್ತು. ಅದರ ಸಣ್ಣ ಸಣ್ಣ ಬಿಳಲುಗಳು ತಪಸ್ಸಿಗೆ ಕುಳಿತ ಮಹರ್ಷಿಯ ಗಡ್ಡವನ್ನೂ ದಿಕ್ಕುದಿಕ್ಕಿಗೆ ಧೀರವಾಗಿ ಕೈಚಾಚಿದ್ದ ಹೆಗ್ಗೊಂಬೆಗಳು ಗರಡಿ ಸಾಧನೆ ಮಾಡಿದವನ ಅಂಗ ವಿನ್ಯಾಸವನ್ನೂ ಭೂಮಿಗಿಳಿದು ಬೆಳೆದುನಿಂತ ಹೆಬ್ಬೆಲಲುಗಳು ದೊಡ್ಡ ದೇವಾಲಯದ ಕಂಬಗಳ ಸಾಲ್ಗಳನ್ನು ನೆನಪಿಗೆ ತರುವಂತಿದ್ದವು. ದಟ್ಟವಾಗಿ ಬೆಳೆದಿದ್ದ ದಪ್ಪವಾದ ಎಲೆಗಳು ಕೊಡೆ ಹಿಡಿದಂತಿದ್ದರೂ ಅಲ್ಲಲ್ಲಿ ಬಿಸಿಲು ತೂರಿಬಂದು ಹಸರು ನೆಲದ ಮೇಲೆ ಕೋಲು ಕೋಲಾಗಿ ಬೀಳುತ್ತಿತ್ತು. ಎಳಬಿಸಿಲು ಬಿದ್ದ ಎಲೆಗಳಿಂದ ಹಸುರಿನ ಚಿಲುಮೆ ನಳನಳಿಸಿ ಚಿಮ್ಮುತ್ತಿತ್ತು. ಅಲ್ಲಲ್ಲಿ ದೊಡ್ಡ ಹಲಸಿನ ಕಾಯಿಯಷ್ಟು ಗಾತ್ರವಾಗಿ ಮರದೆಲೆಗಳನ್ನು ಜೋಡಿಸಿ ಬೆಸೆದು ಮಾಡಿದ್ದ ಚಗಳಿ ಇರುವೆಯ ಗೂಡುಗಳು ಕೊಟ್ಟೆ ಕೊಟ್ಟೆಯಾಗಿ ಕಾಣುತ್ತಿದ್ದವು. ನಸುಗೆಂಪು ಬಣ್ಣದ ದೊಡ್ಡ ದೊಡ್ಡ ಚಗಳಿ ಇರುವೆಗಳು ಎಲೆಗಳ ಮೇಲೆಯೂ ಕೊಂಬೆಗಳ ಮೇಲೆಯೂ ಹರಿದಾಡುತ್ತಿದ್ದವು. ಹಲ ಕೆಲವು ಹಕ್ಕಿಗಳೂ ಕೊಂಬೆಗಳಲ್ಲಿ ಹಾಡಿ ಹಾರಾಡುತ್ತಿದ್ದವು. ಗಾಳಿ ಬೀಸಿದಂತೆಲ್ಲಾ ಮರದ ಹನಿಗಳು ಬಿದ್ದು ಪಟಪಟನೆ ಸದ್ದು ಮಾಡುತ್ತಿದ್ದವು.

ಕಾನೂರು ಜಮೀನಿನ ಹಿಸ್ಸೆಯ ಪಂಚಾಯಿತಿ

ಪ್ರಾರಂಭದಲ್ಲಿ ಎಲ್ಲವೂ ಸುಸೂತ್ರವಾಗಿ ಸಾಗಿತು. ಲೆಕ್ಕಪತ್ರಗಳ ಪರೀಕ್ಷೆಯಾಯಿತು. ಮನೆಗೆ ಸೇರಿದ ತರಿ ಖುಷ್ಕಿ ಮತ್ತು ಇತರೆ ಜಮೀನುಗಳನ್ನು ತೋರಿಸುವ ನಕಾಶೆಯ ಸಮೀಕ್ಷೆಯಾಯಿತು. ಹೂವಯ್ಯನ ತಂದೆಯೂ ಚಂದ್ರಯ್ಯಗೌಡರೂ ಸೋದರರಾದುದರಿಂದ ಇರುವ ಆಸ್ತಿಯನ್ನೆಲ್ಲ ಸಮಪಾಲು ಮಾಡಬೇಕೆಂಬ ಇತ್ಯರ್ಥವಾಯಿತು. ನಡುವೆ ಸೀತೆ ಮನೆ ಸಿಂಗಪ್ಪಗೌಡರು ಹೂವಯ್ಯನ ಪರವಾಗಿ ಹೂವಯ್ಯನ ತಂದೆ ಚಂದ್ರಯ್ಯಗೌಡರಿಗಿಂತಲೂ ಹಿರಿಯರಾಗಿದ್ದುದರಿಂದ ಹೂವಯ್ಯನಿಗೆ ಹೆಚ್ಚಿನ ಆಸ್ತಿ ಬರಬೇಕೆಂದು ವಾದ ಹೂಡಿದರೂ ಸ್ವಲ್ಪ ಚರ್ಚೆತ್ಯಾದ ಮೇಲೆ ಚಂದ್ರಯ್ಯಗೌಡರ ಪಕ್ಷವೇ ಜಯ ಹೊಂದಿತು.

ಆದರೆ ಜಮೀನುಗಳನ್ನು ಪಾಲು ಮಾಡುವ ಸಮಯ ಬಂದಾಗ ಚಂದ್ರಯ್ಯಗೌಡರು ಒಂದು ತಕರಾರು ತಂದರು.

"ಹಿಸ್ಸೆಗೆ ಎಲ್ಲಾ ಆಸ್ತಿಯೂ ಸೇರಲಾರದು, ಪಿತ್ರಾರ್ಜಿತವಾದ ಆಸ್ತಿ ಮಾತ್ರ ಸೇರಬೇಕು. ನನ್ನ ಸ್ವಯಾರ್ಜಿತವಾದ ಆಸ್ತಿಯಲ್ಲಿ ಪಾಲು ಕೊಡಲು ನಾನು ಒಪ್ಪುವುದಿಲ್ಲ. ಬಾವೀಮಕ್ಕಿ ಜಮೀನು-ಗದ್ದೆ ತೋಟ ಎಲ್ಲಾ ನಾನೇ ಸ್ವತಃ ಬೆವರು ಸುರಿಸಿ ಸಂಪಾದಿಸಿದ್ದು, ಹಾಗೆಯೇ ಚಿಕ್ಕೂರು ತೋಟವನ್ನೂ ನನ್ನ ಯಜಮಾನಿಕೆಯಲ್ಲಿ ನಾನೇ ಸಂಪಾದಿಸಿದ್ದು" ಎಂದು

ಬಾಳೂರು ಸಿಂಗೇಗೌಡರೂ ನೆಲ್ಲುಹಳ್ಳಿ ಪೆದ್ದೇಗೌಡರೂ ಚಂದ್ರಯ್ಯಗೌಡರ ಹೇಳಿಕೆಯನ್ನೆ ಸಮರ್ಥಿಸಿದರು. ಆದರೆ ಸೀತೆಮನೆ ಸಿಂಗಪ್ಪಗೌಡರು ಮನಃಪೂರ್ವಕವಾಗಿ ಪ್ರತಿಭಟಿಸಿದರು.

ಹೂವಯ್ಯನೂ ಚಂದ್ರಯ್ಯಗೌಡರ ಮಾತನ್ನು ಪ್ರತಿಭಟಿಸಿ "ಸ್ವಯಾರ್ಜಿತ ಪಿತ್ರಾರ್ಜಿತ ಎಂದು ಆಸ್ತಿಯನ್ನು ವಿಭಾಗ ಮಾಡುವುದು ನ್ಯಾಯವಲ್ಲ, ಒಂದು ಮನೆಗೆ ಯಜಮಾನನಾದವನು ಏನು ಸಂಪಾದನೆ ಮಾಡಿದರೂ ಅವು ಮನೆಯ ಸಂಪತ್ತಿಗೆ ಸೇರುತ್ತವೆ. ಯಜಮಾನನು ವೈವಟ್ಟು ನಡೆಸುವಾಗ ಏನಾದರೂ ನಶ್ಟ ಸಂಭವಿಸಿದರೆ, ಆ ನಷ್ಟವನ್ನು ತನ್ನೊಬ್ಬನ ಮೈ ಮೇಲೆಯೇ ಹಾಕಿಕೊಳ್ಳುತ್ತಾನೆಯೇ? ಮನೆಯ ತಿಬ್ಬಕ್ಕೆ ಖರ್ಚು ಹಾಕುವುದುಇಲ್ಲವೇನು? ನಷ್ಟದಂತೆಯೇ ಲಾಭವೂ ಮನೆಯ ಆಸ್ತಿಗೇ ಸೇರತಕ್ಕದ್ದು, ಪಿತ್ರಾರ್ಜಿತವಾದ ಆಸ್ತಿಯ ಆಧಾರ ಬೆಂಬಲ ಧನಗೌರವ ವಿಲಾಮ ಇವುಗಳೆಲ್ಲಾ ಇಲ್ಲದಿದ್ದರೆ ಯಜಮಾನನು ಹೊಸ ಆಸ್ತಿಗಳನ್ನು ಸಂಪಾದಿಸಲು ಸಾಧ್ಯವಾಗುತ್ತಿತ್ತೆ? ಆದ್ದರಿಂದ ಸಂಪಾದಿಸಿದ ಹೊಸ ಆಸ್ತಿಗಳಲ್ಲವೂ ಪಿತ್ರಾರ್ಜಿತ ಆಸ್ತಿ ಎಂಬ ಮೂಲಧನದ ಮೇಲೆ ಬಂದ ಬಡ್ಡಿಯಂತೆಯೇ ಹೊರತು ಮತ್ತೆ ಬೇರೆಯಲ್ಲ ಎಂದನು.

ಹೂವಯ್ಯನ ಒಪ್ಪಿಗೆಯ ಮೇರೆಗೆ ಚಂದ್ರಯ್ಯಗೌಡರ ಇಷ್ಟವೇ ಮತ್ತೆ ಗೆದ್ದಿತು. ಅವರ 'ಸ್ವಯಾರ್ಜಿತ' ಆಸ್ತಿಗಳನ್ನು ಅವರಿಗೇ ಬಿಟ್ಟು 'ಪಿತ್ರಾರ್ಜಿತ' ಆಸ್ತಿಯನ್ನೇ ಎರಡು ಪಾಲು ಮಾಡುವುದೆಂದು ನಿರ್ಣಯವಾದ ಮೇಲೆ ಎಲ್ಲರೂ ಮಧ್ಯಾಹ್ನದ ಊಟಕ್ಕೆ ತೆರಳಿದರು.

ಚರಸೊತ್ತಿನ ಹಿಸ್ಸೆ

ಮರುದಿನ ಬೆಳಿಗ್ಗೆ ಚಂದ್ರಯ್ಯಗೌಡರು ಇತರರೊಡನೆ ಜಾನುವಾರುಗಳನ್ನು ಹಿಸ್ಸೆ ಮಾಡಲು ಕೊಟ್ಟಿಗೆಯಿದ್ದ ಜಾಗಕ್ಕೆ ಹೋಗಿದ್ದರು. ಅಲ್ಲಿ ಜಾನುವಾರಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದರು.

ಮಧ್ಯಾಹ್ನ ವಾಸದ ಮನೆಯನ್ನೂ ಪಾತ್ರೆ ಪದಾರ್ಥಗಳನ್ನು ಪಾಲು ಮಾಡಿದರು. ಆ ಕಾರ್ಯದ ಪ್ರತಿಯೊಂದು ಭಾಗವೂ ಹೂವಯ್ಯನಿಗೆ ಇಸ್ಸಿ ಎನ್ನಿಸುವಂತಿತ್ತು. ಹಳೆ ಪೊರಕೆಗಳು ಕರಿಮಡಕೆಗಳು ಮೊರಗಳು ಸಾರಣೆಗಳು ಸಿಕ್ಕಗಳು ಸೌಟುಗಳು ಒನಕೆಗಳು ಹಾಕಿ ಸವೆಗೋಲು ಹೆಡಗೆಗಳು ಬುದ್ಧಿಗಳು ತಾಮ್ರ ಹಿತ್ತಾಳೆಯ ಪಾತ್ರೆಗಳು,ಜೋಮಾಲೆ ಹಾಕಿದ್ದ ಇರಿಕೆಗಳು, ಹಪ್ಪಳ ಸಂಡಿಗೆ, ಉಪ್ಪಿನಕಾಯಿಗಳು, ಚಾಪೆ ಮೊದಲಾದ ಹಾಸುವ ವಸ್ತುಗಳು ಡಬ್ಬಗಳು ಇತ್ಯಾದಿಗಳನ್ನೆಲ್ಲಾ ತಂದು ಅಂಗಳದಲ್ಲಿ ದೇವರ ಕಲ್ಲಿನ ಸುತ್ತಲೂ ರಾಶಿ ಹಾಕಿರುವುದನ್ನು ಕಂಡು ಹೂವಯ್ಯನಿಗೆ ತಮ್ಮ ಮನೆಯ ಅಂತರಂಗದ

ಮರ್ಮಸ್ಥಾನಗಳನ್ನೆಲ್ಲಾ ಪರಕೀಯರ ಮುಂದೆ ಬಯಲಿಗೆಳೆದಂತಾಗಿ 'ಅಯ್ಯೋ' ಎನಿಸಿತು. ತಗ್ಗಿಸಿದ ತಲೆಯನ್ನು ಮೇಲೆತ್ತುವುದಕ್ಕು ಕಷ್ಟವಾಯಿತು.

ಅಂತೂ ಬಹುಕಾಲದಿಂದ ಒಟ್ಟಿಗೆ ನಡೆದುಕೊಂಡು ಬಂದಿದ್ದ ಕಾನೂರು ಮನೆಯ ಅವಿಭಕ್ತ ಕುಟುಂಬ ಎರಡು ಪಾಲಾಗಿ ಹೋಯಿತು. ಹೆಸರಿಗೆ ಮಾತ್ರ ಮನೆ ಎರಡು ಪಾಲಾಯಿತು. ಆದರೆ ಆಸ್ತಿಯಲ್ಲಿ ಮುಕ್ಕಾಲು ಪಾಲು ಚಂದ್ರಯ್ಯಗೌಡರ ಹಿಸ್ಸೆಗೇ ಸೇರಿಹೋಯಿತು. 'ಸ್ವಯಾರ್ಜಿತ' ಎಂದು ಕೆಲವು ಜಮೀನುಗಳನ್ನು ಮನೆಯ ಸಾಲವನ್ನೆಲ್ಲಾ ತನ್ನ ಮೇಲೆ ಹಾಕಿಕೊಂಡಿದ್ದರಿಂದ ಎಂದು ಮತ್ತೆ ಕೆಲವು ಜಮೀನುಗಳನ್ನು ಚಂದ್ರಯ್ಯಗೌಡರು ತಮ್ಮ ಪಾಲಿಗೇ ಹಾಕಿಕೊಂಡರು.

ಆಭರಣ ಮುಂತಾದ ಚರಸ್ವತ್ತುಗಳನ್ನು ಪಾಲು ಮಾಡುವಾಗಲೂ ಕೂಡ ಅನೇಕ ಉಪಾಯಗಳಿಂದ ತಮಗೆ ಹೆಚ್ಚು ಪಾಲು ಬರುವಂತೆ ಮಆಡಿಕೊಂಡರು. ಮನೆಯ ಜೀತದಾಳುಗಳನ್ನು ಹಂಚಿಕೊಳ್ಳುವಾಗಲೂ ಹಾಗೆಯೇ ನಡೆಯಿತು. ಬೈರ ಮತ್ತು ಅವನ ಸಂಸಾರ– ಹೆಂಡತಿ ಸೇರಿ, ಮಗ ಗಂಗ ಹುಡುಗ– ಹೊರತು ಉಳಿದ ಎಲ್ಲಾ ಬೇಲರೂ ಚಂದ್ರಯ್ಯಗೌಡರ ಪಾಲಿಗೆ ಬಂದರು.

ಮಳೆ ಹಿಡಿಯಿತು. ಮುಂಗಾರಿನ ಪ್ರಾರಂಭದಲ್ಲಿ ಹರತ್ತಾಗಿ ಕಾಣಿಸಿಕೊಂಡು ಆಕಾಶವನ್ನೆಲ್ಲಾ ಆಚ್ಛಾದಿಸಿ ಮಿಂಚು ಗುಡುಗು ಸಿಡಿಲು ಬಿರುಗಾಳಿಗಳ ರುದ್ರ ಪರಿವಾರದೊಡನೆ ಬಂದು ಬಿರಮಳೆಗರೆದು ತುಸು ಹೊತ್ತಿನಲ್ಲಿ ಕಣ್ಮರೆಯಾಗಿ ನೀಲಾಕಾಶವನ್ನು ಸೂರ್ಯನ ಸ್ವಚ್ಛತರ ಕಿರಣ ಸಂಕುಲವನ್ನು ಮರಳಿ ತೋರಿಸುತ್ತಿದ್ದ ಮೇಘರಾಶಿ ನೀರವವಾಗಿ, ಅನವರತವೂ ಆಕಾಶವನ್ನೆಲ್ಲಾ ಕವಿದು ಮುಚ್ಚಿ ದಿನ ದಿನಗಳವರೆಗೆ ಸೂರ್ಯನಿದ್ದಾನೆ ಎಂಬ ಕುರುಹನ್ನೂ ತೋರಗೊಡದೆ ಹಗಲಿರುಳೂ ಒಂದೇ ಸಮನಾಗಿ ಜಡಿ ಮಳೆಯನ್ನು ಹುಯ್ಯತೊಡಗಿತು. ನಾಡು ಕಾಡು ಬೆಟ್ಟ ಬಯಲುಗಳೆಲ್ಲವೂ, ವರ್ಷಧಾರೆಗಳಿಂದ ನೆಯ್ದು ತೆಳುವಾದ ದಸು ಬಿಳಿಯ ಪರದೆಯೊಳಗೆ ಜೋಡಿಸುವಂತಿದ್ದವು, ಬೇಸಿಗೆಯಲ್ಲಿ ಬತ್ತಿದ ತೊರೆಗಳೆಲ್ಲವೂ ಸಜೀವವಾಗಿ ಕಲನಾದದಿಂದ ಪ್ರವಹಿಸತೊಡಗಿದ್ದವು. ಹಾದಿಗಳೆಲ್ಲಾ ಕೆಸರಾಗಿ ಯಾವಾಗಲೂ ನೀರು ಮಿಜಿಗುಟ್ಟುತ್ತಿತ್ತು. ನೆಲವೆಲ್ಲಾ ಸರ್ವದಾ ಜಲಮಯವಾಗಿತ್ತು. ತೋಟದ ಕಪ್ಪುಗಳಲ್ಲಿಯೂ ಗಡ್ಡೆಯೂ ಒಡಗುಗಳಲ್ಲಿಯೂ ನೀರು ಹಸುಳೆಯಂತೆ ಯಾವಾಗಲೂ ಗಳಹುತ್ತ ತೊದಲುತ್ತಾ ಪರದಾಡುತ್ತಿತ್ತು. ಎರಡು ತಿಂಗಳ ಹಿಂದೆ ಬೋಳು ಬೆತ್ತಲೆಯಾಗಿ ಒಣಗಿದ್ದ ಗದ್ದೆಯ ಕೋಗುಗಳು ಇಂದು ಭತ್ತದ ಸಸಿಗಳಿಂದಲೂ ಕಟ್ಟಿ ನಿಲ್ಲಿಸಿದ ನೀರಿನಿಂದಲೂ ಕಳಕಳಸಿ ನಗುತ್ತಿದ್ದವು. ಸುತ್ತಲೂ ಬೆಟ್ಟಗುಡ್ಡಗಳಿದ್ದು ನಡುವೆ ಕಣಿವೆಗಳಲ್ಲಿ ಅಗಲವಾಗಿ ಹಬ್ಬಿ ಬೆಳೆದಿದ್ದ ಎಳೆ ಸಸಿಯ ಗದ್ದೆಯ ಕೋಗಿನ ಕೋಮಲವಾದ ಹಸರು ಕಣ್ಣಿಗೆ ನಲ್ಮೆಯನ್ನು ಮನಸ್ಸಿಗೆ ಆಹ್ಲಾದವನ್ನು ಆತ್ಮಕ್ಕೆ ಶಾಂತಿಯನ್ನು ಮೆತ್ತುವಂತಿತ್ತು.

ಜನರೆಲ್ಲರೂ ಬೇಸಿಗೆಯ ಸೋಮಾರಿತನವನ್ನು ಕೊಡಹಿ ಎಚ್ಚೆತ್ತು ಕಾರ್ಯಶೀಲರಾಗಿದ್ದರು.

ಕೆಲವರಿಗೆ ಜಗಳಕ್ಕೂ ಚಾಡಿಗೂ ಮನಸ್ಸಿದರೂ ಪುರಸೊತ್ತಿರಲಿಲ್ಲ. ಬೆಳಿಗ್ಗೆ ಗಂಜಿಯುಂಡು ಮಧ್ಯಾಹ್ನ ಹನ್ನೆರಡು ಅಥವಾ ಒಂದು ಗಂಟೆಗೆಯವರೆಗೆ ಚೆನ್ನಾಗಿ ದುಡಿದು ನಡುವೆ ಹಲಸಿನ ಕಾಯಿ ಅಥವಾ ಹಣ್ಣುಗಳನ್ನು ತಿಂದು ಮಧ್ಯಾಹ್ನದ ಊಟ ಪೂರೈಸಿದೊಡನೆ ಮತ್ತೆ ಗದ್ದೆಗೆ ಇಳಿದು ಸಾಯಂಕಾಲದವರೆಗೂ ಜಡಿಮಳೆಯಲ್ಲಿ ಕಂಬಳಿಕೊಪ್ಪೆಯ ಗಂಡಸರೂ ಗೊರಬುಸೂಡಿದ ಹೆಂಗಸರೂ ಗೆಯ್ದು ಗೆಯ್ದು ದಣಿದು ಮನೆಗೆ ಬರುವುದೇ ತಡ ಉಂಡು ಹಾಸಿಗೆ ಹಿಡಿಯುತ್ತಿದ್ದರು. ಸ್ವಲ್ಪ ವಿರಾಮವಿದ್ದವರಿಗೂ ಕೂಡ ಗದ್ದೆಗೆ ಕೂಣೆ ಹಾಕುವುದು, ಹಳ್ಳದ ಕಟ್ಟಿಗೆ ಹೆಗ್ಗೂಣಿ ಕಟ್ಟುವುದು, ಮಳೆ ಜೋರಾದ ರಾತ್ರಿಗಳಲ್ಲಿ ದೊಂದಿ ಲಾಟೀನು ಮೊದಲಾದ ದೀಪ ಸೌಕರ್ಯಗಳನ್ನು ಹಿಡಿದುಕೊಂಡು ಹೋಗಿ ಬಯಲು ಜಡ್ಡುಗಳಿಗೆ ಹತ್ತಿ ಬರುತ್ತಿದ್ದ 'ಹತ್ತಮೀನು' ಗಳನ್ನು ಕಡಿಯುವುದು ಮುಂತಾದ ಸಾಹಸ ಉದ್ಯೋಗಗಳಿದ್ದುದರಿಂದ ಅವರೂ ಬೇರೆಯ ರೀತಿಯಲ್ಲಿ ಇತರರಂತೆಯೇ ದುಡಿದು ದಣಿಯುತ್ತಿದ್ದರು.

ಒಂದು ದಿನ ಸಾಯಂಕಾಲ ನಾಗಮ್ಮನವರು ತಮ್ಮ ಗದ್ದೆಗಳ ಅಂಚಿನಲ್ಲಿ ಹೊನಗೊನೆ ಸೊಪ್ಪನ್ನು ಕುಯ್ದುಕೊಂಡು ಬರಲು ಹೋಗಿದ್ದರು. ತುಂತುರು ಮಳೆ ಸುರಿಯುತ್ತಿತ್ತು. ಮೋಡದ ಕತ್ತಲೆ ಕವಿದಿತ್ತು.

ಗದ್ದೆಯ ಮೇಲುಭಾಗದಲ್ಲಿದ್ದ ಬಯಲಿನಲ್ಲಿ ದನಗಳ ಹಿಂಡಿನಲ್ಲಿ ಚಂದ್ರಯ್ಯಗೌಡರ ಗಾಡಿ ಎತ್ತುಗಳು ಮೇಯುತ್ತಿದ್ದವು ಅವುಗಳಲ್ಲಿ ಲಚ್ಚ "ಸೊರಬು ಸೂಡಿಕೊಂಡು ಬಾಗಿ ಬಾಗಿ ಏಳುತ್ತಿದ್ದ ನಾಗಮ್ಮನವರನ್ನು ಕಂಡು ಏನೆಂದು ಊಹಿಸಿತೋ ಏನೋ, ಬಾಲವೆತ್ತಿ ಕಾಲು ಕುಟ್ಟಿ, ಕೋಡು ಮಟ್ಟೆ ಹಾಕಿದ್ದ ನೀಳವಾದ ಕೋಡುಗಳನ್ನು ಮುಂಚಾಚಿ ಭಯಂಕರವಾಗಿ ಕೂಗುತ್ತಾ ಗುಟುರು ಹಾಕಿ ಅವರ ಕಡೆಗೆ ನುಗ್ಗಿತು.

ದನ ಕಾಯುತ್ತಿದ್ದ ಬೇಲರ ಸಿದ್ದ ಅದನ್ನು ಕಂಡೊಡನೆಯ 'ಅಯ್ಯೋ ಅಮ್ಮ ಅಯ್ಯೋ ಅಮ್ಮ! ಎಂದು ಕರೆಯುತ್ತಾ ಓಡಿದನು.

ನಾಗಮ್ಮನವರು ತಲೆಯೆತ್ತಿ ನೋಡುತ್ತಾರೆ. ಭತ್ತದ ಸಸಿ ಬೆಳೆದು ನಿಂತು ಗದ್ದೆಗಳಲ್ಲಿ ಅಂಚಿನಿಂದ ಅಂಚಿಗೆ ನೆಗೆಯುತ್ತಾ ಲಚ್ಚೆನ್ನು ತಮ್ಮ ಕಡೆಗೆ ಭಾಷಣವಾಗಿ ನುಗ್ಗಿ ಬರುತ್ತಿದೆ. ಕಿಟ್ಟನೆ ಕಿರುಚಿಕೊಂಡು ಸೂಡಿಕೊಂಡಿದ್ದ ಗೊರಬನೊಡನೆ ಓಡಿದರು. ಎರಡು ಮೂರು ಓಡುವುದರಲ್ಲಿ ನಡುಗದ್ದೆಅಲ್ಲಿ ಉರುಳಿ ಬಿದ್ದರು. ಗೊರಬು ಅವರ ಮೇಲೆ ಬುಟ್ಟಿ ಮುಚ್ಚಿದಂತೆ ಬಿದ್ದಿತು. ಲಚ್ಚ ಓಡಿ ಹೋಗಿ ಮನುಷ್ಯರ ಬದಲಾಗಿ, ಗೊರಬಿದ್ದುದನ್ನು ನೋಡಿ ಅದನ್ನೇ ತಿವಿಯಿತು. ತರಗೆಲೆಯ ಗೊರಬು ತೂತಾಗಿ ಎತ್ತಿನ ಕೋಡಿಗೆ ಚುಚ್ಚಿ ಸಿಕ್ಕಿಕೊಂಡು ಗಾಳಿಯಲ್ಲಿ ಹಾರಾಡಿತು. ಲಚ್ಚ ಎರಡನೆಯ ಸಾರಿ ತಿವಿಯಲು ಪ್ರಯತ್ನಿಸಿತು. ಅಷ್ಟರಲ್ಲಿ ಬಳಿಯಲ್ಲಿಯೇ ಗದ್ದೆಯ ಬೇಲಿಯ ಮರಗಳಲ್ಲಿ ಹೊರಸಲು ಹಕ್ಕಿ

ಬೇಟೆಯಾಡುತ್ತಿದ್ದ ಹೂವಯ್ಯ ತನ್ನ ಸಮಸ್ತ ಶಕ್ತಿಯನ್ನು ಸರಿಮಂತ್ರಿಸಿ ಲಚ್ಚನ ಬಳಿಗೆ ನುಗ್ಗಿ ಬಂದನು. ಎತ್ತ ಅತ್ತ ಕಡೆಗೆ ತಿರುಗಿ ಅವನನ್ನೆ ಅಟ್ಟ ತೊಡಗಿತು.

ಸ್ವಲ್ಪ ದೂರ ಓಡಿದ ಮೇಲೆ ಹೂವಯ್ಯ ಕೈಲಿದ್ದ ಬಂದೂಕಿನಿಂದ ಎತ್ತನ್ನು ಸುಡುತ್ತೇನೆ ಎಂದು ಭಾವಿಸಿದನು.

ಭೂಮಿ ಹುಣ್ಣಿಮೆ

ಭೂಮಿ ಹುಣ್ಣಿಮೆಯ ಹಬ್ಬ ದೀಪಾವಳಿ ಹಬ್ಬಕ್ಕೆ ಹದಿನೈದು ದಿನಗಳ ಹಿಂದೆ ಬರುತ್ತದೆ. ಕೊಬ್ಬಿ ಬೆಳೆದುನಿಂತ ಹಸುರಾದ ಭತ್ತದ ಗದ್ದೆಗಳಲ್ಲಿ ಆಗತಾನೆ ಹೊಡೆ ಹೊರಡಲು ಮೊದಲಾಗುತ್ತದೆ. ಕೆಲವು ಮುಂಬೆಳಕಿನ ಗದ್ದೆಗಳಲಿ ಹಾಲ್ದೆನೆಗಳು ಮೂಡಿರುತ್ತವೆ. ಸೂರ್ಯನನ್ನೇ ಕಾಣಗೂಡಿಸದೆ ಆಕಾಶವನ್ನೆಲ್ಲಾ ಮುಚ್ಚಿಕೊಂಡು ಹಗಲಿರುಳೂ ಹಿಡಿದು ಮಳೆ ಸುರಿಸುವ ಕರಿಮುಗಿಲು ಬಿಳಿಮುಗಿಲಾಗಲು ತೊಡಗುತ್ತದೆ. ಒಮ್ಮೊಮ್ಮೆ ವಿರಳವಾಗಿ ತುಂತುರು ಮಳೆ ಹೊಯ್ದರೂ ಬೆಚ್ಚನೆ ಬಿಸಿಲು ಅಡಿಗಡಿಗೆ ಇಣಿಕಿಣಕಿ ಹಸರು ಗದ್ದೆಗಳ ಮೇಲೆ ಹೊಂಬಣ್ಣದ ನಗೆ ಬೀರುತ್ತದೆ. ಮಳೆಗಾಲದ ಜಡಿಮಳೆಯೂ ಇರದೆ ಬೇಸಗೆಯ ಉರಿಬಿಸಿಲೂ ಇರದೆ ಚಳಿಗಾಲದ ಕೊರೆಚಳಿಯೂ ಇರದೆ ಹವಾಸುಖವಾಗಿರುತ್ತದೆ. ಒಂದೊಂದು ದಿನ ಸ್ವಲ್ಪವೂ ಮಳೆಯಿಲ್ಲದೇ ಮೋಡವಿಲ್ಲದೇ ತೊಳೆದಿಟ್ಟ ನೀಲಿ ಗಾಜಿನಂತೆ ಹಬ್ಬಿರುವ ನೀಲಾಕಾಶದಲ್ಲಿ ಸೂರ್ಯನು ಪ್ರಫುಲ್ಲ ತೇಜಸ್ವಿಯಾಗಿರುವುದೂ ಉಂಟು. ಅಂತಹ ದಿನಗಳೆಂದರೆ ವನ್ಯಜಂತುಗಳಿಗೆ ಖುಷಿ! ಬೇಟೆಗಾರರಿಗೂ ಖುಷಿ!

ಭೂಮಿ ಹುಣ್ಣಿಮೆಯ ಹಬ್ಬದಲ್ಲಿ ವಿಶೇಷವೆಂದರೆ ಕಳಮಶ್ರೀಯ ಪೂಜೆ ಹಬ್ಬದ ಹಿಂದಿನ ದಿನವೇ ಕಾಡುಗಳಿಗೆ ಹೋಗಿ ಅರವತ್ತು ಬಗೆಯ ಸೊಪ್ಪುಗಳನ್ನೂ ನೊಲೆಗೆಣಸುಗಳನ್ನು ತರುತ್ತಾರೆ. ಸೊಪ್ಪುಗಳನ್ನೆಲ್ಲಾ ಸೇರಿಸಿ ಮಾಡಿದ ಪಲ್ಯಕ್ಕೆ ಬೆರಕೆ ಸೊಪ್ಪಿನ ಪಲ್ಯ' ಎಂದು ಹೆಸರು. ಅರ್ಧಅಡಿಯಷ್ಟು ದಪ್ಪವಾಗಿ ನಾಲ್ಕೈದು ಅಡಿಗಳವರೆಗೂ ಉದ್ದವಾಗಿರುತ್ತದೆ. ಮುಳ್ಳು ಮುಳ್ಳು ನೂಲೆ ಬಳ್ಳಿಯ ಬುಡದ ಗೆಣಸು ಅದನ್ನು ಬೇಯಿಸಿ ಸಿಪ್ಪೆ ಸುಲಿದರೆ ಬೆಣ್ಣೆಯಿದ್ದಂತೆ ಬೆಳ್ಳಗೆ ನುಣ್ಣಗೆ ಮೃದುವಾಗಿರುತ್ತದೆ. ಹಾಗೆಯೇ ಅಣಂಬಲಿ, ಕೆಸುವಿನ ಕೊಟ್ಟೆಹಿಟ್ಟು, ಕೊಚ್ಚಿಲಿ, ಮೀನಿನ ಪಲ್ಯ ಇತ್ಯಾದಿ ಅನೇಕ ಭಕ್ಷ್ಯ ಭೋಜ್ಯಗಳನ್ನು ಮಾಡುತ್ತಾರೆ.

ಹಬ್ಬದ ದಿನ ಉಷಃಕಾಲಕ್ಕೆ ಮೊದಲೇ ಗದ್ದೆಗಳಿಗೆ ಹೋಗಿ ಭತ್ತದ ಪೈರನ್ನು ಹೂವು, ಹಣ್ಣು, ಕರ್ಪೂರ, ಗಂಧ-ಜಾಗಟೆ, ಗಂಟೆ, ಆರತಿಗಳಿಂದ ವಿಧಿವತ್ತಾಗಿ ಅರ್ಚಿಸುತ್ತಾರೆ. ಕಳಮಶ್ರೀಯ ಆರಾಧನೆಯ ಜೊತೆಗೆ ಕಲೋಪಾಸನೆಯೂ ಆಗುತ್ತದೆ.

ಅನತಿ ದೂರದಲ್ಲಿದ್ದ ಹಸುರಾದ ಬೆಟ್ಟದ ಸಾಲಿನ ಮೇಲೆ ಸೂರ್ಯನು ಮೂಡಿದನು. ಮರಮರಗಳಲ್ಲಿ ಪೊದೆಪೊದೆಗಳಲ್ಲಿ ಹಕ್ಕಿಹಾಡಿದವು. ಮೃದುಗಾಳಿ, ಬೆಳೆದು ನಿಂತು ಗದ್ದೆಯ ಕೆವಿಯ

ಮೇಲೆ ಸುಯ್ಯೆಂದು ಬೀಸಿ ಕೂಗು ತೆರೆ ತೆರೆಯಾಗುವಂತೆ ಮಾಡುತ್ತಿತ್ತು. ಆ ದೃಶ್ಯದ ಮಧ್ಯ ಗದ್ದೆಯ ನಡುವೆ ಹಾದು ಬರುತ್ತಿದ್ದ ಕಾಲುದಾರಿಯಲ್ಲಿ ಅಡಕೆ ಸುಲಿಯಲೆಂದು ಗೊತ್ತು ಮಾಡಿದ ಕೂಲಿಯಾಳುಗಳು– ಹೆಂಗಸರೂ, ಗಂಡಸರೂ ಬುಡುಬುಡಕೆಯಂತೆ ಹರಟೆ ಹೊಡೆಯುತ್ತಾ ಬಂದರು.

ಸುಬ್ಬಮ್ಮನ ಕೇಳದೆ ಆಕೆಯ ತಾಯಿ ಆ ದಿನ ಬೆಳಿಗ್ಗೆ ತಲೆ ಬಾಚಿ, ಹೂ ಮುಡಿಸಿ, ಹಣೆಗೆ ಬೊಟ್ಟಿಟ್ಟು, ಕಿವಿ ಮೂಗುಗಳಿಗೆ ತೊಡಿಸಿ ಹಿಂದೆ ಪುಟ್ಟಮ್ಮ ಕಳುಹಿಸಿದ ನೀಲಿಗಪ್ಪಿನ ಸೀರೆಯನ್ನು ಉಡಿಸಿ, ಗಂಡನ ಮನೆಗೆ ಹೋಗುವ ಮಗಳನ್ನು ತವರೂರಿನಿಂದ ಹೇಗೆ ಕಳುಹಿಸಬೇಕೋ ಹಾಗೆ ಸಿಂಗರಿಸಿ ಕಳುಹಿಸಿದ್ದಳು. ಸೇರೆಗಾರರು ಕಲಾ ವಿಮರ್ಶಕರು ವರ್ಣಚಿತ್ರಗಳನ್ನು ವಿವರವಾಗಿ ಸಮೀಕ್ಷಿಸುವಂತೆ ಸುಬ್ಬಮ್ಮನ ಅಂಗೋಪಾಂಗಗಳನ್ನು ಚೆನ್ನಾಗಿ ನೋಡಿ ಸವಿದರು. ದುಂಡು ಮುಖ ಮೃದುವಾದ ಕೆನ್ನೆಗಳು ಮನಸ್ಸನ್ನು ಸೂರೆಗೊಳ್ಳುವ ಕಣ್ಣುಗಳು ಹುಬ್ಬು, ಹಣೆ ಬಾಚಿದ ಬೈತಲೆ, ಕರಿಗುರುಳು, ಮುತ್ತಿಡುವುದಕ್ಕಾಗಿಯೇ ಮೂಡಿದಂತಿದ್ದ ದುಂಡುಗಲ್ಲದ ನುಣ್ಣು, ರವಿಕೆ, ಬಿಗಿದ ತೇಳುಗಳು ಹೊಂಬಳೆ ತೋಳುಸರಿಗೆ, ಎಸಳುಬುಗುಡಿ, ಬೆಂಡೋಲೆ, ಗೆಜ್ಜೆಯಡಿಕ್ಕೆ ಉಚ್ಚಿದೆಡೆ ನೋಡುತ್ತಾ ನೋಡುತ್ತಾ ಸೇರೆಗಾರರ ಮನಸ್ಸು ಹುಚ್ಚಾಯಿತು! ಮನಸ್ಸಿಗೊಳಲಿಲ್ಲ, ತಡೆಯದಾಯಿತು! ಏನಾದರೂ ಆಗಲಿ! ಸುಬ್ಬಮ್ಮ ಒಪ್ಪಿ ಸುಮ್ಮನಾದರೆ ಸಲೀಸಾಯಿತು! ಇಲ್ಲದಿದ್ದರೆ ಗಟ್ಟದ ಕೆಳಗೆ ಹಾರಿದರಾಯಿತು!

ಚೈತ್ರಮಾಸದ ವಿಪಿನರಾಜಿ, ಪರ್ವತಶ್ರೇಣಿ, ಪಾತ್ರ, ಸಮಯ, ಸುಖಶೀತಲ, ವಾಯುಮಂಡಲ, ಇನ್ನೇನು ಗಾನದ ತಾರಾಮಂಡಲದಂತೆ ಬರಿದು ಸಾವಿರಾರು ಪಕ್ಷಿಗಳ ತುಮುಲ ಕಲಗಾನವಾಗಿ ಪರಿಣಮಿಸಲಿರುವ ನಾದಗರ್ಭಿತವಾದ ಗಂಭೀರ ವನ್ಯಮೌನ, ವನದೇವಿಯ ಹೃದಯ ವೀಣೆಯ ತಂತಿಗಳನ್ನು ಮಿಡಿಯುವಂತೆ ಕಾಜಾಣಗಳು ಆಲಾಪನೆ ಮಾಡತೊಡಗಿದವು. ಮರಗಳಲ್ಲಿ ಹೂ ಕುಡಿಯುತ್ತಿದ್ದ ಸಾವಿರಾರು ಲಕ್ಷ ಲಕ್ಷ, ಕೋಟಿ ಕೋಟಿ, ಜೇನ್ನೊಣಗಳ ಝೇಂಕಾರ ಪ್ರಾರಂಭವಾಯಿತು. ಕಣವೆಗಳಲ್ಲಿದ್ದ ಊರು ಕೋಳಿಗಳ ಸಾಧಾರಣವಾದ ಕೂಗಿನ ಜೊತೆಗೆ ಕಾಡುಕೋಳಿಗಳ ಮಧುರ ಮನೋಹರವಾದ ಕೇಕೆಗಳೂ ಅಲ್ಲಲ್ಲಿ ಕೇಳಿಬಂದವು ಹೂವಯ್ಯನ ಹೃದಯ ಆನಂದ ಸ್ಪಂದಿತವಾಯಿತು. ಹೊಸ ಚೇತನ ಎದೆಯಲ್ಲಿ ಮಿಂಚಿನಂತೆ ಸಂಚರಿಸಿತು. ಚೈತ್ರ ಪಕೃತಿಯ ಹುಚ್ಚಿನ ಕಿಚ್ಚು ಅವನೆಡೆಗೆ ತಗುಲಿದಂತಾಯಿತು ಉಷಃ ಕಾಲ ಅರುಣೋದಯ, ಸೂರ್ಯೋದಯಗಳ ಸಂಪತ್ತನ್ನು ಕಳೆದುಕೊಳ್ಳುವ ದಾರಿದ್ರ್ಯಕ್ಕೆ ಬೆದರಿ, ಬೇಗ ಬೇಗನೆ, ಬೆಟ್ಟದ ನೆತ್ತಿಯ ಹಾಸುಬಂಡೆಯ ಉತ್ತುಂಗ ವೇದಿಕೆಗೆ ಏರಿ, ಏದುತ್ತಾ ಆನಂದಪರವಶನಾಗಿ ದಿಟ್ಟಿಸುತ್ತಾ ನಿಂತನು.

ಮೈಲಿಮೈಲಿಗಳಾಚೆ, ವಿಸ್ತಾರವಾಗಿ ಅನಂತವಾಗಿ, ದೃಶ್ಯ ತರಂಗ ವಿನ್ಯಾಸದಿಂದ ತುಂಗವಾಗಿ ಉತ್ತುಂಗವಾಗಿ ಮಹೋತ್ತುಂಗವಾಗಿ ಹಬ್ಬಿ ಹರಿದಿದ್ದ ಪರ್ವತಾರಣ್ಯಗಳು ಕೊನೆಮುಟ್ಟುವಂತೆ ತೋರುತ್ತಿದ್ದ, ಪೂರ್ವದಿಕ್ಕಿನಲ್ಲಿ ಅರಿಸಿನದ ದೂಳಿಯನ್ನೆರಚಿದಂತೆ ಹಳದಿಯ ಕಾಂತಿ ನಲಿಯುತ್ತಿದ್ದ ಗಗನ ಪಟಕ್ಕೆದುರಾಗಿ ದಿಗಂತ ರೇಖೆ ಕಚ್ಚುಕಚ್ಚಾಗಿ ಗೋಚರಿಸತೊಡಗಿತು.

ಅಗ್ರಹಾರದ ದೇವಸ್ಥಾನದಲ್ಲಿ

ಚೈತ್ರಮಾಸ ಕಳೆದು ವೈಶಾಖ ಮಾಸ ಪ್ರಾರಂಭವಾಗಿ ಮೊದಲನೆಯ ವಾರವೂ ಮುಗಿದಿತ್ತು. ಒಂದೆರಡು ಮಳೆ ಹನಿ ಹಾಕಿದ್ದರೂ ಬೇಸಿಗೆಯ ಬಿಸಿಲಿನ ಬೇಗೆ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಹಳ್ಳಿಗಳಲ್ಲೆಲ್ಲಾ "ಈ ವರ್ಷ ಕ್ಷಾಮ ಖಂಡಿತ" ಎಂದು ಭವಿಷ್ಯತ್ತು ಹೇಳಲೂ ಪ್ರಾರಂಭಿಸಿದರು. ಪ್ರತಿವರ್ಷವೂ ಅದೇ ರೀತಿ ಭವಿಷ್ಯತ್ತು ಹೇಳುವುದು ಅವರಿಗೆ ವಾಡಿಕೆಯಾಗಿದ್ದುದರಿಂದ ಅವರಲ್ಲಿಯೇ ಯಾರು ಅದನ್ನು ನಿಜವೆಂದು ನಂಬಿ ಭೀತಿಗೊಳ್ಳುವ ಅವಿವೇಕಕ್ಕೆ ಹೋಗುತ್ತಿರಲಿಲ್ಲ. ಆ ಭವಿಷ್ಯತ್ತು ಮಳೆಯ ದೇವತೆಗೆ ಎಚ್ಚರಿಕೆ ಕೊಡುವುದಕ್ಕಾಗಿದ್ದಿತೇ ಹೊರತು ವಾಯುಗುಣದ ಲಕ್ಷಣಗಳನ್ನು ವೈಜ್ಞಾನಿಕವಾಗಿ ವರ್ಣಿಸುವುದಕ್ಕಾಗಿರಲಿಲ್ಲ.

ಒಂದೆರಡು ಹುಸಿಮಳೆ ಬಂದು ಹೋಗಿ ಭೂಮಿಯ ತೃಷೆ ಇಮ್ಮಡಿಸಿದಂತೆ ಉರಿ 'ಹೆಚ್ಚಿತು' ಕಾಡು ಬೆಟ್ಟಗಳೆಲ್ಲ ದಟ್ಟವಾದ ಅರಣ್ಯಗಳಿಂದ ಯಾವಾಗಲೂ ಹಸುರಾಗಿದ್ದರೂ ನೆಲದಲ್ಲಿ ಹುಲ್ಲು ಮೇವು ಇಲ್ಲದೆ, ಕರೆಯದಿದ್ದ ಕಾಲ್ನಡಿಗೆಗಳ ಮೈಯಲ್ಲಿ ಪಕ್ಕೆಲುಬುಗಳ ಜೋಡನೆಯ ಆಕಾರ ಪ್ರತ್ಯಕ್ಷವಾಗತೊಡಗಿತು. ತೊರೆಗಳಲ್ಲಿ ನೀರು ಹರಿಯುವುದು ನಿಂತು ತೊರೆಯ ಜೀವನವೇ ತುಂಡುಗಡಿದಂತಾಗಿ ಅಲ್ಲಲ್ಲಿ ಕೆಲವು ಗುಂಡಿಗಳಲ್ಲಿ 'ಹೊಂಡ ತೊಳಕಿ'ಯೂ ದೊಡ್ಡಗುಂಡಿಗಳಿಗೆ 'ಕಡುಹಾಕಿ'ಯೂ (ಕೆಲವು ಮರಗಳ ಕಾಯಿ, ತೊಗಟೆ ಸೊಪ್ಪುಗಳನ್ನು ಜಜ್ಜಿ ನೀರಿಗೆ ಹಾಕಿ ಕದಡುತ್ತಾರೆ. ಆ ವಿಷದಿಂದ ಮೀನು ಸತ್ತು ತೇಲುತ್ತದೆ. ಅಂತಹ ಗುಂಡಿಗಳಲಿ ನೀರೆಲ್ಲಾ ಕಗ್ಗಾಗಿರುತ್ತದೆ) ಮೀನು ಹಿಡಿಯುತ್ತಿದ್ದರಿಂದ ದನಕರುಗಳಿಗೆ ನೀರು ಸುಲಭವಾಗಿ ಸಿಕ್ಕುತ್ತಿರಲಿಲ್ಲ. ಅವು ನೀರಿಗಾಗಿ ಗುಡ್ಡದ ನೆತ್ತಿಯ ಕೆರೆಗಳಿಗೆ ಹೋಗಬೇಕಾಗಿತ್ತು.

ಆದರೆ ಅಗ್ರಹಾರದ ಪಕ್ಕದಲ್ಲಿಯೇ ತುಂಗಾನದಿ ಹರಿಯುತ್ತಿದ್ದರಿಂದ ಅಲ್ಲಿಯ ಜನರಿಗಾಗಲಿ ಜಾನುವಾರುಗಳಿಗಾಗಲೀ ನೀರಿನ ತೊಂದರೆ ಇರಲಿಲ್ಲ. ನದಿಯ ದಡದಲ್ಲಿದ್ದ ದೇವಸ್ಥಾನದ ಮುಂದೆ ನೀರು ಮುಟ್ಟುವವರೆಗೂ ಇಳಿದು ಹೋಗುತ್ತಿದ್ದ ಸೋಪಾನ ಪಂಕ್ತಿಗಳ ಪಕ್ಕದಲ್ಲಿಯೇ ದನಕರುಗಳು ನೀರಿಗೆ ಇಳಿದೂ ಇಳಿದೂ ಹೆದ್ದಾರಿಯಾಗಿಬಿಟ್ಟಿತು. ವೆಂಕಪ್ಪಯ್ಯ ಜೋಯಿಸರು ಬೇಲಿ ಗೀಲಿ ಹಾಕಿ ಬಹಳ ಪ್ರಯತ್ನಪಟ್ಟಿದ್ದರೂ ಜಾನುವಾರುಗಳು ತಮ್ಮ 'ಮಾಮೂಲ'ನ್ನು ಬಿಟ್ಟುಕೊಟ್ಟಿರಲಿಲ್ಲ. ಕಟ್ಟಕಡೆಗೆ ಸೋತ ಜೋಯಿಸರು ಗೋ ದೇವತೆಗೆ ನೀರು ಕುಡಿಯದಂತೆ ತಡೆಗಟ್ಟಿ ಪಾಪ ಕಟ್ಟಿಕೊಳ್ಳುವುದೇತಕ್ಕೆ ಎಂದು ಸುಮ್ಮನಾಗಿ ಪುಣ್ಯ ಕಟ್ಟಿಕೊಂಡಿದ್ದರು.

ಈ ಸಮಯದಲ್ಲಿ ಹಸು ಎತ್ತು ಕರು, ಕೋಣ, ಎಮ್ಮೆಗಳ ಹಿಂಡೊಂದು ಹೊಳೆಗಿಳಿಯಲೆಂದು ದೇವಸ್ಥಾನದ ಮುಂದೆ ಬಂದಿತು. ನೂರಾರು ಗೊರಸುಗಳ ಗುಂಪು ಸದ್ದಿಲ್ಲದೆ, ದನಗಳ 'ಅಂಬಾ

ಕರುಗಳು ಅಂಬೆಗೂಳಿಗಳ ಗುಟುರು ಎಮ್ಮೆ ಕೋಣಗಳ ವ್ಹಾಯ್ ಮೊದಲಾದ ದನಕರುಗಳು ತುಂಗಾಭದ್ರನದಿಯ ಕಡೆಗೆ ನೀರು ಕುಡಿಯಲು ಹೋಗುತ್ತಿದ್ದವು.

ಕೋಳಿಯಂಕದ ಪಟ್ಟೆಯಲ್ಲಿ

ಕಾನೂರು ಮತ್ತು ಮುತ್ತಳ್ಳಿಯಲ್ಲಿ ಎರಡು ಮೂರು ಹದ ಮಳೆಬಿದ್ದು ಹವಾ ತಂಪಾಗಿತ್ತು. ತೊರೆಗಳಲ್ಲಿ ನಿಂತ ನೀರು ಹರಿಯತೊಡಗಿತು. ನೆಲದ ಮೇಲೆ ಗರುಕೆ ಹುಲ್ಲು ಚಿಗುರುತ್ತಿತ್ತು. ಅನೇಕರು ಅಗೆ ಹಾಕುವ ಗದ್ದೆಗಳನ್ನು ಉತ್ತು, ಹುಡಿಬೀಜ ಬಿತ್ತಿ, ಬೇಲಿಗಳನ್ನು ಕಟ್ಟಿದ್ದರು. ರಂಗಪ್ಪಸೆಟ್ಟರೂ, ಗದ್ದೆ-ತೋಟಗಳ ಕಾಮಗಾರಿಯನ್ನೆಲ್ಲಾ ಅಚ್ಚುಕಟ್ಟಾಗಿ ಮಹವತ್ತಿಯಿಂದ ಮಾಡಿಸಿದ್ದರು.

ಪ್ರತಿದಿನವೂ ಔತಣ ತಪ್ಪುತ್ತಿರಲಿಲ್ಲ. ದಿನಕ್ಕೊಂದು ಕೋಳಿ ಖರ್ಚಾಗುತ್ತಿತ್ತು. ಕನ್ನಡ ಜಿಲ್ಲೆಯವರ ರೂಢಿಯಂತೆ ಒಂದು ಕೋಳಿ ಪಲ್ಯಕ್ಕೆ ಐದಾರು ಕೆಲವು ಸಾರಿ ಇನ್ನೂ ಹೆಚ್ಚು ತೆಂಗಿನ ಕಾಯಿಗಳನ್ನು ಹಾಕುತ್ತಿದ್ದರು. ಈ ಔತಣಗಳಿಗೆ ಹಳೆಪೈಕದ ತಿಮ್ಮ ಮತ್ತು ಸೇರೆಗಾರರ ಆಳುಗಳಲ್ಲಿ ಮುಖ್ಯರಾದರೂ ಸೇರುತ್ತಿದ್ದರು. ತಿಮ್ಮ ಕೈಯಲ್ಲಾದಷ್ಟು ಕಳ್ಳನ್ನು ತಂದೊದಗಿಸುತ್ತಿದ್ದನು. ಸಾಲದಿದ್ದುದಕ್ಕೆ ಬೇರೆ ಕಳ್ಳಂಗಡಿಯಿಂದ ಕಳ್ಳು ಸಾರಾಯಿಗಳು ಸರಬರಾಜಾಗುತ್ತಿದ್ದವು, ಸೇರೆಗಾರರು ಭಿತ್ತವನ್ನು ಅಡಿಕೆಯನ್ನು ಮಾಪಿಳ್ಳೆಯ ಕಳ್ಳ ವ್ಯಾಪಾರಗಾರರಿಗೆ ಮಾರಿ ಭೋಗಗಳಿಗೆ ಹಣ ಒದಗಿಸಿಕೊಂಡುದಲ್ಲದೆ ಧನಸಂಗ್ರಹವನ್ನೂ ಕೂಡ ಮಾಡಿಬಿಟ್ಟರು. ಅನೇಕ ರಾತ್ರಿ ಕಾನೂರು ಮನೆಯಲ್ಲಿ ತಿಂದು ಕುಡಿದು ನೆತ್ತಿಗೇರಿದ ಆ ಜವರು ತಾಳ ಮದ್ದಳೆ ಬಡಿಯುವುದು ಪ್ರಸಂಗ ಹೇಳುವುದು, ಭಾಗವತರಾಟ ಕುಣಿಯುವುದು, ಇಸ್ಪೀಟು ಆಡುವುದು– ಇತ್ಯಾದಿ.

ಆ ಬಯಲಿನ ಹೆಸರು – 'ಕೋಳಿ ಅಂಕದ ಪಟ್ಟೆ' ಆ ಹೆಸರು ಮೊದಲು ಅನ್ವರ್ಥವಾಗಿ ಹುಟ್ಟಿ ಕಡೆಗೆ ಅಂಕಿತವಾಗಿಬಿಟ್ಟಿತು. ಬಹುಕಾಲದಿಂದಲೂ ಆ ಬಯಲು ಕೋಳಿಗಳ ಕಾಳಗಕ್ಕೂ ಜೂಜಾಟಕ್ಕೂ ರಂಗವಾಗಿತ್ತು. ದೊಡ್ಡ ದೊಡ್ಡ ನಗರಗಳಲ್ಲಿ ರಾಜರುಗಳು ಶ್ರೀಮಂತರೂ ಸೇರಿ "ಕುದುರೆ ಜೂಜು" ನಡೆಸುವಂತೆ ಗಟ್ಟದ ಮೇಲಕ್ಕೆ ಕೆಲಸದಾಳುಗಳನ್ನು ಕರೆತರುವ ಸೇರೆಗಾರರು, 'ಕೊಳಿ ಅಂಕ' ಗಳನ್ನು ಹೂಡುವುದು, ವಾಡಿಕೆಯಾಗಿತ್ತು. ಆ ಬಯಲು ಕಳ್ಳಂಗಡಿಗೆ ಸಮೀಪವಾಗಿದ್ದುದರಿಂದ ಕಾಡಿನ ನಡುವೆ ಗೋಪ್ಯವಾಗಿದ್ದುದರಿಂದಲೂ ಜೂಜು ಜುಗಾರಿಯಾಡುವಾಗ ಎಲ್ಲಿಯಾದರೂ ಒಂದು ವೇಳೆ ಕೈರ್ಯ ಪೇಟದವರು (ಪೋಲಿಸಿನವರು) ಬಂದರೂ ಅರಣ್ಯದಲ್ಲಿ ಅವರ ಕಣ್ಣಿಗೆ ಮಣ್ಣೆರಚಿ ತಪ್ಪಿಸಿಕೊಳ್ಳುವ ಬೇಕಾದಷ್ಟು ಅನುಕೂಲಗಳಿದ್ದುದರಿಂದಲೂ ಅದು 'ಕೋಳಿ ಅಂಕದ ಪಟ್ಟೆ' ಯಾಗಲು ಅತ್ಯಂತಾರ್ಹವಾಗಿತ್ತು.

ಮಲೆನಾಡಿಗೆ ನವಜೀವನ ಕಾಲಿಟ್ಟಿತು, ಅದಕ್ಕೆ ಮುಖ್ಯಕಾರಣ ಕಾಲ ಮಹಿಮೆಯಾಗಿದ್ದರೂ ಕೂಡ ಕಾನೂರು, ಮುತ್ತಳ್ಳೀ, ಸೀತೆ ಮನೆ ಮತ್ತು ಸುತ್ತಣ ಹಳ್ಳಿಗಳಲ್ಲಿ ಹೂವಯ್ಯನ ಪ್ರಭಾವವೂ

ಗಣ್ಯವಾಗಿತ್ತು. ಮಹಿಳೆಯರಲ್ಲಿ ತಪಸ್ವಿನಿಯ ಸ್ಥಾನಮಾನ ಗೌರವಗಳಿಗೆ ಪಾತ್ರಳಾಗಿದ್ದ ಸೀತೆಯ ಪ್ರಭಾವವೂ ಸದ್ದು ಗದ್ದಲವಿಲ್ಲದೇ ಕೆಲಸ ಮಾಡಿತು.

ಉದಯಿಸುತಿಹನದೊ ಅಭಿನವ ದಿನಮಣೆ
ಸಹ್ಯಾದ್ರಿಯ ಶೃಂಗಾಳಿಯ ಮೇಲೆ
ಹರಿದೋಡಿದೆ ನಿಶೆ, ನಗೆ ಬೀರಿದೆ ಉಷೆ
ತೀಡುತಲಿದೆ ತಂಗಾಳಿಯ ಲೀಲೆ
ಮಲೆನಾಡನು ಮನಮೋಹಿಸುತಿದೆ ಓ
ದಿನಮುಖದಿನ ಕಾಂಚನಕಾಂತಿ
ಏಳೇಳಿರಿ! ಕರೆಯುತ್ತಿದೆ ಕೇಳಿರಿ.
ಓ ನವಜೀವನ ಸಂಕ್ರಾಂತಿ!
ಉದಯಿಸುತಿದೆ ನೂತನ ಯುಗದೇವತೆ
ಮಿಥ್ಯೆಯ ಮೌಢ್ಯತೆಯನು ಸೀಳಿ!
ಜ್ಞಾನದ ವಿಜ್ಞಾನದ ಮತಿ ಖಡ್ಗದಿ
ಮೈದೋರುವಳೈ ನವಕಾಸಿ
ಕೆಚ್ಚಿನ ನೆಚ್ಚಿನ ತನುಮನ ಪಟುತೆಯ
ಸಂಪಾದಿಸಿ ಓ ಮೇಲೇಳಿ
ಕಣ್ದೆರೆಯಿರಿ ನವಕಾಂತಿಗೆ, ಶಾಂತಿಗೆ
ಓ ಕ್ರಾಂತಿಯ ಪುತ್ರರೆ, ಬಾಳಿ.

ಅಧ್ಯಾಯ – ೭

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೃಷಿಯ ಪಾತ್ರ

ಸಿಂಬಾವಿ ಭರಮೈ ಹೆಗ್ಗಡೆಯವರ ದೊಡ್ಡ ಚೌಕಿಮನೆಯ ಹೆಬ್ಬಾಗಿಲು ದಾಟಿದ ಅವರ ಜೀತದಾಳು ಹೊಲೆಯರ ನಾಯಿಗುತ್ತಿ, ಹೊರ ಅಂಗಳದ ಕಡೆಯ ಮೆಟ್ಟಿಲಲ್ಲಿ ನಿಂತು ಆಕಾಶದ ಕಡೆಗೆ ಬಿಡುಗಣ್ಣಾಗಿ ನೋಡುತ್ತಿದ್ದನು. ಮನೆಯ ಪಕ್ಕದಲ್ಲಿದ ಅಡಕೆಯ ತೋಟದಿಂದ ಒಂದು ಕೈಯಲ್ಲಿ ಒಂದು ಕರಿಬಾಳೆಯ ಗೊನೆಯನ್ನೂ ಮತ್ತೊಂದು ಕೈಯಲ್ಲಿ ಬಾಳೆ ಎಲೆಗಳ ಕಟ್ಟೊಂದನ್ನು ಹಿಡಿದು ಆರಡಿ ಎತ್ತರವಿದ್ದರೂ ಅತಿ ನಿಧಾನವಾಗಿ ಬರುತ್ತಿದ್ದ ಮನೆಗೆಲಸದ ಮರಾಠಿ ಮಂಜನು "ಏನೋ ಗುತ್ತೀ ಮುಗಿಲ ಕಡೆ ನೋಡ್ತಾ ನಿಂತೆ ಈ ರೀತಿ ಪ್ರಶ್ನಿಸುತ್ತಾ ಹತ್ತಿರಕ್ಕೆ ಬಂದನು.

ಗುತ್ತಿ ಮಂಜನ ಕಣ್ಣನ್ನೆ ನೋಡುತ್ತಾ ಏನೋ ರಹಸ್ಯವನ್ನು ಕೇಳಬೇಕೆಂದು ಬಾಯಿ ತೆರೆಯುವುದರೊಳಗೆ ಮಂಜನು ಸೊಂಟದಿಂದ ಹರಡಿನವರೆಗೂ ದಪ್ಪವಾದ ಬಿದಿರು ಬೊಂಬಿನಂತೆ ಒಂದೇ ಸಮವಾಗಿದ್ದ ಸ್ಥೂಲಗಳೆರಡನ್ನೂ ಎತ್ತಿ ಎತ್ತಿ ಇಡುತ್ತಾ ಮನೆಯೊಳಗೆ ಹೋಗಲು ಮೆಟ್ಟಿಲೇರುತ್ತಿದ್ದನು. ಕಪ್ಪಾಯ್ತು ಕಣ್ರೊ: ನಾನು ಸುಮಾರು ದೂರ ಹೋಗಬೆಕು" ಎನ್ನುತ್ತಾ ಗುತ್ತಿ ತನ್ನ ಕುಳ್ಳುದೇಹದ ಕುಳ್ಳುಗಾಲುಗಳನ್ನು ಬೀಸಿ ಬೀಸಿ ಹಾಕುತ್ತಾ ತೋಟದ ದಾರಿ ಹಿಡಿದು ಹೊರಟನು.

ಮತ್ತೊಂದು ವಿಷಯವೆಂದರೆ ಅವನ ಉಡುಪು ಮಂಜನು ಅವನನ್ನು ಕಂಡೊಡನೆ "ಒಳ್ಳೇ ದರೋಬಸ್ತಾಗಿದ್ದೀಯಲ್ಲಾ" ಎಂಬುದಕ್ಕೆ ಕಾರಣ ಅವನ ಉಡುಪಿನಲ್ಲಾಗಿದ್ದ ಮಾರ್ಪಾಡು ಸೊಂಟಕ್ಕೆ ಸುತ್ತಿದ್ದ ಮೋಟು ಪಂಚೆ ವಿನಾ ಬೆತ್ತಲೆಯಾಗಿದ್ದ ಮರಾಟಿಯವನ ಮುಂದೆ ಹೊಲೆಯನು ಕೊಳೆ ಸರ್ವವ್ಯಾಪ್ತಿಯಾಗಿದ್ದರೂ, ಷೋಕಿಯಾಗಿದ್ದನು. ತಲೆಗೆ ಒಂದು ಕೆಂಪು ವಸ್ತ್ರ ಸುತ್ತಿದ್ದನು. ಮೈಗೊಂದು ಕಸೆ ಅಂಗಿ ಹಾಕಿದ್ದನು. ಪಂಚೆಯ ತುದಿ ಮೊಳಕಾಲನ್ನು ದಾಟಿತ್ತು. ಕಿವಿಗೆ ಬೆರೆ ಒಚಿಟಿ ಒಂಟಿಗಳನ್ನು ಹೊಸದಾಗಿ ಹಾಕಿರಲಿಲ್ಲವಾದರೂ ಹೊಸ ವೇಷದಿಂದ ಅವುಗಳಿಗೊಂದು ಹೊಸ ಷೋಕಿ ಬಂದಿತ್ತು. ಎಲ್ಲಕ್ಕೂ ತಿಲಕಪ್ರಾಯವಾಗಿ ಮುಖಕ್ಷೌರ ಹೊಲೆಯನಾದರೂ ಬೆಳ್ಳಗಿದ್ದುದರಿಂದ ಮಲೆಯನಂತೆ ಕಾಣುತ್ತಿದ್ದನು. ಹೆಗಲ ಮೇಲೆ ಮಡಿಸಿ ಹಾಕಿಕೊಂಡಿದ್ದ ಕಂಬಳಿಕೊಪ್ಪೆ. ಅವನು ಮಳೆಗೆ ತಯಾರಾಗಿ ಹೊರಟಿದ್ದನ್ನೂ ಬಗಲಲ್ಲಿ ಇರುಕಿಕೊಂಡಿದ್ದ ಬಗನಿಯ ಮರದ ಕರಿಯ ದೊಣ್ಣೆ ಹೊಡೆದಾಟಕ್ಕೂ ಕೂಡ ಅವನು ಸಿದ್ಧನಾದಂತೆ ಕಾಣತೊಡಗಿದ್ದ.

ಗುತ್ತಿ ಸೀತೂರು ಗುಡ್ಡಕ್ಕೆ ಏರಲು ಮೊದಲು ಮಾಡಿದಾಗಲೆ ಬೈಗು ಗದ್ದೆನೊಂದಿಗೆ ಮುಗಿಲುಗಪ್ಪು ಮುಸುಕಿ ಮಿಣುಕು ಹುಳುಗಳ ಮಿನುಗು ಕಾಣತೊಡಗಿತ್ತು. ಜೀರುಂಡೆಗಳ ಕೂಗು ಕಿವಿಗೆ ಚಿಟ್ಟು ಹಿಡಿಸುತ್ತಿತ್ತು. ಮಳೆಗಾಲದ ಪ್ರಾರಂಭ ಸಮಯವಾಗಿದ್ದರೂ ಮಲೆನಾಡು ಭಯಂಕರವಾಗಿದ್ದ

ಸಿಂಬಾವಿ, ಸೀತೂರು, ಲಕ್ಕಂದ ಈ ಕಡೆಗಳಲ್ಲಿ ಇಂಬಳದ ಕಾಟವೂ ಹೆಚ್ಚಾಗಿಯೇ ಶುರುವಾಗಿತ್ತು. ಸಿಂತೂರು ಗುಡ್ಡದ ಹಳುವಿಡಿದ ಕಾಡುದಾರಿಯಲ್ಲಿ ಮುಂಬರಿದನು. ಕತ್ತಲೆಯ ಬರುಬರುತ್ತಾ ದಟ್ಟವಾಯಿತು. ಜೀರ್ದುಂಬಿಗಳ ಜೀರುದನಿ ಘೋರವಾಯಿತು. ತಾನು ನಡೆಯುತ್ತಿದ್ದ ಹಾದಿಯಾಗಲಿ, ಆ ಭಯಂಕರ ಪರ್ವತಾರಣ್ಯದ ರುದ್ರ ಪ್ರಕೃತಿ ಅವನಿಗೆ ಬಹುಕಾಲದ ಪರಿಚಯವಿತ್ತು. ಆ ಪ್ರಕೃತಿಯ ಒಂದಂಶವಾಗಿದ್ದನು. ಬೆಟ್ಟದಲ್ಲಿ ಬಂಡೆಯಂತೆ ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು. ಗುತ್ತಿಗೆ ಬಂದು ಜಂತು ಸದ್ದು ಮಾಡಿದ ಹಾಗಾಯಿತು. ಗುತ್ತಿ ತಟಕ್ಕನೆ ಬೆಚ್ಚಿ ಸಂಪೂರ್ಣವಾಗಿ ಬಹಿರ್ಮುಖಿಯಾಗಿ ದೊಣ್ಣೆ ಬೀಸುತ್ತಾ "ಹಡ್ಡಿ ಡ್ಡೀ ಡ್ಡಿ ಡ್ಡೀ" ಎಂದು ಕೂಗಿದನು.

ಗುತ್ತಿ ಗಟ್ಟಿಯಾಗಿ 'ಇದರ ಮನೆ ಹಾಳಾಗ್ಲೋ। ಈ ನರಿಯಿಂದ ಸುಖಾ ಇಲ್ಲ!" ಎನ್ನುತ್ತಾ ಬಿರಬಿರನೆ ನಡೆದನು. ಆ ನಡಿಗೆಯಲ್ಲಿ ಭಯ್ ಆಷ್ಟೇನೂ ಅವ್ಯಕ್ತವಾಗಿರಲಿಲ್ಲ.

ಗುತ್ತಿ ಇನ್ನೂ ಸೀತೂರು, ಗುಡ್ಡದ ನೆತ್ತಿಗೇರಿರಲಿಲ್ಲ. ಗಾಳಿ ಪ್ರಾರಂಭವಾಗಿ ಕಾಡು ಹೋ ಎನ್ನತೊಡಗಿತು. ಮುಗಿಲು ಮೊಳಗಿತು, ಮಿಂಚಿತು, ಮೊದಮೊದಲು ಅಲ್ಲೊಂದಿಲ್ಲೊಂದು ತೊರೆ ಹನಿ ಮರದೆಲೆಯ ಮೇಲೆ ಬಿದ್ದ ಸದ್ದಾಯಿತು. ಗುತ್ತಿ ಹೆಗಲ ಮೇಲಿದ್ದ ಕಂಬಳಿ ಕೊಪ್ಪೆಯನ್ನು ಬೇಗ ಬೇಗನೆ ತೆಗೆದು ಸೂಡಿಕೊಳ್ಳುತ್ತಿದ್ದಾಗಲೇ ಮುಂಗಾರು ಮಳೆ ಕಾಡೆಲ್ಲಾ ಕಂಗಾಲಾಗುವಂತೆ ದನಗೋಳಾಗಿ ಸುರಿಯತೊಡಗಿತು.

ಹಳ್ಳದ ಅಂಚಿಗೆ ಬಂದು ನಿಂತು ನೋಡಿದಾಗ ಕತ್ತಲೆಯಲ್ಲದೇ ಮತ್ತೇನೂ ಕಾಣಿಸಲಿಲ್ಲ. ನೀರಿನ ಭೋರಾಟದಿಂದಲೇ ಹಳ್ಳದ ಏರಿಕೆಯನ್ನು ಊಹಿಸುತ್ತಾ ನಿಂತಿದ್ದಾಗ ಒಂದು ಸಾರಿ ಮಿಂಚಿತು. ವೈರಿದಳದ ಮೇಲೆ ರಭಸದಿಂದ ದಾಳಿ ನುಗ್ಗುವ ತುರಂಗ ಸೇನೆಯಂತೆ ಉನ್ಮತ್ತ ವೇಗದಿಂದ ಹರಿದೋಡುತ್ತಿದ್ದ ತೊರೆಯ ತೆರೆಗಳು ಪಳಪಳನೆ ಮಿಂಚಿದವು. ಹೊನಲಿನ ಮಧ್ಯೆ ವೇಗವಾಗಿ ಹೋಗುತ್ತಿದ್ದ ಮರದ ತುಂಡುಗಳೂ ಕಸಕಡ್ಡಿಗಳು ಅದರ ರಭಸಕ್ಕೆ ಸಾಕ್ಷಿಯಾಗಿದ್ದವು. ಬೇಸಿಗೆಯಲ್ಲಿ ಒಂದೆರಡು ಅಡಿಗಳಗಲವಾಗಿರುತ್ತಿದ್ದ ಆ ಹಳ್ಳ ಈಗ ಸುಮಾರು ಇಪ್ಪತ್ತೈದು ಮೂವತ್ತು ಅಡಿಗಳಷ್ಟು ಅಗಲವಾಗಿ ಹರಿಯುತ್ತಿತ್ತು.

ಸ್ವಲ್ಪಹೊತ್ತಿನಲ್ಲಿಯೇ ಹಳ್ಳದ ಆಚೆಯ ದೂರದಲ್ಲಿ ಲಕ್ಕುಂದದ ಗದ್ದೆಕೋಗಿನ ಜಡ್ಡಿನಲ್ಲಿ ಪದೇ ಪದೇ ಬೀಸುತ್ತಿದ್ದ ದೊಂದಿಗಳೂ ಲಾತೀಣುಗಳು ಕಾಣಿಸಿತು. ಈ ಮಳೇಲಿ ಮೀನು ಕಡ್ಡಿಯಾಕೆ ಹೊರಟಾರಲ್ಲಪ್ಪಾ? ಈ ದೇವರು ಮಕ್ಕಳಿಗೆ ಕಳ್ಳು ಹೆಚ್ಚಾಗಿದ್ದೇ ನಿಂತು ಬೇಸರವಾಗಿದ್ದುದರಿಂದ ಕಂಬಳಿ ಕೊಪ್ಪೆಯ ಒಂದು ಭಾಗವನ್ನೆ ಹಾಸನ್ನಾಗಿ ಉಪಯೋಗಿಸಿಕೊಂಡು (ಕಂಬಳಿ ಕೊಪ್ಪೆ ಅವನ ಹರಡಿಗೆ ಹತ್ತಿರ ಹತ್ತಿರ ಬರುತ್ತಿರ್ತು) ಹಸರು ಬೆಳದೊಂದು ಮಣ್ಣು ದಿಬ್ಬದ ಮೇಲೆ "ಹಳ್ಳದ ಹೆಣಾ ಕಾಯ್ತಾ" ಕುಳಿತನು. ಮಳೆ ತೊರೆಗಳ ಜಲಘೋಷದಲ್ಲಿ ಹಿಂದೆ ಕೇಳಿಸದಿದ್ದ ಕಪ್ಪೆಗಳ ವಟಗುಟ್ಟುವಿಕೆ

ಚಿತ್ರವಿಚಿತ್ರವಾಗಿ ಕೃತವಿಕೃತವಾಗಿ ಕೇಳಿಸುತ್ತಿತ್ತು. ಗಾಳಿ ಬೀಸಿದಂತೆಲ್ಲಾ ಮರದ ಹನಿ ತಟಪಟನೆ ಉದುರುತ್ತಿತ್ತು. ಗುತ್ತಿ ತಟಕ್ಕನೆ ಎಚ್ಚುತ್ತು ಮೂಗನ್ನು ಅರಳಿಸಿ ಮೂಸಿ ಮೂಸಿ ಗಾಳಿ ಹಿಡಿಯತೊಡಗಿದನು.

ಅವನ ಮೂಗಿಗೆ ಬಿದ್ದಿದ್ದು ನಾಯಿಯ ವಾಸನೆ, ಮಳೆಯಲ್ಲಿ ತೊಪ್ಪನೆ ತೊಯ್ದು ಮೈಯಿಂದ ಅವಿ ಏರುತ್ತಿರುವ ಕಂತ್ರಿ ನಾಯಿಯ ಸಿನುಗು ವಾಸನೆ। ಗುತ್ತಿ ಸುತ್ತ ನೋಡಿದರೂ ಏನೋ ಕಾಣಿಸಲಿಲ್ಲ। ಹಡಬೇಗ್ಹುಟ್ಟಿದ್ದು ದಾರಿ ಹುದುಕ್ಕೊಂಡು ಬಂತೋ ಏನೋ?" ಎನ್ನುತ್ತಾ ನಯನೇಂದ್ರಿಯಕ್ಕೆ ಗೋಚರವಾಗದಿದ್ದರೂ ಘಾಣೇಂದ್ರಿಯದಲ್ಲಿ ತನಗಿದ್ದ ಶ್ರದ್ಧೆಯಿಂದಲೂ ಎಂಬಂತೆ "ಬಾ ಹುಲಿಯಾ ಬಾ!" ಎಂದು ಮುದ್ದಾಗಿ ಕರೆದನು. ಹುಲಿಯ ದೆಸೆಯಿಂದಲೆ ಗುತ್ತಿಗೆ "ನಾಯಿಗುತ್ತಿ" ಎಂಬ ಅಡ್ಡ ಹೆಸರು ಬಂದಿತ್ತು. ಅವನು ಎಲ್ಲಿ ಹೋಗಲಿ ಆ ನಾಯಿ ಅವನನ್ನೆ ಹಿಂಬಾಲಿಸುತ್ತಿತ್ತು.

ಲಕ್ಕುಂದದ ಜಮೀನಿನಲ್ಲಿ ಮುಕ್ಕಾಲುಪಾಲು ಸಿಂಭಾವಿ ಭರಮ್ಮೈ ಹೆಗ್ಗಡೆಯವರಿಗೆ ಸೇರಿತ್ತು. ಇನ್ನುಳಿದ ಕಾಲುಪಾಲು ಹಳೆಪೈಕದ ಸೇಸನಾಯ್ಕನ ಸ್ವಂತದ್ದಾಗಿತ್ತು.

ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲುಗಳಾಗಿದ್ದುಕೊಂದು, ಬಗನಿಯ ಮರದಿಂದ ಕಳ್ಳು ಇಳಿಯಿಸಿ ಕುಡಿದು ಮಾರಿ, ಜೀವನ ಮಾಡುವ ಹಳೆ ಪೈಕದವರಿಗೆ (ಇವರಿಗೆ 'ದೇವರು' ಎಂಬ ಹೆಸರೂ ಉಂಟು) ಸ್ವಂತ ಜಮೀನಿರುವುದು ಬಹಳ ಅಪೂರ್ವ, ವೇದ ಕಲಿಯುವುದು, ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೆಪೈಕದವರು ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆಗೌಡ ನಾಯಕರುಗಳೆಲ್ಲಾ ಸೇರಿ ತೀರ್ಮಾನ ಮಾಡಿದರು.

ಒಕ್ಕಲಿಗ ಜಮೀನುದಾರರ ಆಳುಗಳು ಒಕ್ಕಲುಗಳು ಆಗಿದ್ದ ಹಳೆಪೈಕದವರು ಬಹಿರಂಗವಾಗಿ ಯಾವ ತಂಟೆತಕರಾರುಗಳ ಗೋಜಿಗೂ ಹೋಗುತ್ತಿರಲಿಲ್ಲ. ಆದರೆ ಸೇಸನಾಯ್ಕನಂತಹ ಸ್ವಂತ ಜಮೀನುದಾರರಿಗೆ ಅವರಿಗಿಂತ ನಾವೇನು ಕಡಿಮೆ ನಮ್ಮ ಕುದುರೆ ನಮ್ಮ ದಂಡಿಗೆ ನಮ್ಮ ವಾದ್ಯ ನಮ್ಮ ಭೋವಿಗಳು, ನಮ್ಮ ದುಡ್ದು ನಾವು ಖರ್ಚು ಮಾಡುವುದಕ್ಕೆ ಇವರದೇನು ಅಡ್ಡಿ? ಎಂಬ ಹುಮ್ಮಸ್ಸು ಇರುತ್ತಿತ್ತು. ಈ ಮುಖಂಡರು ಸೇರಿ ಕಳ್ಳು ಕುಡಿದಾಗಲಂತೂ ಆ ಗರ್ವಗುಟುರು ಹಾಕುತ್ತಿತ್ತು.

ಲಕ್ಕುಂದದಲ್ಲಿದ್ದ ಹಳೆಪೈಕದವರ ಮನೆಗಳು ಮೂರು ಒಂದು ಸೇಸನಾಯ್ಕನ ಮನೆ, ಮತ್ತೊಂದು ರಂಗನ ಮನೆ ಇನ್ನೊಂದು ಪುಟ್ಟನ ಮನೆ, ಅದರಲ್ಲಿ ನಿಜವಾಗಿಯೂ ಮನೆ ಎಂಬ ಹೆಸರಿಗೆ ಅಯೋಗ್ಯವಾಗಿದ್ದಿದ್ದುದು ಸೇಸನಾಯ್ಕನ ಮನೆ ಮಾತ್ರ ಉಳಿದವು ಎರಡು ಗುಡಿಸಲು, ಆದರೆ ಗುಡಿಸಲು ಬಿಡಾರ ಮೊದಲಾದ ಪದಗಳನ್ನು ಹೊಲೆಯರು, ಬೇಲರ, ಮಾದಿಗರು, ಬಿಲ್ಲವರು, ಹಸಲವರು, ಇತ್ಯಾದಿ, ಕೀಳುಜನರ ನಿವಾಸಗಳಿಗೆ ಉಪಯೋಗಿಸುತ್ತಿದ್ದುದರಿಂದ ನಮ್ಮ ನಿವಾಸಗಲಿಗೆ

ಅವಮಾನವೆಂದು ಹಳೆಪೈಕದವರು ತಮ್ಮ ಜೋಪಡಿಗಳನ್ನು ಕೂಡ 'ಮನೆ' ಎಂದು ಕರೆದುಕೊಳ್ಳುತ್ತಿದ್ದರು. ಇತರರನ್ನು ಹಾಗೆಯೇ ಕರೆಯುವಂತೆ ಒತ್ತಾಯಪಡಿಸುತ್ತಲೂ ಇದ್ದರು.

ಸೇಸನಾಯ್ಕನ ಮನೆ ಏಳೆಂಟು ಅಂಕಣದ್ದಾಗಿದ್ದು, ಸೋಗೆ ಹೊದಿಸಿದ್ದನು. ಮಣ್ಣಿನ ಗೋಡೆ ಹಾಕಿದ್ದನು, ಮುಂಭಾಗಕ್ಕೆ ಕೆಮ್ಮಣ್ಣು ಜೇಡಿಗಳನ್ನು ಬಳಿದಿದ್ದನು.

ಸಿಂಬಾವಿ ಭರಮೈ ಹೆಗ್ಗಡೆಯವರ ಒಕ್ಕಲುಗಳಾಗಿದ್ದ ರಂಗ, ಪುಟ್ಟ ಇವರ ಮನೆಗಳು ನಿಜವಾಗಿಯೂ ಗುಡಿಸಲುಗಳಾಗಿದ್ದವು, ಬಿಳಿ ಹುಲ್ಲು ಹೊದಿಸಿದ್ದರು, ಅಡಕೆ ದಬ್ಬೆಯ ತಟ್ಟಿ ಗೋಡೆಗಳನ್ನು ಹಾಕಿದ್ದರು.

ಕೋಳಿ, ಕುರಿ, ನಾಯಿ, ದನ, ಎತ್ತು, ಸೆಗಣಿ, ಬೂದಿ, ಗಲೀಜು ಮೊದಲಾದವುಗಳ ವಿಚಾರದಲ್ಲಿ ಆ ಮೂರು ಮನೆಗಳೂ ಒಂದನ್ನೊಂದು ಸೆಣಸುವಂತಿದ್ದವು. ಲಕ್ಕುಂದಕ್ಕಿಂತಲೂ ಸ್ವಲ್ಪ ಹೆಚ್ಚು ಚೊಕ್ಕಟವಾಗಿರುತ್ತಿದ್ದ ಪಿತೂರಿನಿಂದ ಬಂದಿದ್ದ ತಿಮ್ಮನಾಯ್ಕ ಲಕ್ಕುಂದದ ಹಳೆಪೈಕದವರ ಮೇಲೆ ತಮ್ಮೂರಿನ ಹಳೆಪೈಕದವರಿಗಿದ್ದ ತಿರಸ್ಕಾರದಲ್ಲಿ ಮತ್ತಷ್ಟು ಶ್ರದ್ಧೆ ಹೆಚ್ಚಿತು.

ಸುವಾಸನೆಗಿಂತಲೂ ದುರ್ವಾಸನೆ ಬೇಗ ಹಬ್ಬುತ್ತದೆ. ಬೇಗ ಮೂಗಿಗೆ ಬೀಳುತ್ತದೆ. ಅನೇಕರಿಗೆ ಬೇಗ ಗೊತ್ತಾಗುತ್ತದೆ. ಸತ್ಕೀರ್ತಿ ಹಬ್ಬುವುದು ನಿಧಾನ, ದುಷ್ಕೀರ್ತಿ ಕಾಡುಕಿಚ್ಚಿನಂತೆ ಹರಚಿಕೊಳ್ಳುತ್ತದೆ.

ಗುತ್ತಿ ನೋಡುತ್ತಾನೆ. ಇಂಬಳಗಳ ಪಿಂಡಿ। ಮೂರು ನಾಲ್ಕು ಇಂಬಳಗಳು ಸಿಡಿದೊಡೆಯುಷ್ಟರ ಮಟ್ಟಿಗೆ ರಕ್ತ ಕುಡಿದು ಕೆಂಪೇರಿ ಕಚ್ಚಿಕೊಂಡು ಬಂದಿವೆ! ಒಂದು ಕಡೆ ನೆತ್ತರು ಕುಡಿದು ಇಂಬಳ ತನಗೆ ತಾನು ಬಿದ್ದು ಹೋದ ತಾವಿನಿಂದ ರಕ್ತ ಹರಿಯುತ್ತಿದೆ ಮತ್ತು ನೋಡುತ್ತಾನೆ. ಒಂದೆಡೆಯಲ್ಲ, ಎರಡೆಡೆಯಲ್ಲ, ಹತ್ತಾರುಕಡೆ ಅದೂ ಎಂತೆಂತಹ ಸ್ಥಾನಗಳಲ್ಲಿ ಮರ್ಮ, ಗೋಪ್ಯ ಒಂದನ್ನೂ ಲೆಕ್ಕಿಸದೆ।

ದನದ ಹಟ್ಟಿಯ ಕೋಳಿಯೊಡ್ಡಿಯ ಮತ್ತು ಕುರಿಯೊಡ್ಡಿಯ ನಾತವಾವುದೋ ಹೊಲೆಯನ ಮೂಗಿಗೆ ಅರಿವಾಗಲಿಲ್ಲ. ಹಣತೆಯ ಸೊಡರಿನ ಮಬ್ಬು ಬೆಳಕಿನಲ್ಲಿ ಇರಿಚಲು ಬೀಸಿ ನಸುವೊಡ್ಡೆಯಾದಂತಿದ್ದ, ಕರಿಬೆರಸಿ ಸಗಣಿ ಬಳಿದು ಕಠ್ರಗಿದ್ದ ನೆಲದ ಮೇಲೆ ಕೂತು, ತಾನು ಬಂದಿದ್ದೇನೆ ಸೂಚಿಸುವ ಸಲುವಾಗಿ ಕೃತಕವಾಗಿ ಗಟ್ಟಿಯಾಗಿ ಕೆಮ್ಮಿ ಗಂಟಲು ಸರಿಮಾಡಿಕೊಂಡು,

ಐದು ನಿಮಿಷ ಕಳೆದಿರಲಿಲ್ಲ, ಕಾಡಿ ಮೊರವೊಂದನ್ನು ಎರಡು ಕೈಯಲ್ಲಿಯೂ ಎತ್ತಿಕೊಂಡು ಬಂದಳು. ಬಾಳೆ ಎಲೆಯ ಮೇಲೆ ಹಾಕಿಟ್ಟಿದ್ದ ಎಡೆಯನ್ನು ಮೊರದಿಂದ ಜಾರಿಸಿ ಗುತ್ತಿಯ ಮುಂದೆ ನೆಲದ ಮೇಲಿಡುತ್ತಲೇ ಮಾತಾಡತೊಡಗಿದಳು.

"ಗನೆ ಸಾಲದು ಅಂತ ಕಾಣ್ತದೋ ತಡಿ, ಬಂದೆ" ಎನ್ನುತ್ತಾ ಕಾಡಿ ಒಳಗೆ ಹೋದಳು. ಒಳಗಿನಿಂದ ಮರದ ಕೈಬಟ್ಟಲಲ್ಲಿ ರಾಶಿ ಕಡುಬನ್ನೂ ದೊಡ್ಡದೊಂದು ಮಣ್ಣಿನ ಗುಂಡಾಲದಲ್ಲಿ ತುಂಬಿ

ತುಳುಕುವಷ್ಟಿದ್ದ ಮಾಂಸದ ಪಲ್ಯವನ್ನು ತಂದಳು, ನೋಡಿದ ಗುತ್ತಿ ಹಲ್ಲುಬಿಟ್ಟು, ಮುಖ ಅಗಲಿಸಿ "ಒಂದು ಚೂರು ಗಸಿ ಸಾಕ್ರೋ: ಹಮಾ ಬ್ಯಾಡ" ಎಂದನು ಕಾಡಿ ತಂದಿದ್ದನ್ನೆಲಾ ಇಕ್ಕಿದಳು.

ತೀರ್ಥಹಳ್ಳಿಯಿಂದ ಆಗೊಂಬೆಗೆ ಹೋಗುವ ಹೆದ್ದಾರಿಯಲ್ಲಿದ್ದ ಮೇಗರವಳ್ಳಿ ಗುತ್ತಿಯಂಥಾ ಹಳ್ಳಿಗರಿಗೆ ಪೇಟೆಯಾಗಿದ್ದರೂ, ನಿಜವಾಗಿಯೂ ಬರಿಯ ಕೊಂಪೆಯಾಗಿತ್ತು. ಆಗಿನ ಮೇಗರವಳ್ಳಿಯಲ್ಲಿ ಆಸ್ಪತ್ರೆ, ಸ್ಕೂಲು, ಷಾಪು, ಹೋಟೆಲ್, ಮಲ್ಲು ಯಾವುವೂ ಇರಲಿಲ್ಲ. ಆದರೆ ಮಲೆಯಾಳಿಯ ವೈದ್ಯರಾದ ಕಣ್ಣಾಪಂಡಿತರಿದ್ದರು. ಮಾಪಿಳ್ಳೆಯವರಾಗಿದ್ದ ಕರಿಮೀನು ಸಾಬರು ಅಂಗಡಿಯಿಟ್ಟಿದ್ದರು. ಒಂದು ಕಳ್ಳಿನ ಅಂಗಡಿಯೂ ಇದ್ದು ಆಟ, ಊಟ, ಕೂಟಗಳಿಗೆ ಒಂದು ತೆರನಾದ ಕ್ಲಬ್ಬೂ ಆಗಿತ್ತು.

ಸೆಟ್ಟಿಗಿತ್ತಿ ಅಂತಕ್ಕನ ಮನೆ ತಕ್ಕ ಮಟ್ಟಿಗೆ ಹೋಟಲೂ ಆಗಿತ್ತು. ತೀರ್ಥಹಳ್ಳಿ ಆಗೊಂಬೆಯ ಮುಖಾಂತರವಾಗಿ ದಕ್ಷಿನ ಕನ್ನಡ ಜಿಲ್ಲೆಗೆ ಹೋಗಿ ಬರುತ್ತಿದ್ದ ವ್ಯಾಪಾರಿಗಳೂ ಸೇರೆಗಾರರೂ ಕೂಲಿಯಾಳುಗಳೂ, ಗಂಧದ ಮರಗಳನ್ನು ಸಾಗಿಸುತ್ತಿದ್ದ ಗುಪ್ತ ದಳ್ಳಾಳಿಗಳೂ ಮುಂತಾದವರೂ ಆಗಾಗ ತಂಗುತ್ತಿದ್ದುದರಿಂದ ಆ ಸ್ಥಳಕ್ಕೊಂದು ಪ್ರಾಮುಖ್ಯತೆ ಬಂದಿತ್ತು.

ಆ ಹೊಲೆಯನಿಂದ ಹಣವಸೂಲು ಮಾಡಿಕೊಳ್ಳುವುದೇ, ಹಸುವಿನ ಕೊಂಬಿನಿಂದ ಹಾಲು ಕರೆಯುವುದೋ ಒಂದೇ ಚೆನ್ನಾಗಿ ಅರಿತಿದ್ದ ಕಣ್ಣಾ ಪಂಡಿತರು.

ಹಳೆಮನೆಗೆ ಮೇಗರವಳ್ಳಿಯಿಂದ ಸುಮಾರು ಒಂದು ಹರಿದಾರಿ ಆಗುಂಬೆಗೆ ಹೋಗುವ ರಸ್ತೆಯ ಎಡಪಕ್ಕಕ್ಕೆ ಒಂದು ಗುಡ್ಡ ಹತ್ತಿ ಇಳಿದರೆ ಸರಿ ಹಳೆಮನೆಯ ಗದ್ದೆಯ ಕೋಗೂ ಅಡಿಕೆ ತೋಟವೂ ಕಾಣಿಸುತ್ತದೆ. ಕಾಡು ದಟ್ಟವಾಗಿ ಬೆಳೆದ ಒಂದು ಗುಡ್ಡಕ್ಕೂ ಅಡಿಕೆ ತೋಟಕ್ಕೂ ನಡುವೆ ಹಳೆಮನೆಯೇ ದೊಡ್ಡದಾದ ಚೌಕಮನೆ ಸಂಸ್ಕೃತಿಯ ದೃಷ್ಟಿಯಿಂದಲ್ಲ ಆಕೃತಿಯ ದೃಷ್ಟಿಯಿಂದ ನಿಜವಾಗಿಯೂ ದೊಡ್ಡ ಮನೆ, ಮನೆ ಒಂದಾದರೂ ಅದರ ಕಾಲು ಭಾಗಕ್ಕೆ ಊರು ಹೆಂಚು ಹೊದಿಸಿತ್ತು, ಉಳಿದುದಕ್ಕೆ ಅಡಿಕೆ ಸೋಗೆ, ಹೆಂಚಿನ ಮೇಲೆ ಅಲ್ಲಲ್ಲಿ ಪಾಚಿ ಬೆಳೆದು ಒಣಗಿ ಕರಿಮಚ್ಚೆಗಳು ತೋರುತ್ತಿದ್ದರೂ ಈ ಮನೆಯನ್ನು ಹೆಂಚಿನ ಮನೆಯವರು, ಸೋಗೆ ಮನೆಯವರು ಎಂದು ಕರೆಯುತ್ತಿದ್ದರು.

ಏಕೆಂದರೆ ದೊಡ್ಡ ಜಮೀನು ಆಳುಕಾಳು ಎಲ್ಲದರಲ್ಲಿಯೂ ಪ್ರಬಲವಾಗಿದ್ದದ್ದು ಕಾಲುಪಾಲಿನ ಹೆಂಚಿನ ಮನೆಯಲ್ಲಿ, ಮುಕ್ಕಾಲು ಪಾಲಿನ ಸೋಗೆ ಮನೆ,ಸುಬ್ಬಣ್ಣ ಹೆಗ್ಗಡೆರವರಿಗೆ ಆಸ್ತಿಯಲ್ಲಿ ಮತ್ತು ಮನೆಯಲ್ಲಿ ಮುಕ್ಕಾಲು ಪಾಲು ಬಂದಿತ್ತು. ಬಹುಕಾಲದ ಹಿಂದೆಯೇ ಗತಿಸಿ ಹೋಗಿದ್ದ ಅವರ ಅಣ್ಣನ ಮಗ ಶಂಕರ ಹೆಗ್ಗಡೆಯವರಿಗೆ ಕಾಲುಪಾಲು ನೀಡಿದರು.

"ಹಂದೀ ಒದ್ದೇಗೆ ಹಾಕ್ತಾರಂತಲ್ಲೇ ನಿನ್ನಾ" ಎಂದು ಜಟ್ಟಮ್ಮ ಹೀನೈಸಿದರೆ ಲಕ್ಕಮ್ಮ "ಹಂದೀ ಬಡ್ಡಿಯಿಂದಲೇ ಬತ್ತಿದಂತೆಲ್ಲಾ ನಿನ್ನ ಸವತಿ!" ಎಂದು ಅತ್ತಿಗೆಯ ಕುತ್ತಿಗೆ ಹಿಸುಕುವಂತೆ ಮಾತಾಡುತ್ತಿದ್ದಳು.

ಅವರಿಬ್ಬರ ಮಾತಿನ ತೋರುಬೆರಳೂ ಹಳೆಮನೆಯಲ್ಲಿ ಸೋಗೆ ಪಾಲಿನವರು ಸಾಕುತ್ತಿದ್ದ ಹಂದಿಗಳನ್ನು ಕುರಿತದ್ದಾಗಿತ್ತು, ಸುಬ್ಬಣ್ಣ ಹೆಗ್ಗಡೆಯವರ ಮನೆಯ ಮುಂದೆಯೇ ಹಂದಿಗಳಿಗೆ ಒದ್ದೆಗಳನ್ನು ಮಾಡಿದ್ದರಿಂದ ಎಲಿ ನೋಡಿದರೂ ಗಲೀಜಾಗಿ ಗಬ್ಬು ವಾಸನೆ ಸದಾ ಹಬ್ಬಿರುತ್ತಿತ್ತು. ಆನಿವಾರದವರಂತೂ ಅವರಲ್ಲಿಗೆ ಸಾಲಕ್ಕಾಗಿಯಾಗಲಿ, ಇತರೆ ಕಾರ್ಯಗಳಿಗಾಗಲಿ ಅಲ್ಲಿಗೆ ಹೋದಾಗ ಮೂಗು ಮುಚ್ಚಿಕೊಂಡು ತುದಿಗಾಲಲ್ಲಿ ನಡೆಯುತ್ತಾ ಉಗುಳುತ್ತಾ ಜಗಲಿಗೆ ಓಡಾಡುತ್ತಿದ್ದರು.

ಸುಬ್ಬಣ್ಣ ಹೆಗ್ಗಡೆಯವರಿಗೆ ಮಾತ್ರ ಸ್ವಲ್ಪವೂ ಅಸಹ್ಯವಾಗುತ್ತಿರಲಿಲ್ಲ. ಅವರಿಗೆ ಕೋಳಿ ಒಡ್ಡಿ, ಕುರಿಒಡ್ಡಿ, ಹಂದಿ ಒಡ್ಡಿಗಳೆಂದರೆ ಗದ್ದೆ ತೋಟಗಳಷ್ಟೆ ಮುಖ್ಯವಾದವಾಗಿದ್ದವು. ಅಮೂಲವಾಗಿದ್ದವು. ಸಹಸ್ರಾರು ರೂಪಾಯಿಗಳಿಗೆ, ಸ್ವಾಮಿಯಾಗಿದ್ದರೂ ಕಂಬಳಿ ಹೊದೆದುಕೊಂಡು ಕೊಳಕಲು ಪಂಚೆಯೊಂದನ್ನು ಮೊಳಕಾಲಿನವರೆಗೆ ಸುತ್ತಿಕೊಂಡು ಜೀವನ ಮಾಡುತ್ತಿದ್ದನು.

ತುಸು ಹೊತ್ತಿನಲ್ಲಿಯೇ ಜಗಲಿಗೆ ಎದುರಾಗಿ ಅಂಗಳದಲ್ಲಿದ್ದ ಒಡ್ಡಿಗಳಲ್ಲಿಯೂ ಒಡ್ಡಿಗಳ ಹಿಂದಿದ್ದ ಕೊಟ್ಟಿಗೆಯಲ್ಲಿಯೂ ಗೊರಸಿನ ಸದ್ದು, ಕೊಂಬಿನ ಸದ್ದು, ದೊಂಟೆಯ ಸದ್ದು, ಹೋತದ ಸೀನಿನ ಸದ್ದು, ಸಲಗನ ಗುರುಗುರು ಸದ್ದು, ಒಂದಾದ ಮೇಲೊಂದು ಕೇಳಿಸತೊಡಗಿದವು. ಹಾಗೆಯೇ ತೋಟದ ಬೇಲಿಯಲ್ಲಿಯೇ ಅಥವಾ ಅಮಟೆಯ ಮರದಲ್ಲಿಯೋ ಹಂಡ ಹಕ್ಕಿಗಳೆರಡು ಸಿಳ್ಳುಪಡಿ ಸಿಳ್ಳುಗಳಿಂದ ಪ್ರಣಯ ಸಂಭಾಷಣೆಗೆ ಮೊದಲು ಮಾಡಿದವು. ಅದಾದ ಸ್ವಲ್ಪ ಹೊತ್ತಿನಲ್ಲಿಯೇ ಎಲೆಯೆದುರು ಬರಲಾಗಿ ಕೆಂಪು ಹೂ ಮಾತ್ರ ತುಂಬಿ ಹೋಗಿದ್ದ ಹಾಲಿವಾಣದ ಮರದಲ್ಲಿ ಎಂದು ತೋರುತ್ತದೆ. ಕಾಜಾಣವೊಂದು ಆಲಾಪನೆಗೆ ತೊಡಗಿತು.

ಆ ಪ್ರಾಣಿಗಳಿಗೂ ಸುಬ್ಬಣ್ಣ ಹೆಗ್ಗಡೆ ಕಂಡರೆ ಪ್ರೀತಿ, ಸುಬ್ಬಣ್ಣ ಹೆಗ್ಗಡೆಗೂ ಇವುಗಳನ್ನು ಕಂಡರೆ ಪ್ರೀತಿ, ಇವನು ಒಡ್ಡಿಯ ಹತ್ತಿರ ಬಂದನು. ಒಡ್ಡಿಯ ಕಂಡಿಕಂಡಿಗಳಲ್ಲಿ ಗಲಿಬಿಲಿ ಮಾಡುತ್ತಾ ಕೋಳಿ ಕುಣಿದಾಡಿದವು. ಬಾಗಿಲು ತೆಗೆಯುತ್ತಾರೆಂಬ ಸಂತಸಕ್ಕಾಗಿ ಒಂದರ ಮೇಲೊಂದು ನಾಮುಂದೆ–ತಾಮುಂದೆ ಎಂದು ಒಡ್ಡಿಯ ಕದವಿದ್ದೆಡೆಗೆ ಕುರಿ ನುಗ್ಗ ತೊಡಗಿದವು. ಹಂದಿಗಳೂ ಸಲಗ ದಡ್ಡೆ ಮರಿ, ಎಲ್ಲಾ ಗುರುಗುರುಗುಟ್ಟುತ್ತಾ ಓಡಾಡಲಾರಂಭಿಸಿದವು.

ಸರಸರನೆ ಮುಂಬರಿದು ಕೋಳಿಯ ಬಾಗಿಲು ತೆರೆದರು. ಹುಂಜಗಳು ಹೇಟೆಗಳು ಮರಿಗಳು, ಸಳಗಗಳು ಕೆಂಪು ಬಿಳುಪು, ಕಪ್ಪು, ಹಂಡ ಹಂಡ, ಕಡ್ಲೆ ಕಡ್ಲೆ, ಬೈಯ್ಲು ಚ್ಲಿ ಯೋ ಕೊಕ್ ಕೊಕ್ ಕೊಕ್ಕೋ ಕೋಳಿಗಳೆಲ್ಲಾ ಒಂದರ ಮೇಲೊಂದು ನುಗ್ಗಿ ಹೊರಬಿದ್ದವು ರೆಕ್ಕೆಯ ಗಾಳಿ ಬೀಸಿದ ಪೊಲ್ಗಂಪು ಹೆಗ್ಗಡೆಯವರಿಗೆ ಸ್ವಾಭಾವಿಕವಾಗಿಯೇ ಇತ್ತು.

ಹೋದ ರಾತ್ರಿಯೂ ಮಾರಿ ಮಳೆಯಲ್ಲಿ ತೇಲಿಬಂದು ಕುತ್ತುರೆಯಾದಂತಿದ್ದ ಹಲಸಿನ ತರಗಿನ ನಡುವೆ ಬಿದ್ದಿದ್ದ ಒಂದು ಸಗಣಿ ಮುದ್ದೆಯಿಂದ ಒಂದು ಓಡು ಹುಳು ಸಣ್ಣದೊಂಡು ಉಂಡೆಯನ್ನು

ರಚಿಸಿ ಅದನ್ನು ಹಿಂದು ಮುಂದಾಗಿ ತನ್ನ ಹಿಂಗಾಲುಗಳಿಂದ ನೂಕಿಕೊಂಡು ಹೋಗುತ್ತಿತ್ತು. ಅತ್ಯಮೂಲ್ಯವಾದ ಪದಾರ್ಥವನ್ನು ಅತಿ ಪ್ರಯಾಸದಿಂದ ಸಾಗಿಸುವ ಸಾಹಸದಲ್ಲಿ ತೊಡಗಿದಂತಿತ್ತು. ಅದರ ದೃಢಪ್ರಯತ್ನ ಆ ಉಂಡೆ ಒಂದು ಸಣ್ಣ ದಿಬ್ಬವನ್ನು ಹತ್ತಿ ಅದರ ನೆತ್ತಿಗೆ ಬಂದೊಡನೆ ಮತ್ತೆ ಕೆಳಕ್ಕುರುಳಿತು. ಓಡುಹುಳು ಮತ್ತೆ ಅದನ್ನು ಬಳಿಸಾರಿ ತನ್ನ ಹಿಂಗಾಲುಗಳಿಂದ ತಬ್ಬಿ ಹಿಡಿದು ದಬ್ಬತೊಡಗಿತು. ಹೀಗೆ ಒಂದೆರಡು ಗೇಣು ಹೋಗುವುದರೊಳಗಾಗಿ ನಾನಾ ಅಡಚಣೆಗಳಿಗೆ ಒಳಗಾದರೂ ಧೃತಿಗೆಡದೆ ನಿರಾಶವಾಗಿದೆ ಎನಿಸಿಕೊಳ್ಳದೇ ಪ್ರಶಾಂತವಾಗಿಯೆ ತನ್ನ ಕೆಲಸವನ್ನು ಸಾಗಿಸುತ್ತಿತ್ತು. ಗುತ್ತಿಯ ಕಣ್ಣೇನೋ ಅದನ್ನೆ ಕುತೂಹಲದಿಂದ ನೋಡುತ್ತಿತ್ತು.

ಅವನ ಅಂತಃಕರಣವನ್ನೆಲ್ಲಾ ಆಕ್ರಮಿಸಿದ್ದ ವಿಚಾರವೆಂದರೆ ತಿಮ್ಮಿಯ ಅಪಹರಣ! ಅಂತಕ್ಕ ಸೆಟ್ಟಿಯಮನೆ ಒಂದು ರೀತಿಯಲ್ಲಿ ಅರವಟ್ಟಿಗೆ, ಅನ್ನ ಸತ್ರ ಭೋಜನಗೃಹ ಕಳ್ಳಂಗಡಿ ಜೂಜಿನ ಕಟ್ಟೆ ಆಟದ ಮನೆ ಇತ್ಯಾದಿ ಇತ್ಯಾದಿ ಸಂಸ್ಥೆಗಳ ಸಂಸ್ಕಾರಗಳನ್ನೆಲ್ಲಾ ಒಳಗೊಂಡ ಸಾಮೂಹಿಕ ಕ್ಷೇತ್ರವಾಗಿತ್ತು. ಇಲ್ಲಿ ಬಾಯಾರಿಕೆಯಾದಾಗ, ಹಸಿವೆ, ಆಯಾಸದಾಗ, ಬೆಲ್ಲ ನೀರುಗಳನ್ನು ಹೆಂಡ ಕರಿಮೀನು ಚಟ್ನಿಯನ್ನು ಕಳ್ಳು ಸ್ವಾರ್ಲು ಮೀನನ್ನೋ ಕಡೆಗೆ ಮಜ್ಜಿಗೆ ಉಪ್ಪಿನಕಾಯಿಯನ್ನೋ ಸವಿದೆ ಮುಂದುವರೆಯುತ್ತಿದ್ದನು. ಇದನ್ನು ಸವಿಯಲು ಅವನ ಹತ್ತಿರ ಹಣ ಇರುತ್ತಿರಲಿಲ್ಲ. ಆದರೆ ಕಾಡಿನಲ್ಲಿ ಬರಬೇಕಾದರೆ, ಅದು ಸಮಯವಾಗಿದ್ದರಿಂದ ಒಳ್ಳೆಯ ಎಳೆ ಕಳಲೆ ಮುರಿದು ತಂದುಕೊಡುತ್ತಿದ್ದನು. ತಾನು ಒಡ್ಡಿದ ಶಾಖೆಗೆ ಕಾಡುಕೋಳಿಯೂ ಚಿಟ್ಟು ಕೋಳಿಯೋ ಸಿಕ್ಕಿ ಬಂದಿದ್ದರೆ ಅದನ್ನು ಎಷ್ಟೋ ಸಾರಿ ತಂದುಕೊಟ್ಟಿದ್ದನು. ಅಣಬೆಯ ಕಾಲದಲ್ಲಿ ಅಕ್ಕಿ ಅಳಿಬಿ, ಹೆಗ್ಗಾಲಿಬಿ, ಚುಳ್ಳಳಿಬಿ, ಕಾಸರ್ಕನಳಿಬಿ, ಇವುಗಳನ್ನು ತಂದುಕೊಡುತ್ತಿದ್ದನು. ಒಮ್ಮೊಮ್ಮೆ ಇತರರ ಅಡಕೆ ಬಾಳೆ ತೋಟಗಳಲ್ಲಿ ಹಾದು ಬೇಲಿಯ ತಡಬೆ ದಾಟಿ ಬರುವ ಪ್ರಮೇಯ ಒದಗಿದಾಗ ಬಾಳೆಯ ಗೊನೆಗಳನ್ನು ತಂದು ಕೊಡುತ್ತಿದ್ದುದೂ ಉಂಟು, ಅಲ್ಲಿ ತನಗೆ ಸ್ವಾಗತವಾಗಲಿ ಪ್ರವೇಶವಾಗಲಿ ಎಂದೆಂದೂ ದೊರೆಯದೆಂದು ಹುಟ್ಟಿನಿಂದಲೇ ಅರಿತಿದ್ದ ಗುತ್ತಿ ಮಾಡು ಸಂದಿಯ ಕಡೆಯಿಂದ ಮೂಗು ಮುಚ್ಚಿ ಹಿಡಿದುಕೊಂಡು ಹಿತ್ತಲ ಕಡೆಯ ಅಂಗಳಕ್ಕೆ ಬೇಗಬೇಗನೆ ಜಾರಿದನು, ಅಷ್ಟೊಂದು ಮೂಲಮೂತ್ರಾದಿ ಸಮ್ಮಿಶ್ರಣದ ದುರ್ಗಂಧವಿತ್ತು ಅಲ್ಲಿ, ಹಿತ್ತಲ ಕಡೆಯಿದ್ದ ಒಂದು ಹುಲ್ಲು ಜೋಪಡಿ ದನದ ಕೊಟ್ಟಿಗೆಯಾಗಿತ್ತು. ಅದಕ್ಕೆ ಗೋಡೆಯಿರಲಿಲ್ಲ. ಕಂಬದಿಂದ ಕಂಬಕ್ಕೆ ಬಿದಿರೆಡ್ಡೆಗಳನ್ನು ಕಟ್ಟಿ ಬೇಲಿಯ ತರಹದ ಒಡ್ಡು ಹಾಕಿದರು, ಬಡಕಲು ಬಡಕಲು ಆದ ಒಂದೆರಡು ದನಗಳೂ ಒಂದು ಸುಪುಪ್ಪವೆನ್ನಬಹುದಾದ ಎಮ್ಮೆಯೂ ಇದ್ದವು.

ಗುತ್ತಿ ತನ್ನ ಪ್ರಯಾಣವನ್ನು ಮುಂದುವರೆಸಿದನು. ಅವನು ನಡೆಯುತ್ತಿದ್ದ ದಾರಿಯು ಕಾದು ಮೊದಮೊದಲ ತುಸು ಹೆದ್ದಳಕಲಾಗಿ ಅಷ್ಟೇನೂ ನಿಬಿಡವಾಗಿರಲಿಲ್ಲ. ಹಿಂದಿನ ರಾತ್ರಿ ಹೊಡೆದ ಮಳೆಯಲ್ಲಿ ಮುಂದು ತೊಳೆದಂತಿದ್ದ ಪೊದೆ ಮರಗಳ ಹಸರು ದನಬಿಡುವ ಆ ಹೊತ್ತಿನ ಬಿಸಿಲಿನಲ್ಲಿ ತಂಪಾಗಿ ಮಿರುಗುತ್ತಿದ್ದವು. ಆದರೆ ಗುತ್ತಿ ಎಂದಿನಂತೆ ಕಾಡಿನ ಹಕ್ಕಿಯ ಮಗದ ಸೊಬಗನ್ನಾಗಲಿ,

ವ್ಯಾಪರವನ್ನಾಗಲಿ ಲಕ್ಷಿಸುವ ಮನಃಸ್ಥಿತಿಯಲ್ಲಿರಲಿಲ್ಲ. ಪಿಕಳಾರಗಳ ಸಿಳ್ಳುಲಿಯಾಗಲಿ ಹೊರಸಲು ಹಕ್ಕಿಗಳು ಗುಬ್ಬಳಿಕೆಗಳಾಗಲಿ ಮರಕುಟಿಕನ ಕೊಟಾ ಕೊಟಾ ಸದ್ದಾಗಲಿ ಕಡೆಗೆ ಕಾಡು ಕೋಳಿ ಹುಂಜನ ನಿಡುನೀಳ್ದ ಕೇಕೆಯಾಗಲಿ ಅವನ ಕಿವಿಗೆ ಬೀಳುತ್ತಿದ್ದರು ಅವನಿಗೆ ಕೇಳಿಸುತ್ತಿರಲಿಲ್ಲ. ಕಣ್ಣಿಗೆ ಬಿದ್ದರೂ ಕಾಣಿಸುತ್ತಿರಲಿಲ್ಲ.

ಮಲೆ ಏರಿತ್ತಾ ಕಾಡು ದಟ್ಟವಾಯಿತು. ಹಕ್ಕಿಪಕ್ಷಿಗಳ ಹಾರಾಟವೂ ಕೂಗಾಟವೂ ವಿರಳವಾಗಿ ಕಡೆಕಡೆಗೆ ನಿಂತೆ ಹೋಯಿತು. ಆ ಅರಣ್ಯ ನಿಬಿಡತೆಯಲ್ಲಿ ಬಿಸಿಲೂ ಅಡಗಿದಂತಾಗಿ ಮರಗತ್ತಲು ಹೆಚ್ಚಾಯಿತು. ಕಾಡು ಭಯಂಕರವಾಯಿತು. ಆ ಹುಲಿಕಲ್ಲು ಗುಡ್ಡವನ್ನೇರಿ ಇಳಿದರೆ ಆ ಕಡೆಯ ಕಣಿವೆಯಲ್ಲಿ ಕೋಣೂರು ರಂಗಪ್ಪಗೌಡರ ಮನೆ ಗದ್ದೆ ತೋಟ ಸಿಗುತ್ತಿತ್ತು.

ಆ ಹುಲಿಕಲ್ಲು ಗುಡ್ಡದ ಕಾಡು ಆ ಕಡೆಯಲ್ಲೆಲ್ಲಾ ಅತ್ಯಂತ ದಟ್ಟವಾದುದೆಂದು ಜೀವಾಡಿಗಳಿಗೆ ನೆಲೆಬೀಡೆಂದು ಹೆಸರುವಾಸಿಯಾಗಿತ್ತು, ದೊಡ್ಡದೊಡ್ಡಬೇಟೆಗೆ ಹೋಗುವವರು ಆ ಕಾಡಿನ ಹೋಗಲು ಹಿಂಜರಿಯುತ್ತಿದ್ದರು. ಕಡಿದಾದ ಕಂದಕಗಳು ದುರ್ಗಮವಾಗಿದ್ದವು. ಕನಿಷ್ಠ ಪಕ್ಷ, ನೂರು, ನೂರೈವತ್ತು ಜನರಾದರೂ ಹೋಗಬೇಕಾಗುತ್ತಿತ್ತು, ಅರವತ್ತು ಕೊವಿಗಾರರಾದರೂ ಬೇಕಿತ್ತು, ವರುಷಕ್ಕೊಮ್ಮೆಯೂ ಎರಡು ವರ್ಷಕ್ಕೊಮ್ಮೆಯೋ ಹುಲಿಕಲ್ಲು ಕಾಡಿಗೆ 'ದೊಡ್ಡಬೇಟೆ'ಗೆ ಬಂದರೆ ಅದೇ ಹೆಚ್ಚು, ಬೆಟ್ಟಳ್ಳಿ ಸೇರೆಗಾರರು ಹಳೆಮನೆ ಸೇರೆಗಾರರು ತಮ್ಮ ಕಡೆಯ ಆಳುಗಳಿಗೆಲ್ಲಾ ಒಂದು ದಿನ ಉಳಿ ಕೊಟ್ಟು, ಅವರಿಗೆಲ್ಲಾ ಧೈರ್ಯ ಹೇಳಿ ಹಳು ಹೊಡೆಯಲು ಕಳಿಸುತ್ತಿದ್ದರು. ಇನ್ನು ಬೇಲರ, ಹೊಲೆಯರು, ಮಾದಿಗರು, ಆ ಸಾಹಸ ಭಾಗಿಯಾಗುತ್ತಿದ್ದರು. ಇವರು ಬತ್ತಿ ಕೋವಿ, ಭರ್ಜಿ ಈಟಿ, ಉದ್ದಗತ್ತಿ, ಬಿಲ್ಲುಬಾಣಗಳ ಸಾಹಸಿಗಳೂ ಅಲ್ಪಸ್ವಲ್ಪ ಇರುತ್ತಿದ್ದರು.

ಗುತ್ತಿ 'ಬೆತ್ತದ ಸರ'ದ ಹತ್ತಿರಕ್ಕೆ ಬಂದಿದ್ದನ್ನು. ಅವನು ಹೋಗುತ್ತಿದ್ದ ಕಾಲುದಾರಿಯ ಬಲಪಕ್ಕದ ಇಳಿಜಾರಿನ ತುದಿಯೇ 'ಬೆತ್ತದ ಸರ' ಬೆತ್ತದ ಹಿಂಡಿಲು ವಾಟೆಯ ಹಿಂಡಿಲು ಬಿದಿರೆ ಹಿಂಡಿಲು, ಗುರುಗಿ ಹಳು ಎಲ್ಲ ಕಿಕ್ಕಿರಿದು ಬೆಳೆದಿದ್ದು, ಯಾವಾಗಲೂ ಸರಲು ನೀರು ಹರಿಯುತ್ತಿದ್ದ ತಾಣ.

ಇದ್ದಕ್ಕಿದ್ದ ಹಾಗೆ ಗುತ್ತಿಯ ಅಂತರ್ಮುಖತೆಯನ್ನು ಹರಿದು ಸೀಳುವಂತೆ ಹುಲಿಯ ಬೊಗಳ ತೊಡಗಿತ್ತು. ಗುತ್ತಿ ತಟಕ್ಕನೆ ಎಚ್ಚೆತ್ತು ಸೆಟೆದು ನಿಂತು ಆಲಿಸಿದನು. ಅದರ ಕರ್ಕಶವಾದ ತೀವ್ರವಾದ ಬೊಗಳು ಮಾತ್ರ ಹೊಡೆದೆಬ್ಬಿಸುವಂತೆ ಕೇಳುತ್ತಿತ್ತು. ಹುಲಿ, ಕಾಡು ಹಂದಿಯಂತಹ ದೊಡ್ಡ ಪ್ರಾಣಿಗಳನ್ನು ತಡೆದು ನಿಲ್ಲಿಸಿದಾಗ ಮಾತ್ರ ನಾಯಿಗಳು ಹಾಗೆ ಬೊಗಳುವುದು, ಹೆದರಿ ಓಡಿಹೋಗುವ ಮಿಗಬರ್ಕ, ಮೊಲ ಇಂತಹ ಪ್ರಾಣಿಗಳನ್ನು ಕಂಡಾಗ ಕಂಯ್ ಕಂಯ್ ಎಂದು ಕೂಗುತ್ತಾ ಅಟ್ಟುತ್ತವೆ.

ಈ ಸೂಕ್ಷ್ಮವನ್ನೆಲ್ಲಾ ಅನುಭವದಿಂದ ಚೆನ್ನಾಗಿ ಅರಿತಿದ್ದ ಗುತ್ತಿ ಹುಲಿಯ ಒಂಟಿಗ ಹಂದಿಯನ್ನೊ ಹುಲಿಯನ್ನೊ ಕಂಡೇ ಬೊಗಳುತ್ತಿದೆ ಎಂದು ನಿಶ್ಚಯಿಸಿದ.

ಗುತ್ತಿ ನೋಡುತ್ತಾನೆ, ನಾಯಿ ತುಸು ದೂರವೆ ಹಳುವಿನಲ್ಲಿ ಬಿದ್ದಿರುವ ಒಂದು ಮರದ ದಿಮ್ಮಿಯ ಕಡೆ ನೋಡಿ ಬೊಗಳುತ್ತಿದೆ. ಹಾಗಾದರೆ ಆದಿಮಿಯ ಹತ್ತಿರ ಯಾವುದಾದರೂ ಕಾಳಿಂಗನ ಹಾವೋ, ಸರ್ಪನ ಹಾವೋ ಇರಬಹುದೆಂದುಗುತ್ತಿ ನೆಲವನ್ನು ಪರೀಕ್ಷಿಸುತ್ತಾ ಮುಂದುವರೆಯುವಷ್ಟರಲ್ಲಿ ನಾಯಿ ಬೊಗಳಿ ಬೊಗಳಿ ಹಾರಿ ನೆಗೆದು ಆ ದಿಮ್ಮಿಯನ್ನು ಕಚ್ಚಿ ಬಿಟ್ಟಿತು! ಅಯ್ಯಯ್ಯೋ! ನೋಡುತ್ತಾನೆ ಆ ದಿಮ್ಮಿಯೇ ಜೀವಂತ ಹೆಬ್ಬಾವು! ಚಲಿಸುತ್ತಿಲ್ಲ, ಮೊಲವು ಬರ್ಕವೊ ಅಥವಾ ಇನ್ನಾವ ಪ್ರಾಣಿಯನ್ನೋ ನುಂಗಿನಿಶ್ಚಲವಾಗಿ ಬಿದ್ದಿದೆ। ಅದರ ತಲೆ ಎಲಿಲ್ದೆಯೋ ಬಾಲವೆತ್ತ ಕಡೆಯೋ ಅದು ಗೊತ್ತಾಗುತ್ತಿರಲಿಲ್ಲ ಆ ಹಳುವಿನಲ್ಲಿ.

ಕೈಯಲ್ಲಿ ಬಗನಿದೊಣ್ಣೆ ವಿನಾ ಬೇರೆಯೇನೂ ಆಯುಧವಿಲ್ಲದ ಗುತ್ತಿ ಇನ್ನೇನು ಒಂದು ಹೆಜ್ಜೆ ಮುಂದಿಟ್ಟಿದ್ದರೆ ಹೆಬ್ಬಾವಿನ ಮೈಮೇಲೆಯೇ ಕಾಲಿಡುತ್ತಿದ್ದವನು, ಸತ್ತನೋ ಕೆಟ್ಟನೋ ಎಂದು ಚಂಗನೆ ಹಿಂದಕ್ಕೆ ನೆಗೆದು, ದೂರ ಓಡಿ ನಿಂತು ದೀರ್ಘವಾಗಿ ಉಸಿರು ಬಿಡತೊಡಗಿದನು. ಹುಲಿಯನ್ನು ತನ್ನ ಹತ್ತಿರಕ್ಕೆ ಹೆದರಿಸಿ ಕರೆಯುತ್ತಿದ್ದನು. ಬೇಗಬೇಗನೆ ಒಂದು ಬಳ್ಳಿಯನ್ನು ಉಗಿದು ಅದರ ಎರಡು ಮೂರು ಎಳೆಯನ್ನು ಉಡಿದು ಹಗ್ಗ ಮಾಡಿದನು, ಹುಲಿಯ ಒಮ್ಮೆ ಹತ್ತಿರಕೆ ಬಂದಾಗ ಎರಡು ಕೈಯಿಂದಲೂ ಅಮರಿ ಹಿಡಿದು ಕೊರಳಿಗೆ ಬಳ್ಳಿ ಹಗ್ಗವನ್ನು ಕಟ್ಟಿದನು.

ಬಾವಿಕೊಪ್ಪದ ನಾಗಣ್ಣ ನಾಗತ್ತೆ, ಎರಡನೆಯ ಗಂಡನಿಗೆ ಹುಟ್ಟಿದವನು ನಾಗಣ್ಣನ ತಂದೆ ಬಾವಿಕೊಪ್ಪದಲ್ಲಿ ಸಿಂಬಾವಿ ಭಾರಮ್ಮೆ ಹೆಗ್ಗಡೇರ ಗೆದ್ದ ತೋಟ ಮಾಡಿಕೊಂಡು ಒಕ್ಕಲಾಗಿ ತಕ್ಕಮಟ್ಟಿಗೆ ನೆಮ್ಮದಿಯಾಗಿಯೇ ಇದ್ದನು. ಒಂದಾದ ಮೇಲೊಂದು ಮದುವೆಯಾಗಿ ಮೂರನೇ ಹೆಂಡತಿಯು ಇವರಂತೆಯೇ ಹೆರಿಗೆ ಸಮಯದಲ್ಲಿ ಹಳೆಪೈಕದವಳ ಹುಳದೌಷಧವೂ ಸೂಲಗಿತ್ತಿತನವೂ ವಿಫಲವಾಗಿ ತೀರಿಕೊಂಡ ಮೇಲೆ ನಾಲ್ಕನೆಯ ಮದುವೆಗೆ ಸಿಂಬಾವಿ ಹೆಗ್ಗಡೆಯವರು ಸಾಲ ಕೊಡಲು ಒಪ್ಪದೆ ಹೋದರು. ಒಂಟಿ ಬಾಳಿಗೆ ಬೇಸತ್ತು ಅವನು ತಪಿಸುತ್ತಿದ್ದಾಗ, ಈ 'ನಾಗತ್ತೆ' ಎಲ್ಲಿಂದಲೂ ಪ್ರತ್ಯಕ್ಷವಾದಳು! ಅವಳಿಗೆ ತನ್ನ ಗಂಡ ಸತ್ತು, ಒಬ್ಬಂಟಿ ಬಾಳು ಬೇಸರವಾಗಿ ಜಂಟಿಬಾಳಿಗಾಗಿ ಊರಿಂದೂರಿಗೆ ಅಲೆಯುತ್ತಿದ್ದಳಂತೆ ಅವಳನ್ನು ಚೆನ್ನಾಗಿ ತಿಳಿದಿದ್ದ ಊರಿನವರು ಅವಳಿಗೆ ಜಂಟಿ ಬಾಳು ನೀಡಿಲ್ಲ. ಬಾವಿಕೊಪ್ಪದ ನಾಗಣ್ಣನ ತಂದೆಯ ಒಬ್ಬಂಟಿ ಬಾಳಿನ ಬೇಸರಿನ ವಿಚಾರವಾಗಿ ವಾಕ್ತಿಗೇಳಿ ಅದನ್ನು ಪರಿಹರಿಸಲು ಬಾವಿಕೊಪ್ಪಕ್ಕೆ ಬಂದಳಂತೆ ಒಬ್ಬಂಟಿ ಬಾಳು ಸಾಕಾಗಿದ್ದ ಇಬ್ಬರೂ ಜಂಟಿಬಾಳಿಗೆ ಒಪ್ಪಿ 'ನೀರುಡಿಕೆ' ಮಾಡಿಕೊಂಡರು. ನಾಗತ್ತೆಯು ಕೂಡಿಕೆ ಮಾಡಿಕೊಂದು ಆರೇಳು ವರ್ಷದಲ್ಲಿಯೇ ನಾಗಣ್ಣನ ತಂದೆ ತೀರಿಕೊಂಡನು. ಆಗ ನಾಗಣ್ಣನಿಗೆ ಸಣ್ಣ ಹುಡುಗ ೧೫ ವರ್ಷ ಹದಿನೈದು ಹದಿನಾರು ಬಂದಾಗ ಅವನ ತಾಯಿ ಅವನಿಗೆ ಬಡಒಕ್ಕಲೊಬ್ಬನ ಮಗಳಾಗಿದ್ದ ನಾಗಕ್ಕನನ್ನು ತಂದುಕೊಂಡು ಸೊಸೆಯನ್ನಾಗಿ ಮಾಡಿಕೊಂಡಳು. ನಾಗತ್ತೆ ಮಗ ಸೊಸೆ ಇಬ್ಬರನ್ನೂ ತನ್ನ ಅಧಿಕಾರದ ಮುಷ್ಟಿಯಲ್ಲಿ ಭದ್ರವಾಗಿಟ್ಟುಕೊಂಡಳು. ತನ್ನ ತಾಯಿಯಿಂದ ತನ್ನ ತಂದೆಗೆ ಅಂಟಿದ್ದ ರೋಗಕ್ಕೆ ತಾನು

ಹಕ್ಕುದಾರನಾಗಿದ್ದರಿಂದಲೂ ಏನೋ ನಾಗಣ್ಣನಿಗೆ ಆರೋಗ್ಯ ಕೆಟ್ಟು, ಹೊಟ್ಟೆಯಲ್ಲಿ ಹುಣ್ಣಾಗಿ, ಗದ್ದೆ ತೋಟಾದ ಕೆಲಸ ಮಾಡಲಾರದೆ, ಅದನ್ನೆಲ್ಲಾ ಬಿಟ್ಟು, ಹೆಗ್ಗಡೇರ, ಸಾಲ ತೀರಿಸಲು ಸಿಂಭಾವಿ ಮನೆಯಲ್ಲಿ –ನಾಗಣ್ಣ– ನಾಗಕ್ಕ– ನಾಗತ್ತೆ ಮೂವರು ದುಡಿಮೆಯಾಳಾಗಿ ನಿಂತರು, ಅನಾರೋಗ್ಯದ ನಿಮಿತ್ತ ಹೆಗ್ಗಡೆಯವರು, ನಾಗಣ್ಣನಿಗೆ ಕಷ್ಟದ ಕೆಲಸ ಕೊಡದೇ ಕೂತೇ ಮಾಡುವ ಕೆಲಸಗಳಿಗೆ ನೇಮಿಸಿದರು. ಬುಟ್ಟಿ ಮಾಡುವುದು, ಛಾಟಿ ಬಿದಿರು ಬೆತ್ತ ಇವುಗಳು ಸಲಕು ಕೆತ್ತುವುದು, ಪುಂಡಿನಾರಿನ ಹಗ್ಗ ಹೊಸೆಯುವುದು. ಎತ್ತು ದನ ಕಟ್ಟುವ ದಾವಣಿ ತಿರುಪುವುದು ಇತ್ಯಾದಿ ಆದರೆ ನಾಗಣ್ಣನ ಹೊಟ್ಟೆಹುಣ್ಣು ಯಾವ ಗಿಡಮೂಲಿಕೆಗಳಿಗೂ ಒಗ್ಗಲಿಲ್ಲ. ನಾಗಕ್ಕ ತನ್ನ ಗಂಡನನ್ನು ಬದುಕಿಸಿಕೊಳ್ಳುವ ಸಲುವಾಗಿ ಯಾವ ಪತಿವ್ರತೆಗೂ ಕಡಿಮೆ ಇಲ್ಲದಂತೆ ಶುಶ್ರೂಷೆ ಮಾಡಿದಳು. ಭೂತ, ಜಕ್ಕಿಣಿ ಪಂಜ್ರೊಳ್ಳಿಗಳಿಗೆ ಹರಕೆ ಕೊಟ್ಟಳು. ತನ್ನ ಹತ್ತಿರ ಇದ್ದಬದ್ದ ಚೂರುಪಾರು ಬಂಗಾರವನ್ನು ತಿರುಪತಿ ಧರ್ಮಸ್ಥಳ ಮೊದಲಾದ ದೇವತೆಗಳಿಗೆ ಸುಳಿದಿಟ್ಟಳು. ಯಾರಿಗೂ ಕಾಣದಂತೆ ಏಕಾಂತದಲ್ಲಿ ಬಲ್ಲಂತೆ ಪ್ರಾಥಿಸಿ ಕಣ್ಣೀರಿಟಳು. ಅಲಂಕಾರ ಬಿಟ್ಟಳು, ಊಟ ಬಿಟ್ಟಳು, ಆದರೆ ನಾಗಣ್ಣನ ಹುಣ್ಣಿನ ಯಾತನೆಯಲ್ಲಿ ಒದ್ದಾಡಿಕೊಂಡು ಸಿಂಬಾವಿಗೆ ಬಂದ ಎರಡು ವರ್ಷಗಳಲ್ಲಿಯೇ ತೀರಿಕೊಂಡನು.

ಸಿಂಬಾವಿ ಮನೆ ತಪ್ಪಿ ಹೊರಹೊರಟ ನಾಗತ್ತೆಯ ಕೈಯಲ್ಲಿ ನಾಗಕ್ಕ 'ಪಂಜ್ರೊಳ್ಳಿ' ರೈಲಿ ಸಿಕ್ಕಿ ಜಗಣೆ ಯಂತಾದಳು. ನಾಗಕ್ಕ ತನ್ನ ತವರನ್ನೂ ಸೇರದಂತೆ ತರತರಹದ ಅಶ್ಲೀಲ ದುರುಗಳನ್ನು ಹಬ್ಬಿಸಿ ನಾಗತ್ತೆ ಅವಳನ್ನು ವಿಕ್ರಯಿಸುವ ದನವನ್ನು ಗಿರಾಕಿಗಾಗಿ ಊರಿಂದೂರಿಗೆ ಸಾಗಿಸುವಂತೆ ಮನೆಯಿಂದ ಮನೆಗೆ ಕೊಂಡೊಯ್ದಳು. ನಾಗಕ್ಕನ ತವರು ಬಡ ಕುಟುಂಬದವರಾಗಿದುದರಿಂದಲೂ ನಾಗಕ್ಕನ ತಂದೆ ತೀರಿಕೊಂಡು ಅಣ್ಣ ಅತ್ತಿಗೆಯೇ ತಮ್ಮ ಹೊಟ್ಟೆಬಟ್ಟೆಗೇ ಸಾಲದೇ ಸಾಲಗಾರರಾಗಿ ಕಷ್ಟಪಡುತ್ತಲಿದ್ದುದರಿಂದಲೂ ಅವರು ಯಾರು ನಾಗತ್ತೆಗೆ ಎದುರಾಗಿ ನಾಗಕ್ಕನನ್ನು ರಕ್ಷಿಸುವ ಅಪಾಯವನ್ನು ಎದುರು ಹಾಕಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

ಹುಲಿಕಲ್ಲು ಗುಡ್ಡದ ನೆತ್ತಿ ಆ ಹುಲಿಕಲ್ಲೆರೆಗಿಂತಲೂ ಮೇಲೇರಿ ಇನ್ನು ಬಹಳ ಎತ್ತರದಲ್ಲಿ ಕೊನೆಗೊಂಡಿತ್ತು. ಇವರು ಕುಳಿತಿದ್ದ ಹುಲಿಕಲ್ಲರೆ ಆ ಮಲೆಯ ಓರೆಯ ಹೆಗಲಿನಂತಿತ್ತು. ಅಗಲವಾಗಿದ್ದ ಆ ಹಾಸುಬಂಡೆಯ ಸುತ್ತಲೂ ದಟ್ಟವಾದ ಅರಣ್ಯದಿಂದ ಪರಿವೃತವಾಗಿದ್ದು ಅದರ ಮೇಲೆ ಕುಳಿತವರಿಗೆ ಬಹುದೂರ ಕೆಳಗೆ ಕಣಿವೆಯಲ್ಲಿ ಕೋಣೂರು, ಹೂವಳ್ಳಿಗಳ ಗದ್ದೆ ತೋಟಗಳೂ ಅಡವಿಯ ಅಂಚಿಗೆ ಸೇರಿಕೊಂಡಿದ್ದ ಅಡಿಕೆ ಬಾಳೆ ತೋಟಗಳು ಸಣ್ಣಗೆ ಚಿತ್ರದಲ್ಲಿ ಬರೆದಂತೆ ಕಾಣುತ್ತಿದ್ದವು. ಈ ಕಾಡಿನಲ್ಲಿ ತಿರುಗುವ ಮಗ, ಹಂದಿ, ಕಡ, ಕಾಡು ಕುರಿ, ಮೊದಲಾದ ಪ್ರಾಣಿಗಳಿಗಾಗಿ ಕರಡಿ ಕಾಯುತ್ತಿತ್ತೆಂದೂ ಪ್ರತೀತಿ ಎಷ್ಟು ಸಾರಿ ಹುಲಿ ಕಾಣಿಸಿದ್ದೂ ಉಂಟು.

ದೊಡ್ಡು? ಕಡವೊ? ಹಂದಿಯೊ? ಮಿಗವೊ? ಹುಲಿ ಅಟ್ಟುತ್ತಿದಿಯೋ ಅಥವಾ ಸಿಳ್ಳು ನಾಯಿಗಳೋ? ಏನೇನನ್ನೂ ಊಹಿಸುತಾ ಗುತ್ತಿ ಬಿಡುಗಣ್ಣಿಗಿ ನೋಡುತ್ತಿದ್ದಂತೆಯೇ ಒಂದು ಹೋರಿ

ಮಿಗ ಮರಗಳ ಸಂದಿ ಹಳುವಿನಲ್ಲಿ ಕವಣೆ ಕಲ್ಲೆಸೆದಂತೆ ಹಾರಿಬಂದು ಇಪ್ಪತ್ತು ಮುವತ್ತು ಮಾರುಗಳಿಗೊಂದು ನೆಗೆತ ಚಿಮ್ಮಿ, ಗುಡ್ಡದ ಉಬ್ಬಿನ ಕಡೆಗೆ ಮಿಂಚಿ ಏರಿ ಕಣ್ಮರೆಯಾಯಿತು.

ಹೋದ ವರ್ಷ ಸಸಿನೆಡುವ ಸಮಯದಿಂದ ಹಿಡಿದು ಗದ್ದೆ ಕೊಯ್ಲು ಪೂರೈಸುವವರೆಗೂ ಅತ್ತೆ ಸೊಸೆಯರಿಬ್ಬರೂ, ಹೂವಳ್ಳಿ ವೆಂಕಟಣ್ಣನ ಮನೆಯಲ್ಲಿ ಅವನ ಆರಂಭದ ಕೆಲಸಕ್ಕೆ ನೆರವಾಗಿ ಬೀಡುಬಿಟ್ಟಿದ್ದರು.

ಕೋಣೂರು ರಂಗಪ್ಪಗೌಡರ ಮನೆ ಹೂವಳ್ಳಿ ವೆಂಕಟಣ್ಣನ ಮನೆಗಿಂತ ಎಲ್ಲದರಲ್ಲಿಯೂ ದೊಡ್ಡತನದಾಗಿತ್ತು. ವೆಂಕಣ್ಣನಿಗೆ ತನ್ನದೇ ಆದ ಸ್ವಂತ ಜಮೀನು, ಇದ್ದರೂ ಅಷ್ಟಕಷ್ಟೆ, ಹಳೆಮನೆ ದೊಡ್ಡ ಹೆಗ್ಗಡೆಯವರ ಗದ್ದೆಯನ್ನೂ ಬೆಟ್ಟಳ್ಳಿ ಕಲ್ಲಯ್ಯಗೌಡರ ಅಡಕೆಯ ತೋಟವನ್ನೂ ಗುತ್ತಿಗೆಗೆ ತೆಗೆದುಕೊಂದು ಸ್ವಲ್ಪ ಹೆಚ್ಚು ಕಡಿಮೆ, ಅವರ ಒಕ್ಕಲಾಗಿಯೂ ಇದ್ದನು, ಮೊಮ್ಮಗಳು ಅಜ್ಜಿಯ ಪಕ್ಕದಲ್ಲಿಯೇ ಮೆಲ್ಲಗೆ ನಡೆದಳು, ಮುದುಕಿ ಎಚ್ಚೆತ್ತವಳಂತೆ ನಿಂತು ನೋಡಿ, ಮೊಮ್ಮಗಳನ್ನು ಮೆಚ್ಚುತ್ತಾ 'ಹೌದೆ ಸೈ ಏನೋ ಯೋಚ್ನೆ ಮಾಡ್ತಿದ್ದೆ ಕಣೇ ಮರವು ಬಂದು ಬಿಡ್ತು, ಅದೂ ಹಾಡ್ಯಕ್ಕೆ ಬಂದು ಆಗ್ಯದೆ' ಎಂದು ತಿರುಗಿ ಮೊಮ್ಮಗಳನ್ನು ಕೂಡಿಕೊಂಡಳು.

ಹೊತ್ತು ಆಗಲೆ ಪಡುವಣದ ಕಾಡು ಮಲೆಗಳ ನೆತ್ತಿಯಾಚೆ ಇಳಿದಿತ್ತು. ಬೈಗುಗೆಂಪು ಮುಂಗಪ್ಪಿಗೆ ತಿರುಗುತ್ತಿತ್ತು.

ಗೂಡಿಗೆ ಗೊತ್ತಿಗೆ ಹಾರಿಹೋಗುವ ಹಕ್ಕಿಗಳ ಹಾರಿಂಚರ ಅಡಗತೊಡಗಿತ್ತು. ಗುರುಗಿ ಹಳುವಿನಲ್ಲಿ ಜೀರುಂಡೆಗಳ ಜಿರು ಜೀರು ಜೀರೆಂಬ ಕರ್ಕಶ ಧ್ವನಿಗೆ ಪೀಠಿಕೆಯಾಗಿತ್ತು. ಕೋಣೂರಿನ ಮನೆಗೆ ಸಮೀಪದಲ್ಲಿರುವ ಮಕ್ಕಿಗದ್ದೆಯ ಅಂಚಿನದಾರಿಗೆ ಇವರು ಇಳಿಯುತ್ತಿದ್ದಾಗ. ಬಡ್ಡಿಯ ಕೋಳಿಗಳ ಕೂಗು ನಾಯಿಗಳ ಬೊಗಳೋ ಮಲೆಯ ಹಳ್ಳಿಯ ಒಂಟಿ ಮನೆಗೆ ಸಹಜವಾದ ಇತರ ಮಾನವ ಮತ್ತು ಪ್ರಾಣಿಗಳ ಸದ್ದು ಕೇಳಿಸಿತು.

ಒಮ್ಮೆ ಮನೆಗೆ ಸಮೀಪದಲ್ಲಿ ಹರಿಯುತ್ತಿದ್ದ ಕೋಡ್ಲು ಹಳ್ಳದ ಗುಂಡಿಯಲ್ಲಿ ಒಂದು ಹಲಗೆ ತೆಪ್ಪಮಾಡಿ ಚಿನ್ನಿಯನ್ನೂ ಹತ್ತುವಂತೆ ಮುಕುಂದಯ್ಯ ಧೈರ್ಯ ಹೇಳಿ ಪ್ರೇರೇಪಿಸಿದ್ದನು. ಆದರೆ ಗಳುವಿನ ಹುಟ್ಟಿನಿಂದ ಹಲಗೆಯನ್ನು ದಡದಿಂದ ತಳ್ಳಿ ತುಸು ದೂರ ಹೋಗುವುದರೊಳಗಾಗಿ ಹಲಗೆ ತಲೆಕೆಳಗಾಗಿತ್ತು. ಅಲ್ಲಿಯ ದನ ಬಿಟ್ಟುಕೊಂಡಿದ್ದ ಬೈರ ಓಡಿಬಂದು ನೀರಿಗಿಳಿದು ಆಗುತ್ತಿದ್ದ ಅನಾಹುತವನ್ನು ತಪ್ಪಿಸಿದ್ದನು.

ಶಂಕರಪ್ಪ ಹೆಗ್ಗಡೆರವರು ಮಿಂದು ಮಡಿಯುಟ್ಟು ತುಳಸಿಕಟ್ಟೆಗೆ ಸುತ್ತುದಿದ್ದರು. ಅಂಗಳದ ನಡುವೆ ಹೊಸದಾಗಿ ಹಾಕಿದ್ದ ಮಣ್ಣಿನ ತುಳಸಿಕಟ್ಟೆ ಕೆಮ್ಮಣ್ಣು ಬಿದ್ದುದರಿಂದ ಕೆಂಪಗೆ ಕಾಣುತ್ತಿತ್ತು. ಅದರ ತಲೆಯ ಮೇಲೆ ಎಲ್ಲಿಯೋ ಕೆಲ ದಿನಗಳ ಹಿಂದೆ ನೆಟ್ಟಿದ್ದ ತುಳಸಿಯ ಪುಟ್ಟ ಸಸಿ ತನ್ನ ಹಸುರುತನದಿಂದ ಗಮನ

ಸೆಳೆಯುವಷ್ಟು ಬೆಳೆದಿರಲಿಲ್ಲ. ಕೆಂಪು ನಾಮಗಳ ನಡುವೆ ಬಿಳಿಯ ನಾಮಗಳು ತುಳಸಿಯ ನಾಲ್ಕು ಮೈಗಳಲ್ಲಿ ಎದ್ದು ಕಾಣುವಂತಿದ್ದವು. ಮುಡಿಸಿದ್ದ ಗೊರಟೆ ಹೂಗಳ ಹಳದಿಯ ನಡುವೆ ಕೆಂಪು ಪರ್ವತ ಬಾಳೆಯ ಹೂಗಳು ಭೂತಾಳಿಯ ರಕ್ತ ವರ್ಣದ ಎಲೆಯ ರೂಪದ ಹೂಗಳೂ ರಂಜಿಸಿದ್ದವು.

"ಅದೇನು, ಮಾರಾಯ ಅಲ್ಲಿ? ಆ ಗಲಾಟೆ? ಆ ಹಂದಿ ಒಡ್ಡಿ ಹತ್ರ!" ಎನ್ನುತ್ತಾ ಶಂಕರಪ್ಪ ಹೆಗ್ಗಡೆ ಸೋಗೆಮನೆ ಅಂಗಳದ ಕಡೆ ನೋಡಿದರು.

"ನಂಗೊಂದು ಹಂದಿ ಮರಿ ಬೇಕಾಗಿತ್ತೊ, ಹೇಳಿದ್ದೆ ಅದೇ ಹೆಗ್ಗಡೇರು ಹೊಲೇರ ಕೈಲಿ ಹಿಡಿನ ಅಡ್ಡೆ ಕಟ್ಟಿಸ್ತಿದ್ದಾರೆ, ಅಂತಾ ಕಾಣುತ್ತೆ"

"ಯಾಕೆ? ನೀನು ಹಂದಿ ಸಾಕ್ತೀಯಾ"

"ಅಯ್ಯಯ್ಯಯ್ಯೋ ಆ ಹೇಸಿಗೆ ಆ ಫಚೀತಿ ನಂಗೆ ಬ್ಯಾಡಯ್ಯಾ! ಏನೋ ದೇವ್ರ ಹರಕೆಗೆ ಬೇಕಾದಾಗ ಯಾರ ಹತ್ರನಾದರೂ ಹೋಗಿ ತಂದರಾಯ್ತು".

ವೆಂಕಟಣ್ಣ ತಾನು ಹಂದಿ ಮರಿ ತೆಗೆದುಕೊಂಡು ಹೋಗುತ್ತೇನೆ ಎಂದದ್ದು, ದೊಡ್ಡ ಸಲಗವನ್ನೆ ಕೇಳಿದ್ದನು. ಬೆಳಿಗ್ಗೆಯ ತನ್ನ ಪ್ರಾಯದ ಮದದಿಂದ ಸಣ್ಣ ಮರಿಗಳೆನ್ನದೆ ಆಗತಾನೆ ಮರಿಹಾಕಿದ್ದವೆನ್ನದೆ ಗಬ್ಬದ ದಡ್ಡೆಗಳನ್ನದೆ ಎಲ್ಲವುಗಳ ಮೇಲೆಯೂ ಹತ್ತಿ ಹತ್ತಿ ಕಚ್ಚಿ ತಿವಿದು ಗಾಯಗೊಳಿಸಿ ದೊಂಬಿ ಎಬ್ಬಿಸುತ್ತಿದ್ದ, ಒಂದು ಸಲಗವನ್ನು ವೆಂಕಟಣ್ಣಗೆ ಮಾರಿ ಬಿಡಬೇಕೆಂದು ನಿರ್ಣಯ ಮಾಡಿಬಿಟ್ಟಿದ್ದರು. ಅದನ್ನು ಮಾರುವ ತಮಗೆ ಧನಲಾಭ ಕೊಳ್ಳುವಾನಿಗೆ ಕೊಳಗೆಗಟ್ಟಲೆ ಮಾಂಸ ಒದ್ದೆಯ ಇತರ ಚತುಷ್ಪಾದಿ ಪ್ರಜೆಗಳಿಗೆ ಕ್ಷೇಮ– ಎಲ್ಲವೂ ಒಟ್ಟಿಗೆ ಸಂಘಟಿಸುವಂತೆ,

ತಂದೆಯ ಕೈಯಲ್ಲಿ ಬಯ್ಯಿಸಿಕೊಂಡು ಸಿಟ್ಟಿನ ಭರದಲ್ಲಿ ತಿಮ್ಮಪ್ಪಹೆಗ್ಗಡೆ ಮುಖ ತೊಳೆಯದೆ ಹೊಲಗೇರಿ ಹತ್ತಿರಕ್ಕೆ ಬಂದನು.

ಆದರೆ ಸಮ್ಮಿಶ್ರ ಶಬ್ಧ ಪ್ರಪಂಚವೂ ವಾಸನಾ ಪ್ರಪಂಚವೂ ಸ್ವಲ್ಪ ಹೆಚ್ಚು ಕಡಿಮೆ ಅಂತಹ ಪ್ರಪಂಚದಲ್ಲಿಯೇ ವಾಸಿಸುತ್ತಿದ್ದ ತಿಮ್ಮಪ್ಪ ಹೆಗ್ಗಡೆಗಳು ಮೂಗು ಮುಚ್ಚಿಕೊಳ್ಳುವಷ್ಟು ತೀವ್ರತರವಾಗಿ ಇಂದ್ರಿಯ ಗೋಚರವಾಗತೊಡಗಿತು. ಕೋಳಿ, ಕುರಿ, ನಾಯಿ, ಹಂದಿ, ಮನುಷ್ಯರು, ದನಕರು ಇವೆಲ್ಲಾ ಪ್ರಾಣಿಗಳ ದುರ್ಗಂಧದ ಅವಿಭಕ್ತ ಕುಟುಂಬದ ವಾಯುವಲಯಕ್ಕೆ ಪ್ರವೇಶಿಸಿ ಕೇರಿ ಪ್ರಾರಂಭಾವಾಗುವ ಸ್ಥಳಕ್ಕೆ ಸಮೀಪದಲ್ಲಿಯೇ ಅದರ ದ್ವಾರ ರಕ್ಷಣಾ ಪ್ರದೇಶವೆಂಬಂತೆ ಎತ್ತರವಾಗಿದ್ದ 'ಬಡೇರ ದಿಬ್ಬ' ದ ಮೇಲೆ ನಿಂತು ತಿಮ್ಮಪ್ಪಹೆಗ್ಗಡೆ ವೀಕ್ಷಿಸತೊಡಗಿದನು.

ಈ ಒಡೆಯರ ದಿಬ್ಬಕ್ಕೆ ನೂರಾರು ವರ್ಷಗಳಿಂದ ವಂಶಪಾರಂಪರ್ಯವಾಗಿ ಹೆಗ್ಗಡೆಯವರ ಮನೆತನಕ್ಕೆ ಗೆಯ್ಯುತ್ತಿದ್ದ ಜೀತದಾಳುಗಳು, ತಾವು ಮಕ್ಕಳಾದಂದಿನಿಂದಲೂ ದಿನವೂ ಪ್ರಾತಃ ಕಾಲದಲ್ಲಿ

ತಮ್ಮನ್ನು ಕೆಲಸಕ್ಕೆ ಕರೆಯಲು ಬರುತ್ತಿದ್ದ ಒಡೆಯರನ್ನು ಆ ದಿಬ್ಬದ ನೆತ್ತಿಯ ಮೇಲೆಯೇ ನೋಡುತ್ತಿದ್ದುದು ವಾಡಿಕೆಯಾಗಿತ್ತು.

ಒಂದು ಸಲಗಾನ ಹಿಡಿದು ಹೊರಿಸಿ ಕಳಿಸಾಕೆ ಇಬ್ಬರನ್ನು ಕಳಿಸ್ಲಿ ಅಂತಾ ಕೇಳಿ ಕಳ್ಸಿದ್ರೆ ಒಂದು ಹಿಂಡಿಗೇಹಿಂಡು ನಿಂತಿದ್ದೀರಲ್ಲೋ! ಇಂದೇನು ಇಷ್ಟು ಜನ ಒಟ್ಟಿಗೇ ಕೆಲಸಕ್ಕೆ ಬಂದಾರಲ್ಲೋಅ ಂತಿದ್ದೇ? ಈಗ ಗೊತ್ತಾತು! ಬಾಡು ಸಿಗ್ತದೆ ಪಾಲಿಗೆ ಅಂತಾ ಬಿಡಾರವನ್ನೆಲ್ಲಾ ಖಾಲಿ ಮಾಡಿ ಬಂದೀರಿ ಅಲ್ಲೇನ್ರೊ, ಕಳ್ಳಸೂಳೆ ಮಕ್ಕಳ್ರಾ? ಎಂದು ಬಯ್ದು ಮತ್ತೆ ಗಂಭೀರವಾಗಿ ಆಜ್ಞೆ ಮಾಡಿದರು "ಯಾರಾದ್ರೂ ಇಬ್ಬರು ಇರಿ ಬಾಕಿಯೋರೆಲ್ಲಾ ಗದ್ದೆಗೆ ಹೊರಡಿ".

ಆಳುಗಳೆಲ್ಲಾ ಸ್ವಲ್ಪಪೆಚ್ಚಾದರು, ಹಂದಿ ಹಸಿಗೆ ಮಾಡಿ, ಪಾಲು ತೆಗೆದುಕೊಂಡು ಹೋಗುವ ಹೇರಾಸೆ ಕಟ್ಟಿಕೊಂಡು ಬಂದಿದ್ದರು, ಈಗ ಎಲ್ಲಾ ವ್ಯರ್ಥವಾದದ್ದು ಮಾತ್ರವೆ ಅಲ್ಲದೆ, ಕೆಲಸಕ್ಕೆ ಹೋಗಬೇಕಾಗಿಯೆ ಬಂದಿತ್ತಲ್ಲಾ ಎಂದು ತಪ್ಪಿಸಿಕೊಳ್ಳುವ ಉಪಾಯ ಆಲೋಚಿಸತೊಡಗಿದರು.

ಭೈರ "ಯಾರಾದರೂ ಇರಿ, ನನಗೆ ದನಾಬಿಡಾಕೆ ಹೊತ್ತಾಯ್ತು" ಎಂದನು ಮಂಜ "ನಾನೊಂದು ಚೂರು ಬಿಡಾರಕ್ಕೆ ಹೋಗಿ, ಹಾಂಗೇನೆ ಗದ್ದೆಗೆ ಬಂದು ಬಿಡ್ತೀನಿ" ಎಂದನು.

ಹಂದಿ ಒದ್ದೆಯ ಹತ್ತಿರಕ್ಕೆ ಹೋಗಿ ಸುಬ್ಬಣ್ಣ ಹೆಗ್ಗಡೆಯವರು ಹಿಂದಿರುಗಿ ನೋಡುತ್ತಾರೆ, ಹೊಲೆಯರೆಲ್ಲಾ ಅಂಗಳದಿಂದ ಹೊರಡುತ್ತಿದ್ದಾರೆ! ಅಬ್ಬರಿಸಿ ಗರ್ಜಿಸಿದರು, "ಲೌಡಿ ಮಕ್ಕಳ್ರಾ, ಎಲ್ಲಿಗೆ ಹೊರಟೀರೋ ಎಲ್ಲಾ? ಬನ್ರೋ ಇಲ್ಲಿ ಎಲ್ಲರೂ! ಹಂದಿ ಹಿಡಿದು ಅಡ್ಡೆಕಟ್ಟಿಕೊಟ್ಟು ಹೊರಡಿ ಕೆಲಸಕ್ಕೆ" ಎಂದರು. ಭೈರನು ಕರೆದನು, ಹಂದಿ ಸಿಕ್ಕಿದ್ದೇ ತಪ್ಪಿಸಿಕೊಂಡು, ಗದ್ದೆ ಹೊಲಕೇರಿ ಕಡೆ ನುಗ್ಗಿತು, ಎಲ್ಲಾರು ಸೇರಿ ಆ ಹಂದಿಯನ್ನು ಹಿಡಿದರು. ಕೊತಿಗೆ ಹಂದಿ ಸಿಕ್ಕಿ ಹಾಕಿಕೊಂಡಿತು, ನಮ್ತರ ಎಲ್ಲಾರೂ ಗದ್ದೆ, ತೋಟಗಳಿಗೆ ಕೆಲಸಕ್ಕೆ ಹೊರಟರು, ಭೈರ ದನಕಾಯಲು ಹೊರಟನು, ವೆಂಕಟಣ್ಣ ಹಂದಿಗಾಯಗೊಂಡಿದ್ದರಿಂದ ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಹೆಗ್ಗಡೆಯನ್ನು ಕೇಳಿದನು. ಈ ರೀತಿ ಈ ಕಾದಂಬರಿಯಲ್ಲಿ ನೋಡುತ್ತೇವೆ.

ಕೋಣೂರಿನ ಅಡಕೆ ತೋಟದ ಒಂದು ಮೂಲೆಯಲ್ಲಿ ರಂಗಪ್ಪಗೌಡರ ಗಟ್ಟಿದಾಳುಗಳು ಚೇಂಕ್ರ, ಪಿಜಣ, ಪಿತ, ಮೊಡಂಕಿಲ– ಹಿಂದಿನ ದಿನದ ಬಿರುಗಾಳಿ ಮಳೆಯಲ್ಲಿ ಉರುಳು, ಅಡಕೆ ಮರಗಳ ಮೇಲೆ ಬಿದ್ದಿದ್ದ ಒಂದು ದೊಡ್ಡ ಮುದಿ ಅತ್ತಿಯ ಮರವನ್ನು ಸವರಿ ಕಡಿಯುವ ಕೆಲಸದಲ್ಲಿ ತೊಡಗಿದ್ದರು. ಅವರ ಹೆಣಾಳುಗಳು, ದೇಯಿ: ಅಕ್ಕಣೆ, ಪೀಂಚಲು, ಬಾಗಿ–ತಮ್ಮ ಗಂಡಸರಿಗೆ ನೆರವಾಗಿ ಸವಿರಿದ ಸೊಪ್ಪನ್ನು ಅಡಕೆ ಮರಗಳ ಬುಡದ ಮೇಲೆ ಸೊಪ್ಪಿನ ಜಿಗ್ಗು ಮುಚ್ಚುವಂತೆ ಹೊತ್ತು ಹಾಕುವುದರಲ್ಲಿ ನಿರತರಾಗಿದ್ದರು. ಪೂರ್ವಾಹ್ನದ ಏರುಬಿಸಿಲಿನಲ್ಲಿ ಎತ್ತರವಾಗಿ ಬೆಳೆದಿದ್ದ ಅಡಕೆ ಮರಗಳ ಬುಡದಲ್ಲಿ ಕೆಲಸ ಮಾಡುತ್ತಿದ್ದ ಅವರೆಲ್ಲರೂ ತಾರತಮ್ಯದಿಂದ ಬಹು ಸಣ್ಣ ಗಾತ್ರದ ಪ್ರಾಣಿಗಳಂತೆ ಬಾಸವಾಗಿದ್ದರು.

ಸೊಂಟಕ್ಕೆ ಬಿಗಿದಿದ್ದ ಲಂಗೋಟಿ ಮಾತ್ರವೇ ಉಡುಪಾಗಿದ್ದ ಗಂಡಾಳುಗಳಲ್ಲಿ ಚೇಂಕ್ರ ಪಿಜಿಗಾರು ಕೊಡಲಿ ಹಿಡಿದು ಕಡಿಯುತ್ತಿದ್ದರು. ಮೊಡಂಕಿಲ, ಐತರು, ಕತ್ತಿಗಳಿಂದ ಸಣ್ಣ ಸಣ್ಣ ಹರೆಗಳನ್ನು ಸವರಿ ಹಾಕುತ್ತಿದ್ದರು. ಗಟ್ಟದ ತಗ್ಗಿನವರ ರೀತಿ ಬಡ್ಡು ಸೀರೆಗಳನ್ನು ಮೈಗೆ ಸುತ್ತಿ ತಲೆಗೆ ಹಾಳೆ ತೋಪಿ ಹಾಕಿಕೊಂಡಿದ್ದ ಹೆಣ್ಣಾಳುಗಳು ತುಳು ಭಾಷೆಯಲ್ಲಿ ಸಣ್ಣಗೆ ಗೊಣಗೊಣ ಮಾತಾಡಿಕೊಳ್ಳುತ್ತಾ ಯಾವ ಉತ್ಸಾಹವನ್ನೂ ಪ್ರದರ್ಶಿಸದ ನಡಿಗೆಯಿಂದ ಹಿಂದಕ್ಕು ಮುಂದಕ್ಕೂ ಅಡಕೆ ಮರದ ಬುಡದಿಂದ ಅತ್ತಿ ಮರ ಬಿದ್ದಿದ್ದ ಜಾಗಕ್ಕೆ ಚಲಿಸುತ್ತಿದ್ದರು. ಅವರಲ್ಲಿ ಯಾರ ಪ್ರಜ್ಞೆಯೂ ಸುತ್ತಣ ನಿಸರ್ಗ ಸೌಂದರ್ಯಕ್ಕೆ ಒಂದಿನಿಸಾದರೂ ಎಚ್ಚತ್ತಿರಲಿಲ್ಲ. ಅಡಕೆ ಮರದ ಪೊಟರೆಗಳಿಂದ ಹಾರುವ ಗಿಣಿಗಳ ಉಲಿಹ ಅವರ ದೈಹಿಕವಾದ ಕಿವಿಗಳಿಗೆ ಅನಿವಾರ್ಯವಾಗಿ ಕೇಳಿಸುತ್ತಿದ್ದರೂ, ಅವರಮನಸ್ಸು ಅದನ್ನು ಆಲಿಸುವ ಗೋಜಿಗೂ ಹೋಗುತ್ತಿರಲಿಲ್ಲ.

ಹಿಂದಿನ ದಿನ ಸಂಜೆ ಮಳೆಯಲ್ಲಿ ತೊಯ್ದು ತೊಳೆದಿದ್ದ ಲಕ್ಷ ಲಕ್ಷ ವಿವಿಧ ವರ್ಣಚ್ಛಾಯೆಯ ಕಾಡಿನ ತೋಟದ ಅಡಕೆಯ ಬಾಳೆಯ ಎಲೆ ಹಸುರನ್ನು ಅವರ ಕಣ್ಣು ಅನಿವಾರ್ಯವಾಗಿ ನೋಡುತ್ತಿದ್ದರೂ, ಅದನ್ನು ಕಾಣುವ ಮಟ್ಟಕೆ ಅವರ ಗಮನ ಬಂದಿನಿತೂ ಬೆಳೆದಿರಲಿಲ್ಲ.

ಮುಕುಂದಯ್ಯ ನಿಗಂತೂ ಕಾಡು ಎಂದರೆ ದೇವರಿಗೆ ಸರಿಸಮಾನವಾಗಿತ್ತು. ಅಷ್ಟೊಂದು ಭಾಯಮಿಶ್ರಿತ ಭಕ್ತಿ ಅದರಲ್ಲಿ,ಅ ವನಿಗೆ ಅದರ ಮುಳ್ಳು, ಕಲ್ಲು, ಕೊರಕಲು, ಏರು, ಇಳಿತ, ಹುಲಿ, ಹಂದಿ, ಹಾವು, ಚೇಳು ನುಸಿ, ಇಂಬಳ, ಇವೆಲ್ಲದರಿಂದ ಒದಗುವ ತೊಂದರೆಯ ಅನುಭವವಿತ್ತು. ಹಾಗೆಯೇ ಹಕ್ಕಿ ಹೂವು ಹಣ್ಣು ಚಿಟ್ಟೆ, ಜೇನು ಬೇಟೆ ಇತ್ಯಾದಿಗಳಿಂದ ಒದಗುವ ಆನಂದದ ಅರಿವೂ ಇತ್ತು. ಮಲೆನಾಡಿನ ಭವ್ಯತ್ಯ ಅವನ ಅನುಭವವನ್ನು ಹೆದರಿಕೆ ಎಂದು ವರ್ಣಿಸಲಾಗುತ್ತಿರಲಿಲ್ಲ.

ಅವನ ಅಂತಃಕರಣದಲ್ಲಿ ಈ ನಿರ್ಧಾರದ ವ್ಯಾಪರ ನಡೆಯುತ್ತಿದ್ದಾಗ ಅವನ ಬಹಿಃಕರಣಗಳೆಲ್ಲಾ ಚಿಟ್ಟುಬಿಲಿನ ಹಗ್ಗವನ್ನು ಸರಿ ಮಾಡುವ ಚೇಷ್ಟಿತದಲ್ಲಿ ತೊಡಗಿದ್ದವು. ಅಷ್ಟರಲ್ಲಿ ಅಲ್ಲಿಗೆ ಬಂದವನು ಅಣ್ಣ ರಂಗಪ್ಪಗೌಡರು ತೋಟದಲ್ಲಿ ಹಿಂದಿನ ದಿನದ ಬಿರುಗಾಳಿ ಮಳೆಗೆ ಉರುಳಿಬಿದ್ದ ಅತ್ತಿಯ ಮರವನ್ನು ಕಡಿಯುವ ಆಳುಗಳಿದ್ದಲ್ಲಿಗೆ ಹೋಗಲು ಹೇಳಿದ್ದರು. ತನ್ನ ಉದ್ದೇಶ ಸಾಧನೆಗೆ ಕರ್ತವ್ಯದ ಅನುಕೂಲತೆಯೂ ಒದಗಿದಂತಾಗಿ ಮುಕುಂದಯ್ಯ ತೋಟದ ಆ ಮೂಲೆಗೆ ಹೋಗಿದ್ದನು.

ಐತ ಪೀಂಚಲ ಇಬ್ಬರೂ ತಾವು ಮಾಡುತ್ತಿದ್ದ ಕೆಲಸ ಬಿಟ್ಟು ಮುಕುಂದಯ್ಯನ ಆಣತಿಯಂತೆ ಅವನ ಹಿಂದೆಹೊರಡುವ ಮುನ್ನವೆ, ಅವನು ಮುನ್ನಡೆದು ತೋಟದ ಅಡಕೆ ಬಾಳೆಯ ಮರಗಳ ಮಧ್ಯೆ ಮರೆಯಾಗಿದ್ದನು. ತೋಟದ ಎಲ್ಲೆಯನ್ನು ದಾಟಿ ಭೂತದ ಬನದ ಮಾರ್ಗವಾಗಿ ನಡೆದು ಕಾಡಿನಿಂದ ತೋಟದ ಅಂಚಿಗೆ ಇಳಿದು ಬರುತ್ತಿದ್ದ ಸರಲಿಗೆ ತಲುಪಿದನು. ದೊಡ್ಡ ಸಣ್ಣ ಉಂಡೆಗಲ್ಲು ಮತ್ತು ಬಂಡೆಗಳ ನಡುವೆ ಸಂಜೆಯ ಮಳೆಯಿಂದ ಮೆಲ್ಲಗೆ ಜುಳು ಜುಳು ಮರ್ಮರದಿಂದ ಹರಿಯುತ್ತಿದ್ದ

ಬೇಸಿಗೆಯ ಹಳ್ಳದ ನೀರು, ಬಿಸಿಲನ್ನೆ ಕಾಣದೆ, ಕಾಲಿಟ್ಟರೆ ಚಳಿಯಾಗುವಂತೆ ತಣ್ಣಗೆ ಹರಿಯುತ್ತಿತ್ತು. ಅಲ್ಲಿಂದಲೆ ಪ್ರಾರಂಭವಾಗುತ್ತದೆ ಏಡಿ ಹಿಡಿಯುವ ತಾಣವಾಗಿತ್ತು.

ಕೀಳುಜಾತಿಯವರಾಗಿ ಮುಟ್ಟಾಳು ಎಂದರೆ ಅಸ್ಪಶ್ಯರಾಗಿದ್ದ ಐತ ಪೀಂಚಲು ತಾನು ಬಂದ 'ಭೂತದ ಬನ' ದ ದಾರಿಯಲ್ಲಿ ಬರುವುದಿಲ್ಲವೆಂಬುದು ಅವನಿಗೆ ಗೊತ್ತಿತ್ತು. ಏಕೆಂದರೆ ಭೂತದ ಬನದೊಳಕ್ಕೆ ಮುಟ್ಟಾಳುಗಳು ಕಾಲಿಟ್ಟರೆ ಅವರಿಗೆ ಏನಾದರೂ ಕೇಡು ತಪ್ಪದು, ಎಂಬ ನಂಬುಗೆ ಬಲವಾಗಿತ್ತು. ಕನ್ನಡ ಜಿಲ್ಲೆಯಿಂದ ಬಂದವರಿಗೆ ಗಟ್ಟದ ಮೇಲಣ ದೆಯ್ಯಗಳೆಂದರೆ ಮಹಾಭಯ. ಆ ಭಯದ ಬೇಲಿಕಟ್ಟಿ ಮಲೆನಾಡಿನ ಜಮೀನುದಾರರು ತಮ್ಮ ತೋಟ, ಗದ್ದೆ ಹಿತ್ತಲುಗಳ ಫಸಲು ರಕ್ಷಣೆ ಮಾಡಿಕೊಳ್ಳುತ್ತಿದ್ದರು.

'ಹಕ್ಕಲು' ಕಾಡು ವಿರಳವಾಗುತ್ತಾ ಬಂದಿದ್ದ ಅವರಂಚಿನ ಭಾಗವಾಗಿತ್ತೆ ಹೊರತು' ಬಯಲು' ಆಗಿರಲಿಲ್ಲ. ಅದರ ನಡುನಡುವೆ ದೂರದೂರದಲ್ಲಿ ಹುಳಿಚೊಪ್ಪಿನ ಪೊದೆಗಳೂ ಚಿಮ್ಮಾರಲ ಮಟ್ಟುಗಳೂ ಅರಮರಲ ಗಿಜರುಗಳೂ ಇದ್ದವು. ಅದು ದನಗಳ ಮೇಯುವ ಕಾವಲಾಗಿಯೂ ಕರುಗಳ 'ಒಳಕಡೆ'ಯಾಗಿಯೂ ಉಪಯೋಗದಲ್ಲಿತ್ತು. ಬಯಲು ಸಿಮೆಯಲ್ಲಿ 'ಬಯಲು' ಎಂದು ಕರೆಯಿಸಿಕೊಳ್ಳುವಂತಹ ಜಾಗ ಮಲೆನಾಡಿನಲ್ಲಿ ಪ್ರಾಯಶಃ ಇಲ್ಲವೆ ಇಲ್ಲ, ಏಕೆಂದರೆ ಅಂತಹ ಸಮತಟ್ಟಿನ ಪ್ರದೇಶವೆ ಅಲ್ಲಿ ದುರ್ಲಭ.

ಹೊತ್ತು ಆಗಲೇ ಇಳಿಯತೊಡಗಿ ಕುಂದದ ಹೆಗ್ಗುಡ್ಡದ ನೆತ್ತಿಯ ನೆರಳು ಕಣಿವೆಯ ಕಾಡುಗಳ ಮೇಲೆ ಬಿದ್ದಿತು. ಹಿಂದಿನ ದಿನದ ಹೆಮ್ಮಳೆಯಲ್ಲಿ ತೊಯ್ದು ಕಾಡಿನ ಹಸರು ಅಲ್ಲಲ್ಲಿ ಕೆಂಬಿಸಿಲಿನ ರಂಗಿನಲ್ಲಿ ಸುಮನೋಹರವಾಗಿ ಮನಮೋಹಿಸುವಂತಿತ್ತು. ಹಗಲಿಗೂ, ಇರುಳಿಗೂ, ನಡುವಣ ಸಂಧಿಸಮಯದ ಸೌಂದರ್ಯಶಾಂತಿ ಮಲೆನಾಡನ್ನು ಅಪ್ಪಿಕೊಂಡಂತಿತ್ತು. ಕತ್ತಲೆ ದಟ್ಟಯಿಸುವುದರೊಳಗೆ ತಮ್ಮ ತಮ್ಮ ಮನೆಗಳನ್ನು ಸೇರಿಕೊಳುತ್ತಿದ್ದರು.

ವೆಂಕಟಣ್ಣ ಎಲಾ ಹತ್ತಿರ ಸಾಲ ಮಾಡಿದ್ದನು, ಅವನು ಸಾಲ ಸಾಲ ಅನೇಕ ಗೇಣು ವೃತ್ತಿದಾರರಲ್ಲಿ ಸಾಲ ಮಾಡಿದನು. ಅನೇಕ ಜನರಿಗೆ ತನ್ನ ಗದ್ದೆ ಹೊಲ ಜಮೀನು ಅಡವಿಟ್ಟು ಸಾಲವನ್ನು ಪಡೆದಿದ್ದನು. ಆದರೆ ಮಂಜಪ್ಪಭಟ್ಟರು ವೆಂಕಟಣ್ಣನಿಂದ ಜಮೀನನನ್ನು ಸಾಲಕೊಟ್ಟು ಖರೀದಿಸಿ ಬರೆಯಿಸಿಕೊಂಡಿದ್ದನು. ಇದು ಇತರರಿಗೆ ಸಾಲಕೊಟ್ಟ ಅನೇಕ ಜನರಿಗೆ ಗೊತ್ತಿಲ್ಲವಾದ ವಿಷಯವಾಗುತ್ತದೆ.

ಸಾಲದ ಪ್ರವಾಹಕ್ಕೆ ಸಿಕ್ಕಿ ತನ್ನ ಪಿತ್ರಾರ್ಜಿತ ಆಸ್ತಿಯನ್ನೆಲ್ಲಾ ತೇಲಿಬಿಟ್ಟಿದ್ದನು. ಅದುವರೆಗೆ ಸ್ವಂತ ಗದ್ದೆ ತೋಟಗಳನ್ನು ಸಾಗುವಳಿ ಮಾಡುತಾ ಹೆಸರಿಗಾದರೂ ಜಮೀನುದಾರನಾಗಿದ್ದವನು. ಈಗ ಕಲ್ಲೂರು ಸಾಹುಕಾರ ಮಂಜಭಟ್ಟರ ಒಕ್ಕಲ ಸ್ಥಾನಕ್ಕೆ ಇಳಿದಿದ್ದನು. ಆದರೆ ಈ ವಿಷಯವನ್ನು ಭಟ್ಟರೂ

ನಾಯಕರೂ, ಒಟ್ಟಾಗಿಯೇ ಗುಟ್ಟಾಗಿಟ್ಟಿದ್ದರು. ವೆಂಕಟಣ್ಣನಿಗೆ ಸಾಲಕೊಟ್ಟಿದ್ದ ಇತರರಿಗೆ ಯಾರಿಗೂ ತಿಳಿಯದಿರಲಿ ಎಂದ.

೧೮೯೩ನೆಯ ಇಸವಿ ಸೆಪ್ಟೆಂಬರ್ ೧೧ನೆಯ ತೇದಿ ಸೋಮವಾರ ತೀರ್ಥಹಳ್ಳಿಯ ಪದ್ರಿ ಅಥವಾ ಉಪದೇಶಿ ಜೀವರತ್ನಯ್ಯ, ಕಾಡು ದಾಟಿ, ಆಗುತಾನೆ ಕಳೆಕಿತ್ತು ತೆವರುಕುಯ್ಲಾಗಿದ್ದ ಗದ್ದೆ ಕೋಗಿನ ಅಂಚುಗಳನ್ನು ಹತ್ತಿ ಹಾರಿ, ತೋಟದ ಬೇಲಿಯ ತಡಬೆಯನ್ನು ಎಚ್ಚರಿಕೆಯಿಂದ ಏರಿ ಇಳಿದು ಆದರೆ ಮಾರದ ಸಾರದ ಮೇಲೆ ಅಡೆ ಹಳ್ಳವನ್ನು ಎತ್ತರಿಸಿ, ಮನೆಯೆಡೆಯ ಕಣದ ಬೇಲಿಯೊಡ್ಡಿಗೆ ಹಾಕಿದ್ದ ಉಣುಗೋಲನ್ನು ಸರಿಸಿ, ಸಿಂಧುವಳ್ಳಿ ಮನೆಗೆ ಪ್ರವೇಶಿಸಿದಂದು ತಾನು ಎಂತಹ ಲೋಕಪ್ರಸಿದ್ಧವಾಗಲಿರುವ ಜಗತ್‌ಭವ್ಯ ಮಹದ್ ಘಟನೆಯೊಂದರೊಡನೆ ಪ್ರತಿಸ್ಪರ್ಧಿಯಾಗಿದ್ದೇನೆ ಎಂಬುದನ್ನು ಅರಿತಿರಲಿಲ್ಲ. ಆ ದಿನವೆ ಕ್ರೈಸ್ತಮತ ಶ್ರದ್ಧೆಯ ಮತ್ತು ಮಿಶನರಿ ಮತಾಂಧತೆಯ ಶಕ್ತಿಕೇಂದ್ರವಾಗಿದ್ದ ಅಮೆರಿಕಾ ದೇಶದ ಚಿಕಾಗೋ ನಗರದಲ್ಲಿ ನೆರೆದಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ಮತ್ತು ವೇದಾಂತ ದರ್ಶನದ ಮಹೋನ್ನತಿಯನ್ನು ವಿಶ್ವವೈಶಾಲ್ಯವನ್ನು ತಮ್ಮ ಸಿಂಹಕಂಠದಿಂದ ಘೋಷಿಸಿದ್ದರು.

ಒಂದು ದಿನ ಬೈಗಿನ ಹೊತಿನಲ್ಲಿ ಬೆಟ್ಟಳ್ಳಿ ದೇವಯ್ಯ ಗದ್ದೆ ಕೆಲಸದ ಮೇಲ್ವಿಚಾರಣೆ ಮುಗಿಸಿ, ಆಳುಗಳಿಗೆ ಭತ್ತ, ಉಂಡಿಗೆ, ಎಲಡಿಕೆ, ಹೊಗೆಸೊಪ್ಪು, ಉಪ್ಪು, ಮೆಣಸಿನ ಕಾಯಿಗಳನ್ನು ಪಡಿಕೊಂಡಲು ಅವರೊಡನೆ ಮನೆಗೆ ಹಿಂತಿರುಗುತ್ತಿದ್ದನು.

ಆ ದಿನ ಆ ಇಸ್ಕೂಲು ಮನೆಯಲ್ಲಿ ಒಂದು ಸಣ್ಣ ಗುಂಪು ನೆರೆದಿತ್ತು. ಅವರಲ್ಲಿ ಕೆಲವರು ಆ ಕಟ್ಟಡ ಕಟ್ಟುವ ಕೆಲಸದಲ್ಲಿ ಪ್ರವೃತ್ತರಾದವರು, ಒಬ್ಬಿಬ್ಬರು ಯಾವ ಕೆಲಸವೂ ಇಲ್ಲದ ಉಂಡಾಡಿ ಪ್ರೇಕ್ಷಕರು, ಪಾದ್ರಿ ಜೀವರತ್ನಯ್ಯ ಆ ಸ್ಕೂಲಿನ ಕಂತ್ರಾಟು ವಹಿಸಿಕೊಂಡಿದ್ದ ಕಣ್ಣಾಪಂಡಿತ ಪರಿಶೀಲನೆ ನಡೆಸುತ್ತಾ, ಕಂತ್ರಾಟುದಾರ, ಕಣ್ಣಾಪಂಡಿತನ ಕೈಲಿ ಒಂದು ಅಳತೆಗೋಲೂ ಧಾರದುಂಡೆಯೂ ಇದ್ದವು. ಪಾದ್ರಿಯಕೈಲಿ, ಒಂದು ಕೈ ಪುಸ್ತಕ ಸೀಸದಕಡ್ಡಿ ಇದ್ದವು. ಇನ್ನೂ ಪೂರ್ತಿ ಪೂರೈಸದಿದ್ದ ಇಸ್ಕೂಲಿನ ಸುತ್ತಮುತ್ತ ಕಲಸಿದ ಕೆಮ್ಮಣ್ಣುಗುಡ್ಡೆಗಳು ಕತ್ತರಿಸಿದ್ದ ಬಿದಿರಿನ ಗಳುಗಳೂ, ಸೀಳಿದ್ದ ಅಡಕೆ ಮರದ ದಬ್ಬೆಗಳೂ ಕೆತ್ತಿದ್ದ ಮರದ ಹಸಿ ಹಸಿ ಸಿಬುರುಗಳೂ ಕಟ್ಟಿ ಬಿಗಿಯುವುದಕ್ಕಾಗಿ ಕಾಡಿನಿಂದ ತಂದಿದ್ದ ತರತರಹದ ಹಂಬುಗಳು ಕತ್ತದ ಕಿರುಮಿಣೆಯ ಉಂಡೆಗಳೂ ಉಗುಳಿದ್ದ ಎಲೆಯಡಕೆಯ ಕೆಂಬಣ್ಣ ಮೆತ್ತಿ ನೊಣವಾಡುತ್ತಿದ್ದ ಉಂಡೆಸೆದ ಹಾಳೆ ಕೊಟ್ಟೆಗಳು ಅಸ್ತವ್ಯಸ್ತವಾಗಿ ಬಿದ್ದಿದ್ದವು. ಹೊಸತನದ ಒಂದು ಹಸಿವಾಸನೆ ಸುತ್ತಲೂ ತುಂಬಿತ್ತು. ಹೆಗ್ಗಡೆಯವರ, ಆರ ನೆನಹಿನ ಬೊಕ್ಕಸದಲ್ಲಿ ಸುಮಾರು ಐವತ್ತು ವರ್ಷಗಳ ಹಿಂದೆಯೆ ಇರಬಹುದು, ಕಡಿಸಿದ್ದ ಒಂದು ದೊಡ್ಡ ತೇಗದ ಮರದ ಮುಂಡು ನಿಂತಿದ್ದನ್ನು ನೋಡಿ ಅದರ ಸಂಬಂಧದ ಒಂದು ಕಥೆಯನ್ನೆ ಹೇಳಿದರು. ಇನ್ನೊಂದು ಕಡೆ ಎದ್ದು ನಿಂತಿದ್ದ ಒಂದು ಕಾಡುಕಲ್ಲನ್ನು ತೋರಿಸಿ "ಇದನ್ನೆ ನೋಡಿ ಮಸೇಕಲ್ಲು ಅಂತಾರೆ, ನೂರಾರು ವರ್ಷಗಳಿಂದ ಸಾವಿರಾರು

ಜನರ ಕತ್ತಿ ಮಸೆದೂ ಮಸೆದೂ ಹ್ಯಾಂಗೆ ನುಣ್ಣಗಾಗ್ಯದೆ ನೋಡಿ! ಸಿಕಾರಿಗೆ ಹೋಗೋರು, ಮರಾ ಕಡಿಯಾಕೆ ಹೋಗೋರು, ಬಗನಿ ಇಳಿಸಾಕೆ ಹೋಗೋದು ಸೊಪ್ಪು ಸೌದೆಗೆ ಹೋಗೋರು, ಎಲ್ಲಾರೂ ನಮ್ಮ ಅಪ್ಪ, ಅಜ್ಜ, ಮುತ್ತಜ್ಜನ ಕಾಲದೋರು ಎಲ್ರೂ ಕತ್ತಿ ಮಸೆದಿದ್ದಾರೆ. ಇಲ್ಲಿ ನಾನೂ ಮಸೆದಿದ್ದೆ, ನಮ್ಮ ದೊಡ್ಡಾಣ್ಣನೂ ಮಸೆದಿದ್ದ ನಾವೆಲ್ಲಾ ಹೋಗ್ತೀವಿ ಈ ಕಲ್ಲು ಮಾತ್ರ ನಮ್ಮ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು ಗಿರಿಮಕ್ಕಳು, ಎಲ್ಲರ ಕಾಲಾನೂ ನೋಡ್ತಾ ಇಲ್ಲೇ ಹೀಂಗೆ ಕೂರ್ತಿದೆ ಎಂದು ಹೇಳಿರುವ್ವೆಗಳ ಹಸರುಕಟ್ಟೆಯಿಂದ ನೀರಿರುವ ಸ್ಥಳವನ್ನು ತಿಳಿಯುವ ನಾಯಿಗುತ್ತಿ ಆವೊತ್ತು ಹೊತ್ತಾರೆ ಹುಲಿಕಲ್ಲು ನೆತ್ತಿಯಲ್ಲಿ ಕುರ್ಕನೊಡನೆ ಹೋರಾಡಿ ಗಾಯಗೊಂಡಿದ್ದ ಹುಲಿಯ ಮೊದಮೊದಲು ಗುತ್ತಿ ತಿಮ್ಮಯರ ಹಿಮ್ದೆ ಮುಂದೆ ಅತ್ತ ಇತ್ತ ಹಳುವಿನಲ್ಲಿ ಓಡಿಯಾಡುತ್ತಾ ಬರುತ್ತಿತ್ತು. ಸ್ವಲ್ಪದೂರದ ಹೋಗುವುದರಲ್ಲಿ ಅತ್ತ ಓಡಿಯಾಡುವುದನ್ನು ನಿಲ್ಲಿಸಿ ಅವರ ಹಿಂದೆಯೇ ಬರತೊಡಾಗಿತ್ತು. ಆಗಲೆ ಗುತ್ತಿಗೆ ಅನುಮಾನವಾಗಿ ನಾಯಿಯನ್ನು ಹತ್ತಿರಕ್ಕೆ ಕರೆದು ತಲೆ ತಟ್ಟಿ ಮುದ್ದಮಾಡಿ ಹುರಿದುಂಬಿಸಿದನು. ನಾಯಿ ಕುಂಟುತ್ತಾ ಮೆಲ್ಲಗೆ ನಡೆಯುತ್ತಿತ್ತು.

ಕಾಡಿನಲ್ಲಿ ಇನ್ನೂ ಸ್ವಲ್ಪದೂರ ನಡೆದ ಮೇಲೆ ಒಂದು ಕಡೆ ಹಂದಿಯ ಹಿಂಡು ಅಡ್ಡ ಹಾಯಿತು. ಹಳುವಿನಲ್ಲಿ ಒಂದು ಮೂಲ, ಒಂದು ಬರ್ಕ, ಒಂದು ಚಿಟ್ಟು ಗೋಳಿ, ಒಂದು ಉಡ, ಕಡೆಗೆ ಒಂದು ಓತಿ, ಅಲ್ಪ ಮತ್ತು ಅತ್ಯಲ್ಪ ಪ್ರಾಣಿಗಲೂ ಸುಳಿದರೆ ಸಾಕು ಅತ್ಯುತ್ಸಾಹದಿಂದ ನುಗ್ಗಿ ಅಟ್ಟಿಕೊಂಡುಹ್ ಓಗುತ್ತಿದ್ದ ಬೇಟೆ ನಾಯಿ ಹುಲಿಯ ಈಗ ದೊಡ್ಡ ಹಂದಿಯ ಹಿಂಡೇ ಅಡ್ಡಹಾಯ್ದರೂ ಅಟ್ಟದೆ ಬೊಗಳದೆ ತಲೆ ಜೋಲು ಹಾಕಿ ತಮ್ಮ ಹಿಂದೆ ಮೆಲ್ಲಗೆ ಕುಂಟುತ್ತಾ ಬರುತ್ತಿದ್ದುದನ್ನು ಗಮನಿಸಿ ಗುತ್ತಿಗೆ ಜೀವವೇ ಹಾರಿ ಹೋದಂತಾಯಿತು.

ಚಿರತೆಯ ಕೂರುಗುರುಗಳಿಂದ ಆಗಿದ್ದ ಗಾಯಗಳಿಂದ ನೆತ್ತರು ಸೋರಿ ಆ ಕರಿಯ ಬಣ್ಣದ ನಾಯಿಯ ಮೈಯಲ್ಲಾ ಕೆಂಪಗಾದಂತಿತ್ತು, ಜೊತೆಗೆ ಒಂದು ಉಗುರೋ ಹಲ್ಲೋ ತಾಗಿ ಒಂದು ಕಣ್ಣೂ ಊದಿಕೊಂದು ರಕ್ತಮಿಶ್ರವಾದ ನೀರು ಇಳಿಯಿತು.

ಬೆಟ್ಟಳ್ಳಿಯ ಹೊಲೆಯರ ಕೇರಿಯಲ್ಲಿ ಆಗತಾನೆ ಒದ್ದೆಗಳಿಂದ ಹೊರಟ ಊರು ಹಂದಿಗಳು, ಸಲಗ–ದದ್ದೆ–ಮಣಕ–ಮರಿಗಳು, ಗುರುಗುರು–ಕುಂಯಿಕುಂಯಿ ಸದ್ದು ಮಾಡುತ್ತಾ ಗುಡಿಸಲು ಗುಡಿಸಲಿನ ನಡುವಣ ಸಂಧಿಗಳಲ್ಲಿ ದಿನನಿತ್ಯದ ಪದ್ಧತಿಯಂತೆ ಆಹಾರಾನ್ವೇಷಣೆಯಲ್ಲಿ ತೊಡಗಿದ್ದವು. ಕೋಳಿಗಳೂ, ಹುಂಜ–ಹೇಟೆ–ಸಳಗ–ಮರಿ–ಹೂಮರಿ–ಗೂಡುಗಳಿಂದ ಗೊತ್ತುಗಳಿಂದ ಹೊರಗೆ ದಾರಿ ಕೊಚ್ಚೆಯ ಸ್ಥಳಗಳಲ್ಲಿ ಕೆದಕುವ ಕೆಲಸಕ್ಕೆ ಕಾಲು ಕೊಕ್ಕು ಹಾಕಿದ್ದವು. ಅಡುಗೆ ಒಲೆಗಳಿಂದ ಹೊಮ್ಮಿದ ನೀಲಿ ಹೊಗೆ ಗುಡಿಸಲುಗಳಿಗೆ ಹೊದಿಸಿದ್ದ ಹುಲ್ಲಿನ ಬಿರುಕುಗಳಿಂದ ಮೆಲ್ಲಗೆ ಹೊರಟು ಗಾಳಿಯಲ್ಲಿ ತಿಳಿಯಾಟವಾಡಲು ಮೊದಲು ಮಾಡಿತ್ತು. ಬೆಳಗಿನ ಹೊತ್ತಿನಲ್ಲಿ ಅಂತಹ ಕೇರಿಗಳಿಗೆ ಅಗೋಚರವಾಗಿದ್ದರೂ ಹೊರಗಿನಿಂದ ಬರುವವರಿಗೆ ಮೂಗುಮುಚ್ಚಿಕೊಳ್ಳುವಂತೆ ತುಂಬಿಹಬ್ಬಿತ್ತು.

ತಟ್ಟಕ್ಕನೆ ಇಜಾರದ ಸಾಬಿಯ ಮುಖ ಕರ್ಕಶವಾಯ್ತು ಹಮೀರನ ಕೆಚ್ಚಲ್ಲದಿದ್ದರೂ ಅವನ ಮೊಂಡ ಮೂರ್ಖತೆಯ ಅವನ ಬಾಯಿಂದ ಏನನ್ನು ಬೇಕಾದರೂ ಹೇಳಿಸಬಿಡಬಹುದೆಂದು ಲುಂಗೀ ಸಾಬುವಿಗೆ ದಿಗಲಾಯಿತು. ವಿಷಾದದ ದಿಕ್ಕಿನ ಇಳಿಜಾರಿನ ಕಡೆಗೆ ಜಾರುತ್ತಿದ್ದ ವಿನೋದದ ಅಪಘಾತವನ್ನು ತಡೆಗಟ್ಟುವ ಉದ್ದೇಶದಿಂದ "ತಮಾಷೆಗೆ ಹೇಳಿದ್ದಕ್ಕೆಲ್ಲಾ ಸಿಟ್ಟು ಮಾಡಬೇಡಣ್ಣಾ, ಹಮ್ಮೀರಣ್ಣಾ! ನಿನ್ನ ಲಗ್ನಕ್ಕೆ ನಾನು ಬುಡನ್ ಇಬ್ಬರೂ ಬಿರುಸು ಬಾಣ ಗರ್ಜಾಲು ಹಾರಿಸೋಕೆ ಒಪ್ಪಿಕೊಂದಿದ್ದೇವಿ, ನೋಡ್ತಿರು, ಎಷ್ಟು ಪಸಂದಾಗಿ ಜಬರ್ದಿಸ್ತಿನಿಂದ ನಿನ್ನ ಲಗ್ನದ ದರ್ಬಾರು ನಡೀತದೆ! ಇರ್ಲಿ ಬಿಡೂ– ಈಗ ಬಹಳ ಹಸಿವಾಗೈತೆ ನಮಗೆ ಹಸಿದು ಹಸಲಿನ ಹಣ್ಣು, ಉಂಡುಬಾಳೆ ಹಣ್ಣು ತಿನ್ನಬೇಕಂತೆ! ಆ ಹುಳುವಿನಾಗೆ ಒಂದು ಹಲಸಿನ ಹಣ್ಣು ಇಟ್ಟಿದ್ದೆ! ಹೋಗಿ ತಗೊಂಡು ಬಾ! ಎನ್ನುತ್ತಾ ಹಮೀರಾ ಹಲಸಿನ ಹಣ್ಣನ್ನು ಅಡಗಿಸಿಟ್ಟಿದ್ದ ಜಾಗದ ಕಡೆ ಕೈತೋರಿದನು.

"ಹಾಗಾದರೆ ಕತ್ತಿ ಚೂರಿ ಏನೂಬೇಡ, ತೊಟ್ಟು ಹಿಡಿದು ಬಲವಾಗಿ ಎಳೆದರೆ ಹಿಸಿದು ಎರಡು ಭಾಗ ಆಗ್ತದೆ" ಎನ್ನುತ್ತಾ ಕೂತಲ್ಲಿಂದ ಎದ್ದ ಲುಂಗಿ ಸಾಬು ಹಮೀರನೆಡೆಗೆ ಬಂದು ಎಲ್ಲಿ ಸ್ವಲ್ಪ ಸರಿ, ಎಂದು ಅವನ ಜಾಗದಲ್ಲಿ ತಾನೆ ನಿಂತು, ಒಂದು ಕೈಯಲ್ಲಿ ಹಣ್ಣಿನ ತೊಟ್ಟು ಹಿಡಿದು ಇನ್ನೊಂದರಿಂದ ಹಣ್ಣನ್ನು ಒತ್ತಿ ಬಲವಾಗಿ ಎಳೆದನು. ಹಣ್ಣು ಹಿಡಿದು ಇಬ್ಬಾಗವಾಗಿ ತನ್ನ ಹೊಟ್ಟೆಯ ತೊಳೆ ಚುಳಕಿಗಳನ್ನೆಲ್ಲಾ ಬಯಲಿಗೆ ಹಾಕಿತು. ಚೆನ್ನಾಗಿ ಕುಳಿತು ಲೋಳಿ ಲೋಳಿಯಾಗಿದ್ದ ತೊಳೆಗಳನ್ನು ನಾಲ್ವರೂ ಹಿಸುತಿ ಬೀಜ ಹೊರಗೆ ಹಾಕಿ ಅಗಿಯಲು ಹಲ್ಲಿಗೂ ಸಿಕ್ಕಿದಂತಿದ್ದ ಅವುಗಳನ್ನು ನಾಲಗೆಯಿಂದ ಅತ್ತ ಇತ್ತ ಓಡಾಡಿಸಿ ಗುಳುಗುಳು ನುಂಗೆ ತೊಡಗಿದರು. ಅಜ್ಜೀಸಾಬು, ಇಜಾರ್‌ಸಾಬು, ಲುಂಗೀಸಾಬು ಕರ್ಮೀನ್‌ಸಾಬು, ಪುಡಿಸಾಬು ಹಾಗೂ ಇವರ ನಡುವಿನ ಸಂಭಾಷಣೆ ತಿಳಿಯುತ್ತೇವೆ.

ಆವೊತ್ತ ಬೆಳಿಗ್ಗೆ ಸಿಂಭಾವಿಯ ಹೊಲೆಗೇರಿಯ, ಗಟ್ಟದ ತಗ್ಗಿನವರು ಬಿಡಾರಗಳಲ್ಲಿ ಮತ್ತು ಹಳೆಪೈಕದ ಒಕ್ಕಲು ಮನೆಯ ಗುಡಿಸಲುಗಳನ್ನು ಮಕ್ಕಳಿಗೆ ಸಂಭ್ರಮವೋ ಸಂಭ್ರಮವಾಗಿ ಹೋಯ್ತು.

ಹೊಲಗೇರಿಯ ಅಂಚಿನಲ್ಲಿದ್ದು ಬಹು ಎತ್ತರಕ್ಕೆ ಬೆಳೆದಿದ್ದ ಒಂದು ಬೃಹದಾಕಾರದ ಗೊಜ್ಜಿನ ಮಾವಿನಮರದ ಬುಡದಲ್ಲಿ ಕೆಳದ ರಾತ್ರಿಯಲ್ಲಿ ಗಾಳಿಗೆ ಉದುರಿದ್ದ ಹಣ್ಣುಗಳನ್ನು ಹೆರಕುವುದಕ್ಕಾಗಿ ಹೊತ್ತಾರೆ ಮುಂಚೆಯೆ ನೆರೆದಿದ್ದ ಹೊಲೆಯರ ಕುರುದೆಗಳಿಗೆ ಅವರ ದೈನಂದಿನ ನಿತ್ಯಜೀವನದ ನೀರಸ ಸಾಧಾರಣತೆಯನ್ನು ಕಲಕಿ ಅಲ್ಲೋಲಕಲ್ಲೋಲ ಮಾಡುವಂತಹ ಒಂದು ಅಪೂರ್ವ ವಸ್ತುದೃಗ್ಗೋಚರವಾಯಿತು. ಇಲ್ಲಿನ ಮಕ್ಕಳು, ನಾಲ್ಕು ಕಡೆಯು ನೋಡಿ, ಕುದ್ರೆ ಕಣ್ರೋ ಕುದ್ರೆ ಸಾಬರ ಕುದ್ರೆ ಪ್ರಾಣಿಯ ಕಡೆಗೆ ಓಡಿದನು, ಸರಿ ಹೊರಟಿತು. ಹತ್ತಾರುಹುಡುಗರ ಕೊರಳ ಕೂಗು ಕುದ್ರೆ ಕುದ್ರೆ ಕುದ್ರೆ ಬನ್ರೋ ಬನ್ರೋ ಕುದ್ರೆ ಕುದ್ರೆ ಹೇ ಹೇ ಹೇ. . . . . ಲಂಗೋಟಿ ಉಡಿದಾರ ಬತ್ತಲೆ ಇತ್ಯಾದಿ ಎಲ್ಲಿ ಹೊಲೇರ ಕುರುವೆಗಳೂ ಧಾವಿಸಿ, ಮೇಯುತ್ತಿದ್ದ ಕುದುರೆಗಳಿಗೆ ಸಾಕಷ್ಟು ದೂರದಲ್ಲಿಯೇ ಭಯಭಕ್ತಿಯಿಂದ ಗುಂಪು ನಿಂತು ಅವುಗಳ ಅದ್ಭುತ ವೈಚಿತ್ರವನ್ನು ಬೆರಗುಗಣ್ಣಾಗಿ ನೋಡತೊಡಗಿದವು,

ಈ ಕರ್ಮೀನ್ ಸಾಬರು, ನೀರುಳ್ಳಿ, ಬೆಳ್ಳುಳ್ಳಿ ದಿನಸಿ, ಒಣಮೀನು ಮುಂತಾದ ಸಾಮನುಗಳು ಮಾರಲು, ದೊಡ್ಡವರಿಗೆ ಸಂಸಾರ ನಡೆಸಲು ಅವಶ್ಯಕವಾದ ಪದಾರ್ಥಗಳ ಜೊತೆಗೆ ಕೊಬರಿ, ಕಡಲೆ, ಉತ್ತುತ್ತೆ, ಓಲೆಬೆಲ್ಲ ಕರ್ಜೂರ ಮಿಠಾಯಿ, ಬತ್ತಾಸು, ಚೆಂಡು ಮೊದಲಾದ ವಿಶೇಷವಾಗಿ ಮಕ್ಕಳ ಹಿಗ್ಗಿಗೆ ಕಾರಣವಾಗುವ ಪದಾರ್ಥಗಳನ್ನು ಮಾರಾಟಕ್ಕೆ ತರುತ್ತಿದ್ದರು.

ಮೊದಲನೆ ವರ್ಗದ ಸರಕನ್ನು ಬಹಿರಂಗವಾಗಿಯೆ ಎಂದರೆ ಮನೆಯ ಮುಂಚೆಕಡೆಯ ವ್ಯಾಪಾರ ಮಾಡುತ್ತಿದ್ದರು, ಎರಡನೇ ವರ್ಗದ ಸರಕಿನ ವ್ಯಾಪಾರವೆಲ್ಲಾ ಸಾಧಾರಣವಾಗಿ ಅಂತರಂಗದಲ್ಲಿ ಎಂದರೆ ಮನೆಯ ಹಿತ್ತಲು ಕಡೆಯ ಬಾಗಿಲಲ್ಲಿ, ಹೆಂಗಸರು ಮಕ್ಕಳೊಡನೆ ನಡೆಯುತ್ತಿತ್ತು.

ಕುದುರೆಯನ್ನು ಕಂಡ ಹೊಲೆಯರ ಹುಡುಗರ ಸಂತೋಷ ಕರ್ಮೀನ್ ಸಾಬರ ವ್ಯಾಪಾರ ಕದ್ದ ಅಡಕೆಯ ವಿವರ ದೊಳ್ಳನಿಂದ ವಿಷಯ ತಿಳಿದು ಗುತ್ತಿಯ ಮನೆಯವರು ಸಾಬರ ಜೊತೆ ಹೊಡೆದಾಡಿದ್ದು, ಇವುಗಳ ವಿವರ ಈ ಭಾಗದಲ್ಲಿದೆ.

ಬೆಟ್ಟಳ್ಳಿಯಿಂದ ಕಲ್ಲೂರಿಗೆ ಹೋಗುವ ದಾರಿಯ ಹೆಗ್ಗಾಡಿನ ಕಾಡು ರಸ್ತೆಯಲ್ಲಿ ಕಮಾನು ಕಟ್ಟಿದ್ದ ಜೋಡೆತ್ತಿನ ಗಾಡಿಯೊಂದು ನಿಧಾನವಾಗಿ ಹೋಗುತ್ತಿತ್ತು. ಅದು ಹಾಗೆ ಮೆಲ್ಲಗೆ ಹೋಗುತ್ತಿದ್ದಕ್ಕೆ ಕಾರಣ ಎತ್ತುಗಳೂ ಆಗಿರಲಿಲ್ಲ. ಗಾಡಿ ಹೊಡೆಯುವವನೂ ಆಗಿರಲಿಲ್ಲ. ಹಾದಿಯ ಮುಖ್ಯ ಕಾರಣವಾಗಿತ್ತು. ಅಲ್ಲಿ ಸಾಮನ್ಯವಾಗಿ ಯಾವ ನಾಗರೀಕ ವಾಹನವೂ ಸಂಚರಿಸುತ್ತಿರಲಿಲ್ಲ ಎಂಬುದಕ್ಕೆ ಅದರ ಕೊರಕಲು ಅಪೂರ್ವವಾಗಿ ಉಪಯೋಗಿಸುತ್ತಿದ್ದುದರ ದೆಸೆಯಿಂದಾಗಿ ಎದ್ದು ಕಾಣುತ್ತಿದ್ದ ಅದರ ಪಾಳುತನವೂ ಸಾಕ್ಷಿಯಾಗಿದ್ದವು. ಗಾಡಿಯಚಕ್ರಗಳು ಹೋಗುತ್ತಿದ್ದ ಕೊರಕಲು ಓಣಿಯಲ್ಲಿ ಬಿದ್ದು ತುಂಬಿದ ತರಗೆಲೆಗಳೂ ಒಣಕಲು ಕಡ್ಡಿಗಳೂ ಹರಿಯದೆ ಮುರಿಯದೆ ಅಕ್ಷತವಾಗಿದ್ದವು.

ಗಾಡಿಗೆ ಕಮಾನು ಕಟ್ಟಿದ್ದ ಠೀವಿ ಎತ್ತುಗಳ ಕೊರಳಿನಲ್ಲಿ ಇಂಚರಗೈಯುತ್ತಿದ್ದ ಗಂಟೆ ಗಗ್ಗರದ ಸರಗಳು ಚೆನ್ನಾಗಿ ಕೇಸಿ ಸೊಗಸುಗೊಳಿಸಿದ್ದ ಕೋಡುಗಳ ತುದಿಯಲ್ಲಿ ಹೊಳೆಯುತ್ತಿದ್ದ ಹಿತ್ತಾಳೆಯ ಕೋಡು ಕಂಚುಗಳು ಕುಂಚಗಳು ಆ ಕುಂಚಗಳ ತುದಿಯಲ್ಲಿ ಜೋಲಾಡುತ್ತಿದ್ದ ಬಣ್ಣದ ಕುಚ್ಚುಗಳು ಗಾಡಿ ಹೊಡೆಯುತ್ತಿದ್ದವನು ಹಿಡಿದಿದ್ದ ಬಾರುಕೋಲಿನ ಬಣ್ಣದ ಶೃಂಗಾರ, ಅವನು ತಲೆಗೆ ಸುತ್ತಿದ್ದ ಕೆಂಪು ಎಲೆವಸ್ತ್ರ ಅವನ ಕಿವಿಗಳಲ್ಲಿದ್ದ ಒಂಟಿಗಳು ಎಲ್ಲವೂ ಏನೂ ಒಂದು ಫೋಕಿಯನ್ನು ಸೊಗಸುಗಾರಿಕೆಯನ್ನು ಮನಸ್ಸಿಗೆ ತರುವಂತಿದ್ದವು.

ಗಾಡಿಯ ಒಳಗಡೆ ಮೂವರು ಹೆಂಗಸರೂ ಮೂವರು ಹುಡುಗರೂ ಇದ್ದರು. ಹೆಂಗಸರಲ್ಲಿ ಅತ್ಯಂತ ಕಿರಿಯವಳೆಂದು ತೋರುತ್ತಿದ್ದಾಕೆಯ ತೊಡೆಯ ಮೇಲಿದ್ದ ಕೈಗೂಸುಒಂದು ಆಗಾಗ್ಗೆ ಅಳುತಿದ್ದ ಸದ್ದು ಗಾಡಿ ಜಟಕಾ ಹೊಡೆಯದೆ ಸಮವಾಗಿದ್ದ ರಸ್ತೆಯಲ್ಲಿ ಹೋಗುತ್ತಿದ್ದಾಗ ಮಾತ್ರ ಗಗ್ಗರದ ಸರದ ಟಿಂಟಿಗೆಯೊಡನೆ ಬೆರತು ಕೇಳಿಸುವಂತಿತ್ತು.

ಗಾಡಿ ಮುಂಬರಿದು ಕಾಡನ್ನು ದಾಟಿ ಒಂದು ಗದ್ದೆ ತೋಗಿನ ಹತ್ತಿರಕ್ಕೆ ಬಂದಾಗ ಅಡೆ ಹಳ್ಳವೊಂದು ಅಡ್ಡಬಂದಿತು. ಗಾಡಿ ನಿಲ್ಲಿಸಿ, ಎತ್ತುಗಳು ಕೊರಳು ಬಿಚ್ಚಿದ ಮೇಲೆ ಎಲ್ಲರೂ ಇಳಿದರು. ಹೆಂಗಸರು ಮೂವರು ಸೇರಿ ವೀಳೆಯದೆಲೆಯಲ್ಲಿ ಅಡಕೆಯನ್ನು ಮುಡಿಚಿಟ್ಟು,ಪದ್ಧತಿಯಂತೆ ಗಂಗೆಗೆ ವೀಳೆದೆಲೆ ಅರ್ಪಿಸುವ ಶಾಸ್ತ್ರ ಮಾಡಿದರು. ಚೆಲುವಯ್ಯನ ಮೇಲೆ 'ಗಂಗವ್ವಾ' ಒಳ್ಳೇದು ಮಾಡಮ್ಮಾ ಎಂದು ಪ್ರಾರ್ಥಿಸಿ ತೀರ್ಥ ಚಿಮುಕಿಸಿದರು. ಹುಡುಗರು ಹಳ್ಳದ ಬಿಳಿಯ ಕಲ್ಲುಗುಂಡುಗಳನ್ನು ತೆಗೆದೆತ್ತಿ ಕಪ್ಪೆಗಳಿಗೆ ಗುರಿಕಟ್ಟಿ ಹೊಡೆಯುವ ಪಂಥದಲ್ಲಿ ತೊಡಗಿದರು.

"ಇದೇ ಏನೋ ಕಲ್ಲೂರು? ಹೌದು ಕಣ್ಣೋ!" ನೋಡು ಅದೇ ಹೊಳೆ ದಂಡೇಲಿ ಕಾಣ್ತಾ ಇದೆಯಲ್ಲಾ ದೊಡ್ಡಮನೆ ಅರ್ಧ ಮಂಗಳೂರು ಹೆಂಚು, ಅರ್ಧ ಓಡಿ ಹೆಂಚು ಹೊದಿಸಿದ್ದು ಅದೇ ಕಲ್ಲೂರು ಸಾಹುಕಾರ್‍ರು ಮಂಜಪ್ಪಭಟ್ಟರ ಮನೆ ಕಣೋ! ಅಷ್ಟರಲ್ಲಿ ಗಾಡಿ ದೇವಸ್ಥಾನದ ಬಳಿಯ ದೊಡ್ಡ ಅರಳಿ ಕಟ್ಟೆಯ ಬುಡದಲ್ಲಿ ವಾಡಿಕೆಯಂತೆ ನಿಂತಿತು. ಹುಡುಗರೆಲ್ಲಾ ಸಂಭ್ರಮದಿಂದ ಬಚ್ಚ ಎತ್ತಿನ ಕೊರಳು ಬಿಚ್ಚಿ ಮೂಕಿಯನ್ನು ನೆಲಕ್ಕೆ ಮುಟಿಸುವ ಮುನ್ನತೆ, ಹಿಂದುಗಡೆಯಿಂದ ಹಾರಿಬಿಟ್ಟರು.

ಬೆಟ್ಟಳ್ಳಿಯ ಕಮಾನುಗಾಡಿ ಬಂದದ್ದನ್ನು ಗಮನಿಸಿದ ಜೋಯಿಸರು ಬಂದು ವಿಚಾರಿಸಿದರು. ಮಡಿ ಕೆಡದಂತೆ ಆದಷ್ಟು ದೂರದಲ್ಲಿಯೇ ನಿಂತು, ಪುಣ್ಯವಶಾತ ಅವರಿಗೆ ಗಾಡಿ ಹೊಡೆಯುತ್ತಿದ್ದ ಬಚ್ಚ ಹೊಲೆಯರವನು ಎಂದು ಗೊತ್ತಾಗಲಿಲ್ಲ. ನಂತರ ಹೊಳೆ ಹೋಗಿ ಸ್ಥಾನ ಮುಖ ತೊಳೆದು ನಂತರ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿದರು, ನಂತರ ಅಲ್ಲಿಂದ ಬೆಟ್ಟಳ್ಳಿಗೆ ಹೋದರು.

ಕಲ್ಲೂರು ಗಡ್ಡದಯ್ಯ ಯಾರೂ? ಏನು?ಏಂತು?ಎತ್ತ? ಯಾರೊಬ್ಬರಿಗೂ ಸರಿಯಾಗಿ ಗೊತ್ತಿರಲಿಲ್ಲ. ಸಂನ್ಯಾಸಿ ಬೈರಾಗಿ ಗೊಸಾಯಿ ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಮೇಲುವರ್ಗದ ಜನರು ಇವನನ್ನು ಗಡ್ಡದಯ್ಯ ಎಂದು ಕರೆಯುತ್ತಿದ್ದರು. ಕೆಲವರು ಅವನನ್ನು ತಲೆಮರೆಸಿಕೊಂಡಿರುವ ಯಾವುದೇ ರಾಜಮನೆತನವನ ಎಂದು ಹೇಳುತ್ತಿದ್ದರು. ಆತನ ಆಳುತನ ಮೈಕಟ್ಟು ಎತ್ತರ ನಯನಕಾಂತಿ ವದನತೇಜಸ್ಸು, ವ್ಯಕ್ತಿಭಂಗಿ ಇವುಗಳನ್ನು ಗಮನಿಸಿದರೆ ಹಾಗೆಯೇ ಕಾಣುತಿತ್ತು.

ಇಂತಹ ಚಿತ್ರವಿಚಿತ್ರವಾದ ವದಂತಿಗಳನ್ನೆಲ್ಲಾ ಕೇಳಿದ್ದುದರಿಂದಲೇ ದೇವಯ್ಯ ಮುಕುಂದಯ್ಯ ಇಬರೂ ತುಸು ಎಚ್ಚರಿಕೆಯಿಂದಲೆ ಎದೆಡವ ಗುಟ್ಟತ್ತಲೇ ಕಲ್ಲು ಮಂಟಪದ ಸಮೀಪಕ್ಕೆ ಹೋಗಿದ್ದರು.

ಮುಂಗಾರಿನ ಮೊದಲ ಮಳೆಗಳಿಂದ ತುಸುವೆ ತುಂಬಿ ಬಂಡೆಗಳೆಡೆಯಡೆ ಹರಿಯುತಿದ್ದ ಹೊಲೆಯ ನೀರಿನ ಮತ್ತು ಪಕ್ಕದಲ್ಲಿದ್ದ ಒಂದು ಮಹಾ ಅಶ್ವತ್ಥವೃಕ್ಷದ ಪರ್ಣಕೋಟಿಯ ಮರ್ಮರನಾದ ವಿನಾಸಂಪೂರ್ಣ ನಿಃಶಬ್ಧವಾಗಿದ್ದ ಕಲ್ಲುಮಂಟಪ ನಿರ್ಜನವೂ ಆಗಿದ್ದಂತೆ ಭಾಸವಾಯಿತು. ನಿತ್ಯವೂ ಊದಿನ ಕಡ್ಡಿ ಹೊತ್ತಿಸುವ ಪ್ರದೇಶದಲ್ಲಿ ವ್ಯಾಪಿಸಿತು. ಸಾಮಾನ್ಯವಾಗಿ ಊರಿನ ಸಮೀಪದಲ್ಲಿರುವ ಹೊಳೆಯ ದಂಡೆಯ ಕಲ್ಲುಮಂಟಪಗಳಂತಲ್ಲದೇ ಆ ಮಂಟಪ ಅತ್ಯಂತ ನಿರ್ಮಲವಾಗಿ ಕಾಣಿಸಿತು.

ಮಂಟಪದ ಒಂದು ಮೂಲೆಯಲಿ ಕಾಷಾಯಧಾರಿಯಾಗಿದ್ದ ಒಬ್ಬ ಮನುಷ್ಯ ಮೃಗ ಚರ್ಮಾಸನದ ಮೇಲೆ ಧ್ಯಾನಸ್ಥನಾಗಿದ್ದಂತೆ ನಿಶ್ಚಲಭಂಗಿಯಲ್ಲಿ ನಿಮೂಲಿತ ನೇತ್ರನಾಗಿ ಕಾಣಿಸಿಕೊಂಡನು.

ಮುಕುಂದಯ್ಯ ನಿಂತು ದೀರ್ಘದಂಡ ಪ್ರಣಯ ಮಾಡಿದನು. ದೇವಯ್ಯ ಅತೀ ಭಾವ ಪ್ರದರ್ಶನ ಆತ್ಮಗೌರವಕ್ಕೆ ಹಾನಿಕರವೆಂಬ ಅಹಂತಾಪ್ರತಿಷ್ಠಿತನಾಗಿ ನಿಂತಂತೆ ಕೈಮುಗಿದು ನಮಸ್ಕಾರ ಮಾಡಿದನು. ಇವರು ನಮಸ್ಕಾರ ಮಾಡಿದ್ದು ಗಮನಿಸಿದಂತೆ ತೋರಲಿಲ್ಲ. ಆ ಗಡ್ಡದಯ್ಯ ಒಂದೆರಡು ನಿಮಿಷಗಳು ಹಾಗೆಯೇ ನಿಂತಿದ್ದು, ಇಬ್ಬರೂ ಸದ್ದು ಮಾಡದೆ ಕಲ್ಲು ನೆಲದ ಮೇಲೆ ಚಕ್ಕಾಟು ಚಕ್ಕಾಟು ಹಾಕಿಕೂತುಕೊಂಡರು. ಇಬ್ಬರೂ ಪಿಸು ಮಾತಿನಿಂದ, ಸನ್ಯಾಸಿಗೆ ಎಚ್ಚರವಾಯಿತು, ಇಬ್ಬರು ಪ್ರಶ್ನೆಗಳನ್ನು ಕೇಳಿದರು. ಇಬ್ಬರಿಗೂ ನಗುತ್ತಾ ನಗುತ್ತಾ ಇಂಗ್ಲೀಷಿನಲ್ಲಿಯೇ ಉತ್ತರ ನೀಡಿದರು. ಅವರ ಹತ್ತಿರ ಧರ್ಮದ ಪುಸ್ತಕ, ಗ್ರಂಥಗಳಿದ್ದವು. ಬೇರೆ ಯಾವುದೇ ವಸ್ತುಗಳು ಇರಲಿಲ್ಲ. ಮುಕುಂದಯ್ಯನ ಪೂರ್ವಜನ್ಮ ಮತ್ತು ತನ್ನ ಅಕ್ಕನ ಜನ್ಮಾಂತರವನ್ನು ಸನ್ಯಾಸಿ ತಿಳಿಸಿದನು. ಈ ರೀತಿ ಅಲ್ಲಿ ನಡೆದ ಪ್ರಸಂಗ, ಸನ್ಯಾಸಿಯ ದೇವರ ರೂಪವೆಂದೇ ಎಂದು ಹೇಳಬಹುದಾಗಿದೆ. ಹಿಂದೂ ಧರ್ಮದ ಸಂಸ್ಕೃತಿಯನ್ನು ತಿಳಿಸಿದರು. ಸ್ವಾಮಿ ವಿವೇಕಾನಂದರ ಅಮೆರಿಕಾ, ಚಿಕಾಗೊ ಸರ್ವ ಸಮ್ಮೇಳನದ ವಿಷಯವನ್ನು ತಿಳಿಸಿದರು. ನಂತರ ಭಾರತಕ್ಕೆ ಬಂದು ಹಿಂದೂ ಧರ್ಮವನ್ನು ಮೂರು ವರ್ಷದಲ್ಲಿ ತಿಳಿಸುತ್ತಾರೆ ಎಂದು ಹೇಳಿದ್ದರು. ಮೇಗರವಳ್ಳಿಯಿಂದ ತೀರ್ಥವಳ್ಳಿಗೆ ಹೋಗುವ ಹೆದ್ದಾರಿ ಸಾಮಾನ್ಯರ ಮಾತಿನಲ್ಲಿ ಅದಕ್ಕಿನ್ನೂ ರಸ್ತೆ ಎಂಬ ಹೆಸರು ಸರ್ವಮಾನ್ಯವಾಗಿರಲಿಲ್ಲ. ಆದರೆ ಬಳಕೆಗೆ ಬರುತ್ತಿತ್ತು ಮುಂದೆ ರಸ್ತೆಗೆ ಬದಲಾಗಿ ಕೋಡು ಎಂಬುದು ಬಳಕೆಗೆ ಬಂದಂತೆ ಮುಸಲ್ಮಾನರ ದೌಲತ್ತು ಕೊನೆಗೊಂಡು ಇಂಗ್ಲೀಷರ ದೌಲತ್ತು ಸಂಪೂರ್ಣವಾಗಿ ಸಂಸ್ಥಾಪಿತವಾದಂದು ರಸ್ತೆಯಾಗುತ್ತಿದ್ದ ಹೆದ್ದಾರಿ ದುರಸ್ತು ಕಾಣದೆ ಆ ಅನುಭವದ 'ಪಜೀತಿ' ಹಳ್ಳಿಗಾಡಿನ ಕಾಡುಗಳಲ್ಲಿ ಬರಿಗಾಲಿನಲ್ಲಿಯೇ ತಿರುಗಿ ಅಭ್ಯಾಸವಿದ್ದ ಅದರಲ್ಲಿಯೂ ಏನು ಬಳೆ ಮುಂಗಾರಿನ ಪ್ರಾರಂಭದ ಜೋರಿನಿಂದ ಸುರಿಯುತ್ತಿರಲಿಲ್ಲ. ಆದರೆ ಹಿಡಿದು ಹೊಡೆಯುತ್ತಿತ್ತು ಜಡಿ ಸುತ್ತಲೂ ಹೆಗ್ಗಾಡು ಆಕಾಶದೆತ್ತರಕ್ಕೆ ಬೆಳೆದು ನಿಂತಿದ್ದವು. ನೂರಾರು ವರ್ಷಗಳ ಸಾಲು ಧೂಪದ ಹೆಮ್ಮರಗಳು, ಹಳುವೋ ನಿತ್ಯಶ್ಯಾಮಲ ರೇಜಿಗೆ ಹಿಡಿಸುವ ಜೀರುಂಡೆಗಳ ಕರ್ಕಶದ ಚೀರುದನಿ ಬೇರೆ ಹಕ್ಕಿಗಳೇ ಸದ್ದೆ ಇಲ್ಲ. ನಿಲ್ಲದೆ ಸುರಿಯುತ್ತಿದ್ದ ಆ ಮಳೆಯಲ್ಲಿ ಅವು ಎಲ್ಲಿಯೋ ತಲೆ ಉಡುಗಿಸಿದ್ದವು. ಆ ಕೊರಕಲು ರಸ್ತೆಯಲ್ಲಿ ಕೆಸರು ಮತ್ತು ಹೊಂಡಗಳನ್ನು ತಪ್ಪಿಸಿ ನಡೆಯದಿದ್ದರು.

ಪೊಲೀಸಿನವರು ತನ್ನನ್ನು ಹಿಡಿದು ಕೈಗೆ ಕೋಳ ಹಾಕಿ ತೀರ್ಥಹಳ್ಳಿಗೆ ಕರೆದುಕೊಂಡು ಹೋಗಲು ಬಂದಿದ್ದಾರೆ ಎಂಬ ಸುದ್ದಿ ತಿಳಿದ ಕೂಡಲೇ ಗುತ್ತಿ ಕಂಗಾಲಾಗಿದ್ದನು. ಕೇರಿಗೆ ಪೋಲೀಸರು ಬರುತ್ತಾರೆ ಎಂಬ ವಾರ್ತೆ ಕೇಳಿದೊಡನೆ ಕೇರಿಯ ಗಂಡಸರು ಹೆಂಗಸರು ಎಲ್ಲಾರು ತಲೆ ತಪ್ಪಿಸಿಕೊಳ್ಳಲು ಕಾಡುಹತ್ತಿದ್ದರು.ನಡೆಯಲಾರದ ಮುದುಕರು ಮತ್ತು ಮಕ್ಕಳೂ ಮಾತ್ರ ತಮ್ಮ ತಮ್ಮ ಬಿಡಾರದ ತಟ್ಟೆ ಬಾಗಿಲುಗಳನ್ನು ಭದ್ರವಾಗಿ ಹಾಕಿಕೊಂಡು ಬಲೆಯನ್ನು ಹೊತ್ತಿಸದೆ ಹುದುಗಿ ಬಿಟ್ಟಿದ್ದರು.

ಗುತ್ತಿಗೂ ಇಜಾರ್‌ಸಾಬ್‌ರ್‌ಗೂ ಜಗಳವಾಗಿತ್ತು. ಆ ಜಗಳದಲ್ಲಿ ಗುತ್ತಿಯು ಇಜಾರ್ ಸಾಬ್ ಕೈ ಬೆರಳನ್ನು ಕತ್ತರಿಸಿದನು. ಗುತ್ತಿ ಆ ಕೆಲಸ ಮಾಡಲು ಇಜಾರ್ ಸಾಬ್ ಹುಣಸೆ ಬರಲುನಿಂದ ತನ್ನ ಮಾವನಿಗೆ ಹೊಡೆದಿದ್ದ ಕೋಪ ಅವನು ಸೇಡು ತೀರಿಸಿಕೊಂಡನು. ಸಾಬ್ ಕೂಡ ಗುತ್ತಿಯ ಕಾವಿಗೆ ಹೊಡೆದಿದ್ದನು. ತೀರ್ಥಹಳ್ಳಿಯ ಪೋಲಿಸ್ ಸ್ಟೇಷನ್‌ಗೆ ದೇವಯ್ಯಗೌಡ, ಕರಿಯ್ಯಗೌಡ ಇಬ್ಬರು ಸೇರಿ ಕೇಸ್‌ನ ನೀಡಿದರು. ಇಜಾರ್ ಸಾಬ್‌ಗೆ ಜೀವಕ್ಕೆ ಅಪಾಯವಿರಲಿಲ್ಲ. ನಂತರ ಪೋಲಿಸರು ಸಿಂಭಾವಿ ಭರಮ್ಮೆ ಹೆಗ್ಗಡೆಯರೊಡನೆ ಹೊಲೆಗೇರಿಗೆ ಬಂದಾಗ, ಅಲ್ಲಿಯೇ ಆ ದಿನ ಸಿಂಬಾವಿ ಮನೆಯಲ್ಲಿ ಕೋಳಿ ತುಂಡು ಕಡಬು ಕಳ್ಳು, ಸಾರಾಯಿಗಳ ಔತಣವನ್ನೇರ್ಪಡಿಸಿ ಸರಕಾರದ ಯಮದೂತರನ್ನು ತೃಪ್ತಿಪಡಿಸಿದರು.

ಕಾಡಿಗೆ ಓಡಿದ್ದ ಹೊಲೆಯರು ಬಹಳ ಹೊತ್ತು ಅಲ್ಲಿರಲಿಕ್ಕಾಗಿರಲಿಲ್ಲ, ಮುಚ್ಚಿಕೊಂಡಿದ್ದ ಮೋಡಗಪ್ಪು ಜಡಿಮಳೆಯಾಗಿ ಬಿಡದೆ ಸುರಿಯತೊಡಗಿದ್ದುದರಿಂದ ಅನೇಕರು ತೊಪ್ಪನೆ ತೊಯ್ದು ಅಲ್ಲಿ ಇಲ್ಲಿ ನುಸುಳಿ ಕಳ್ಳತನದಿಂದ ತಮ್ಮತಮ್ಮ ಬಿಡಾರಗಳಿಗೆ ಹೊಕ್ಕಿದ್ದರು.

ಪೋಲೀಸಿನವರ ನುರಿತಿದ್ದರಿಂದ ಭರಮೈಹೆಗ್ಗಡೆಯವರಿಗೂ ಗುಟ್ಟುಬಿಟ್ಟು ಕೊಡದೆ ರಾತ್ರಿ ನಾಲ್ಕು ಗಂಟೆಯ ಹೊತ್ತಿಗೇ ಮಳೆಯನ್ನೂ ಲೆಕ್ಕಿಸದೆ ಕೇರಿಗೆ ಹೋಗಿ, ಕರಿಸಿದ್ದನ ಬಿಡಾರಕ್ಕೆ ಮುತ್ತಿಗೆ ಹಾಕಿ, ಗುಲ್ಲು ಕೋಲಾಹಲಗಳ ನಡುವೆ ಲಾಟೀನಿನ ಬೆಳಕಿನಲ್ಲಿಯೇ ಗುತ್ತಿಯನ್ನು ಸೆರೆಹಿಡಿದು ಬಿಟ್ಟಿದರು.

ಹೆಗ್ಗಡೆರವರು ಪೋಲೀಸರ ಎದುರಿಗೆ ಗುತ್ತಿಯನ್ನು ಬಾಯಿಗೆ ಬಂದಂತೆ ಬಯ್ದು ಪೋಲೀಸರು ಹೇಳಿದ ಹಾಗೆ ಕೇಳು, ಶಿಕ್ಷೆ ಆಗುವುದಿಲ್ಲ, ಮತ್ತೆ ಓಡಿಗೀಡಿ ಹೋಗಲು ಪ್ರಯತ್ನಿಸಿಯಾ? ಹುಷಾರು! ಎಂದು ಬುದ್ಧಿ ಹೇಳಿದಂತೆ ಮಾಡಿ ಯಾರಿಗೂ ಗೊತ್ತಾಗದ ರೀತಿಯಲ್ಲಿ ಕಣ್ಣು ಮಿಟುಕಿಸಿದ್ದರು. ನಂತರ ಪೋಲೀಸರ ಕೈಗೆ ಬೆಚ್ಚಗೆ ಮಾಡಿ, ಗುತ್ತಿಯ ಪರವಾಗಿ ಒಳ್ಳೆಯ ಮಾತುಗಳನ್ನಾಡಿದರು. ನಮ್ಮ ಹೋಲೇರ ಪೈಕಿ ಸಿಪಾಯಿ ಅಂದರೆ ಅವನೊಬ್ಬನೇ ಕೈ! ಆ ಇಜಾರದ ಸಾಬಿ ಅವನ ಗಬ್ಬದ ಕುರೀನ ಕೊಯ್ದು ಹಾಕಿದ ಸಿಟ್ಟಿಗೆ ಸ್ವಲ್ಪ ಗಲಾಟೆ ಮಾಡಿಬಿಟ್ಟು. ಅವನ ಕಾಲಿನ ಎಲುಬು ಮುರಿಯುವ ಹಾಗೆ ಏಟು ಕೊಟ್ಟಿದ್ದೂ ಆ ಇಜಾರದ ಸಾಬೀನೆ ಅಂತಾ, ಕಂಡವರೆಲ್ಲಾ ಹೇಳಿದ್ದಾರೆ.

ಹೆಗ್ಗಡೆ ಕಣ್ಣು ಮಿಟುಕಿಸಿದ್ದು ಅವನಿಗೆ ಅರ್ಥವಾಗುತ್ತದೆ. ಅದೇ ಉಪಾಯ! ನೋಡಿಯೇ ಬಿಡುತ್ತೇನೆ! ಎಂದು ದೃಢಮಾಡಿಕೊಂಡನು, ಎಚ್ಚರಿಕೆಯಿಂದ ತನಗೆ ಗೊತ್ತಿದ್ದರಿಂದ ಜಾಗ, ಆ ಕ್ಯಾರನೆ ಹಿಂಡಲ ಹತ್ತ ಕೆರೆ ಅಂಗಲದ ಕಂಪ ಅದೆಯಲ್ಲಾ ಅಲ್ಲೇ ಕೊಟ್ಟರೆ ಕೊಡಬೇಕು ಇವರಿಗೆ ಕೈ. ಆ ಕಂಪಾದಾಗ ಒಂದು ಕಡಾನೇಸಿಕ್ಕೊಂಡು ಬಿದ್ದಿತು. ಆ ದೊಡ್ಡ ಬ್ಯಾಟೇಲಿ ಇನ್ನು ಈಗಿರ್ಲು ಮೀಸೆ ಧಡಿಯ ಹೂತುಕೊಂಡು ಹೋಗಾದೇನು ಹೆಚ್ಚೆ, ಮತ್ತೆ ಈ ಸಣಕಲ ಮಿಸೆ ಬೋಳ ಆ ಹಳುವಿನ

ನಿಜರಿನಾಗೆ ಇಂದ ಅಟ್ಟಿ ಹಿಡಿಯಾದು ಅಷ್ಟರೊಳಗೇ ಅದೇ ಮಳೆ ಬ್ಯಾರೆ ಹುಯ್ತಾ ಇದೆ ಆಗಿದ್ದಾಗ್ಲಿ ನೋಡೆಬಿಡ್ತೀನಿ.

ಇದ್ದಕ್ಕಿದ್ದ ಹಾಗೆ ಗುತ್ತಿ ಡುರುಕ್ಕೆಂದು ಹೂಸು ಕೊಟ್ಟು ನಿಂತನು. ಈ ರೀತಿ ನಾಟಕವಾಡಿ ಗುತ್ತಿ ಕೆರೆಯ ಹತ್ತಿರ ಪಾಯಿಖಾನೆ ಹೋಗುತ್ತಾನೆ ಎಂದು ಹೇಳಿ, ಅಲ್ಲಿಂದ ಮೆತ್ತನೆ ಜಾಗ ಖಾಲಿ ಮಾಡಿದನು, ಪೊಲೀಸರವರು ತಿರುಗಿ ನೋಡುವರೆಗೆ, ಅವನು ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋದನು. ಅವನಿಗೆ ತನ್ನ ಹುಲಿಯ ತನ್ನ ನಾಯಕನಿಗೆ ಸಹಾಯ ಮಾಡುತ್ತಿತ್ತು. ಅಲ್ಲಿಂದ ನಾಯಿಗುತ್ತಿ ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿ "ಒಂದು ಸೊಲ್ಪಾನಾದ್ರೂ ಒಣಗಿದ ಸೌದೇನ ತರಬೇಕಾಗುತ್ತದೆ ಮನೆ ಸೌದೆ ಕೊಟ್ಟಿಗೆಯಿಂದ ಇಲ್ದಿದ್ರೆ ಬೆಂಕಿ ಹೊತ್ತಾದಾದ್ರೂ ಹ್ಯಾಂಗೆ" ಎಂದ ಸಿದ್ದ ಕಾಡಿನ ನಡುವೆಯಿಂದ ಒಂದು ಶಕುನದ್ ಅಹಕ್ಕಿ ವಿಕಾರವಾಗಿ ದನಿಗೈಯುತ್ತಿರುವುದನ್ನು ಆಲಿಸಿ ತನಗೆ ತಾನೆಂಬಂತೆ ಅಂದುಕೊಂಡನು. "ಹಾಲುಹಕ್ಕಿಮತ್ತೇನು ಕೇಡು ನುಡೀತಾ ಅದೆಯೋ ಮೀ ಮೀ ಮೀ ಮೀ ಮೀ ಅಂತಾ?

ಸುಡುಗಾಡು ಪಟ್ಟಿ ಗುಡ್ಡದಓಕೆ ಮಗ್ಗುಲಲ್ಲಿದ್ದು ಇಳಿಜಾರು ಒಮ್ಮೆಡೆ ತುಸು ಸಮತಟ್ಟಾಗಿದ್ದ ಸ್ಥಾನವಾಗಿತ್ತು. ಸುತ್ತಮುತ್ತಣ ಹಕ್ಕಲು ಬಯಲಿಗೂ ಅದಕ್ಕೂ ಯಾವ ವ್ಯತ್ಯಾಸವು ಇರಲಿಲ್ಲ. ಎಲ್ಲ ಕಡೆಯೂ ಇರುವಂತೆಯೆ ಅಲ್ಲಲ್ಲಿ ನೇರಳೆ, ಹಲಸು, ಹುಣಸೆ, ಹೊನ್ನೆ, ಆಲ, ಮತ್ತಿ, ನೆಲ್ಲಿ, ವಾಟೆ ಮೊದಲಾದ ಮರಗಳಿದ್ದು ನಡುನಡುವೆ ಅಲ್ಲಲ್ಲಿ ಸೀಗೆ ಲಕ್ಕಿ ಕೆಂಜಿಗೆ ಹುಳಿಚೊಪ್ಪು ಇಲಾತ್ಸಿಂಗೆ ಅರಮರಲು ಬೆಮ್ಮಾರಲು ಕರ್ಜಿ ಇತ್ಯಾದಿ ಪೊದೆಗಳು ಬೆಳೆದುಕೊಂಡಿದ್ದವು. ಅದು ಸ್ಮಶಾನ ಎಂಬುದಕ್ಕೆ ಯಾವೊಂದು ವಿಶೇಷವಾದ ಚಿಹ್ನೆಯೂ ಕಾಣುತ್ತಿರಲಿಲ್ಲ. ಹುಲ್ಲು ಹಚ್ಚಹಸುರಾಗಿ ಹಬ್ಬಿ ನಯನ ಮನೋಹರವಾಗಿತ್ತು. ಇದು ಹಳೆ ಮನೆ ಮನೆತನದ ಸೌಮ್ಯ ಸ್ಮಶಾನವಾಗಿತ್ತು.

ಹೊಲೆಯರು, ಹಳೆಪೈಕದವರು, ಗಟ್ಟದ ತಗ್ಗಿನವರು ಯಾರೂ ಅದನ್ನು ಬಳಸುತ್ತಿರಲಿಲ್ಲ. ಅದು ಹೆಗ್ಗಡೆ ಮನೆತನದ ಹೆಣಗಳಿಗೆ ಮಿಸಲಾಗಿತ್ತು.

ಅಕ್ಕಪಕ್ಕದಲ್ಲಿರುವ ಸ್ಮಶಾನಗಳು, ಹೊಲೆಯರು ಹಳಪೈಕದವರು ಇತರರೊಂದಿಗೆ ದೊಡ್ಡಣ್ಣ ಹೆಗಡೆ ಕಳೇಬರಹವನ್ನು ನೋಡಲು ಅಕ್ಕಪಕ್ಕದ ಊರಿನವರು, ಅನೇಕ ಜನರು, ಜಂಗುಳಿ ತುಂಬಿ ತುಳುಕುತ್ತಿದ್ದ ಕೊನೆಯಲ್ಲಿ ಧರ್ಮುವಿನ ತಾಯಿ ರಂಗಮ್ಮ ಕೂಡ ಕೊನೆಗಾಲದಲ್ಲಿ ಸಾವನ್ನು ಒಪ್ಪುತ್ತಾಳೆ. ಇಬ್ಬರ ಶವವನ್ನು ಒಟ್ಟಿಗೆ ಶಾಸ್ತ್ರ ಸಂಪ್ರದಾಯ ಮುಕಾಂತರ ಬೆಂಕಿಗೆ ಆಹುತಿ ಮಾಡುತ್ತಾರೆ. ದೊಡ್ಡವರನ್ನು ಬೆಂಕಿಗೆ ಹಾಕುವ ಸಂಪ್ರದಾಯ, ಮಕ್ಕಳು ಸತ್ತರೆ, ಗುಂಡಿಯಲ್ಲಿ ಹೂತುತ್ತಾರೆ. ರಂಗಮ್ಮನ ಸಾವು ಪತಿವ್ರತೆಯ ಸಾವೆಂದು ಜನರು ಮಾತನಾಡುತ್ತಿದ್ದರು. ತನ್ನ ಅವ್ವಗೆ ಪ್ರಾಣ ಹೋಯಿತು ಎಂದು ಗೊತ್ತಾದೊಡನೆ ಐತನ ಕೈ ಹಿಡಿದು ಹುಲಿ ಅಟ್ಟಿಕೊಂಡು ತಿನ್ನುತ್ತಿದ್ದ ತಾಯಿಯನ್ನು ನೋಡುತ್ತಾ ದಿಕ್ಕುಗೆಟ್ಟು ಹೆದರಿ ದೂರ ನಿಲ್ಲುವ ಜಿಂಕೆ ಮರಿಯಂತೆ ದಿಗ್ಭ್ರಾಂತವಾಗಿ ನಿಂತಿದ್ದ ಧರ್ಮು "ಅಯ್ಯೋ

ಪಿತಾ" ಎಂದು ನಡುಗಿ ಚೀತ್ಕರಿಸಿ ನೆಲಕ್ಕುರುಳಿ ಲಿವಿಲಿವಿ ಒದ್ದಾಡ ತೊಡಗಿದನು. ದುಃಖದ ಮೇಲೆ ದುಃಖದ ಆಘಾತನಾಗಿದ್ದ ಬಾಲಕನ ಹೃದಯ ಅವರ ಸಂತೈಕೆಯಿಂದ ತುಸು ಶಾಂತನಾದ ಮೇಲೆ ಐಗಳು ಹೇಳಿದರು. ಧರ್ಮು ನಿನ್ನ ತಾಯಿ ನಿಜವಾಗಿಯೂ ದೈವ ಭಕ್ತೆ, ಪುಣ್ಯವಂತೆ ದೇವರು ಅವರು ಪ್ರಾರ್ಥನೆ ಪೂರೈಸಿದ್ದಾರೆ ಎಂದು ಹೇಳಿದ್ದಾನೆ. ಯಾರು ಬದುಕಲಿ ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ, ಮಳೆಗಾಲ ನಿಲ್ಲುತ್ತದೆಯೇ ಮಳೆ ಹಿಡಿದು ಕೂತಿತ್ತು ನಾಲ್ಕು ಪಾದಗಳನ್ನು ಬಲವಾಗಿ ಊರಿ! ಮೋಡ ಸದಾ ಕವಿದು ಸೂರ್ಯದರ್ಶನವೆ ಅಪೂರ್ವವಾಯಿತು. ತನ್ನ ದುರ್ದಮ್ಯ, ವ್ಯಾಪರಗಳನ್ನು ನಿರ್ಲಕ್ಷವಾಗಿನಿರ್ದಾಕ್ಷಿಣ್ಯವಾಗಿ ಸಾಗಿಸಿತ್ತು. ಬೃಹತ್ ಪ್ರಕೃತಿ ಆ ಪ್ರಕೃತಿಯ ಪ್ರತಿರೂಪದ ಸಹ್ಯಾದ್ರಿ ಪರ್ವತದ ಕಾನನ ಶ್ರೇಣಿ ಮನುಷ್ಯರ ಅಲ್ಪಸುಖದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿ ಭೀಷಣ ವರ್ಷದಾರೆಯಲ್ಲಿ ತೊಪ್ಪನೆ ತೊಯ್ಯುತ್ತಾ ಹಬ್ಬಿ ಕೊಬ್ಬಿ ಉಬ್ಬಿ ನಿಂತಿತ್ತು.

ಆ ಭೂಮಿ ನಿಸರ್ಗದ ಮುಂದೆ ಹಳೆಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಮತ್ತು ಸಿಂಬಾವಿಯಂತಹ ಏಕಗೃಹ ಕ್ಷುದ್ರಗ್ರಾಮಗಳ ಬದುಕಿನ ಆಶೆ ನಿರಾಶೆ, ಕಷ್ಟ ಸುಖ ಶೋಕ ತಾಪಾದಿಗಳು ಯಃಕಶ್ಚಿತಗಳಾಗಿದ್ದುದರಲ್ಲಿ ಆಶ್ಚರ್ಯವೇನು?

ಆ ಸಹ್ಯಾದ್ರಿಯ ಮೇಲೆ ಕಾಡು ಮಳೆ ಇವುಗಳ ಕಡೆಗಣ್ಣಿನ ಗಮನಕ್ಕಾದರೂ ಬರುತ್ತವೆಯೋ ಮಲೆಯೋ? ಅಲೆ ಅಲೆ ಅಲೆಯಾಗಿ ಬಾನ್ಮುಟ್ಟಿ ತಲೆಯೆತ್ತಿ ನಿಂತಿದೆ! ಕಾಡೋಣ ದಿಗಂತ ವಿಶ್ರಾಂತವಾಗಿ ದಟ್ಟವಾಗಿ ವ್ಯಾಘ್ರ ಭೀಷಣವಾಗಿ ವರಾಹ ಕಠೋರವಾಗಿ ಹಸರಿಸಿದೆ! ಮಳೆಯೋ! ಹಗಲೂ ಇರುಳೂ ಒಂದೇ ಸಮನೆ ಸುರಿಯುತ್ತಿದೆ, ಹೊಡೆಯುತ್ತಿದೆ, ಜಡಿಯುತ್ತಿದೆ.

ಮನೆಮನೆಯಲ್ಲಿಯ ಹಳ್ಳಿಯ ಜನರ ಗದ್ದೆಯ ಕೆಲಸಕ್ಕೆ ಶುರುಮಾಡಿದ್ದಾರೆ, ಆರು ಕಟ್ಟುತ್ತಿದ್ದಾರೆ. ಅಗೋಡಿ ಮಾಡುತ್ತಾರೆ, ಅಂಚು ಕೆತ್ತುತ್ತಿದ್ದಾರೆ, ಹಗಲು ಕೂಣೆ ಹಾಕಿ ಮೀನು ಕಡಿಯುತ್ತಿದ್ದಾರೆ. ಅಟ್ಟದ ಮೇಲಿದ್ದ ಗೊರಬುಗಳೆಲ್ಲ ಹೆಣ್ಣಾಳುಗಳ ತಲೆಗೇರಿ ಸಂಚರಿಸುತ್ತೇವೆ. ಹಾಸಿಗೆಯಲ್ಲಿಯೂ ಸಂಧಿಮೂಲೆಗಳಲ್ಲಿಯೂ ಇದ್ದ ಕಂಬಳಿಗಳೆಲ್ಲ ಕೊಪ್ಪೆಗಳಾಗಿ ಗಂಡಾಳುಗಳ ತಲೆಗೇರಿ ದುಡಿದಾಡುತ್ತಿವೆ. ಎತ್ತಿನ ಹಟ್ಟಿಯ ಉಳುಮೆಯ ಕೆಲಸದ ಎತ್ತುಗಳಿಗೆಲ್ಲ ರಜಾಕಾಲ ಮುಗಿದು ಇಸ್ಕೂಲು ಪ್ರಾರಂಭವಾದಂತಿದೆ.

ಕಾರ್ಮೋಡ ಮುಸುಗಿ ಹಿಡಿದು ಹೊಡೆಯುತ್ತಿದ್ದುದರಿಂದ ಹೊತ್ತಿಗೆ ಮುನ್ನವೆ ಬೈಗುಗಪ್ಪು ಕವಿದಿತ್ತು. ಗದ್ದೆಯ ಕೆಲಸದಿಂದ ಹಿಂದಿರುಗುತ್ತಿದ್ದ ಆಳುಗಳೆಲ್ಲ ಇವೊತ್ತು ಎದಿಗಿಂತಲೂ ಹೆಚ್ಚು ಹೊತ್ತು ಕೆಲಸ ಮಾಡಿಸಿಬಿಟ್ಟಾರು. ಮುಕುಂದೇಗೌಡರು ಎಂದು ಮನಸ್ಸಿನಲ್ಲಿಯೇ ತುಸು ಅಸಮಾಧಾನಪಟ್ಟುಕೊಂಡು ತಮ್ಮ ತಮ್ಮ ಬಿಡಾರಗಳಿಗೆ ಉಪ್ಪು ಮೆಣಸು ಬಾಳೇಕಾಯಿ ಅಕ್ಕಿ, ಎಲೆ, ಅಡಿಕೆ, ಹೊಗೆಸೊಪ್ಪು ಮೊದಲಾದ ಗಂಟುಕಟ್ಟಿದ ಪಡಿಯ ಸಾಮಾಗ್ರಿಗಳೊಡನೆ ಕೆಲವರು ಕಂಬಳಿಕೊಪ್ಪೆ

ಹಾಕಿಕೊಂಡು, ಕೆಲವರು ಗೊರಬು ಸೂಡಿಕೊಂಡು ದಣಿದು ಮೆಲ್ಲನೆ ಹಿಂದಿರುಗುತ್ತಿದ್ದರು. ಹೆಣ್ಣಾಳುಗಳ ಗುಂಪಿನಲ್ಲಿ ಬರುತ್ತಿದ್ದ ಪೀಂಚಲ ತನ್ನ ಬಿಡಾರದ ಮುಂದೆ ನಿಂತು ಅಕ್ಕಣಿ, ಬಾಗಿ, ಚಿಕ್ಕ ಮೊದಲಾದವರನ್ನು ಬರಿಯ ನಗೆಯಿಂದಲೋ ಬೀಳುಕೊಟ್ಟಳು.

ತನ್ನ ಬಿಡಾರದ ತಡಿಕೆ ಬಾಗಿಲಿಗೆ ಬಿಗಿದಿದ್ದ ಹಗ್ಗವನ್ನು ಬಿಚ್ಚಿ ಅದನ್ನು ನೂಕಿ ಗೊರಬು ಬಾಗಿಲಿಗೆ ಹಿಡಿಸುವಂತೆ ಅಡ್ಡಡ್ಡವಾಗಿ ತನ್ನೆಲ್ಲಾ ಗಂಟು ಮೂಟೆಗಳೊಡನೆ ಬಳಿ ಹೊಕ್ಕು ಮತ್ತೆ ಬಾಗಿಲು ಹಾಕಿಕೊಂಡಳು. ಹೊರಗಡೆ ಬೀಳುತ್ತಿದ್ದ ಮಳೆಯ ಇರಿಚಲು ಒಲಕ್ಕೆ ಸಿಡಿದು ಹಾರಿ ಬಿಡಾರದ ನೆಲ ಒದ್ದೆಯಾಗದಿರಲಿ ಎಂದು,

ಹೊರಗಡೆ ಮೇಯುತ್ತಿದ್ದು ಒದ್ದೆ ಮುದ್ದೆಯಾಗಿ ಗರಿ ತಿಪ್ಪುಳು ಮೆಯ್ಗಂಟಿ ಸಣ್ಣಗೆ ಕಾಣುತ್ತಿದ್ದ ಅವಳ ಒಂದು ಹುಂಜವೂ ಎರಡು ಹೇಂಟೆಗಳೂ ಮೂರು ನಾಲ್ಕು ಮರಿಗಳೂ ಕತ್ತಲಾಗುತ್ತಿದ್ದುದರಿಂದ ಒಳಕ್ಕೆ ಹೋಗಲು ಮನೆಯ ಯಜಮಾನಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದು, ಅವಳು ಬಂದು ಬಾಗಿಲು ತೆಗೆದೊಡನೆ ಅವಳಿಗಿಂತಲೂ ಮೊದಲೇ ಒಳಕ್ಕೆ ನುಗ್ಗಿ, ಗೊತ್ತು ಕೂರುವ ಜಾಗಕ್ಕೆ ಹೋಗಿದ್ದವು. ಪೀಂಚಲು ಮೂಲೆಯಲ್ಲಿ ಗೂಟಕ್ಕೆ ತಗುಲಿಸಿದ್ದ ಒಂದು ಕಣ್ಣುಕಣ್ಣಿನ ದೊಡ್ಡ ಬುಟ್ಟಿಯನ್ನು ತೆಗೆದು ಆ ಕೋಳಿಗಳನ್ನೆಲ್ಲಾ ಒಟ್ಟಿಗೆ ಮೂಲೆಗೆ ತಳ್ಳಿ ಮುಚ್ಚಿ ಹಾಕಿದಳು. ತನ್ನ ಗೊರಬನ್ನು ಆ ಗೂಟಕ್ಕೆ ತಗುಲಿ ಹಾಕಿದಳು. ಒಂದು ಗಂಟನ್ನು ಹಿಡಿದುಕೊಂಡು ಬಂದಿದ್ದ ಒಂದು ಕೆಸುವಿನ ಎಲೆಯ ಕೊಟ್ಟೆಯನ್ನು ತೆಗೆದು, ಪ್ರತ್ಯೇಕವಾಗಿ ಒಲೆಯಿದ್ದ ಮೂಲೆಯೆಡೆ ಇಟ್ಟಳು, ಇಟ್ಟೊಡನೆ ಬಿಚ್ಚಿಕೊಂಡು ಆ ಪೊಟ್ಟಣದಲ್ಲಿ ಕೆಲವು ಬೆಳ್ಳೇಡಿ, ಸೋಸಲೆ ತೊಳ್ಳೆ ಮೀನುಗಳಿದ್ದು ಒಂದು ತೊಳ್ಳೆಮೀನಿಗೆ ಇನ್ನೂ ಜೀವವಿದ್ದುದರಿಂದ ಚಿಮ್ಮಿ ಹಾರಿ ಒಲೆಯ ಬೂದಿಗೇ ಬಿದ್ದಿತು. ಪೀಂಚಲು ಅದನ್ನೆತ್ತಿ ನೆಲಕ್ಕೆ ಬಡಿದು ನಿಶ್ಚಲವಾದ ಅದನ್ನು ಮತ್ತೆ ಎತ್ತಿಕೊಟ್ಟೇಯ ಎಲೆಗೇ ಹಾಕಿದಳು.

ಏಡಿ ಮೀನುಗಳನ್ನು ಕೆಂಡದಲ್ಲಿ ಸುಟ್ಟು ಚಟ್ನಿಗೆ ನುರಿದಿಟ್ಟು, ಸಣ್ಣ ಗಡಿಗೆಯಲ್ಲಿಟ್ಟಿದ್ದ ಒಣ ಮೆಣಸಿನ ಕಾಯಿ ನೀರುಳ್ಳಿ ಕೊಬ್ಬರಿಯ ಚೂರು ಇತ್ಯಾದಿಗಳು.

ಸಂಜೆ ಸುಮಾರು ನಾಲ್ಕು ನಾಲ್ಕೂವರೆಯ ಗಂಟೆಯಾಗಿತ್ತು. ಆದರೂ ಮೋಡಗತ್ತಲೆ ಕವಿದು ಆರೂವರೆಯೋ ಏಳೋ ಎಂಬ ಭ್ರಾಂತಿಗೆ ಎಡೆಗೊಡುತ್ತಿತ್ತು. ಮಳೆ ಸುರಿಯುತ್ತಿತ್ತು. ಸೋಗೆ ಹೊದಿಸಿದ್ದ ಮನೆಯ ಅನೇಕ ಭಾಗಗಳಲ್ಲಿ ನೀರು ಸೋರಿ ಸೋರಿ ಅಲ್ಲಲ್ಲಿ ತಂಬಾಳೆ ಬೋಗುಣಿ ಮಡಿಕೆಗಳನ್ನಿಟ್ಟು ನೀರು ಹಿಡಿದು ಅದು ಹರಿಯದಂತೆ ಮಾಡಬೇಕಾಗಿ ಬಂದಿತು.

ಸಿಂಬಾವಿ ಕಡೆ ಏನೂ ಮಳೆ ಅಂದ್ರೆ ಮಳೆಯಂತೆ ಇಲ್ಲಿ ಮಳೆಗೆ ಹತ್ತರಷ್ಟೊ ನೂರರಷ್ಟೊ ಬರ್ತಾ ಇದೆಯಂತೆ. ಹಳ್ಳಾ ಎಲ್ಲಾ ತುಂಬಿ ಹರೀತವಂತೆ ಇವತ್ತೇನು ದಿಬ್ಬಣ ಧಾರೆ ಮುಹೂರ್ತಕ್ಕೆ ಬರಾತರಾ ಇಲ್ಲ! ಅಂತಾ ಇದ್ದ ಜಗಲೀಲಿ ನೆಂಟರ ಹತ್ರ.

ಬೈಗಾಯ್ತು ಕಪ್ಪಾಯ್ತು, ಕತ್ತಲಾಯ್ತು, ರಾತ್ರಿಯೂ ಸುದೂರ ಸಾಗಿತ್ತು. ಹಣತೆಗಳು ಚಿಮಣಿಗಳು ದೊಂದಿಗಳು, ಬೆಟ್ಟಳ್ಳಿಯಿಂದ ತಂದಿದ್ದು, ನವನಾಗರೀಕತೆಯ ಲಾಂಛನಗ್ಗಳಾಗಿದ್ದ, ಲಾಟೀನು ಲ್ಯಾಂಪುಗಳು ಅಲ್ಲಲ್ಲಿ ಅವು ಅವುಗಳಿಗೆ ಉಚಿತವಾಗಿ ಉರಿಯದೊಡಗಿದ್ದವು. ಕಲ್ಕತ್ತದ ವರಾಹನಗರದಲ್ಲಿದ್ದ ಹಾಳುಮನೆಯ ಮಠದ ಇಬ್ಬರು ತರುಣ ಸಂನ್ಯಾಸಿಗಳು ಆವೊತ್ತಿನ ರಾತ್ರಿಯನ್ನು ದಕ್ಷಿಣೇಶ್ವರದಲ್ಲಿ ಧ್ಯಾನ ಜಪತಪಗಳಲ್ಲಿ ಕಳೆಯಲೆಂದು ಭವತಾರಿಣಿಯ ಸನ್ನಿಧಿಗೆ ಬಂದಿದ್ದರು. ಉಜ್ವಲ ದೀಪಸ್ತೋಮದ ಕಾಂತಿಯಲ್ಲಿ ಪುಷ್ಪಮಾಲಾ ಗಂಧಾದಿಗಳಿಂದ ಅಲಂಕೃತಳಾಗಿದ್ದ ದೇವಿಯ ಪೂಜೆ ಪೂರೈಸಿದ ತರುವಾಯ ಎದುರಿಗಿದ್ದ ನಾಟ್ಯಮಂಟಪದಲ್ಲಿ ಕುಳಿತಿದ್ದರು. ಸಾಧಾರಣವಾಗಿ ಬರುತ್ತಿದ್ದ ಮಳೆ ಇದ್ದಕ್ಕಿದ್ದ ಹಾಗೆ ಜೋರಾಗಿ ಸುರಿಯತೊಡಗಿತ್ತು. ದೀಪಗಳೂ ಕ್ಷಯಿಸುತ್ತಾ ಬಂದು ಕೊನೆಗೆ ಒಂದೋ ಎರಡೋ ಮಾತ್ರ ಉರಿಯುತ್ತಿದ್ದವು. ಭವತಾರಿಣಿಯ ಸುತ್ತಮುತ್ತಲೂ ಮಂದಕಾಂತಿ ಹಬ್ಬಿ ಏನೋ ಒಂದು ವಿಧವಾದ ಯೌಗಿಕಸ್ವಾದ್ನಿಕತೆ ಆವರಿಸಿದಂತಿತ್ತು.

ತರುಣ ಸಂನ್ಯಾಸಿಗಳಿಬ್ಬರೂ ಕುಳಿತಿದ್ದ ನಾಟ್ಯಮಂಟಪದಲ್ಲಿ ಕತ್ತಲೆ ಕವಿದಿತ್ತು. ರಾತ್ರಿ ಮುಂದುವರೆದು ಬಹಳ ಹೊತ್ತಾದರೂ ಗಾಳಿಯೊಡನೆ ಕೂಡಿದ್ದ ಬಿರುಮಳೆ ಬಿಡದೆ ಮುಸಲಧಾರೆಯಾಗಿ ಹೊಯ್ಯುತ್ತಲೇ ಇದ್ದುದರಿಂದ, ಕೆಲವೆ ವರ್ಷಗಳ ಹಿಂದೆ ಕಾಶೀಪುರದ ತೋಟದ ಮನೆಯಲ್ಲಿ ಮಹಾಸಮಾಧಿಯನ್ನೈದಿದ ತಮ್ಮ ಗುರುಮಹಾರಾಜರು ವಾಸಿಸುತ್ತಿದ್ದು ತಮ್ಮ ಜೀವಿತದ ಮುಖ್ಯ ಭಾಗಗಳನ್ನೆಲ್ಲಾ ಯಾವ ದಿವ್ಯ ಕೊಠಡಿಯಲ್ಲಿ ಕಳೆದಿದ್ದರೋ ಆ ಪುಣ್ಯಸ್ಮರಣೆಯ ಸ್ಥಳಕ್ಕೆ ತಾವು ಪೂರ್ವಭಾವಿಯಾಗಿ ಸಂಕಲ್ಪಿಸಿದ್ದಂತೆ, ಹೋಗಿ ಧ್ಯಾನಕ್ಕೆ ಕುಳಿತುಕೊಳ್ಳುವುದನ್ನು ಅನಿವಾರ್ಯತೆಯಿಂದ ಕಿಬಿಟ್ಟು, ಸದ್ಯಕ್ಕೆ ನಾಟ್ಯ ಮಂಟಪದಲ್ಲಿಯೇ? ಧ್ಯಾನ ಮಾಡಲು ತೊಡಗಿದ್ದರು.

ಹಿಂಬದಿಗೆ ಗಿಡಮರ ಹಳು ಬೆಳೆದು ಕಿಕ್ಕಿರಿದು ಅದನ್ನು ಸಂಪೂರ್ಣವಾಗಿ ಅಡಗಿಸಿಟ್ಟಂತೆ ಮರೆ ಮಾಡಿದ್ದರೂ ಮುಂಗಡೆಗೆ ಹಬ್ಬಿದ ಹಾಸುಬಂಡೆಯ ದೆಸೆಯಿಂದ ಅಲ್ಲಲ್ಲಿ ದೂರ ದೂರ ಮುರುಟಿದಂತೆ ತಲೆಯೆತ್ತಿದ್ದ ಕುಳ್ಳುಮಟ್ಟುಗಳಿದ್ದರೂ ಬಯಲು ಬಯಲಾಗಿ ತೋರುತ್ತಿದ್ದ ಹುಲಿಕಲ್ಲು ನೆತ್ತಿಯ ಕಲ್ಲುಮಂಟಪದ ಒಂದು ಮೂಲೆಯಲ್ಲಿ ದೊಡ್ಡ ದೊಡ್ಡ ಕುಂಟೆಗಳನ್ನೆ ಅಡಕಿ ಹೊತ್ತಿಸಿದ್ದ ಬೆಂಕಿ ಉರಿಯುತ್ತಿತ್ತು. ಆ ಬೆಂಕಿ ನಿನ್ನೆ ಮೊನ್ನೆಯದಾಗಿರಲಿಲ್ಲ: ಅನೇಕ ದಿನಗಳಿಂದ ಇಪ್ಪತ್ತನಾಲ್ಕು ಗಂಟೆಯೂ ಆರದೆ ಸಜಿವವಾಗಿದ್ದ, ನಂದಾ ಬೆಂಕಿಯಾಗಿತ್ತು. ಹೊರಗೆ ಒಂದೇ ಸಮನೆ ಸುರಿಯುತ್ತಿದ್ದ ಮಳೆಯಿಂದಲೂ ಸುಯ್ಯೆಂದು ಭೋರಿಡುತ್ತಾ ಬೀಸುತ್ತಿದ್ದ ಗಾಳಿಯಿಂದಲೂ ಎಷ್ಟೋ ಶೈತ್ಯವಿದ್ದರೂ ಮಂಟಪದೊಳಭಾಗವು ಆ ಬೆಂಕಿಯ ಪ್ರಭಾವದಿಂದ ಸದಾ ಬೆಚ್ಚಗಿದ್ದು ಮನೆಯಂತೆ ಹಿತಕರವಾಗಿತ್ತು.

ಆ ಬೆಂಕಿಯ ಪಕ್ಕದಲ್ಲಿ ಅಡುಗೆ ಮಾಡಲು ಒಲೆಯನ್ನಾಗಿ ಬಹಳಕಾಲದಿಂದ ಉಪಯೋಗಿಸಿದ್ದ ಮೂರು ಕರಿಹಿಡಿದ ಕಲ್ಲು ಗುಂಡುಗಳು, ಆ ಬಳಿಯ ಕೆಲವು ಮಡಕೆ ಕುಡಿಕೆಯ ಸಾಮಾನುಗಳೂ ಇದ್ದವು. ಮಂಟಪದ ಎದುರಿನ ಹಾಸು ಬಂಡೆಯೊಂದರ ಮೇಲೆ ತಟ್ಟೆಗಳನ್ನು ಮಾಡಲು ಸಲಕು

ತೆಗೆದಿದ್ದ ವಾಟೇಯ ಮತ್ತು ಬಿದಿರಿನ ತಿಳ್ಳದ ಬಿಳಿಯ ರಾಶಿ, ಅಲ್ಲಿ ನಡೆದಿದ್ದ ಕಾಮಗಾರಿಯ ಅತ್ಯಂತ ಅರ್ವಾಚೀನತೆಯನ್ನು ಸೂಚಿಸಿತ್ತುತ್ತು. ಮಂಟಪದ ಒಂದು ಭಾಗ, ಬಿದಿರು ಗೂಟಗಳನ್ನು ನೆಟ್ಟುವಾಟೆಯ ತಟ್ಟೆಗಳನ್ನು ಮರೆ ಕಟ್ಟಿದುದರಿಂದ ನಿವಾಸ ಯೋಗ್ಯವಾದ ಕೋಣೆಯಾಗಿ ಪರಿವರ್ತಿತವಾಗಿತ್ತು.

ಬೆಂಕಿಯ ಪಕ್ಕದಲ್ಲಿ ತರುಣಿಯೊಬ್ಬಳು ಕುಳಿತು ಯಾವ ಉದ್ದೇಶವೂ ಇಲ್ಲದ ಯಾಂತ್ರಿಕ ಕರ್ಮದಲ್ಲಿ ತೊಡಗಿದ್ದಂತೆ, ಆ ಬೆಂಕಿಗೆ ನಿಧಾನವಾಗಿ ಎರಡೋ ಮೂರೋ ನಿಮಿಷಗಳಿಗೊಮ್ಮೆ ಕಸವನ್ನೋ, ಕಡ್ಡಿಯನ್ನೋ, ಹಲಸಿನ ಬೀಜವನ್ನೊ ಅಲ್ಲೆಲ್ಲಾ ಗಾಳಿಯಲ್ಲಿ ಚೆದುರಿದಂತಿದ್ದ ಕಾಡುಕೋಳಿಯ ಪುಕ್ಕವನ್ನೂ ಎಸೆಯುತ್ತಿದ್ದಳು. ಒಮ್ಮೊಮ್ಮೆ ಆ ಯಾಂತ್ರಿಕ ಕರ್ಮವೂ ನಿಂತು ಅವಳು ಕುಗುರುವಂತೆಯೂ ತೋರುತ್ತಿತ್ತು. ಅವಳ ಎದುರಿಗೆ ತುಸುದೂರದಲ್ಲಿ ಬಹುದಿನಗಳಿಂದ ಹಾಕಿ ಹಾಕಿ ರಾಶಿಯಾಗಿದ್ದ ಬೂದಿಗುಡ್ಡೆಯ ಮೇಲೆ ಪಕ್ಕದಲ್ಲಿ ಹೊಡೆದಿದ್ದ ಬಿದಿರುಗೂಟಕ್ಕೆ ಬಳ್ಳಿಯ ನುಲಿಯಿಂದ ಕಟ್ಟುಗೊಂದು ಟೊಣಪ ಗಾತ್ರದ ಕರಿಯ ನಾಯಿಯೊಂದು ಮುದುರು ಸುತ್ತಿಕೊಂಡು ಮಲಗಿ ನಿದ್ರಿಸುವಂತಿತ್ತು. ಅದ್ರ ನಿದ್ದೆಯೂ ಅವಶ್ಯ ನಿದ್ರೆಯಾಗಿರಲಿಲ್ಲ. ಬೇಜಾರಿನ ನಿದ್ದೆಯಾಗಿತ್ತು.

ಆಗತಾನೆ ಬೈಗಾಗುತ್ತಿತ್ತು, ಆದರೂ ದಟ್ಟಯಿಸಿದ ಮೋಡಗಪ್ಪು ಕತ್ತಲಿಳಿದಷ್ಟು ಕಪ್ಪಾಗಿ, ಹಗಲು ಬೆಳಕಿನಲ್ಲಿ ಸಪ್ಪಗೆಂಪಾಗಿದ್ದ 'ನಂದಾ ಬೆಂಕಿ' ಆಗಲೆ ಕೆಂಗೆಂಪಾಗಿ ಹೊಳೆಯತೊಡಗಿತ್ತು. ಎದುರಿಗೆ ದಿಗಂತ ವಿಶ್ರಾಂತವಾಗಿ ತರಂಗ ತರಂಗವಾಗಿ ಹಬ್ಬಿದ್ದ ಪರ್ವತಾರಣ್ಯ ಶ್ರೇಣಿ ವರ್ಷಧಾರಾ ಸಾಂದ್ರತೆಯಿಂದಲೂ ಮೆಲ್ಲಗೆ ಇಳಿದು ಕವಿಯುತ್ತಿದ್ದ ಕತ್ತಲೆಯಿಂದಲೂ ತನ್ನ ಸ್ಪಷ್ಟತೆಯನ್ನೆಲ್ಲಾ ಕಳೆದುಕೊಂಡು ಹಸುರು ಹಸುರು ಛಾಯೆಯ ಮಹಾಮುದ್ದೆಗಳಾಗುತ್ತಿದ್ದವು. ಕಣಿವೆಯ ದೂರದಿಂದ ಈಗೊಮ್ಮೆ ಆಗೊಮ್ಮೆ ಮಳೆ ಇಳಿಗೊಂದು ಗಾಳಿಯ ಸದ್ದು ಕಡಿಮೆಯಾದಾಗ, ವಾಲಗದ ಸದ್ದು ಕೇಳಿಸಿ, ತಿಮ್ಮಿಗೆ ಹೂವಳ್ಳಿ ಮದುವೆಯ ನೆನಪು ಕೊಟ್ಟು, ಅಲ್ಲಿ ಇಂದು ನಡೆಯಲಿರುವ ಮಹಾಘಟನೆಯಲ್ಲಿ ತಾನೂ ಮತ್ತು ತನ್ನ ಗಂಡ ಗುತ್ತಿಯೂ ವಹಿಸುತ್ತಿದ್ದ ಪಾತ್ರದ ಅರಿವಾಗುತ್ತಿತ್ತು.

ದಟ್ಟಗಾಡಿನ ಮಲೆಗಳ ನಡುವೆ ಬೆಳೆದ ಮಲೆನಾಡಿನ ಮಲೆಗಳ ಮಗಳಾಗಿದ್ದರೂ ಚಿನ್ನಮ್ಮ ಎಂದೂ ಅಂತಹ ಮೇಘಚುಮ್ಬಿ ಘೋರಾರಣ್ಯದ ಶಿಖರ ಪ್ರದೇಶದಲ್ಲಿ ಅದರಲ್ಲಿಯೂ ಅಂತಹ ಗಾಳಿ ಮಳೆಗಳ ಬಿರುಸಿನ ಸನ್ನಿವೇಶದಲ್ಲಿ ಇರುಳನ್ನು ಕಳೆದವಳಾಗಿರಲಿಲ್ಲ. ಅಜ್ಜಿಯ ಅಕ್ಕರೆಯ ಬೆಚ್ಚನೆಯ ಮಗ್ಗುಲಲ್ಲಿಯೇ ಅವಳ ಬದುಕು ಬೆಳೆದಿತ್ತು. ಬಾಳು ಸಾಗಿತ್ತು. ತನಗೆ ವಿಷಮಯವಾಗಿದ್ದ ವಿಷಯ ವಿಹಾಹದಿಂದ ಪಾರಾಗಿ, ಅಮೃತಮಯವಾಗಿದ್ದು, ತಾನೊಲಿದವನನ್ನೆ ತನ್ನ ಬದುಕಿನ ಸಂಗಾತಿಯನ್ನಾಗಿ ಪಡೆಯುವ ಹೃದಯದ ಹಂಬಲವೊಂದೇ ಅವಳನ್ನು ಆ ರಾತ್ರಿ ಅಂತಹ ಅಪೂರ್ವ ಸಾಹಸಕ್ಕೆ ಪ್ರಚೋದಿಸಿತು. ಅವಳ ಚೇತನದ ಸಹಜ ಸ್ವರೂಪವಾಗಿದ್ದ ಕುಸುಮಕೋಮಲತೆ ಕೆಲವು ಮುಹೂರ್ತ ಕಾಲದ ಮಟ್ಟಿಗೆ ವಜ್ರಕಠೋರವಾಗಿ ಪರಿವರ್ತಿತವಾಗಿತ್ತು.

ಚಿನ್ನಮ್ಮ ಮಲಗಿದ್ದ ಜಾಗಕ್ಕೆ ಸಮೀಪದಲ್ಲಿದ್ದ ಕಲ್ಲುಗೋಡೆಯ ಬಿರುಕಿನಲ್ಲಿ ಕೀಟವೊಂದು ಟಿಪಿಟ್ಟಿ ಪಿಟ್ಟಿ ಪಿಟ್ಟಿ ಎಂದು ಬಿಡದೆ ಕೂಗಿಕೊಳ್ಳುತ್ತಿತ್ತು. ಅದು ಮೊದಮೊದಲು ಕನಸಿಗೆ ಉಂಟು ಮಾಡಿದರೂ ಬರುಬರುತ್ತಾ ಒಂದು ತೆರನಾದ ಜೋಗುಳಮಲಿಯಂತಾಗಿ ಆಳುತ್ತಳುತ್ತಲೆ, ಹಿಂದೆಂದೂ ದಣಿಯದಷ್ಟು ದಣಿದಿದ್ದ ಕುಮಾರಿ ನಿದ್ದೆ ಹೋದಳು.

ಆಗುಂಬೆಯಿಂದ ಮೇಗರವಳ್ಳಿಯ ಮುಖಾಂತರ ತೀರ್ಥಹಳ್ಳಿಗೆ ಬಂದು ದೋಣಿ ಗುಂಡಿಯಲ್ಲಿ ಹೊಳೆದಾಟಿ ಮುತ್ತಳ್ಳಿ, ಸೀತೆಮನೆ ಕಾನೂರುಗಳಿಗೆ ಹೋಗುವ ಗಟ್ಟದ ತಗ್ಗಿನವರ ಗುಂಪಿನಲ್ಲಿ ಸೇರಿ ಗುತ್ತಿ ತಿಮ್ಮಿಯೊಡನೆ ತುಂಗಾನದಿಯ ಎಡ ದಡದಲ್ಲಿರುವ ದೈತ್ಯಾಕಾರದ ಅರಳಿಮರದ ಕಟ್ಟೆಗೆ ತುಸು ದೂರದಲ್ಲಿ ಹೊಳೆ ದಾಟಲು ದೋಣಿಯಲ್ಲಿ ತನಗೆ ಲಭಿಸಿರುವ ಪದವಿಗಾಗಿ ಕಾಯುತ್ತಾ ಕುಳಿತಿದ್ದನು. ನೆರೆ ಏರಿ ಭೋರ್ಗರೆದು ವಿಸ್ತಾರವಾಗಿ ವೇಗವಾಗಿ ಹರಿಯುತ್ತಿದ್ದ ಕೆಮ್ಮಣ್ಣು ಬಣ್ಣದ ಮಹಾಪ್ರವಾಹವನ್ನೇ ನೋಡುತ್ತಿದೆಯೋ ಎಂಬಂತೆ ಕಾಣುತ್ತಿತ್ತು.

ಗಟ್ಟದ ತಗ್ಗಿನ ಆಳುಗಳು ಗಂಡಸರು ಹೆಂಗಸರು ಮಕ್ಕಳು ತಮ್ಮ ತಮ್ಮ ಸಾಮಾನು ಸರಕುಗಳೊಡನೆ ಅಲ್ಲಲ್ಲಿ ತಮ್ಮ ತಮ್ಮ ಸರದಿಗಾಗಿ ದೋಣಿಗೆ ಕಾಯುತ್ತಾ, ಕುಳಿತೋ, ನಿಂತೋ, ಬೇಸರಪರಿಹಾರಕ್ಕಾಗಿ ಅಲ್ಲಿಂದಿಲ್ಲಿಗೆ ಇಲ್ಲಿಂದಿಲ್ಲಿಗೆ ಸುಮ್ಮನೆ ಓಡಾಡುತ್ತಲೋ ಇದ್ದರು.

ಕೆಂಪು ಎಲೆವಸ್ತ್ರದವನೊಡನೆ ಮಾತಾಡುತ್ತಿದ್ದ ಹಾಳೆ ಟೋಪಿಯ ಗಟ್ಟದಾಳು ಸಮ್ಮತಿಸಿದನು. ಹೌದಂಬ್ರುಕಾಣಿ, ನಮ್ಮ ಕಾನೂರು ಸೇರೆಗಾರ ಒಂದು ತಿಂಗಳು ಹಿಂದೆಯೇ ಆಳುಗಳನ್ನೆಲ್ಲಾ ಕರೆದುಕೊಂಡು ಹೋದ್ರಂಬಲ್ಲಾ, ಆ ಕಲ್ಲು ಸಾರದ ಮೇಲೆಯೆ ಮುತ್ತೂರು, ಸೀಮೆಯೂ ಕೂಡ 'ದೇಶಾಂತ್ರ'ವಾಗಿದ್ದ ಗುತ್ತಿಯ ಬದುಕೆಲ್ಲ ಇದುವರೆಗೆ ಸಿಂಬಾವಿ ಮೇಗರವಳ್ಳಿ ಹಳೆಮನೆ, ಹೂವಳ್ಳಿ, ಕೋಣೂರು, ಬೆಟ್ಟಳ್ಳಿಗಳಿಗೇ ಸೀಮಿತವಾಗಿದ್ದುದರಿಂದ ಅವನೆಂದು ಬೇಸಿಗೆಯಲ್ಲಿ ತೀರ್ಥಹಳ್ಳಿಯ ರಾಮತೀರ್ಥದ ದೃಶ್ಯವನ್ನು ನೋಡಿರಲಿಲ್ಲ. ಕಡೆಗೆ ಅವನ ಸಂಕುಚಿತ ಜೀವನದ ಹದಿನೆಂಟೋ ಇಪ್ಪತ್ತೋ ವರ್ಷಗಳಲ್ಲಿ ಒಮ್ಮೆಯಾದರೂ ಅವನು 'ಎಳ್ಳಾಮಾಸೆ'ಯ ಜಾತ್ರೆಗಾದರೂ ತೀರ್ಥಹಳ್ಳಿಯಂತಹ ದೂರದೇಶಕ್ಕೆ ಬಂಡವನಲ್ಲ ಹೊಲೆಯನಾಗಿದ್ದ ಅವನಿಗೆ ಈ ಜನ್ಮದಲ್ಲಿ ಪರಶುರಾಮತೀರ್ಥ ಸ್ನಾನವಂತೂ ಸರ್ವದಾ ಅಲಭ್ಯವಾದುದರಿಂದ ಅಂತಹ ಅಗಮ್ಯ ಸ್ಥಾನಕ್ಕೆ ಏರಲು ಅವನೆಂದೂ ಆಶಿಸಿರಲಿಲ್ಲ.

ದೋಣಿ ನದಿಯ ಮಧ್ಯಪ್ರವಾಹದ ಕಡೆಗೆ ಹೋದಷ್ಟೋ, ಅರಳಿಕಟ್ಟೆ ರಾಮೇಶ್ವರ ದೇವಸ್ಥಾನದ ಶಿಖರಕ್ಕೆ ಮೊದಲಾದ ತಿರ್ಥಹಳ್ಳಿಯ ಕಡೆಯ ದಡದ ವಸ್ತುಗಳು ದೂರವಾಗಿ ಸಣ್ಣಗಾದಷ್ಟು ದೋಣಿಯಲ್ಲಿದ್ದ ಪ್ರಯಾಣಿಕರಿಗೆ ಪುಕ್ಕಲು ಹೆಚ್ಚತೊಡಗಿತ್ತು. ಅಷ್ಟು ಭೀಷಣ ಕ್ಷುಬ್ಧವಾಗಿತ್ತು. ತುಂಗಾ ಪ್ರವಾಹ, ಮಳೆಯೂ ಇದ್ದಕ್ಕಿದ್ದಂತೆ ಮುಸಲಧಾರೆಯಾಗಿ ಸುರಿಯತೊಡಗಿತ್ತು. ಗಾಳಿ ಭಯಂಕರ

ವೇಗದಿಂದ ಬೀಸಿತ್ತು. ಕೆಮ್ಮಣ್ಣು ಬಣ್ಣದ ಅಲೆಗಳು ದೋಣಿಯ ಪಕ್ಕಕ್ಕೆ ರೌದ್ರವಾಗಿ ಅಪ್ಪಳಿಸಿದ್ದವು. ಮರಮುಟ್ಟು ಸೊಪ್ಪುಸೆದೆ ಬಿದಿರಹಿಂಡಿಲು ತೆಂಗಿನ ಹೆಡಲು ಅಡಕೆಸೋಗೆ ಮೊದಲಾದ್ದು ನೊರೆಗೆರೆಯುತ್ತಿದ್ದ ನೀರಿನಲ್ಲಿ ಭಯಂಕರ ವೇಗದಿಂದ ಓಡುತ್ತಿರುವ ನೋಟ ಹೆದರಿಕೆ ಹುಟ್ಟಿಸಿತು. ಅದರಲ್ಲಿಯೂ ಹಾಗೆ ಓಡುತ್ತಿದ್ದ ದೊಡ್ಡ ದಿಮ್ಮಿಯ ಮರಗಳೂ ಕೂಡ ಹೊಳೆಯ ನಡುವೆ ಸುಂಟರ ಸುಳಿಗೆ ಸಿಕ್ಕಿ ಗಿರ್ರನೆ ತಿರುಗಿ ತಿರುಗಿ ಕಂತಿ ಹೋಗುತ್ತಿದ್ದ ದೃಶ್ಯವಂತೂ ಭಯಾನಕವಾಗಿತ್ತು. ಆ ಆವರ್ತಗರ್ತಕ್ಕೆ ದೋಣಿ ಸಿಕ್ಕರೆ ಏನು ಗತಿ ಎಂದು ಕೆಲವರು ದೇವರನ್ನು ನೆನೆಯುತ್ತಿದ್ದರು. ಹೇಗಾದರೂ ದಡ ಸೇರಿಸಪ್ಪಾ ಎಂದು ಹೆಚ್ಚುತ್ತಿದ್ದ ಪುಕ್ಕಲಿಗೆ ದೋಣಿಯು ಪ್ರಯಾಣಿಕರ ಪ್ರತಿಕ್ರಿಯೆ ವಿವಿಧವಾಗಿತ್ತು. ಕೆಲವರಲ್ಲಿ ಮಾತು ನಿಂತು ಹೋಯಿತು. ಕೆಲವರು ಹೃದಯದ ಹೆದರಿಕೆಯನ್ನು ಮುಚ್ಚಿಕೊಳ್ಳುವುದಕ್ಕೂ ಮರೆಯುವುದಕ್ಕೂ ಸುಮ್ಮನೆ ಅದೂ ಇದೂ ಗಳಪತೊಡಗಿದ್ದರು. ಗುತ್ತಿ ಸರ್ವೇಂದ್ರಿಯ ಪ್ರಾಣಗಳೂ ಏಕದೃಷ್ಟಿಯಾಗಿ ತನ್ನ ನಾಯಿಯ ಕಡೆಗೇ ಬಿಟ್ಟ ಕಣ್ಣು ಮುಚ್ಚದೇ ನೋಡುತ್ತಿದ್ದನು. ಹುಲಿಯ ಮತ್ತೆ ದೋಣಿಯ ಕಡೆ ಬರುತ್ತಿದ್ದಂತೆ ತೋರಿ, ಗುತ್ತಿಯ ಹೃದಯ ಹಿಗ್ಗಿತು.

ಆದರೆ ನಡೆದಿದ್ದ ಸಂಗತಿ ಬೇರೆಯಾಗಿತ್ತು, ದೊಡ್ಡದೊಂದು ಹೆಮ್ಮರ ನಡು ಹೊಳೆಯ ಪ್ರವಾಹದಲ್ಲಿ ಮೇಲುಗಡೆಯಿಂದ ತೇಲಿಬರುತ್ತಿದ್ದುದನ್ನು ಕಂಡು ಅಂಬಿಗರು ಅದಕ್ಕೆ ಅಡ್ಡಲಾಗುವ ಬದಲು ಆ ಮರ ಕೊಚ್ಚಿ ಕೆಳಗೆ ಹೋದ ಮೇಲೆಯೇ ಅತ್ತ ದೋಣಿ ಬಿಡುವುದು ಕ್ಷೇಮಕರ ಎಂದು ಸ್ವಲ್ಪ ಕ್ಷಣ ಹುಟ್ಟು ಹಾಕುವುದನ್ನು ನಿಲ್ಲಿಸಿದ್ದರಿಂದ ದೋಣಿ ಕೆಳಗೆ ಕೊಚ್ಚಿ ಹೋಗಿ ನಾಯಿಯನ್ನು ಸಮೀಪಿಸುತ್ತಿತ್ತು. ಗುತ್ತಿ ನೋಡುತ್ತಿದ್ದಂತೆಯೇ ಬಾ, ಹುಲಿಯ ಎಂದು ಗಂಟಲು ಸೀಳಿ ಹೋಗುವಂತೆ ಕರೆಯುತ್ತಿದ್ದನು.

ನಾಯಿ ದೋಣಿಗೆ ಕ್ಷೀಣವಾಗುತ್ತಿದ್ದರೂ, ತನ್ನ ಉಳಿದ ಅಲ್ಪಸ್ವಲ್ಪ ಬಲವನ್ನೆಲ್ಲಾ ಉಪಯೋಗಿಸಿ ಅದು ಪ್ರಾಣಭಯದಿಂದ ಮಾತ್ರ ಹೋರಾಡುತ್ತಿದ್ದಂತೆ ತೋರಿತು. ಅಂಬಿಗರು, ಆಚೆಯ ದಡಕ್ಕೆ ಒಯ್ಯುವ ಉದ್ದೇಶದಿಂದ ದಕ್ಷಿಣ ದಿಕ್ಕಿಗೆ ತಿರುಗಿಸಿ ಹೊನಲಿನ ರಭಸಕ್ಕೆ ಸಮಗೈಯಾಗಲೆಂದು ಜೋರಾಗಿ ಹುಟ್ಟು ಹಾಕಲು ಶುರು ಮಾಡಿದರು.

ಮಳೆಗಾಲ ಹಿಡಿದಿದ್ದುದರಿಂದ ಬೇಸಾಯಗಾರರ ಗಮನವೆಲ್ಲಾ ಅಗೋಡಿಯ ಮೇಲೆಯೂ ಉಳುವುದು, ಬಿತ್ತುವುದು, ಅಂಚು ಕಡಿಯುವುದು, ಗೊಬ್ಬರ ಹರಗುವುದು, ಬೇಲಿ ಕಟ್ಟುವುದು, ಒಟ್ಟು ಹಾಕುವುದು ಇತ್ಯಾದಿ ರೈತ ಕರ್ತವ್ಯಗಳ ಮೇಲೆಯೂ ಕುಣಿ ತಯಾರಿಸುವುದು, ಕೂಣಿ ಹಾಕುವುದು, ಹಳ್ಳಕ್ಕೆ ಯಾತೆ ಕಟ್ಟುವುದು, ಹತ್ತು ಮೀನು ಕದಿಯುವುದು ಮೊದಲಾದ ಮೀನು ಬೇಟೆಯ ಮೃಗಯಾ ವ್ಯಸನದಲ್ಲಿಯೂ ಆಸಕ್ತವಾಗಿತ್ತು. ಮೈ ಬೆವರಿ ದುಡಿವ ಗೆಯ್ಮೆಯ ನಡುನಡುವೆ ತುಸು ವಿರಾಮ ದೊರೆತಾಗ ಮಾತ್ರ ಊಟಕ್ಕೆ ಉಪ್ಪಿನಕಾಯಿ ಬಾಳೆಲೆಯ ಮೂಲೆಯಲ್ಲಿ ಇರುವ ಹಾಗೆ ಪರನಿಂದೆಗಳು ಇರುತ್ತಿದ್ದವಷ್ಟೆ ಕಿತಾಪತಿಯ ವ್ಯಾಪ್ತಿಗೆ ಜಿಹ್ವಾಚಪಲತೆಯ ವಲಯವನ್ನು ದಾಟಿ ಕರ್ಮರಂಗಕ್ಕಿಳಿಯುವಷ್ಟು ಪುರುಸೊತ್ತು ಇರುತ್ತಿರಲಿಲ್ಲ!

ಎಂಟು ಹತ್ತು ದಿನಗಳಿಂದಲೂ ಸೂರ್ಯನ ಮುಖವನ್ನೆ ಯಾರು ಕಂಡಿರಲಿಲ್ಲ. ಆದರೂ ಹೊತ್ತು ಇನ್ನು ಮುಳುಗಿರಲಿಲ್ಲ ಎಂಬುದು ಕವಿದಿದ್ದ ಮೋಡದ ಮಬ್ಬಿನ ಹೊಳಪಿನಿಂದಲೆ ಗೊತ್ತಾಗುವಂತಿತ್ತು. ಏಕೆಂದರೆ ಆ ಹೊಳಪು ಹೂವಳ್ಳಿಯ ಗದ್ದೆಕೋಗಿನಲ್ಲಿ ಇನ್ನೇನು ಪೂರೈಸುತ್ತಾ ಬಂದಿದ್ದ ಸೆಟ್ಟಿಯ ಸಸಿಗಳ ಮೇಲೆ ಬಿದ್ದು ಕಾಡು ಅಂಚು ಕಟ್ಟಿದ್ದ ಗದ್ದೆಯ ಖೋಗನ್ನೆಲ್ಲಾ ವ್ಯಾಪಿಸಿತು. ಅಗೆ ಸಸಿಯ ಎಳೆ ಹಸಿರು ನಳನಳಿಸಿ ಸುಮನೋಹರವಾಗಿ ಕಂಗೊಳಿಸುತ್ತಿತ್ತು. ಸಸಿ ನೆಟ್ಟಿಯಾಗಿದ್ದ ಗದ್ದೆಗಳಲ್ಲಿ ಮೂರೋ, ನಾಲ್ಕೋ ಕಣೆಯ ಒಂದೊಂದು ಬುಡದ ಸಸಿಗಳ ಲಕ್ಷ ಲಕ್ಷ ಬುಡಗಳನ್ನೆಲ್ಲಾ ಮುಚ್ಚಿ ಹರಡಿ ನಿಂತಿದ್ದ ನೀರು ಸಸಿಗಳನ್ನು ಮೇಘಮಯವಾಗಿದ್ದ ಆಕಾಶವನ್ನು ಪ್ರತಿಬಿಂಬಿಸಿ, ಗಾಳಿ ಬೀಸಿದಂತೆಲ್ಲಾ ನವಿರು ನವಿರೆದ್ದು ವಿಕಂಪಿಸುತ್ತಿತ್ತು. ಹಗಲೆಲ್ಲಾ ಏಡಿ ಮೀನುಗಳನ್ನು ತಿನ್ನಲು ಅಲ್ಲಲ್ಲಿ ಗುಂಪು ಕುಳ್ಳಿರುತ್ತಿದ್ದ ಬೆಳ್ಳಕ್ಕಿ ಮತ್ತು ನೆರಬೆಳ್ಳಕ್ಕಿಗಳಲ್ಲಿ ಕತ್ತಲಾಗುವ ಮುನ್ನ ಗೊತ್ತದೂರಲು ಹಾರಿ ಹೋಗಿ ಉಳಿದಿದ್ದ ಕೆಲವು ಮಾತ್ರವೇ ಬೇಟೆಯಲ್ಲಿ ತೊಡಗಿದ್ದವು.

ಹೂವಳ್ಳಿ ಮನೆಗೆ ದೂರವಾಗಿದ್ದ ಕೊಟ್ಟ ಕೊನೆಯ ಮೂಲೆಯ ಕಡೆಯಿಂದ ಸಸಿನೆಡಲು ಮೊದಲು ಮಾಡಿ ಕೆಲವು ದಿನಗಳಲ್ಲಿಯೇ ಮನೆಯ ಹತ್ತಿರದ ಹಲಸಿನ ಮರದ ಮೂಲೆಯ ಗೆಣ್ಣಗಳವರೆಗೂ ಬಂದಿದ್ದರು. ಇನ್ನೂ ಬಾಕಿ ಇದ್ದುದರೆಂದರೆ ಮನೆಯ ಬಳಿಯ ಅಡಕೆ ತೋಟಕ್ಕೆ ಮುಟ್ಟಿಕೊಂಡಂತಿದ್ದ ಮಕ್ಕಿಗದ್ದೆ ಆ ಮಕ್ಕಿಗದ್ದೆಯೂ ಉತ್ತು, ಕೊರಡು ಹೊಡೆದು ನೀರುಕಟ್ಟಿ ಸಸಿ ನೆಡಿಸಿಕೊಳ್ಳಲು ಸಿದ್ದವಾಗಿ ನಿಂತಿತ್ತು.

ಆ ಮಕ್ಕಿಗದ್ದೆಗೆ ಕೆಳಗಿದ್ದು ಆ ದಿನವೆ ತಾಸು ಹೊತ್ತಿಗೆ ಮುನ್ನ ಸಸಿನೆಟ್ಟು ಪೂರೈಸಿದ್ದ ಒಂದು ಗದ್ದೆಯ ಅಂಚಿನ ಮೇಲೆ ಕಂಬಳಿ ಕೊಪ್ಪೆ ಹಾಸಿಕೊಂಡು ಅದರ ಮೇಲೆ ಕುಳಿತಿದ್ದನು ಐತ, ಅವನ ಸುತ್ತಮುತ್ತ ಇನ್ನೂ ಮೂರು ನಾಲ್ಕು ಜನ ಗಂಡಾಳುಗಳು ಅವನಂತೆಯೇ ಕಂಬಳಿ ಕೊಪ್ಪೆ ಹಾಸಿಕೊಂಡು ಅಂಚಿನ ಮೇಲೆ ಕೂತಿದ್ದರು. ಗದ್ದೆಯ ಅಂಚಿನೊಡನೆ ಐಕ್ಯವಾಗಿದ್ದಂತೆ ಉದ್ದಿದ್ದ ಹಾಸರೆಯ ಮೇಲೆ ಒಬ್ಬಳೆ ಕೂತಿದ್ದಳು. ನಾಗಕ್ಕ, ಅವಳು ಸಸಿನೆಟ್ಟು ಪೂರೈಸಿ ಕಂಗೊಳಿಸುತ್ತಿದ್ದ ಕೆಳಗಿನ ಬದ್ದೆಗಳ ಕಡೆಗೆ ನೋಡುತ್ತಿದ್ದಳು. ಈ ರೀತಿ ಮಲೆನಾಡಿನ ರೈತರು ಮತ್ತು ಹೊಲೆಯರು ಗಟ್ಟನ ಆಳುಗಳು ಗದ್ದೆ, ತೋಟಗಳಲ್ಲಿ ಕೆಲಸ ಮಾಡಿಕೊಳ್ಳುತ್ತಿದ್ದರು, ಮಳೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಗಂಡಸರು, ಹೆಂಗಸರು, ಕೆಲಸದಲ್ಲಿ ನಿರತರಾಗಿದ್ದರು. ಮಲೆನಾಡಿನ ಮದುಮಗಳು ಕೃಷಿಯ ಪ್ರಾಧಾನವಾಗಿದೆ. ಕಾದಂಬರಿಯು ಕೃಷಿಯ ಅವಲಂಬನೆ, ಕೀಳು ಜಾತಿಯ, ಸಮ್ಸಾರದ ತಾಪತ್ರೆ ಗೊತ್ತಾಗುತ್ತದೆ. ಸಾವು ನೋವುಗಳನ್ನು ನಾವು ಕಾಣಬಹುದಾಗಿದೆ. ಈ ಕಾದಂಬರಿ ಕೃಷಿ ಪ್ರಧಾನ ಕಾದಂಬರಿಯಾಗಿದೆ ಎಂದು ಗಮನಿಸಬಹುದು.

ಅಧ್ಯಾಯ – ೮

ಎರಡೂ ಕಾದಂಬರಿಗಳ ಕೃಷಿಯ ನೆಲೆ ಕಥಾವಸ್ತುವಿನ ಪ್ರಮುಖ ವಿನ್ಯಾಸಗಳು:

೧) ಕೃಷಿಯ ಪ್ರಾಮುಖ್ಯ– ಕಾದಂಬರಿಯೊಳಗೆ

೨) ಕೃಷಿಯ ವೈವಿಧ್ಯ– ಬೇಟೆ– ಹೈನು– ವ್ಯವಸಾಯ, ಪಶು ಸಾಕಣೆ

ಕೃಷಿಯ ನೆಲೆ

ಕುವೆಂಪುರವರ ಸಾಹಿತ್ಯ ಶಿಷ್ಟ ಸಾಹಿತ್ಯ ಪರಂಪರೆಗೆ ಒಂದು ಆಯಾಮವನ್ನು ತಂದುಕೊಟ್ಟಿದೆ. ಶಿಶ್ಯ ಪರಂಪರೆಯ ಜೊತೆಗೆ ದುಡಿಯುವ ವರ್ಗದ ನೋವು ದುಮ್ಮಾನಗಳು ಸಂಕಟ ಪರಿಚಯ ಮತ್ತು ಸಂವೇದನೆ ಇವರನ್ನು ಸುಸಂಸ್ಕೃತ ಸಾಮಾಜಿಕ ಕವಿಯನ್ನಾಗಿ ಮಾಡಿತು. "ಇಲ್ಲಿನ ನಿಸರ್ಗ ಚಿತ್ರಣ ಪ್ರಕೃತಿಯೊಳಗಿನ ಒಡನಾಟ ಸಾಮಾಜಿಕ ಅರಿವು ವರ್ಗ ಮತ್ತು ವರ್ಣದ ಸೂಕ್ಷ್ಮ ಚಿತ್ರಣ, ಇವೆಲ್ಲವೂ ಮಲೆನಾಡಿನ ಮಣ್ಣಿನ ಸಂಬಂಧದಿಂದ ಬಂದಿರುವಂತಹದ್ದು.

ಸಾಹಿತ್ಯದಲ್ಲಿ ಸಾಧಿತವಾಗಿರುವ ವಸ್ತು ನಿಷ್ಠತೆಯಿಂದಾಗಿ ಬದುಕನ್ನು ಹಿಡಿದಿರುವ ರೀತಿ ವಾಸ್ತವತೆಯಿಂದ ಕೂಡಿದೆ. ಅದೇ ರೀತಿ ಮಲೆನಾಡಿನ ಬದುಕು ಪುನರ್ ಸೃಷ್ಟಿಯಾಗಿ ಅರಳುತ್ತದೆ. ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದು ಮಗಳು ಕಾದಂಬರಿಗಳು ಮಲೆನಾಡಿನ ಆ ಕಾಲದ ಸಾಮಾಜಿಕ ಐತಿಹಾಸಿಕ, ಸಾಂಸ್ಕೃತಿಕ ಜೀವನವನ್ನು ಅನಾವರಣಗೊಳಿಸುತ್ತವೆ. ಕುವೆಂಪು ಅವರ ರಾಮಾಯಣ ದರ್ಶನಂ ಕಾವ್ಯವು ವಾಲ್ಮೀಕಿ ರಾಮಾಯಣದ ನೇರ ಅನುವಾದವಲ್ಲ ರಾಮಾಯಣದ ಪುನಸೃಷ್ಟಿ ಅದನ್ನು ಮಲೆನಾಡಿನ ರಾಮಾಯಣ ಎಂದೇ ಕರೆಯಬಹುದು.

ಇಲ್ಲಿ ಬರುವ ಪ್ರಕೃತಿಯ ವನಸಿರಿ ಸಂಸ್ಕೃತಿ ಅತಿಥಿ ಸತ್ಕಾರ, ಆಹಾರ ಕ್ರಮ ಕೃಷಿ ಇವೆಲ್ಲವು ಮಲೆನಾಡಿನ ಮಣ್ಣಿನ ಬಣ್ಣ ಮತ್ತು ವಾಸನೆಯನ್ನು ಒಳಗೊಂಡಿದೆ. ರಾಮಾಯಣದ ಪ್ರತಿ ಎಳೆಯಲ್ಲಿಯೂ ಮಲೆನಾಡಿನ ಸೊಗಡು ತುಂಬಿ ತುಳುಕುತ್ತಿದೆ. ಅವರ ಕಾದಂಬರಿಗಳಲ್ಲಿ ರಸವತ್ತತೆಗೆ ನಿಸರ್ಗದ ಮನಮೋಹಕ ದೃಶ್ಯಗಳೇ ಹಣತೆಯಲ್ಲಿ ಎಣ್ಣೆಯಾಗಿ ಉರಿಯುತ್ತಿದೆ.

ಕುವೆಂಪು ಮೈಸೂರಿನಲ್ಲಿದ್ದರೂ ಮಲೆನಾಡಿನ ಗಿರಿ ಝುರಿ ನದಿ ತೊರೆಗಳೊಡನೆ ಅವರ ಮನಸ್ಸು ಅವಿನಾಭಾವ ಸಂಬಂಧವನ್ನು ಹೊಂದಿತ್ತು. ಸಸ್ಯ ಸಂಕುಲವೆ ಸುತ್ತಲು ನೆರೆದಿರುವುದರಿಂದ ಮಲೆನಾಡಿನ ಸಂಸ್ಕೃತಿಯೊಡನೆ ಅಲ್ಲಿನ ಆಹಾರ ವಿಭಿನ್ನತೆಗಳು ಯಥೇಚ್ಛವಾಗಿ ಚಿತ್ರಿತವಾಗಿದೆ. ಕೃಷಿಗೆ ಮಲೆನಾಡಿನ ಪ್ರಾಮುಖ್ಯತೆಯನ್ನು ಪಡೆದಿದೆ.

ಹಣ್ಣು, ಹಂಪಲು ಗೆಡ್ಡೆಗೆಣಸು ಪ್ರಾಣಿ ಪಕ್ಷಿ, ಬೇಟೆ, ಹಬ್ಬ, ಅತಿಥಿ ಸತ್ಕಾರ, ನಂಬಿಕೆ ಸಂಪ್ರದಾಯ ಇವೆಲ್ಲವೂ ಸನ್ನಿವೇಶಕ್ಕೆ ಅನುಗುಣವಾಗಿ ಅನಾವರಣಗೊಂಡಿದೆ.

ಮಲೆನಾಡಿನ ಸಾಂಸ್ಕೃತಿಕ ಜಗತ್ತನ್ನು ಅತ್ಯಂತ ಶ್ರೀಮಂತಗೊಳಿಸಿರುವುದು ಅವರ ಕೃಷಿಯ ಆಹಾರ ಪದ್ಧತಿ ಪ್ರಕೃತಿಕ ಜಗತ್ತಿನೊಡನೆ ಹೊಂದಿರುವ ನಿಕಟ ಬಾಂಧವ್ಯದಿಂದ ಆಹಾರದ ಮೇಲೆ ಪ್ರಭಾವ ಬೀರಿದೆ. ಮಲೆನಾಡಿನ ಸಂಸ್ಕೃತಿಯನ್ನು ಗುರುತಿಸುವುದೆ ಅವರ ರೊಟ್ಟಿ, ಕಡುಬು, ಮಾಂಸದ ಸಾರು, ಹುರಿ ತುಂಡು ಇವುಗಳಿಂದ ಜೊತೆಗೆ ಸಸ್ಯಹಾರವು ಹಾಗೂ ನಂಬಿಕೆಗಳು ಇಣುಕು ಹಾಕುತ್ತವೆ. ಮಲೆನಾಡಿನಲ್ಲಿ ವಾರ ಒಪ್ಪತ್ತುಗಳು ಅಲ್ಲಿನ ಆಹಾರದ ಜೊತೆ ಆರೋಗ್ಯದ ಮಹತ್ವವನ್ನು ತಿಳಿಸುತ್ತವೆ. ಶನಿವಾರದ ದಿನ ಎಲ್ಲರೂ ಸ್ನಾನ ಮಾಡಿ ಪೂಜೆ ಮಾಡಿ ಬಾಳೆ ಎಲೆಯಲ್ಲಿ ಊಟ ತುಪ್ಪದ ಒಬ್ಬರಣೆ ಹಾಕಿ ವಿಶೇಷ ಮುತುವರ್ಜಿಯಿಂದ ತಯಾರಿಸಿದ ಪಲ್ಯ ಪಾಯಸ ಮತ್ತು ಹೆಸರು ಕಾಳು ಗಂಜಿ ಸೇವಿಸುತ್ತಿದ್ದರು.

ವ್ಯವಸಾಯಕ್ಕೆ, ಅಡಿಕೆ ತೋಟ, ಬಾಳೆ ತೋಟ, ತೆಂಗಿನ ತೋಟ, ನಾವುಗಳು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಅಲ್ಲಿನ ಆಳುಗಳು, ಹೊಲೆಯರು, ಗಟ್ಟದ ಆಳುಗಳು ಹಳೆಪೈಕದವರು ಒಟ್ಟಾಗಿ ತೋಟೆ ಗದ್ದೆಗಳಲ್ಲಿ ಕೆಲಸ ಮಾಡುವುದು,

ಶಬರಿ ಶುಶ್ರೂಷೆಯಲ್ಲಿನ ಗೀಕುಚಾಪೆ, ಕುಡಿಬಾಳೆ, ಜೇನುತುಪ್ಪ, ನೊಲೆಗೆಣಸು ಮಣ್ಣಿನ ಹಂಚು, ಬಾಳೆಹಣ್ಣು, ಸೌತೆ ಪಚ್ಚಡಿ' ಇದು ಮಲೆನಾಡಿನ ಅತಿಥಿ ಸತ್ಕಾರದ ರೂಢಿ ಇಂದಿಗೂ ಬಳಕೆಯಲ್ಲಿದೆ. ಇದು ರಾಮನ ಆಗಮನದ ನಿರೀಕ್ಷೆಯಲ್ಲಿ ಶಬರಿಯು ಮಾಡುವ ಉಪಚಾರವಾಗಿದೆ.

ಚಿಟ್ಟಳಿಲು ಮಂಗಟೆ, ಹಕ್ಕಿ ಕಾಮಳ್ಳಿ ಮರ ಕುಉಗನ ಹಕ್ಕಿ, ಕಣೆ, ಹಂದಿ ಇತ್ಯಾದಿ ಮಲೆನಾಡಿನ ಪ್ರಾಣಿ, ಪಕ್ಷಿಗಳು, ಹುಲಿ ಕಾಡುಕುರಿ, ಕಾಡುಕೋಳಿ, ಕುರ್ಕೆ, ಎತ್ತಿನಗಾಡಿ ಮುಂತಾದ ಸಂಬಂಧಪಟ್ಟವುಗಳನ್ನು ನೋಡುತ್ತೇವೆ. ನೇಗಿಲು, ಕುಂಟೆ, ನೊಗ ಸಲಕರಣೆಗಳನ್ನು ಭತ್ತದ ಪಂಜರ, ಗಡಿಗೆ, ಕೂಪೆ, ಗೋಣಿಕೊಪ್ಸೆ ಎಂದು ಕರೆದಿದ್ದರು. ಈ ಎಲ್ಲಾ ಅಂಶಗಳನ್ನು ಈ ಕಾದಂಬರಿಗಳಲ್ಲಿ ಗಮನಿಸಬಹುದಾಗಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬೇಟೆ:

ಒಂದು ದಿನ ದೊಡ್ಡಣ್ಣ ಹೆಗ್ಗಡೆಯವರು ಮರಸು ಬೇಟೆಗೆ ಹೊರಡುತ್ತಿದ್ದರು. ದೊಡ್ಡಣ್ಣ ಹೆಗ್ಗಡೆ ಐತನೊಡನೆ ಮರದ ಮೇಲೆ ಕಟ್ಟಿದ್ದ ಅಟ್ಟಣೆಯ ಮೇಲೆ ಕುಳಿತು ಒಂದು ಹೂಡುವ ಎತ್ತನ್ನು ಹಿಡಿದ್ದಿದ ಹುಲಿ ಮೆತ್ತೆ ಎತ್ತಿನ ಬಳಿ ಬಂದಾಗ ಈಡುಕಟ್ಟಿ ಹೊಡೆಯಬೇಕಾಗುತ್ತಿತ್ತು, ಐತನ ಮಾತಿನಿಂದಲೇ ತಿಳಿಯಬಹುದು.

ನಾನು ನಿಮ್ಮ ಹಾಂಗಿದ್ದೆ ಆವಾಗ ಸಿಕಾರಿಗೆ ಹೋಗಾದು ಅಂದ್ರೆ ಬಾಳ ಹುಚ್ಚು ಒಂದಿನ ಒಂದು ಹೂಡಕ್ಕೆ ಕಟ್ಟಾ ಎತ್ತನ್ನೆ ಹಿಡ್ದುಬಿಡ್ತು ಹುಲಿ! ದೊಡ್ಡ ಎತ್ತು ಕಣ್ರೋ ನಿಮ್ಮ ದೊಡ್ಡ ಮಾವನ ಮದುವೆಯಲ್ಲಿ ಹಳೆಮನೆಯಿಂದ ನಿಮ್ಮ ಅತ್ತೆಮ್ಮಗೆ ಬಳ್ಳೊಳ್ಳಿ ಕೊಟ್ಟಿದ್ದಂತೆ ಹೇಳಿ ಕಳಿಸಿದ್ರು, ನಿಮ್ಮ ದೊಡ್ಡ ಮಾವ ನಿಮ್ಮ ಅಪ್ಪಯ್ಯಗೆ ಹುಲಿ ಹೊಡಿಯೋರು ಅಂದ್ರೆ ನಿಮ್ಮ ಅಪ್ಪಯ್ಯಗೆ ನೀರು ಕುಡಿದ್ಹಾಂಗೆ ಈ ಪರಾಂತಕ್ಕೆಲ್ಲಾ ಭಾರಿ ಈಡುಗಾರರು, ಇಟ್ಟ ಗುರಿ ತಪ್ತಿರ್ಲಿಲ್ಲಂತೆ, ಹೇಳಿಕಳ್ಸಿದ್ದೆ ಸೈ ಒಂದೇ ಬಂದ್ರು ಜೋಡುನಳಿಗೆ ಕೇಪಿನ ಕೋವಿನ ಹೆಗಲ ಮೇಲೆ ಹೇರಿಕೊಂಡು ಕೋಣೂರಿಗೆ ಎಂಥಾ ಆಳು ಅಂತೀರಿ ಬರ್ದ್ರ್ಂಡಾಲು ಅವರನ್ನ ಕಂಡ್ರೆ ಹುಲಿ ನಡುಗಬೇಕು ಹಾಂಗಿದ್ರು, ಅವತ್ತು ಬೈಗಿನ ಹೊತ್ತು ನಾ ಸುಮ್ನೆ ನಿಮ್ಮ ಸಣ್ಣ ಮಾವನ ಜೊತೆ ಚಿಟ್ಟು ಬಿಲ್ಲು ಹಿಡುಕೊಂಡು ಹಕ್ಕಿ ಹೊಡೆಯಾಕೆ ಹೋಗಾಕೆ ಬಿಡಾರದಿಂದ ಮನೀಗೆ ಬಂದಿದ್ದೆ. ನಿಮ್ಮ ಅಪ್ಪಯ್ಯನ ಸಂಗಡ ಮರಸಿಗೆ ಕೂರಾಕೆ ಹೋಗಾಕೆ ಮುಕುಂದಯ್ಯನೇ ಹೊರಟಿದ್ರು. ಆದರೆ ಜ್ವರ ಬಂದಿರದಿಂದ ಅವತ್ತು ಬೇಟೆಗೆ ಹೋಗಲಿಲ್ಲ, ಐತನನ್ನು ನೋಡಿದ್ರು ನಾ ನೆಗ್ತಾ ನಿಂತಿದ್ದೆ ಬತ್ತಿಯೇನೋ ಮರಸಿಗೆ? ಅಂತಾ ಕರದೇ ಬಿಟ್ರು ನಂಗೇನು ಸಂತೋಷ, ಹ್ಹೂ ಬತ್ತೀನಯ್ಯಾ! ಅಂದೇ ಬಿಟ್ಟೆ ಹುಲಿಗಿಲಿ ಬಂದ್ರೆ ಹೆದರಿಕೋಬಾರ್ದು ಪಿಟ್‌ಪಿಟ್ ಅನ್ನದೆ ಸುಮೆನ್ ಕೂತುಗೋತೀಯಾ ಅಂದ್ರು ಹ್ಹೂ ನಾನೇನು ಹೆದರೋದಿಲ್ಲ ಅಂದೆ.

ನಂಗೂ ಇಷ್ಟ ಊಟ ಹಾಕ್ಸಿದ್ರು ಅವರು ಒಳಗೆ ಹೋಗಿ ಉಂಡ್ರು ಕತ್ತಲಾಗಾಕೆ ಮುಂಚೇನೆ ಮರದ ಮ್ಯಾಲೆ ಕಟ್ಟಿದ್ದ ಅಟ್ಟಣಿಗೆ ಹತ್ತಿ ಮರಸಿಗೆ ಕೂರಬೇಕು ಅಂತಾ ಬೆಳಕು ಇದ್ಹಾಂಗೆ ನನ್ನ ಕರಕೊಂಡು ಹೊರಟ್ರು ಹುಡುಗಾ ಹುಷಾರು ಕಣ್ರೋ ಅವರೆಲ್ಲಾರು ಹುಲಿ ಹೊಡೆದ ಮ್ಯಾಲೆ ಕೆಳಗಿ ಇಳಿದುಬಿಟ್ಟಾರು ಅಂದರು. ಕೆಳಕ್ಕೆ ಇಳಿಯಾದ್ಯು ಬ್ಯಾಡೇಬ್ಯಾಡ ಅಂತ ನೀ ಆಳ್ತಾ ಕೂತುಬಿಡು, ನಿಮ್ಮ ಸಂಗಡಬರಾಕೆ ನಾಯೀನೂ ಹೊರಟಿದ್ವು ಅವನ್ನೆಲ್ಲಾ ಕಲ್ಲು ಹೊಡ್ದೆ ಓಡ್ಸೋ ಹುಡುಗ ಅಂದ್ರು ನಿಮ್ಮ ಅಪ್ಪಯ್ಯ ಕಲ್ಲು ತಗೊಂಡು ಅಟ್ಟಿ ಅಟ್ಟಿ ಹೊಡೆದು ಓಡಿಸ್ದೆ. ಈಗ ಇರುವ ನಾಯಿಗಳಲ್ಲಿ ಚೆನ್ನಾಗಿ ಬೇಟೆಯಾಡುವ ಎರಡು ನಾಯಿಗಳ ಹೆಸರು ಹೇಳಿದನು.

ಆಗ ಇದ್ದವು ಈಗಿಲ್ಲ ಎರಡು ದದ್ದು ಹಿಡಿದೇ ಸತ್ತು ಹೋದ್ವು, ಇನ್ನು ಮೂರು ನಾಯೀನು ಕುರ್ಕು ಹೊತ್ತುಕೊಂಡು ಹೋಯ್ತು ಇನ್ನೊಂದು ಒಳ್ಳೆ ಜಾತಿ ನಾಯಿ ಇತ್ತು ಚೆನ್ನಾಗಿ ಶಿಕಾರಿ ಮಾಡಿತ್ತು, ಒಂದಿನ ದೊಡ್ಡ ಬ್ಯಾಟೇಲಿ ಅದು ಒಂದು ಒಂಟಿಗ ಹಂದಿನೂ ತಡೆದೂ ತಡೆದೂ ನಿಮ್ಮ ಅಪ್ಪಯ್ಯ ಕೂತಿದ್ದ ಬಿಲ್ಲೀಗೆ ಎಬ್ಬಿಕೊಂಡು ಬಂತು ಗುರಿಗೆ ಹಳುವಿನಾಗೆ ಓಡಿ ಬರ್ತಾ ಇತ್ತಂತೆ ನಿಮ್ಮ ಅಪ್ಪಯ್ಯ ಹಂದೀಗೆ ಗುರಿ ಇಟ್ಟು ಹೊಡೆದ್ರು, ಅವರ ಕೋವಿ ಅಂಥಾ ಇಸದ ಕೋವಿ ಹಂದಿನ ತಥ್ಹಾದು ಗುಂಡು ಆಚೆಗಿದ್ದ ನಾಯಿಗೂ ಬಿದ್ದು ಬಿಡ್ತಂತೆ ಹಂದೀಣು ಬಿತ್ತು, ನಾಯಿನೂ ಬಿತ್ತು, ತುಂಬಾ ಗೋಳಾಡಿದ್ರಂತೆ ಅವೊತ್ತು ಅವ್ರು ಮುತ್ತಿನಂತ ನಾ ಯೀನ ಕೊಂದು ಬಿಟ್ಟೆನಲ್ಲಾ! ಅಂತಾ ಆ ಹಂದೀ ತುಂಡನ್ನು ಮೆಟ್ಟಲಿಲ್ಲವಂತೆ ಅವ್ರು

ನಾವಿಬ್ಬರೂ ಮರಸು ಇದ್ದ ಮರದ ಬುಡಕ್ಕೆ ಹೋದ್ವೊ ನಿಮ್ಮ ಅಪ್ಪಯ್ಯ ಎತ್ತಿನ ಬಡು ಬಿದ್ದ ಜಾಗ ನೋಡಿಕೊಂಡು ಬಂದ್ರು ನಿಂತು ಆ ಕಡೆ ಈ ಕಡೆ ನೋಡಿ ಏನೇನೋ ಅಂದಾಜು ಮಾಡಿಕೊಂಡ್ರು, ಹುಡುಗಾ ಒಂದಾಗಿಂದಾ ಎಲ್ಲಾ ಮಾಡಿಕೊಂಡು ಬಂದೀಯಾ! ಅಂತ ಕೇಳಿದ್ರು ನನ್ನ ನಂಗೆನು ಗೊತ್ತು ಅದರ ದರ್ದು ಹ್ಹೂ ಅಂದೆ ನನ್ನನ್ನು ಮೊದಲು ಮರ ಹತ್ತಿಸಿ ಅಮ್ಯಾಲೆ ಅವರು ಕಂಬಳಿ ಕೋವಿ ಕೋವಿ ಚೀಲ ಎಲ್ಲಾ ಹಿಡಿಕೊಂಡು ಹತ್ತಿದ್ರು ಮಂಚಿಕೆ ನಮ್ಮಿಬ್ಬರಿಗೂ ಸಾಕಾದಷ್ಟು ಅಗಲಾನೆ ಆಗಿತ್ತು. ನಿನ್ನೂ ಒಂದು ಬದಿ ಕಂಬಳಿ ಹಾಕಿ ಕೂರಿಸಿ ಅವರು ಒಂದು ಬದಿ ಕಂಬಳಿ ಹಾಕಿಕೊಂದು ಕುತರು ಕೋವೀನೂ ಸರಿಯಾಗಿ ದಟ್ಟೆ ಮ್ಯಾಲೆ ಹೇರಿಟ್ಕೊಂಡು.

ಅವತ್ತು ತಿಂಗಳು ಮೂಡಿದ್ದು ಬಾಳ ಹೊತ್ತು ಅಂತಾ ಕಾಣ್ತದೆ ನಂಗೆ ಫಕ್ಕನೆ ಎಚ್ಚರ ಆಯ್ತು ಕಣ್ ಬಿಡೀನಿ ತಿವೀತದೆ ಕಾಡಿನ ಕಗ್ಗತ್ತಲೆ ಮತ್ತೆ ಎಂತದೋ ಒಂದು ಆಯ್ತು ನೋಡಿ ನಂಗೆ ಎಂತದು ಅಂತಾ ಗೊತ್ತೇ ಆಗ್ಲಿಲ್ಲ. ಏನೋ ಬೋರುಡ್ತದೆ ಕಾಡೆಲ್ಲಾ ನಾವು ಕೂತಿದ್ದ ಮರಾನೆ ನಡುಗ್ತವೆ, ನಿಮ್ಮ ಅಪ್ಪಯ್ಯ ಮೆಲ್ಲಗೆ ಹೇಳಿದ್ರು ಹೆದರಿಕೋ ಬೇಡೋ ಹುಡುಗಾ ಹುಲಿ ಹಂದಿ ಕಾದಾಡ್ತವೆ ಕಣೋ ನಮ್ಮ ಹತ್ರ ಅಲ್ಲೆ ದೂರದಲ್ಲಿ,

ಹಂದಿ, ಹುಲಿ ಘರ್ಜನೆ ಎರಡು ಕಾದಾಟ ಮಾಡಿ ಒಂದೊಂದು ಒಂದರ ಮೇಲೆ ಒದ್ದಾಡುತ್ತಾ ಘರ್ಜನೆ ಮಾಡಿದ್ದವು. ಬೇಟೆಯಾಡುವುದರಲ್ಲಿ ದೊಡ್ಡಣ ಹೆಗ್ಗಡೆಯವರು ನಿಸ್ಸಾಮರು, ಮನುಷ್ಯರ ಶಬ್ಧದಿಂದ ಅವೆರಡೂ ದೂರ ದೂರ ಹೋದವು. ಈ ಪ್ರಸಂಗ ಬಹಳ ಸ್ವಾರಸ್ಯಪೂರ್ಣವಗಿದೆ. ದೊಡ್ಡಣ್ಣ ಹೆಗ್ಗಡೆಯವರು ಒಳ್ಳೆಯ ಬೇಟೆಗಾರರು ತಮ್ಮ ಒಂದು ಎತ್ತನ್ನೇ ಕೊಂದ ಹುಲಿಯನ್ನು ಮರುದಿನ ಅದೇ ಸ್ಥಳಕ್ಕೆ ಬಂಗಾದ ಮರಸು ಬೇಟೆಗೆ ಹೋದವರು ಈ ಹುಡುಗ ಐತನಿಂದಾಗಿ ಅವರ ಬೇಟೆ ತಪ್ಪಿತು.

ಒಮ್ಮೆ ಕೋಣೂರು ರಂಗಪ್ಪಗೌಡರು ಹಳೆಮನೆ ದೊಡ್ಡಣ್ಣ ಹೆಗ್ಗಡೆಯವರು ಆಗ ತಾನೆ ಪ್ರಾಯಕ್ಕೆ ಬಂದ ಯುವಕರಾಗಿದ್ದಾಗ ಒಮ್ಮೆ ಸಾರಿಕೆಯ ಬೇಟೆಗೆ ಹೋಗಿದ್ದರಂತೆ ಅಲ್ಲಿ ಅದೇ ದಿನ ಹುಟ್ಟಿದ ಅಥವಾ ಆ ದಿನ ಇವರು ಹೋಗುವುದಕ್ಕೆ ಒಂದೆರದು ಗಂಟೆಗಳ ಮುಂಚೆ ಹುಟ್ಟಿರಬಹುದಾದ ಮೂರು ಪುಟ್ಟ ಹುಲಿಯ ಮರಿಗಳು ಒಂದೆಡೆ ಇದ್ದವು. ತಾಯಿ ಹುಲಿ ಎಲ್ಲಿಯೂ ಕಾಣಲಿಲ್ಲ ದೊಡ್ಡಣ್ಣ ಹೆಗ್ಗಡೆಯವರು ಆ ಮರಿಗಳು ಮನೆಗೆ ಹೊತ್ತುಕೊಂಡು ಹೋಗೋಣ ಎಂದರು. ರಂಗಪ್ಪಗೌಡರು "ಬೇಡ ತಾಯಿ ಹುಲಿ ನಮ್ಮಿಬ್ಬರನ್ನೂ ಸಿಗಿದು ಹಾಕಿಬಿಡ್ತದೆ ಎಂದರು. ದೊಡ್ಡಣ್ಣ ಹೆಗಡೆ ನೀನು ಬರೀಪುಕ್ಕಲ ಎಂದರು. ರಂಗಪ್ಪಗೌಡರು ನೀನು ಭಾರಿಧೈರ್ಯಗಾರ ಎಂದರು ತಗೊಂಡೇ ಹೋದರೆ ಏನು ಕೊಡ್ತೀಯಾ? ಎಂದು ದೊಡ್ಡಣ್ಣ ಕೇಳಿದ್ದಕ್ಕೆ ನೀನು ಏನು ಕೇಳಿದರೂ ಕೊಡುತ್ತೇನೆ ಎಂದು ವಾಗ್ದಾರ ನಾಡಿದರು. ದೊಡ್ಡಣ್ಣ ಹೆಗ್ಗಡೆಯವರು ಕಂಬಳಿಯಲ್ಲಿ ಹುಲಿಯ ಮರಿಗಳನ್ನು ಕಟ್ಟಿಕೊಂಡು ಹೊರಟರು. ಬಹಳ ದೂರ ಹೋಗಿದ್ದರು. ಇದ್ದಕ್ಕಿದ್ದ ಹಾಗೆಯೇ ಹಿಂದಿನಿಂದ ಹುಲಿಯ ಗರ್ಜನೆ ಕೇಳಿಸಿತು. ಕೆಟ್ಟವೋ ದೊಡ್ಡಣ್ಣ ಬಿಟ್ಟು ಬಿಡೋ ಹುಲಿ ಮರೀನ ಓಡಿ ಹೋಗಾನ ಎಂದು

ಓಡತೊಡಗಿದರು. ರಂಗಪ್ಪಗೌಡರು, ನೀನೇನು ಗಂಡಲ್ಲೆನೋ ನಿಲ್ಲೋ ಗೌಡರ ಹಿಂದೆ ಓಡೋನಲ್ಲ ಕಣೋ ಹೆಗ್ಗಡೆ ಎಂದು ನಿಂತು ತನ್ನ ಜೋಡಿನಲ್ಲಿ ಕೇಪಿನ ಕೋವಿಯನ್ನು ಅಣಿ ಮಾಡಿಕೊಂಡು ಗರ್ಜನೆ ಬರುವ ಕಡೆ ತಿರುಗಿ ತಿರುಗಿ ನೋಡುತ್ತಾ ಆದಷ್ಟು ಬೇಗನೆ ನಡೆಯತೊಡಗಿದ್ದರು.

ಧೈರ್ಯಕ್ಕಲ್ಲದಿದ್ದರೂ ದಾಕ್ಷಿಣ್ಯಕ್ಕೆ ಸಿಕ್ಕಂತಾಗಿ ರಂಗಪ್ಪಗೌಡರು ತನ್ನ ಓಂಟಿನಲ್ಲಿ ಕೇಪಿನ ಕೋವಿಯನ್ನು ಅಣಿಮಾಡಿಕೊಂಡರು ಸ್ವಲ್ಪ ಹೊತ್ತಿನಲ್ಲಿ ಹುಲಿ ಬಂದಿತು, ಮೇಲೆ ನುಗ್ಗಿತು. ಎರಡು ಕೋವಿಗಳಿಂದ ಒಟ್ಟು ಮೂರು ಈಡು ಹಾರಿದವು. ಹುಲಿ ಘಾಯಗೊಂಡಿತು. ಆದರೆ ತೆವಳಿಕೊಂಡೇ ಒಂದು ದೊಡ್ಡಣ್ಣ ಹೆಗ್ಗಡೆಯವರ ಮೇಲೆ ಹಾರಿತು. ದೊಡ್ಡಣ್ಣ ಹೆಗ್ಗಡೆ ತನ್ನ ಸೊಂಟಕ್ಕೆ ತಗಲಿಸಿದ್ದ ಉದ್ದಗತ್ತಿಯಿಂದ ಮುಂದೆಗೆ ಹೊಡೆದು ಹುಲಿಯನ್ನು ಬೀಳಿಸಿದರು. ಆದರೂ ಹುಲಿಯ ಒಂದು ಕೈ ಅವರ ಹೆಗಲಿನ ಬಳಿ ಬೆನ್ನಿಗೆ ತಗುಲಿ, ಬಗೆದು ಹಾಕಿದಂತೆ ದೊಡ್ಡ ಗಾಯವಾಗಿ ರಕ್ತ ಸುರಿದು ರಾಣಾರಂಪವಾಯಿತಂತೆ ಇದೇ ಗುರುತನ್ನೇ ಐತ ಹೇಳಿದ್ದು ಹುಲಿಯ ಮರಿಗಳನ್ನೇನೋ ಮನೆಗೆ ತಂದರು. ಆದರೆ ಅವು ಬದುಕಲಿಲ್ಲ ಹುಲಿಯಿಂದ ಆದ ಗಾಯ ಮಾಯುವುದಕ್ಕೆ ಕೆಲವು ತಿಂಗಳುಗಳೇ ಬೇಕಾದವು.

ಗಾಡಿಯ ಪ್ರಯಾಣದಲ್ಲಿ ರಂಜದ ಹೂವು ಆರಿಸುವ ಆಸೆಗಾಗಿ ಗಾಡಿಯಿಂದ ಕೆಳಕ್ಕೆ ಧುಮುಕಿದರು. ಕಾಡನ್ನು ನೋಡಿ ನಂತರ ಎಲ್ಲರೂ ಗಾಡಿ ಹತ್ತಿದರು. ಗಾಡಿ ಮುಂದುವರೆಯಿತು. ಮುಂದೆ ಮತ್ತೊಂದೆಡೆಯಲ್ಲಿ ಗಾಡಿ ನಿಲ್ಲಬೇಕಾಯಿತು. ಅಲ್ಲಿ ದ್ಯಾವೇಗೌಡರು ಮುಕುಂದೇಗೌಡರು ಶಿಕಾರಿ ಮಾಡಿ ಒಂದು ಹಂದಿ ಹಸಿಗೆ ಮಾಡಿಸ್ತಿದಾರೆ ಗಾಡಿ ಬರಕೂ ಹೇಳಿ ನಿಲ್ಲಿಸಿ ಎಂದು ಹೇಳಿದ್ದರು.

ಒಂದೇ ಸೈಕಲ್ಲಿನ ಮೇಲೆ ಇಬ್ಬರೂ ಕೋವಿ ತೆಗೆದುಕೊಂಡು ಬಂದು ಈಗ ಶಿಕಾರಿಯು ನಡೆಯಿತು, ಹಂದಿಯನ್ನು ಸಾಯಿಸಿದರು.

ಏಡಿ ಶಿಕಾರಿ

ಏಡೀ ಹೊರುವುದಕ್ಕೆ ಸೈ ಬೀಡು ಏನು ಒಂದು ಪಾಟಿ ಚೀಲವೋ ಮಣಗಟ್ಲೆ ಏಡಿ ಹಿಡಿತಾರೇನೊ.

ಕಾಲುವೆಗಳಲ್ಲಿ ಸಂದಿಗಳಲ್ಲಿ ಗದ್ದೆ ಓಪಿನ ಸಂದಿಯಲ್ಲಿ ಹಿಡಿದು ಶಿಕಾರಿ ಮಾಡುತ್ತಿದ್ದರು. ಐತ, ಪಿಂಚಲು, ಮುಕುಂದಯ್ಯ ಏಡೀ ಶಿಕಾರಿ ಮಾಡುವುದರಲ್ಲಿ ಎತ್ತಿದ ಕೈ ಎಂದು ತಿಳಿಯಬಹುದು.

ಕಾಡುಕುರಿ ಶಿಕಾರಿ

ಕಾಡುಕುರಿಗಳನ್ನು ಬೆಟ್ಟಗುಡ್ಡಗಳ ನಡುವೆ ಹಬ್ಬ ಹರಿದಿನಗಳಲ್ಲಿ ಬೇಟೆಯನ್ನು ಆಡಿ ತಂದು ಹಬ್ಬ ಆಚರಿಸಿದರು.

ಮೀನು ಶಿಕಾರಿ

ಕಾಲುವೆಗಳ ಹೊರಾಂಡಗಳನ್ನು ತುಳುಕಿ ಮೀನು ಹಿಡಿಯುತ್ತಿದ್ದರು ತುಂಗಾಭದ್ರಾ ನದಿಯಲ್ಲಿ ಮೀನುಗಳನ್ನು ಹಿಡಿಯುತ್ತಿದ್ದರು, ಬಲೆಯಿಂದ ಮೀನುಗಳನ್ನು ಹಿಡಿಯುತ್ತಿದ್ದರು.

ಕಾಡುಕೋಳಿ ಶಿಕಾರಿ

ಕಾಡುಕೋಳಿಯನ್ನು ಉರುಳಿನಿಂದ ಶಿಕಾರಿ ಮಾಡುತ್ತಿದ್ದರು ಕೋವಿಯಿಂದ ಕಾಡು ಕೋಳಿಯನ್ನು ಹಿಡಿಯದಿದ್ದರು.

ಹಂದಿ ಶಿಕಾರಿ

ದೀಪಾವಳಿ ಹಬ್ಬದ ಸಮಯದಲ್ಲಿ ಹುಲಿನೆತ್ತಿ ಬೆಟ್ಟದ ಮೇಲೆ ಸುಮಾರು ೧೫೦ ರಿಂದ ೨೦೦ ಜನ ಬೇಟೆಯಾಡಲು ಭಾಗವಹಿಸಿದ್ದರು. ಈಗ ಇತ್ಯಾದಿ ಶಿಕಾರಿಯನ್ನು ಮಾಡುತ್ತಿದ್ದರು.

ಬೇಟೆಯಲ್ಲಿ ಆಹಾರ

ಬೇಟೆ ಸಾರ್ವತ್ರಿಕ ಅಂಶವಾದರೂ ಮಲೆನಾಡಿನ ಬೇಟೆಗೆ ವಿಶಿಷ್ಟತೆಯಿದೆ. ಅನುಭವಾತೀತವಾದ ಅನೇಕ ಬಗೆಯ ಬೇಟೆಗಳು ವಿಸ್ಮಯಗೊಳಿಸುತ್ತದೆ. ಮಲೆನಾಡಿನ ಬದುಕಿಗೆ ಸಾಹಸದ ವೈವಿಧ್ಯತೆಯನ್ನು ತಂದುಕೊಡುತ್ತದೆ.

ಹೈನುಗಾರಿಕೆಯಲ್ಲಿ

ಮಲೆನಾಡಿನ, ಹಸುಗಳು, ಆಕಳು, ಬೆಟ್ಟದ ಹಸು, ಕಪ್ಪ ಹಸು, ದನಕರುಗಳು ಇದ್ದವು. ಜೊತೆಗೆ ವ್ಯವಸಾಯಕ್ಕೆ ಎತ್ತುಗಳು ಇದ್ದವು. ಇವುಗಳನ್ನು ನೋಡಿದರೆ, ಹೈನುಗಾರಿಕೆಯಲ್ಲಿ ತೊಡಗಿದರು ಎಂದು ಹೇಳಬಹುದು. ಈ ರೀತಿ ಮಲೆನಾಡಿನ ಮದುಮಗಳ ಕಾದಂಬರಿಯಲ್ಲಿ ಬೇಟೆಯು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು, ಮುಕುಂದಯ್ಯನ ಮೀನು ಶಿಕಾರಿಯನ್ನು ನಾವು ಕಾಣಬಹುದಾಗಿದೆ. ಬೇಟೆಗೆ ದೇವಯ್ಯಗೌಡನ ಆಸಕ್ತಿ ಈ ಕಾದಂಬರಿಯಲ್ಲಿ ನೋಡಬಹುದಾಗಿದೆ.

ವ್ಯವಸಾಯ

ಕೃಷಿಗೆ ಪ್ರಧಾನ ಅಂಶ ನೀಡಿದಂತೆ ಕುವೆಂಪು ಕಾದಂಬರಿಗಳಲ್ಲಿ ಮಲೆನಾಡಿನ ವ್ಯವಸಾಯವನ್ನು ಮಲೆನಾಡಿನ ಹೊಲೆಯರು ಗಟ್ಟದ ಆಳುಗಳು ಹಳಪೈಕದವರು, ಗದ್ದೆ, ತೋಟಗಳಲ್ಲಿ ಕೆಲಸ ಮಾಡುತ್ತಿದ್ದರು. ಗಂಡಸರು ಹೆಂಗಸರು ಎಲ್ಲಾರು ಗದ್ದೆಯಲ್ಲಿ ನಾಟಿ ಮಾಡುವುದು, ಕಳೆಕೀಳುವುದು ಗದ್ದೆ ಕೊಯ್ಲುವುದು ಈ ಎಲ್ಲಾ ಕೆಲಸಗಳ ಜೊತೆಗೆ ತೇವರಿ ಸವರುವುದು, ಈ ರೀತಿ ಕೆಲಸ ಮಾಡುತ್ತಿದ್ದರು.

ಮಲೆನಾಡಿನ ಮುಂಗಾರಿ ಮಳೆಯಲ್ಲಿ ಕೊಪ್ಪೆಯಾಗುಕೊಂಡು ಕೆಲಸ ನಿರ್ವಹಿಸುತ್ತಿದ್ದರು. ಭೈರ, ಸಿದ್ದ, ಮುಕುಂದಯ್ಯ, ಗುತ್ತಿ, ಬಚ್ಚ, ಐತ, ಜಿಂಕ್ರ ಎಲ್ಲಾರು ಎತ್ತುಗಳನ್ನು ಕಟ್ಟಿಕೊಂಡು ಆರುಗಳನ್ನು ಕಟ್ಟಿಕೊಂಡು ಹೊಳ್ಳುವುದಕ್ಕೆ ಹೋಗುತ್ತಿದ್ದರು. ತೋಟದಲ್ಲಿ ಅಡಿಕೆ ಮರಗಳನ್ನು ಸಾರುವುದು, ಇತರೆ ಕೆಲಸಗಳನ್ನು ಮಲೆನಾಡಿನ ಆಳುಗಳು ಕೆಲಸ ನಿರ್ವಹಿಸುತ್ತಿದ್ದರು.

ಮಲೆನಾಡಿನ ಜನರು ಭೂಮಿ ಹುಣ್ಣಿಮೆಯ ಹಬ್ಬವನ್ನು ಮಲೆನಾಡಿನ ಸಸ್ಯ ಸಮೃದ್ಧಿಯಿಂದ ಕೂಡಿದ ನಾಡು "ಈ ಹಬ್ಬದಲ್ಲಿ ಕುಡಿ ಬೆರಕೆ ಸೊಪ್ಪನ್ನು ತಂದು ಬೇಯಿಸಿ ಜೊತೆಗೆ ಮಾಲೆ ಗೆಣಸು ಅದನ್ನು ಬೇಯಿಸಿ ಸಿಪ್ಪೆ ತೆಗೆದು ಅಂಬಲ್ರಿ ಕಸುವಿನ ಕೊಟ್ಟೆ ಹಿಟ್ಟು ಕೊಚ್ಚಲಿ ಮೀನು ಪಲ್ಯ ಅನೇಕ ಭಕ್ಷ ಬೋಜನಗಳಿಂದ ಗದ್ದೆಯನ್ನು ಪೂಜಿಸಿ ಅದನ್ನು ಗದ್ದೆಗೆ ನೈವೇದ್ಯ ಮಾಡುತ್ತಾರೆ. ಜಡ ಜಗತ್ತು ಸಸ್ಯಾದಿಗಳೂ ತತ್ವದ ಚೈತನ್ಯವೋ ಆದ್ದುದರಿಂದ ವಂದನೀಯ ಎಂಬುದು ಆ ಪೂಜೆಯ ಅವ್ಯಕ್ತ ಬೋದೆ ಎಂದು ಮಾಡುತ್ತಿದ್ದರು.

ಈ ರೀತಿ ಮಲೆನಾಡಿನ ಜನರು ಈ ಕಾದಂಬರಿಯೊಳಗೆ, ಹೂವಳ್ಳಿ ಕಲಯ್ಯಗೌಡರು, ಸುಬ್ಬಣ್ಣ ಹೆಗ್ಗಡೆ, ದೇವಯ್ಯಗೌಡರು ಈ ರೀತಿ ಅನೇಕ ಜಮೀನುದಾರರು ತಮ್ಮ ತಮ್ಮ ಗದ್ದೆ ತೋಟಗಳಿಗೆ ಆಳುಗಳನ್ನು ಕರೆದುಕೊಂಡು ವ್ಯವಸಾಯ ಮಾಡುತ್ತಿದ್ದರು. ಮಲೆನಾಡಿನ ಸಾಂಸ್ಕೃತಿಕ ಜಗತ್ತನ್ನು ಅತ್ಯಂತ ಶ್ರೀಮಂತಗೊಳಿಸಿರುವುದು ಅವರ ಕೃಷಿಪದ್ಧತಿ ಪ್ರಾಕೃತಿಕ ಜಗತ್ತಿನೊಡನೆ ಹೊಂದಿರುವ ನಿಕಟ ಬಾಂಧವ್ಯದಿಂದ ಕೃಷಿಯ ಮೇಲೆ ಪ್ರಭಾವ ಬೀರಿದೆ. ಮಲೆನಾಡಿನ ಸಂಸ್ಕೃತಿಯನ್ನು ಗಮನಿಸಬಹುದು,

ಸೇರೆಗಾರರ ಕೇಪಿನ ಕೋವಿ

ತರಂಗಿತ ಸಹ್ಯಾದ್ರಿ ಶ್ರೇಣಿಗಳಿಂದ ಹುಂಜವು ತರಗೆಲೆಯಡಿಯ ಮಣ್ಣನ್ನು ಕೆದರಿ ಕೆದರಿ, ಹುಳು ಹಪ್ಪಟೆಗಳನ್ನು ಭುಂಜಿಸಿತು. ನಡುನಡುವೆ ಒಂದೊಂದು ಸಾರಿ ಹೆಣ್ಣು ಕೋಳಿಗಳನ್ನು ಕರೆದುಕೂಗಿತು. ಹೊಟ್ಟೆ ತುಂಬದೆ ಯಾವ ಹೆಂಟೆ ತಾನು ಪ್ರಣಯ ಸುಖಕ್ಕೆ ಅಬಿಲಾಷೆ ಪಟ್ಟಿತು! ವನಕುಕ್ಕುಟರಾಜನ ಬಳಿಗೆ ಯಾವ ರಾಣಿಯೂ ಬರಲಿಲ್ಲ, ಹುಂಜವು ಮತ್ತೆ ಒಂದೇ ಸಮನೆ ನೆಲ ಕೆದರುವ ಕೆಲಸಕ್ಕೆ ಕಾಲು ಹಾಕಿತು.

ಸುಮಾರು ಒಂದು ಗಂಟೆಯ ಮೇಲೆ ಹೊಟ್ಟೆಪಟ್ಟಾಗಿ ತುಂಬಿದ ಮೇಲೆ ಹುಂಜಕ್ಕೆ ಮತ್ತೆ ಹೇಂಟೆಯ ನೆನಪಾಗಿ ಕೂಗಿತು. ಆದರೂ ಸ್ವಲ್ಪ ಹೊತ್ತಿನಲ್ಲಿಯೇ ಹೇಂಟೆಯೊಂದು ದೂರದಲ್ಲಿ ತೆಕೋ ತೆಕೋ ತೆಕ್ ತೆಕ್ ತೆಕೋ ತೆಕ್ ತೆಕ್ ತೆಕ್ ಎಂದು ಬೇಟದ ಧ್ವನಿ ಮಾಡತೊಡಗಿತು. ಹುಂಜವು ತಲೆಯನ್ನು ಸ್ವಲ್ಪ ಒಲೆದು ಒಕ್ಕಣ್ಣಿನಿಂದಲೇ ಬಹುದೂರ ನೋಡುವಂತೆ ಒಂಟಿಗಾಲಿನಲ್ಲಿ ನಿಂತು ಕುತೂಹಲಾವಿಷ್ಟವಾಗಿ ನಿಷ್ಪಂದವಾಗಿ ಆಲಿಸಿತು. ಜೊತೆಯಲ್ಲಿ ಹೇಂಟೆಯಿದ್ದರೂ ಕೂಡ ಅದರ ಮನಸ್ಸು ಚಂಚಲವಾಗಿ ಮತ್ತೊಂದು ಹೇಂಟೆ ಮಾರು ಹೋಯಿತು.

ಹುಂಜವು ಪ್ರಣಯಾವೇಶದಿಂದ ಮುಂದೆ ನುಗ್ಗಿ ಇಳಿಜಾರಿನಿಂದ ಉಬ್ಬಿನ ಕಡೆಗೆ ಧಾವಿಸಿತು. ಸ್ವಲ್ಪ ದೂರ ಹೋಗಿ ನೋಡುತ್ತದೆ. ಪೊದೆಗಳ ನಡುವೆ ಅಡಗಿ ನಿಂತಂತಿದೆ ಒಂದು ಮನುಷ್ಯಾಕಾರ! ಅಲ್ಲಿಂದಲೆ ಕೇಳಿ ಬರುತ್ತಿದ್ದುದು, ಆ ಮಾಯಾ ಹೇಂಟೆಯ ಕರೆ! ಹುಂಜವು ಬೆದರಿ ಹಿಂತಿರುಗುವುದರಲ್ಲಿತ್ತು. ಅಷ್ಟರಲ್ಲಿ ಏನೋ ದೇಹಕ್ಕೆ ತಗುಲಿದಂತಾಗಿ ಮಹಾ ಶಬ್ಧವಾಯಿತು. ಹುಂಜವು ಮೂರ್ಛೆ ಹೋಗಿ ನೆಲಕ್ಕುರುಳಿತು! ಆ ಕೋವಿಯಾಡಿನ ಸದ್ದಿಗೆ ಬೆದರಿ ಹಿಂದೆ ತುಸು ದೂರದಲ್ಲಿ ಮೇವಾರಿಸುತ್ತಿದ್ದ ಹೇಂಟೆ ತನ್ನ ಮರಿಗಳೊಡನೆ ರೆಕ್ಕೆಗೆ ಬುದ್ಧಿ ಹೇಳಿತು. ಇನ್ನೂ ಬಿಸಿಯಾಗಿದ್ದ ನಳಿಗೆಯ ತುದಿಯಿಂದ ಹೊಗೆಯಾಡುತ್ತಿದ್ದ ಕೇಪಿನ ಕೋವಿಯನ್ನು ಕೈಯಲ್ಲಿ ಹಿಡಿದು, ಕಾನೂರು ಸೇರೆಗಾರ ರಂಗಪ್ಪ ಸೆಟ್ಟರು ತಾವು ಅಡಗಿ ನಿಂತಿದ್ದ ಹೊದರಿನಿಂದ ಹೊರಗೆ ನೆಗೆದು ಹುಂಜವಿದ್ದ ಜಾಗಕ್ಕೆ ಕಾತುರದಿಂದ ನುಗ್ಗಿದರು. ಹುಂಜವು ನಿಶ್ಚಲವಾಗಿ ಬಿದ್ದಿತ್ತು. ಅದರ ಮೈಯಿಂದ ಚಿಮ್ಮಿದ ನೆತ್ತರು ನೆಲದ ಮೇಲೆಯೂ ತರಗೆಲೆ ಕಸಕಡ್ಡಿಗಳ ಮೇಲೆಯೂ ಕೆಂಪಾಗಿತ್ತು. ತೊಂಡೆಯ ಹಣ್ಣನ್ನು ನಗುವಂತೆ ಕೆಂಪು ದಾಸವಾಳವನ್ನೂ ಮಾರಿ ಆ ರಕ್ತವಾಗಿದ್ದ ಅದರ ಚೊಟ್ಟಿ ನೆತ್ತಿಯನ್ನು ಕೋಮಲ ರಮಣೀಯವಾಗಿ ಅಲಂಕರಿಸಿತ್ತು. ಕತ್ತಿನ ಮೇಲಿದ್ದ ಪೀತವರ್ಣದ ತುಪ್ಪಳ್ಗರಿಗಳು ನವಿಲಿನ ಕಂಠಶ್ರೀಯನ್ನು ನೆನಪಿಗೆ ತರುವಂತೆ ರೋಲ್ಬಿಸಿಲಿನಲ್ಲಿ ನುಣ್ಣಗೆ ಮಿರುಗುತ್ತಿದ್ದವು. ರೆಕ್ಕೆಯ ಮತ್ತು ಪುಕ್ಕದ ಗರಿಗಳು ತರತರದ ಬಣ್ಣಗಳಿಂದ ಶೋಭಿಸುತ್ತಿದ್ದವು. ಮೂರು ಕವಲಾಗಿದ್ದ ಅದರ ಪಾದಗಳೆರಡೂ ಮಣ್ಣೆಡಿದು ಮಾಸಿದವು ಪಾದಗಳ ಮೇಲೆ ನಸುಗೆಂಪು ಬಣ್ಣವಾಗಿದ್ದ ಅದರ ಮುಂಗಾಲುಗಳು ಹಿಂಭಾಗದಲ್ಲಿ ಕಠಿನ ಕಂಟಕಗಳಂತೆ ನಖಗಳೆರಡು ಅರ್ಧ ಅಂಗುಲದಷ್ಟು ಉದ್ದವಾಗಿ ಆಯುಧಗಳಂತಿದ್ದವು. ಅದರ ಕಣ್ಣು ರೆಪ್ಪೆ ಮುಚ್ಚಿ ಜೀವನದ ಮೇಲೆ ಮರಣದ ಪರದೆ ಬಿದ್ದಂತಿತ್ತು.

ಸೇರಗಾರ ರಂಗಪ್ಪ ಸೆಟ್ಟರು ಸುಮಾರು ಮೂವತ್ತೈದು ವಯಸ್ಸಿನ ಸಾಧಾರಣವಾದ ಆಳು, ಪುಷ್ಟವಾಗಿದ್ದ ಅವರ ಆಕಾರದಲ್ಲಿ ಆಕರ್ಷಣೆಯವಾದ ವಿಶೇಷತೆಯೇನೂ ಇರಲಿಲ್ಲ.

ಇವನು ಗಟ್ಟದ ಕೆಲಗಿನವರು ಕೂಲಿಯಾಳುಗಳನ್ನು ಗಟ್ಟದ ಮೇಲಕ್ಕೆ ತಂದು ಮೇಸ್ತ್ರಿಯಾಗಿ ಕೆಲಸ ಮಾಡಿಸುತ್ತಿದ್ದರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇಸ್ತ್ರಿಯನ್ನು ಸೇರೆಗಾರರೆಂದು ಕರೆಯುತ್ತಿದ್ದರು.

ಕತ್ತಲೆಗಿರಿಯ ಸುರುವಿನಲ್ಲಿ ಕಾಡುಹಂದಿಯ ಬೇಟೆ

ಕತ್ತಲೆಗಿರಿಯ ಸರುವಿನ ಇರವು ಆದರ ವಾತಾವರಣ ಪ್ರಭಾವದಿಂದಲೇ ಗೊತ್ತಾಗುತ್ತಿತ್ತು, ಬೇಟೆಗಾರರಾದರೂ ಆ ಎಡೆಯನ್ನು ಸಮೀಪಿಸಿದರೆ, ಮೊದಲು ಶೀತವಲಯವನ್ನು ಪ್ರವೇಶಿಸಿದಂತೆ ಕುಳಿರಾಗುತ್ತಿತ್ತು, ಆ ಮೇಲೆ ಯಾವುದೋ ಒಂದು ಮಹಾ ಗುಹೆಯನ್ನು ಹೋಗುವಂತೆ ಬೆಳಕು ಕಡಿಮೆಯಾಗಿ ಬನದ ಮಬ್ಬುಗತ್ತಲೆ ದಟ್ಟೈಸುತ್ತಿತ್ತು, ಮೌನವೂ ನಿರ್ಜನತಾಭಾವವೂ ನಿಶ್ಚಲತೆಯೂ ಬರಬರುತ್ತಾ ಅತಿಶಯವಾಗಿ ಮನಸು 'ಬೆಕೋ' ಎನ್ನಲು ತೊಡಗಿ, ಯಾವುದೋ ಒಂದು

ಪೈಶಾಚಿಕವಾದ ಅದುರ್ತ್ಯ ಪ್ರಪಂಚಕ್ಕೆ ಹೋದಂತಾಗಿ ಭೀಕರತೆ ನಾಳನಾಳಗಳಲ್ಲಿಯೂ ಹಸರಿಸಿ ರಕ್ತದ ಒಂದೊಂದು ಬಿಂದುವಿನಲ್ಲಿಯೂ ಚಳಿಗೆ ಚಳಿ ಹಿಡಿಸುತ್ತಿತ್ತು. ಮಣ್ಣಿನಲ್ಲಿ ಹೂಳಿಟ್ಟ ಹೆಣವು ಕೊಳೆತು ಕರಗಿ ಹುಳುಗಳು ಮಿಜಿಮಿಜಿಯಾಡುವ ಸಮಯದಲ್ಲಿ ಜೀವವು ಮರಳಿದರೆ ಅದಕ್ಕೆ ಎಂತಹ ಮುಜುಗರದ ಅನುಭವವಾಗಬಹುದೋ ಅಲ್ಲಿಗೆ ಹೋದ ಬೇಟೆಗಾರನಿಗೆ, ಆಯಾ ಸಾಧಾರಣವಾಗಿ ಆ ಪಾತಾಳ ನರಕಕ್ಕೆ ಯಾರು ಹೋಗುತ್ತಿರಲಿಲ್ಲ.

ರಾತ್ರಿ ಕಾಡಿನಲ್ಲೆಲ್ಲಾ ತಿರುಗಿ ಹೊಟ್ಟೆ ತುಂಬಿದ ಒಂಟಿಗೆ ಹೋರಿ ಹಂದಿಯೊಂದು ದಿನ ಪ್ರಾತಃಕಾಲ ಕತಲೆಗಿರಿಯ ಸರುವಿಗೆ ಬಿಜಯ ಮಾಡಿ ಮಗ್ಗಲು ಬಿದ್ದಿತು. ಎಂದರೆ ಬಿಸಿಲ ಬೇಗೆಗೆ ಕೋಣಗಳು ಕೆಸರಿನಲ್ಲಿ ಬಿದ್ದು ಹೊರಳಾಡುವಂತೆ, ಕೆಸರಿನಲ್ಲಿ ಹೊರಳಿ ತೃಪ್ತಿಯಾದ ಮೇಲೆ ಪ್ರಾಣಿ ಸುಮ್ಮನೆ ಬಿದ್ದುಗೊಂಡಿತು. ಮೆಲ್ಲಗೆ ಕಣ್ಣು ಮುಚ್ಚಿತು. ಕಪ್ಪೆಗಳು ಹಾರಿ ಸದ್ದು ಮಾಡಿದಾಗ ಕಣ್ದೆರೆದು ನೋಡುತ್ತಾ ಮರಳಿ ಎವೆ ಮುಚ್ಚುತ್ತಿತ್ತು. ಸ್ವಲ್ಪ ಹೊತ್ತು ನಿದ್ದೆ ಮಾಡಿತು. ಇದ್ದಕ್ಕಿದ್ದಂತೆ ದೂರದಲ್ಲಿ ಜನರು ಮಾತಾಡುವ ಸದ್ದು ಕೇಳಿಸಿತು. ಹಂದಿ ಜಾಗರೂಕವಾಗಿ ಆಲಿಸಿತು. ಮತ್ತೆ ಯಾವ ಅಪಾಯವನ್ನು ನಿರೀಕ್ಷಿಸದೆ ಉದಾಸೀನವಾಯ್ತು. ಮತ್ತೆ ಜನರು ಮಾತಾಡುವ ಸದ್ದು ಸಮೀಪವಾದಂತೆ ತೋರಿತು, ಇದ್ದಕ್ಕಿದ್ದ ಹಾಗೆ ಸುತ್ತಮುತ್ತಲೂ ಹಳುವಿನಲ್ಲಿ ಸಣ್ಣ ಪ್ರಾಣಿಗಳು ಓಡಾಡುವ ಸದ್ದಾಯಿತು, ಹಿಂದೆಗಡೆ ನಾಯಿಯೊಂದು ತೀಕ್ಷ್ಣವಾಗಿ ಬಗುಳಿತು. ಮೊದ ಮೊದಲು ಮದಿಸಿದ ವರಾಹ ಅದನ್ನು ಲೆಕ್ಕಿಸಲಿಲ್ಲ. ಆದರೆ ನಾಯಿ ನಾಲ್ಕೈದು ಸಾರಿ ಒಂದೇ ಸಮನೆ ಕಾಡಿನ ಮೌನಕ್ಕೆ ಬಾಣವೆಸದಂತೆ ಕೂಗಲು ಹಂದಿ ಮೈ ರೋಮಗಳ್ನನು ಹುರಿ ಮಾಡಿಕೊಂಡು ಮೇಲೆದ್ದು ಹಿಂತಿರುಗಿ ನಿಂತಿತು. ಆ ನಾಯಿಯ ಕೂಗನ್ನು ಕೇಳಿ ನಾಲ್ಕೈದು ನಾಯಿಗಳು ಹಾರಿ ನುಗ್ಗಿ ಬಂದು ಹಂದಿಯ ಸುತ್ತಲೂ ಸ್ವಲ್ಪ ದೂರದಲ್ಲಿ ನಿಂತು ಬಗುಳಿದವು. ಕಾಡಿನ ಮೌನ ಹಂದಿಯ ಹೂಂಕಾರ ಮತ್ತು ನಾಯಿಯ ಕೂಗುಗಳಿಂದ ಸಮ್ಮಥಿತವಾಯಿತು, ಅಷ್ಟರಲ್ಲಿ ಮನುಷ್ಯರ ಕೂಗು ಕೇಳಿಸಿತು. ಬೇಟೆಯಲ್ಲಿ ಪಳಗಿದ್ದ ಆ ನಾಯಿಗಳು ಹಂದಿಯನ್ನು ಹೋಗಗೊಡೆದೆಯೂ ಅದರಿಂದ ತಿವಿಸಿಕೊಳ್ಳದೆ, ಅದನ್ನು ತಡೆದು ಮನುಷ್ಯರಿಗೆ ಹಂದಿ ತಡೆದಿದ್ದೇವೆ ಎಂದು ಸೂಚನೆ ಕೊಡುವಂತೆ ಬಗುಳುತ್ತಿದ್ದವು.

ಪುಟ್ಟಣ್ಣ ನಾಯಿಯ ಕೂಗು ಕೇಳಿಬರುತ್ತಿದ್ದ ಕಡೆಗೆ ದಟ್ಟವಾದ ಹಳುವಿನಲ್ಲಿ ಕಣ್ಣು ಮುಚ್ಚಿಕೊಂಡು ನುಗ್ಗಿದನು. ಅವನ ಮನಸ್ಸೆಲ್ಲಾ ಹಂದಿಯ ಮೇಲಿತ್ತು, ಕೆಲವೆಡೆಗಳಲಿ ನೆಟ್ಟಗೆ ಹೋಗಲಾರದೆ ನೆಲದವರೆವಿಗೂ ಬಾಗಿ ನುಸಿಯಬೇಕಾಗಿತ್ತು, ಬಳ್ಳಿಗಿಡ ಹೊದರು ಮರಗಳು ಹೆಜ್ಜೆ ಹೆಜ್ಜೆಗೂ ತಡೆಗಟ್ಟಿ ನಿಂತಿದ್ದು, ಇಂಬಳಗಳು ಹತ್ತಿ ನೆತ್ತರು ಹೀರತೊಡಗಿದ್ದುದೂ ಅವನ ಗಮನಕ್ಕೆ ಬರಲಿಲ್ಲ. ಆ ಟೋಮಿಯಾಗಿ ಅವತಾರ ಎತ್ತಿದಂದಿನಿಂದಲೂ ನೀರು ಕಾಣದೆ ಎಣ್ಣೆಯ ಜಡ್ಡು ಹಿಡಿದು ಮೇಣಗಪ್ಪಟವಾಗಿದ್ದ ಅವನ 'ಹಾಸನದ ತೋಪಿ' ಸಂದಿಗೊಂದಿಗಳಲ್ಲಿ ಗಿಡುಹಿಡಿದು ಹೊರಹೊಮ್ಮಿದ ಕೂದಲು ಕೆದರಿಕೊಂಡು ನಡುನಡುವೆ ಕಳಚಿಬೀಳಲು ಅಣುವಾಗುತ್ತಿದ್ದ 'ತೊಪಿ'ಯನ್ನು ತಲೆಗೆ

ಒತ್ತಿಕೊಂಡು ಬಹು ಕ್ಲೇಶದಿಂದ ಆದರೂ ವೇಗದಿಂದ ನಡೆದನು. ಹಂದಿಯ ಹೂಂಕಾರದಿಂದ ಅದು ದೊಡ್ಡ ಒಂಟಿಗನಿರಬೇಕೆಂದು ಊಹಿಸಿದನು. ಪುಟ್ಟಣ್ಣ ಬಹಳ ಎಚ್ಚರಿಕೆಯಿಂದ ಹಳುವಿನಲ್ಲಿ ನುಸುಳಿ ನಡೆದು ಶುನಕ ಸೂಕರಗಳ ಸಮರ ರಂಗಕ್ಕೆ ಬಳಿಯಾದನು. ಹಂದಿಯೂ ಅವನ ಬಿದ್ದಿತು ಅದನ್ನು ಸುಡಲು ಬಂದೂಕನ್ನು ಸರಕ್ಕನೆ ನಗೆಹಿದನು. ಸುತ್ತಲೂ ಮುತ್ತಿದ್ದ ನಾಯಿಗಳು ಮನುಷ್ಯನ ಸಾಮೀಪ್ಯವನ್ನರಿತು, ಧೈರ್ಯಗೊಂಡು ಪ್ರಾಣಿಯನ್ನು ನಾಲ್ದೆಸೆಗಳಿಂದಲೂ ಮೇಲ್ವಾಯ್ದು ಪೀಡಿಸುತ್ತಾ ಪ್ರಾರಂಭ ಮಾಡಿದ್ದುದರಿಂದ ಕೈ ತಡೆದನು. ಏಕೆಂದರೆ ಅನೇಕ ಬೇಟೆಗಾರರು ಅಂತಹ ಸಮಯಗಳಲ್ಲಿ ವಿವೇಚನೆ ಸಾಲದೆ ಹೋಗಿ ಹಂದಿಯ ಅವನು ಸರಿಯಾದ ಸಮಯಕ್ಕಾಗಿ ಹವಣಿಸುತ್ತಿದ್ದಾಗಲೇ ಹಂದಿಗೂ ಮನುಷ್ಯನಿಗೆ ಸುಳಿ ಸಿಕ್ಕಿ ಒಂದು ಬಾರಿ ಪರಾರಿಯಾಗಲು ರಭಸದಿಂದ ಓಡಿತು. ಆಗ ನಾಯಿಗಳು ಸ್ವಲ್ಪ ಹಿಂದೆ ಬಿದ್ದ ಹೊತ್ತನ್ನೆ ಕಾದು ಮರ ಗಿಡ ಪೊದೆಗಳ ಮಧ್ಯೆ ಅಲ್ಲಲ್ಲಿ ಮಿಂಚು ಮಿಂಚುತ್ತಿದ್ದ ಹಂದಿಗೆ ಪುಟ್ಟಣ್ಣ ಒಂದು ಗುಂಡು ಹೊಡೆದನು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿಯೇ ಮತ್ತೊಂದು ಈಡೂ ಹಾರಿತು. ಈಡು ಹಾರಿದ ಸದ್ದನ್ನು ಕೇಳಿದ ನಾಯಿಗಳಂತೂ ರಣಭೇಲಿಯನ್ನು ಆಲಿಸಿದ ಸೈನಿಕರಂತೆ ಮೃಗಯಾವೇಶದಿಂದ ಸೂಕರನನ್ನು ಹಿಂಬಾಲಿಸಿದವು. ಪುಟ್ಟಣ್ಣನೂ ಬೆನ್ನಟ್ಟಿದನು. ಆದರೆ ಆ ದಟ್ಟ ಹಳುವಿನಲ್ಲಿ ಹಿಂಬಾಲಿಸಲು ಸಾಧ್ಯವಾಗದೆ ಸ್ವಲ್ಪ ದೂರ ಓಡಿದನು ಏದುತ್ತಾ ಹಾಗೆಯೇ ನಿಂತುಬಿಟ್ಟನು. ಹಂದಿ ನಾಯಿಗಳ ಸದ್ದು ಬರಬರುತ್ತಾ ದೂರದೂರವಾಗಿ ಕಿವಿ ಮರೆಯಾಯಿತು.

ಹಂದಿ ಈಡು ಹೊಡೆದಲ್ಲಿಗೆ ಬಂದು 'ಗುಂಡಿನ ಹುಯಿಲು' ನೋಡಿ ನೆತ್ತರು ಗಿತ್ತರು ಬಿದ್ದಿದೆಯೋ ಏನೋ ಎಂದು ಹಳುವನ್ನು ನೆಲವನ್ನು ಪರೀಕ್ಷಿಸಿದನು. ಒಂದೆಡೆ ಎಲೆಗಳ ಮೇಲೆ ರಕ್ತ ಸೋರಿತು. ಗುಂಡು ತಗುಲಿದೆ ಎಂಬುದೇನೋ ನಿಶ್ಚಯವಾಯಿತು. ತಿಮ್ಮನ ಹೋಯ್ ಎಂದು ಕರೆದುದನು, ತಿಮ್ಮನು ಹಂದಿ ಬಿದ್ದಿದೆ ಎಂದೇ ನಿಶ್ಚಯಿಸಿ ಓಡೋಡುತ್ತಾ ಬಂದನು ಏಕೆಂದರೆ ಪುಟ್ಟಣ್ಣನು ಇಟ್ಟ ಗುರಿ ತಪ್ಪದು ಎಂದು ಅನುಭವದಿಂದ ಎಲ್ಲರಿಗೂ ತಿಳಿದಿತ್ತು.

ಪುಟ್ಟಣ್ಣ "ಹೋಯ್ ನಮ್ಮ ಹಂದಿಗೇ ಯಾರಾದರೂ ಹೊಡೆದರೋ?" ಎಂದನು. ಅಷ್ಟರಲ್ಲಿ ನಾಯಿಗಳ ಕೂಗಾಟದ ಸದ್ದು ಬಹುದೂರದಲ್ಲಿ ಕೇಳಿಸಿದ ಹಾಗಾಯಿತು. ಎಲ್ಲರೂ ಈಡು ಕೇಳಿಸಿದ ಕಡೆಗೆ ವೇಗವಾಗಿ ಧಾವಿಸಿದರು. ಮುಂದುದಂತೆಲ್ಲ ನಾಯಿಗಳ ಕೂಗು ಹೆಚ್ಚು ಸ್ಪಷ್ಟವಾಗಿ ಕೇಳಿಬಂದಿತು ಮತ್ತಷ್ಟು ಬೇಗ ಬೇಗನೆ ನಡೆದರು.

ಸ್ವಲ್ಪ ದೂರ ಹೋದ ಮೇಲೆ ನಾಯಿಗಳ ಕೂಗು ಕೇಳಿಸಲಿಲ್ಲ. ಮನುಷ್ಯರ ಮಾತು ಕೇಳಿಸಿತು, ಈ ರೀತಿ ಹಂದಿಯ ಬೇಟೆಯನ್ನು ಮಾಡಿದರು.

ಚಂದ್ರಯ್ಯಗೌಡರು, ಸಾಮಾನು ಸಮೇತ ಗಾಡಿಯನ್ನು ಹಿಂದಕ್ಕೆ ಹೊಡೆಯಿಸಿಕೊಂಡು ಹೋದ ಮೇಲೆ ಕೃಷ್ಣಪ್ಪನು, ದಿಕ್ಕುದಿಕ್ಕಿಗೆ ಕೈಕಾಲು ಬೀಸಿ ಬಾಯಿಗೆ ಬಂದಂತೆ ಬದುಕುತ್ತಿದ್ದ ಜಾಕಿಯನ್ನು ಬಹುಪ್ರಯಾಸದಿಂದ ಸೀತೆ ಮನೆಗೆ ನಡೆಸಿ ನಾಯಿಗಳನ್ನು ಗದರಿಸಿ ಸುಮ್ಮನಿರಿಸಿ ಮಲಗಲೆಂದು ಜಗುಲಿಯ ಮೇಲೆ ಹಾಸಿಗೆ ಹಾಸುತ್ತಿದ್ದಾಗ 'ಢೂ' ಎಂದು ಒಂದು ಕೋವಿಯ ಈಡು ಮೊಳಗಿ ಕೇಳಿಸಿತು. ಕೃಷ್ಣಪ್ಪನ ಹೃದಯದಲ್ಲಿ ನೆತ್ತರು ಬಿಸಿಬಿಸಿಯಾಗಿ ನುಗ್ಗಿತು. ಅಷ್ಟರಲ್ಲಿಯೇ ಕಾಡಿನಿಂದ ರಾತ್ರಿಯ ನಿಶ್ಯಬ್ಧತೆಯನ್ನು ಕಡೆಯುವಂತೆ ಹೆಬ್ಬುಲಿಯ ಅಬ್ಬರವೂ ಕೇಳಿಸಿತು. ಮನೆಯ ನಾಯಿಗಳೆಲ್ಲಾ ಒಡೆಯನ ಗೌರವವಾಗಿ ಬೊಗಳ ತೊಡಗಿದವು. ತಾವು ಕೋವಿ ಕಟ್ಟಿದ್ದು ಸಾರ್ಥಕವಾಯಿತೆಂದು ಕೃಷ್ಣಪ್ಪ ಹಿಗ್ಗಿ ಬೆಳಗಾಗುವುದನ್ನೆ ಕಾತರನಾಗಿ ಕಾಯುತ್ತಾ ಮಲಗಿ ನಿದ್ದೆ ಹೋದನು. "ನಾವೇನು ಹುಲಿ ಶಿಕಾರಿಗೆ ಹೋಗ್ತೀವೇನವ್ವಾ? ಕೋವಿ ಕಟ್ಟಿದ್ದು ಈಡು ಹಾರ್ತು, ಏನಾಗಿದೆ ನೋಡ್ಕೊಂಡು ಬರ್ತೀವಷ್ಟೆ".

ಸೂರ್ಯ ಆಗತಾನೆ ಬೆಟ್ಟಗಾಡುಗಳ ಮೇಲೆ ತನ್ನ ಕಿರಣ ವರ್ಷದ ಹೊಮ್ಬನಿಗಳನ್ನು ಸೂಸತೊಡಗಿದ್ದನು. ತೀಡುತ್ತಿದ್ದ ತಂಬೆಲರಿನ ನೂರಾರು ವಿಧವಿಧ ಪಕ್ಷಿಗಳ ಗಾನ ತೇಲಿ ಬರುತ್ತಿತ್ತು. ಕೃಷ್ಣಪ್ಪ ತೋಟಾ ಕೋವಿಯನ್ನು ಜಾಕಿ ಕೇಪಿನ ಕೋವಿಯನ್ನೂ ಹೆಗಲ ಮೇಲೆ ಹೊತ್ತುಕೊಂಡು ಮರ ಗಿಡ ಪೊದೆ ಬಳ್ಳಿಗಳ ನಡುವೆ ನುಸಿದು ಬೆಟ್ಟವೇರುತ್ತಿದ್ದರು, ನಾಯಿಗಗಳು ಅವರ ಸುತ್ತಲೂ ನೂರಾರು ಊರುಗಳಲ್ಲಿ ನೆಲವನ್ನು ಮೂಸಿ ಗಾಳಿ ಹಿಡಿಯುತ್ತಲೂ ಅಲ್ಲಲ್ಲಿ ನಿಂತು ಹಿಂಗಾಲೆತ್ತಿ ಪೊದೆಗಳಿಗೆ ನೀರು ಹುಯ್ಯುತ್ತಲೂ ಉತ್ಸಾಹದಿಂದ ಓಡಾಡುತ್ತಿದ್ದವು.

ಕೋವಿಕಟ್ಟಿದ್ದ ಜಾಗಕ್ಕೆ ಹೋಗಿ ನೋಡಲು ದೃಶ್ಯವು ಭಯಗರ್ಭಿತ ನೀರವವಾಗಿತ್ತು. ಕೃಷ್ಣಪ್ಪ ಬೇಗಬೇಗನೆ ಗುಂಡು ಹಾರದಿದ್ದ ಕೋವಿಗಳನ್ನು ಬಿಚ್ಚಿದನು. ಇಲ್ಲದಿದ್ದರೆ ನಾಯಿಗಳು ಸೂತ್ರದ ಮೇಲೆ ಹಾದು ಸಾಯುತ್ತಿದ್ದವು.

ಪಶುಶವ ಹಿಂದಿನ ದಿನ ಇದ್ದಂತೆಯೇ ಬಿದ್ದಿತ್ತು. ನೊಣಗಳು ಮಾತ್ರ ಹೆಚ್ಚಾಗಿ ಹಾರಾಡುತ್ತಿದ್ದವು. ಸ್ವಲ್ಪ ದುರ್ವಾಸನೆಯೂ ಹುಟ್ಟಿತು. ಹುಲಿಗೆ ಗುಂಡಿನೇಟು ಬಿದ್ದಿದೆ ಎಂಬುದೇನೋ ಅಲ್ಲಿ ಬಿದ್ದಿದ್ದ ರಕ್ತದಿಂದಲೂ ಬಣ್ಣಗೂದಲುಗಳಿಂದಲೂ ಗೊತ್ತಾಯಿತು. ಆದರೆ ಹುಲಿ ಅಲ್ಲೆಲ್ಲಿಯೂ ಸಮೀಪದಲ್ಲಿ ಸತ್ತಿರಲಿಲ್ಲ. ಅದಕ್ಕೆ ಬಲವಾದ ಗಾಯವಾಗಿದ್ದಿತೆ, ಹೊರತು ಪ್ರಾಣಾಪಾಯವಾಗಿರಲಿಲ್ಲ. ನಾಯಿಗಳಲ್ಲಿ ಕೆಲವಂತೂ ಹುಲಿಯ ವಾಸನೆ ಸಿಕ್ಕಿ ಬೆದರುಗಣ್ಣಾಗಿ ನೋಡಹತ್ತಿದವು.

"ಈಏನು ಮಾಡಾನೋ ಜಾಕಿ?" ಎಂದನು ಕೃಷ್ಣಪ್ಪ

"ಮಾಡೊದೇನು? ಮನೀಗೇ ಹೋಗಾನ ಗಾಯದ ಹುಲೀ ಸಾವಾಸ ಬ್ಯಾಡ ಮಂಡಗದ್ದೇಲಿ ಒಬ್ಬ ದೊರೆ (ಯುರೋಪಿಯನ್) ಗಾಯದ ಹುಲಿ ಹೊಡ್ಯಾಕೆ ಹೋಗಿ ಹಿಂದಕ್ಕೆ ಬರ್ಲೇ ಇಲ್ಲಂತೆ!".

“ಮನೆಗೆ ಹೋಗಾದೆ ಸೈಯ್ಯಾ! ಇಷ್ಟು ರಕ್ತ ಬಿದ್ದ ಹುಲಿ ಇಷ್ಟೊತ್ತನಕ ಬದುಕಿರೋದು ಸುಳ್ಳು! ಸ್ವಲ್ಪ ದೂರ ಹೋಗಿ ಹುಡುಕಿ ನೋಡಾನ ನಾಯಿ ಇವೆ! ನಿನಗ್ಯಾಕೆ ಹೆದರಿಕೆ? ನನ್ನ ಹಿಂದೇನೇ ಬಾ?

ಜಾಕಿ ಭಯಪ್ರೇರಿತ ವಿವೇಕದಿಂದ “ಬ್ಯಾಡ ಮಾರಾಯ್ರಾ ಗಾಯದ ಹುಲಿ ‘ಹುಡಿ’ಕ್ಕೊಂಡು ಹೋಗೋದೊ ಒಂದೇ, ನಾಗರಹಾವಿನ ಹೆಡೆ ಹಿಡಿಯೋದೂ ಒಂದೇ ಎಂದು ಹೇಳಿದನು.

“ಹಾಂಗಾದರೆ ನೀನಿಲ್ಲೇ ನಿಂತರು. ನಾ ನಾಯಿ ಕರ್‍ಕೊಂಡು ಹೀಂಗೆ ಹೋಗಿ ಬರ್‍ತೀನಿ” ಎಂದ ಕೃಷ್ಣಪ್ಪ ಮೆಲುದನಿಯಿಂದ “ ಬಾ ಕ್ರೂ” ಎಂದು ಕಾಯಿಗಳನ್ನು ಜೊತೆಗೆ ಕರೆದುಕೊಂಡು ರಕ್ತದ ಜಾಡಿನಲ್ಲಿ ಮುಂದುವರೆದನು. ಜಾಕಿ ನಿಲ್ಲಲಿಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಅವನ ಹಿಂದೆಯೇ ನಡೆದನು.

ಇಬ್ಬರೂ ಹೆಜ್ಜೆಹೆಜ್ಜೆಗೂ ನಿಂತು ಮೈಯೆಲ್ಲ ಕಣ್ಣಾಗಿ ನೋಡುತ್ತ ನಾಯಿಗಳಿಗೆ ಮೃದುಧ್ವನಿಯಲ್ಲಿ ಉತ್ತೇಜನವಾಯುತ್ತ ಹಳುವಿನಲ್ಲಿ ಮಸಿಯತೊಡಗಿದರು. ನಾಯಿಗಳೂ ಬೆದರಿ ಬೆದರಿ ಬಹಳ ಜಾಗರೂಕತೆಯಿಂದ ಮನುಷ್ಯರಿಗೆ ಸ್ವಲ್ಪ ದೂರದಲ್ಲಿಯೇ ಸಂಚರಿಸುತ್ತಿದ್ದವು.

ಒಮ್ಮೆ ನಾಯಿಯೊಂದು ಬೆಚ್ಚಿ ಬಿದ್ದುದನ್ನು ಕಂಡು ಕೃಷ್ಣಪ್ಪ ತನ್ನ ಬೆನ್ನು ಮುಟ್ಟಿಕೊಂಡೆ ಬರುತ್ತಿದ್ದ ಜಾಕಿಗೆ “ಯಾಕೊ? ನಾಯಿ ಬೆಚ್ಚಿ ಬೀಳ್ತದೆ? ಇಲ್ಲೇ ಎಲ್ಲಾದರೂ ಸತ್ತು ಬಿದ್ದಿದೆಯೋ? ಎಂದು ನಾಯಿಗಳಿಗೆ ಮೆಲ್ಲಗೆ ಛೂ! ಛೂ! ಛೂ ‘ಹಿಡಿ’ ನುಗ್ಗು” ಎಂದು ಕೈ ಚುಟಿಗೆ ಹೊಡೆದು ಮುಂದಿನ ಹಳುವನ್ನು ತೋರಿಸಿದನು. ನಾಯಿಗಳು ಸ್ವಲ್ಪ ಮುಂಬರಿದು ಮತ್ತೆ ನಿಂತವು. ಕೃಷ್ಣಪ್ಪ ಕೋವಿಯನ್ನು ಸಿದ್ಧಮಾಡಿಕೊಂಡು ಎರಡು ಹೆಜ್ಜೆ ಮುಂದೆ ನಡೆದು, ಮುಂದಿನ ಹಳುವನ್ನು ತನ್ನ ಮುಖವನ್ನೂ ಸರಿದಿಯ ಮೇಲೆ ನೋಡುತ್ತಿದ್ದ ನಾಯಿಗಳನ್ನು ನೋಡಿ “ಛೂ! ನಡಿ! ನುಗು! ಪಾಟ್‌ರೈಟ್!” ಎಂದನು.

ಪಾಟ್ ರೈಟ್ ಎಂಬ ನಾಯಿ ಒಳ್ಳೆಯ ಬೇಟೆ ನಾಯಿ. ಆದರೆ ಹುಲಿಯ ವಿಷಯದಲ್ಲಿ ಮಾತ್ರ ಅಳುಕುತ್ತಿತ್ತು. ಕಾರಣವೇನೆಂದರೆ, ಒಂದು ಸಾರಿ ರಾತ್ರಿ ಅದು ಮನೆಯ ಬಳಿ ನಿದ್ದೆಯಲ್ಲಿ ಮಲಗಿದ್ದಾಗ ದೊಡ್ಡ ಚಿರತೆಯೊಂದು ಅದನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿತು. ಪಾಟ್ ರೈಟ್ ಅದರೊಡನೆ ಹೋರಾಡಿ ತಪ್ಪಿಸಿಕೊಂಡಿತು. ಆ ಮೇಲೆ ಅದಕ್ಕೆ ಹುಲಿ ಚಿರತೆಗಳ ವಿಚಾರದಲ್ಲಿ ಹೆದರಿಕೆ ನಿಂತುಬಿಟ್ಟಿತು. ಯಜಮಾನನು ತನ್ನ ಹೆಸರನ್ನು ಹೇಳಿ “ಛೂ! ನುಗು” ಎನ್ನಲು ಪಾಟ್‌ರೈಟ್ ಒಂದೇ ಮನಸ್ಸು ಮಾಡಿ ಮುಂದುವರೆಯಿತು. ಒಡೆಯನ ಬಳಿಯಿದ್ದ ದಟ್ಟವಾದ ಪೊದೆಯಿಂದ ಸಣ್ಣ ಘರ್ಜನೆ ಕೇಳಿಸಿದಂತಾಯಿತು. ಕೃಷ್ಣಪ್ಪ ಜಾಕಿ ಇಬ್ಬರೂ ಕೂದಲು ನೆಟ್ಟಗಾಗಿ ಎರಡು ಹೆಜ್ಜೆ ಹಿಂದಕ್ಕೆ ಹಾರಿ ಹೋಗಿ ನಿಂತರು!

ನಾಯಿಗಳೂ ಬೆಚ್ಚಿ ಬೆದರಿ ಹಳುವಿನಲ್ಲಿ ದಡದಡನೆ ಹಿನ್ನುಗ್ಗಿ ನಿಂತು ತೀಕ್ಷ್ಣವಾಗಿ ಬೊಗಳಲಾರಂಭಿಸಿದವು. ಕೃಷ್ಣಪ್ಪ ಎಷ್ಟು ಉತ್ತೇಜನ ಕೊಟ್ಟರು ಒಂದಾದರೂ ಮುಂಬರಿಯಲಿಲ್ಲ. ಹುಲಿ ಅಲ್ಲಿದ್ದುದಂತೂ ನಿಶ್ಚಯವಾಯಿತು. ಸೊಂಟಕ್ಕೆ ಗುಂಡು ತಗುಲಿ ಯಾತನೆಯಿಂದ ಬಿದ್ದಿದ್ದ ಹುಲಿ

ನಾಯಿಗಳನ್ನು ಮನುಷ್ಯರ ಸಮೀಪ್ಯವನ್ನು ಅರಿತು ಪ್ರತಿ ಹಿಂಸೆಗಾಗಿ ರೋಷ ಭೀಷಣವಾಗುತ್ತಿತ್ತು. 'ಖಂಡಿತ ಬ್ಯಾಡ ಕೃಷ್ಣಪ್ಪಗೌಡರೆ; ಮನೀಗೆ ಹೋಗಿ ಜನ ಸೇರಿಸಿಕೊಂಡು ಬರಾನ' ಎಂದನು ಜಾಕಿ

"ನಿನ್ನ ಹಾಂಗಿದ್ದವರೇ ಅಷ್ಟೇ ಆಮೇಲೂ ಬರೋದು? ಅವರು ಒಂದು ಮಾಡೋದು ಇಷ್ಟೇ ಹುಲಿಗೆ ಬಲವಾಗಿ ಏಟು ಬಿದ್ದಿರಬೇಕೊ! ಯಾವುದಾದರೂ ಕಂಡೀಲಿ ಇನ್ನೊಂದು ಗುಂಡು ಹೊಡೆದರೆ ನೆಗೆದುಬಿದ್ದು ಹೋಗ್ತದೆ" ಎಂದು ಕೃಷ್ಣಪ್ಪ ಮೆಲ್ಲಗೆ ಮುಮ್ಮುರಿದನು. ಜಾಕಿ ಅಲ್ಲಿಯೇ ನಿಂತು ನೋಡುತ್ತಿದ್ದನು ಅತಿ ಕಾತರತೆಯಿಂದ.

ಜಾಕಿ ನೋಡುತ್ತಿದ್ದ ಹಾಗೆ ಕೃಷ್ಣಪ್ಪನ ಬಾಗಿದ ದೇಹ ಹಳುವಿನಲ್ಲಿ ಮರೆಯಾಯಿತು, ತಾನೂ ಒಂದೆರಡು ಹೆಜ್ಜೆ ಮುಂದುವರೆದು ಅವನನ್ನು ಹಿಂಬಾಲಿಸ ತಿಳಿಸಿದನು. ಆದರೆ ಎದೆಯಾಗಲಿಲ್ಲ ಮತ್ತೆ ನಿಂತು ನಾಯಿಗಳಿಗೆ "ಛೂ! ಛೂ! ನುಗ್ಗು! ಹಿಡಿ!" ಎಂದನು. ಇದ್ದಕ್ಕಿದ್ದ ಹಾಗೆ ನೆತ್ತರು ಹೆಪ್ಪುಗಡುವಂತೆ ಕೈ ಕಾಲು ಮರಗಟ್ಟುವಂತೆ ಪ್ರಜ್ಞೆ ತಪ್ಪುವಂತೆ ಹೆಬ್ಬುಲಿಯ ಮಹಾಭೀಷಣದಬ್ಬರ ಅರಣ್ಯಮೌನವನ್ನು ನುಚ್ಚುನೂರಾಗುವಂತೆ ಅಪ್ಪಳಿಸಿ, ಜಾಕಿಯನ್ನು ನಡುಗಿಸಿತು. ಹಳುವಿನಲ್ಲಿ ದೊಡ್ಡ ಪ್ರಾಣಿ ಭರದಿಂದ ಚಲಿಸುವಂತೆ ಸದ್ದಾಯಿತು. ಹಳವೂ ರಭಸದಿಂದ ಅಲುಗಾಡಿತು. ನಾಯಿಗಳು ಗಂಟಲು ಬಿರಿಯುವಂತೆ ಕೂಗತೊಡಗಿದವು. ಒಳ ನೊಡನೆ "ಠಳ್" ಎಂದು ತೋಟಾ ಬಂದೂಕು ಹಾರಿದ ಶಬ್ಧವೂ " ಅಯ್ಯೋ ಜಾಕಿ" ಎಂಬ ಕೃಷ್ಣಪ್ಪನ ಆರ್ತನಾದವು ಕೇಳಿಸಿದವು, ಜಾಕಿ ಮರುಳಮರಿದವನಂತೆ ನಡುಗುತ್ತಾ ಕೂಗುತ್ತ ಆರ್ತನಾದ ಕೇಳಿಬಂದ ತಾಣಕ್ಕೆ ನುಗ್ಗಿದನು. ನೋಡುತ್ತಾನೆ ಹಳುವಿನಲ್ಲಿ ಕೆಳಗುರುಳಿದ್ದ ಕೃಷ್ಣಪ್ಪನ ಏಲೆ ಭೀಷಣಾಕೃತಿಯ ಹೆಬ್ಬುಲಿ! ಜಾಕಿಗೆ ತಲೆ ಕದಡಿ ಹೋಯಿತು, ವಸ್ತುಗಳೆಲ್ಲಾ ಬರಿಯ ಬಣ್ಣಗಳಾಗಿ ಕಣ್ಣಿನೆದರು ಸುಳಿಯತೊಡಗಿದವು. ಹಸರು, ಹಳದಿ, ಕಪ್ಪು, ಕೆಂಪು ಬಿಳಿ! ಹಳುವಿನ ಹಸರು, ಹುಲಿಯ ಮೈಪಟ್ಟಿಗಳ ಹಳದಿ ಕಪ್ಪು ಕೆಂಪು ರಕ್ತದ ಕೆಂಪು, ಹಲ್ಲು ಮತ್ತು ದವಡೆಗಳ ಬಳಿ! ಜಾಕಿಯನ್ನು ಕಂಡ ಹುಲಿ ಒಂದೇ ನೆಗತಕ್ಕೆ ಅವನ ಮೇಲೆ ಹಾರಿತು, ಜಾಕಿಗೆ ಮೈಮೇಲೆ ಕುದಿನೀರು ಎರಚಿದಂತಾಗಿ ಕಣ್ಣು ಕತ್ತಲೆಗಟ್ಟಿ, ಏತಕ್ಕೋ ಏನೋ ಕೈಲಿದ್ದ ಕೋವಿಯನೆತ್ತಿ ಗುಂಡು ಹಾರಿಸಿದನು. ಅಷ್ಟರಲ್ಲಿ ತನ್ನ ಮೈಗೆ ಏನೋ ತಾಗಿದಂತಾಗಿ ಮೂರ್ಛೆಯಿಂದ ಕೆಳಗುರುಳಿದನು. ಕೋವಿಯ ಈಡು ಕೇಳಿ ಆವೇಶಬಲದಿಂದ ನಾಯಿಗಳೆಲ್ಲಾ ನುಗ್ಗಿ ಒಂದು ಹುಲಿಯ ಮೇಲೆ ಬಿದ್ದವು. ಹುಲಿ ಜಾಕಿಯ ಪಕ್ಕದಲ್ಲಿ ಸತ್ತು ಬಿದ್ದಿತು. ಅದಕ್ಕೆ ಕೃಷ್ಣಪ್ಪ ಹಾರಿಸಿದ ಗುಂಡೂ ಜಾಕಿ ಹಾರಿಸಿದ ಗುಂಡು ಎರಡೂ ತಗುಲಿದವು. ಆದರಿಂದ ಅದು ಹಾರಿದ್ದ ವೇಗಕ್ಕೆ ಜಾಕಿಯ ಮೈಪರಚಿ ಗಾಯವಾಗಿತ್ತೇ ಹೊರತು ಅವನು ಸಾಯಲಿಲ್ಲ.

ಅಡುಗೆ ಮಾಡುತ್ತಿದ್ದ ಕೃಷ್ಣಪ್ಪನ ಮಾತೆ ಈಡಿನ ಸದ್ದು ಕೇಳಿ ಕರಳು ಮರುಗಿದಂತಾಗಿ ಜಗಲಿಗೆ ಓಡಿ ಬಂದು ಗಂಡನ ಹತ್ತಿರ, ಉದ್ವೇಗದಿಂದ "ತಮ್ಮ ಹುಲಿ ಹೊಡಿಯಾಕೆ ಹೋಗಿದ್ದ! ಎರಡು ಈಡು ಕೇಳಿಸಿತು. ಏನಾಯ್ತೊ ಏನೋ! ಜನ ಕರಕೊಂಡು ಹೋಗಿ ನೋಡಿ" ಎಂದಳು.

ಸಿಂಗಪ್ಪಗೌಡರಿಗೂ ಹಠಾತ್ತಾಗಿ ಭಯವಾಗಿ ಕೆಲವು ಜನರನ್ನು ಕರೆದುಕೊಂಡು ಬೇಗ ಬೇಗನೆ ಕಾಡಿನ ಕಡೆಗೆ ಓಡಿ ನಡೆದರು.

ಸ್ವಲ್ಪ ಹೊತ್ತಿನ ಮೇಲೆ ಜಾಕಿಗೆ ಪ್ರಜ್ಞೆಯಾಯಿತು, ನೋಡುತ್ತಾನೆ; ಹುಲಿ ಪಕ್ಕದಲ್ಲಿ ಬಿದ್ದಿದೆ. ನಾಯಿ ಕೂಗುತ್ತಿವೆ. ಕೃಷ್ಣಪ್ಪ ಅಲುಗಾಡದೆ ಬಿದ್ದಿದ್ದಾನೆ. ತನ್ನ ಮೈಯೆಲ್ಲಾ ಹುಲಿಯುಗುರುಗಳ ಗಾಯದಿಂದ ಕೆಂಪಾಗಿದೆ, ರಕ್ತಮಯವಾಗಿದೆ, ಭಯಾನಕವಾಗಿವಾಗಿದೆ, ಏಳಲು ಪ್ರಯತ್ನಿಸಿದನು, ಆಗಲಿಲ್ಲ ಕೈಯೂರಿಕೊಂಡು ಮೆಲ್ಲನೆ ಕೃಷ್ಣಪ್ಪನ ಬಳಿಗೆ ಅಂಬೆಗಾಲಿಟ್ಟುಕೊಂಡು ಸರಿದನು. ಕೃಷ್ಣಪ್ಪನ ಶವ ರಕದಲ್ಲಿ ಅದ್ದಿ ಹೋಗಿತ್ತು. ಮುಖದ ಗುರುತು ಕೂಡ ಸಿಕ್ಕದಷ್ಟು ಗಾಯವಾಗಿತ್ತು. ಹುಲಿಯುಗಿರಿನಿಂದ ಒಂದು ಕಣ್ಣೂ ಬೆದಕಿ ಅದರ ಪಾಪೆಗೆ ಹೊರಗೆ ಬಂದಿತ್ತು. ತಲೆ ಎರಡು ಮೂರೆಡೆಗಳಲ್ಲಿ ಕೊಡಲಿಯಿಂದ ಕಡಿದಂತಾಗಿ ರಕ್ತಮಿಶ್ರವಾದ ಬಿಳಿಮೆದುಳು ಕರಿಯ ಕೂದಲುಗಳಿಂದ ಹೊರ ಹೊಮ್ಮಿತ್ತು. ಎಡಗೈ ಕೋವಿಯನ್ನಿನ್ನೂ ಬಲವಾಗಿಯೇ ಹಿಡಿದುಕೊಂಡಂತಿತ್ತು. ಆ ಭಯಾನಕ ಭೀಭತ್ಸ ದೃಶ್ಯವನ್ನು ಕಂಡ ಜಾಕಿಗೆ ಅಳುವುದಕ್ಕೂ ಕೂಡ ಆಗಲಿಲ್ಲ, ಮರವಟ್ಟನು,

ಸಿಂಗಪ್ಪಗೌಡರು ರೋದನದ ಪ್ರವಾಹದಲ್ಲಿ ಮುಳುಗಿ ತೇಲಿ ಮಗನ ಶವವನ್ನು ವ್ಯಾಘ್ರನ ಬದ ವಿಷವೇರಿ ಸಹಿಸಲಾರದ ನೋವಿನಿಂದ ಭಯಂಕರವಾಗಿ ನರಳುತ್ತಿದ್ದ ಜಾಕಿಯನ್ನು ಹೊರಿಸಿಕೊಂಡು ಮನೆಗೆ ಬಂದರು. ತಾಯಿ ಎದೆ ಬಿರಿಯುವಂತೆ ಹೋ ಎಂದು ಅಳುತ್ತಾ ಎದೆ ತಲೆ ಹೊಟ್ಟೆಗಳನ್ನು ಬಡಿದುಕೊಳ್ಳುತ್ತಾ ತಲೆಕೂದಲನ್ನು ಕಿತ್ತುಕೊಳ್ಳುತ್ತಾ ಮುಖವನ್ನು ಪರಚಿಕೊಳ್ಳುತ್ತಾ ರಕ್ತಮಯವಾಗಿದ್ದ ಮಗನ ಛಿದ್ರಶವದ ಮೇಲೆ ಬಿದ್ದು ಬಿದ್ದು ಹೊರಳಾಡತೊಡಗಿದಳು. ಆಳುಗಳೂ ನೆರೆಹೊರೆಯವರೂ ಮನೆಯವರೂ ಎಲ್ಲಾರು ಸೇರಿ ಸೀತೆ ಮನೆ ರೋದನದ ರೌರವ ನರಕವಾಗಿ ಪರಿಣಮಿಸಿತು.

ಅದನ್ನೆಲ್ಲಾ ನೋಡಿದ ಹೂವಯ್ಯನ ಮನದಲ್ಲಿ ಕೆಲವು ದಿನಗಳಿಂದ ಮೂಡಿದ್ದ ನಿರಾಶಭಾವ ಮತ್ತು ಪ್ರಬಲತರವಾಯಿತು. ಹಿಂದೆ ಅವನ ದೃಷ್ಟಿಗೆ ಸೌಂದರ್ಯದ ಬೀಡಾಗಿ ತೋರುತ್ತಿದ್ದ ವಿಶ್ವವು ಕ್ರೂರ ಪಿಶಾಚಿಯ ಕರ್ಮಶಾಲೆಯಂತೆ ಕುರೂಪವಾಗಿ ತೋರತೊಡಗಿತು.

ಸರ್ವಂ ಕ್ಷಣಿಕಂ ಕ್ಷಣಿಕಂ ಸರ್ವಂ ದುಃಖಂ ದುಃಖಂ, ಸರ್ವಂ ಶೂನ್ಯಂ, ಶೂನ್ಯಂ ಎಂಬುದಾಗಿ ಆತನೊದಿದ್ದ ಬೌದ್ಧಮತದ ಮೂಲ ಸಿದ್ಧಾಂತಗಳು ಇಂದು ಸತ್ಯವಾಗಿ ಪ್ರತ್ಯಕ್ಷವಾಗಿ ತೋರಿದವು.

"ದೇವನಿಹನು ವ್ಯೋಮದಲ್ಲಿ,

ಎಲ್ಲ ಕ್ಷೇಮ ಭೂಮಿಯಲ್ಲಿ!

ಎಂಬರ್ಥದ ಆಶಾವಾದಿ ಬ್ರೌನಿಂಗ್ ಕವಿಯ ಪದ್ಯದ ಚ್ಚರಣಗಳು ಎಷ್ಟು ಜಳ್ಳು ಎಂಬುದು ಸಾಕ್ಷಾತ್ತಾಗಿ ಗೊತ್ತಾಯಿತು.

ಜಾತಿಯನ್ನು ಗಾಡಿಯ ಮೇಲೆ ಹಾಕಿ ತೀರ್ಥಹಳ್ಳಿಯ ಆಸ್ಪತ್ರೆಗೆ ಕಳುಹಿಸಿದರು. ಅವನ ಶುಶ್ರೂಷೆಗೆ ಪುಟ್ಟಣ್ಣನೇ ಗಾಡಿಯ ಜೊತೆ ಹೋದನು. ಜಾಕಿಯ ದುರಾದೃಷ್ಟಕ್ಕೆ ತಕ್ಕ ಹಾಗೆ ದಾರಿಯಲ್ಲಿ ಮುಗಿಲೆದ್ದು ಮಿಂಚೆಸೆದು ಗುಡುಗಿ ಸಿಡಿಲೆರಗಿ ಮುಂಗಾರು ಮಳೆ ದನಗೋಳಾಗಿ ಸುರಿಯಿತು.

ಭೂಮಿ ಹುಣ್ಣಿಮೆ ಹಬ್ಬದ ಹಿಂದಿನ ದಿನ ಕಾಡಿನಲ್ಲಿ ದೈತ್ಯನಾದ ಪುಟ್ಟಣ್ಣನ ಕಣೆ ಹಂದಿಯ ಬೇಟೆ

ಭೂಮಿ ಹುಣ್ಣಿಮೆಯ ಹಬ್ಬ ದೀಪಾವಳಿ ಹಬ್ಬಕ್ಕೆ ಹದಿನೈದು ದಿನಗಳ ಹಿಂದೆ ಬರುತ್ತದೆ. ಕೊಬ್ಬಿ ಬೆಳೆದುನಿಂತ ಹಸುರಾದ ಭತ್ತದ ಗದ್ದೆಗಳಲ್ಲಿ ಆಗತಾನೆ ಹೊಡೆ ಹೊರಡಲು ಮೊದಲಾಗುತ್ತದೆ.

ಹಬ್ಬದ ಹಿಂದಿನ ದಿನ ಹೂವಯ್ಯ ರಾಮಯ್ಯ, ವಾಸು, ಪುಟ್ಟಣ್ಣ, ಬೇಲರ, ಭೈರ ಸಿದ್ದ ಇವರೆಲ್ಲ ಒಟ್ಟುಗೂಡಿ ಕಾಡಿಗೆ ಹೊರಟರು.

ರಾಮಯ್ಯ, ವಾಸು ಬೇಲರ ಸಿದ್ದ ಇವರು ಚಂದ್ರಯ್ಯಗೌಡರ ಅಪ್ಪಣೆ ಪಡೆದು ನಾಯಿ, ಕೋವಿ ಹಾಕಿ ಸಮಗೋಲು ಬೆಂಕಿಪೊಟ್ಟಣ ಮೊದಲಾದ ಸಲಕರಣೆಗಳನ್ನೆಲ್ಲಾ ತೆಗೆದುಕೊಂಡು ನಡೆದು ಕಾನುಬೈಲಿನಲ್ಲಿ ಸಕಲ ಸಲಕರಣೆಗಳನ್ನೊಳಗೊಂಡು ಕಾಯುತ್ತಿದ್ದ ಹೂವಯ್ಯನ ದಳವನ್ನು ಕೂಡಿಕೊಂಡು ಮುಂಬರಿದರು.

ಬೇಟೆಗಾರರ ಗುಂಪು ಕೆಲವು ಸಾರಿ ವಿನೋದದ ಮಾತನ್ನಾಡುತ್ತಾ ಕೆಲವು ಸಾರಿ ಮಾತಿಲ್ಲದೇ ಆಲಿಸಿ ನೋಡುತ್ತಾ ಒಮ್ಮೆ ಪಿಸುಮಾತಿನಲ್ಲಿ ಮಂತ್ರಾಲೋಕ ಮಾಡುತ್ತಾ ಒಮ್ಮೆ ಸುತ್ತಲೂ ನೆಲವನ್ನು ಮೂಸುತ್ತಾ ತೊಳತೊಳಲಿ ಬರುತ್ತಿದ್ದ ನಾಯಿಗಳಿಗೆ ಪಿಸುದನಿಯಲಿ ಛೂ ಛೂ ಎನ್ನುತ್ತಾ ಕೈ ಚಿಟುಕಿ ಹೊಡೆದು ಸನ್ನೆ ಮಾಡುತ್ತಾ ಒಂದೊಂದು ಸಲ ಅಲ್ಲಲ್ಲಿ ಮಾಲೆ ಬಳ್ಳಿಗಳನ್ನು ಹುಡುಕುತ್ತಾ ಬೆರಕೆ ಸೊಪ್ಪನ್ನು ಕೊಯ್ಯುತ್ತಾ ಸರುವಿಗಿಳಿದು ಅಬ್ಬರಿಯೇರಿ ಸರಸ ಸಾಹಸದಿಂದ ಮುಂದುವರೆದರು.

ಕಾಡುಗಳಲ್ಲಿ "ಎಷ್ಟು ದೂರದಲ್ಲಿಯೋ ಕಣ್ಹಂದಿ? ಎಂದನು ವಾಸು

"ಮೂರು ನಾಲ್ಕು ಮಾರಿನ ಒಳಗೆ ಇರಬೇಕು" ಎಂದು ಪುಟ್ಟಣ್ಣ, ಬಳ್ಳಿ ಕೋಲನ್ನು ಮತ್ತೆ ಗುದ್ದಿನೊಳಗೆ ನುಗ್ಗಿಸಿ ಆಡಿಸುತ್ತಾ" ಕೇಳ್ತೇನು ಕಣೆ ಸದ್ದು ಎಂದನು.

ಮೂವರು ಗುದ್ದಿನ ಬಾಯಿಗೆ ಕಿವಿಗೊಟ್ಟು ಆಲಿಸಿದರು, ಆ ಅರಣ್ಯ ನೀರವದಲ್ಲಿ ಹಂದಿಯ ಕಣೆಗಳ ಸದ್ದು ಚೆನ್ನಾಗಿ ಕೇಳಿಸಿದಂತಾಯಿತು.

ಇದ್ದಕ್ಕಿದ್ದಹಾಗೆ ಪುಟ್ಟಣ್ಣ ಬೆಚ್ಚಿಬಿಚ್ಚವನಾಗಿ ಕೈಲಿದ್ದ ಬಳ್ಳಿಕೋಲನ್ನು ಕೆಳಗೆ ಹಾಕಿ ತನ್ನ ಕಂಬಳಿಯನ್ನು ತುಡುಕಿ, ಗುದ್ದಿನ ಬಾಯಿಗೆ ಆನಿಸಿ ಹಿಡಿದು "ನೋಡಿ ನೋಡಿ ಕಣ್ಣಿಂದಿ ಹೊರಗೆ ಹೊರಡ್ತು ಅಂತಾ ಕಾಣ್ತದೆ! ಸ್ವಲ್ಪ ದೂರ ಹೋಗಿ" ಎಂದನು.

ಹೂವಯ್ಯ ರಾಮಯ್ಯರಿಬ್ಬರೂ ತಮ್ಮ ತಮ್ಮ ಬಂದೂಕುಗಳನ್ನು ಹಿಡಿದು ಸಿದ್ಧರಾಗಿ ದೂರ ನಿಂತರು ನಾಯಿಗಳೆಲ್ಲಾ ಉದ್ವೇಗದಿಂದ ಹಾರಾಡತೊಡಗಿದವು. ಇದ್ದಕ್ಕಿದ್ದ ಹಾಗೆ ಮುಳ್ಳು ಹಂದಿಯ ತಲೆ ಗುದ್ದಿನ ಬಾಯಲ್ಲಿ ಕಾಣಿಸಿಕೊಂಡಿತು. ದೈತ್ಯನಾದ ಪುಟ್ಟಣ್ಣ ಕೂತಲ್ಲಿಂದ ಸರಿಯದೆ, ಹೆದರದೆ ಹಿಂದೆಗೆಯದೆ, ನಾಲ್ಕಾರು ಮಡಿಕೆ ಮಡಿಸಿದ್ದ ತನ್ನ ಕಂಬಳಿಯನ್ನು ಅದರ ಕುತ್ತಿಗೆಯ ಬಳಿಗೆ ಹಾಕಿ ಬಲವಾಗಿ ಅದುಮಿ ಹಿಡಿದನು. ಪ್ರಾಣಿಯ ದೇಹವೆಲ್ಲಿಯಾದರೂ ಗುದ್ದಿನ ಹೊರಗಡೆ ಇದ್ದಿದ್ದರೆ ಅವನಿಗೆ ಬಾಣ ಪ್ರಯೋಗ್ದ ಶಾಸ್ತಿಯಾಗದೆ ಇರುತ್ತಿರಲಿಲ್ಲ. ಆದರೆ ದೇಹ ಗುದ್ದಿನೊಳಗಿದ್ದುದರಿಂದ ಒಂದೊಂದಕ್ಕೆ ಬಡಿಯುತ್ತಿದ್ದ ಕಣೆಗಳ ಸದ್ದು ಮಾತ್ರ ಕೇಳಿಸುತ್ತಿತ್ತು. ಮುಳ್ಳುಹಂದಿಗೆ ತಲೆಯಲ್ಲಿ ಮಾರ ಕಣೆಗಳಿಲ್ಲ. ಅದಕ್ಕೆ ಅದೊಂದು ಭಾಗವೇ ನಿರಾಯುಧವಾದುದು.

ಮಿಂಚಿನ ವೇಗದಿಂದ ಪುಟ್ಟಣ್ಣ ಎಡಗೈಯಿಂದ ಹಂದಿಯ ತಲೆಯನ್ನು ಬಲವಾಗಿ ಒತ್ತಿ ಹಿಡಿದುಕೊಂಡು ಬಲಗೈಯಿಂದ ತನ್ನ ಕೋವಿಯ ಚೀಲದಲ್ಲಿದ್ದ ಚಾಕುವನ್ನು ಈಚೆಗೆಳೆದುಕೊಂಡು ಹಂದಿಯ ತಲೆಯನ್ನು ಕಚಕಚನೆ ಕೊಚ್ಚತೊಡಗಿದನು. ಒಂದೆರಡು ನಿಮಿಷಗಳಲ್ಲಿ ಹಂದಿಯ ಆಟ ತಣ್ಣಗಾಯಿತು. ಒಡೆದು ಚೂರು ಚೂರಾದ ಅದರ ತಲೆಯೋಡಿನಿಂದ ಕೋಡಿ ಹರಿಯುತ್ತಿದ್ದ ರಕ್ತ ಮಿಶ್ರವಾದ ಬಿಳಿಯ ಮೆದುಳು ಭೀಭತ್ಸವಾಗಿ ತೋರತೊಡಗಿತು. ಪುಟ್ಟಣ್ಣನ ದೈತ್ಯಾವೇಶ ಇಳಿಯಲಿಲ್ಲ. ಚಾಕುವಿನಿಂದ ಕಣ್ಣು ಬೇಳೆ, ಕಿವಿ, ನೆತ್ತಿ, ಮೂತಿ ಬಾಯಿ ಇವುಗಳನ್ನು ಹುಲ್ಲು ಕೊಚ್ಚುವಂತೆ ಕೊಚ್ಚುತ್ತಿದ್ದನು.

ಈ ರೀತಿ ಪುಟ್ಟಣ್ಣ ಮತ್ತು ಸಂಗಡಿಕರು ಬೇಟೆಯನ್ನು ಮಾಡಿದರು.

ಬೇಸಗೆಯ ನಡುಗಾಡಿನ ಸರಲಿನಲ್ಲಿ ಬೈರಸಿದ್ದರ ಏಡಿ ಶಿಕಾರಿ

"ಇಸ್ಸಿ! ಇದರ ಹೊಟ್ಟೆ ಹಾಳಗಲೊ!" ಎಂದು ತಾನು ಎತ್ತಿ ಉರುಳಿಸಿದ್ದ ಕಲ್ಲೊಂದನ್ನು ಶಪಿಸುತ್ತಾ ನೆಟ್ಟಗೆ ನಿಂತು ಮುಖಕ್ಕೆ ಕಣ್ಣಿಗೂ ಹಾರಿದ್ದ ಕೆಸರನ್ನು ಉಜ್ಜಿ ಬರಸಿಕೊಂಡು ಬೈರ ಮತ್ತೆ ಬಾಗಿ ಕಲ್ಲೆತ್ತಿದ್ದ ಸ್ಥಳದಲ್ಲಿ ತುಂಬಿಕೊಂಡಿದ್ದ ಬಗ್ಗಡವಾದ ನೀರಿನೊಳಗೆ ಕೈಯಾಡಿಸುತ್ತಾ ಕಲ್ಲುಸಂಧಿಗಳನ್ನು ಏಡಿಗಳನ್ನು ಹುಡುಕತೊಡಗಿದನು. ಅವನಿಗೆ ತುಸು ದೂರದಲ್ಲಿ ಸಿದ್ದನೂ ಅದೇ ಕೆಲಸದಲ್ಲಿ ತೊಡಗಿ ಸರಲಿನಲ್ಲಿ ಕಲ್ಲುಗಳನ್ನು ಒಡಗುಡಿಸುತ್ತಿದ್ದನು.

ಬೆಟ್ಟಬೇಸಗೆಯಾಗಿತ್ತು. ತೊಳಕಬೇಕಾದ ಹೊಂಡಗಳನ್ನೆಲ್ಲಾ ತೊಳಕಿ ಮುಗಿಸಿ ಒಂದು ಸಣ್ಣ ಚಟ್ಟಂಗಿಯನ್ನು ಕೂಡ ಬಿಡದೆ ಪೂರೈಸಿ ಬಿಟ್ಟಿದ್ದರಿಂದ ಬೈರನು, ಸಿದ್ದನೂ, ಇಬ್ಬರೂ ಸೇರಿ ಆ ದಿನ

ಹಗಲಿನಲ್ಲಿ ಮಲೆಯ ಸರಲುಗಳಲ್ಲಿ ಕಲ್ಲು ಮಗುಚಿ ಏಡಿ ಹಿಡಿಯಲು ಹೊರಟು ಬಹುದೂರ ಏರಿ ಸಾಗಿಸಿದ್ದರು.

ಇದೇ ರೀತಿ ಏಡಿ ಹಿಡಿಯುತ್ತಾ ಹಿಡಿಯುತ್ತಾ, ಸರಲಿನಲ್ಲಿ ಬಹುದೂರ ಮುಂದುವರೆದು ಬಿರುಬೇಸಿಗೆಯ ಸುಡುತ್ತಿದ್ದರೂ ಅಲ್ಲಿ ಬಿಸಿಲಿನ ಸುಳಿವಿರಲಿಲ್ಲ.

ಸರಲಿನಲ್ಲಿ ಅಲ್ಲೊಂದೆಡೆ ಕಾಡು ಹಂದಿಗಳು ಬಿಸಿಲಿನ ಝಳಕ್ಕೆ ಬಸವಳಿದು ದಿನವೂ ಬಂದು ಒಂದು ಮಗ್ಗುಲಿಕ್ಕೆ ಇಕ್ಕೆ ಕಿರಿದಾದೊಂದು ಕೆಸರಿನ ಕೊಳವಾಗಿ ಬಿಟ್ಟಿತ್ತು. ಆ ಕೆಸರಿನಲ್ಲಿ ಒಂದು ಕಲ್ಲು ಕೆಸರೂಡಿಕೊಂಡು ಬಿದ್ದಿದ್ದುದನ್ನು ಕಂಡ ಸಿದ್ದ ಬೈರಣ್ಣಾ! ಇಲ್ಲಿ ಬಾ 'ಇಲ್ಲೊಂದು ಹೆಗ್ಗಲ್ಲದೇ ಈ ಕೆಸರಿನಾಗೆ ಏಡಿ ಗೀಡಿ ಇರಬೈದು ಎತ್ತಿ ನೋಡಾನ' ಎಂದು ಕರೆದನು.

ಬೈರ ದೂರದಿಂದಲೇ 'ತಡೀ, ಬತ್ತೀನಿ, ತಡೀ ಇಲ್ಲೆಲ್ಲೋ ಬಂದೇಡಿ ಇತ್ತಪ್ಪಾ ಅಷ್ವರಲ್ಲಿ ಸಿದ್ದ ಕೆಸರಿನ ಮಧ್ಯೆ ಬಿದ್ದಿದ್ದ ಕಲ್ಲು ಗುಂಡನ್ನು ಎತ್ತಲೆಂದು ಸಮೀಪಕ್ಕೆ ಹೋಗಿ ನಿಂತು. ಅದನ್ನು ಮುಟ್ಟಿದ್ದನೋ ಇಲ್ಲವೋ, ಆ ಕಲ್ಲು ಇದ್ದಕ್ಕಿದ್ದ ಹಾಗೆ ಕಾಡುಹಂದಿಯಾಗಿ ಹುಹುಕ್ಕೆಂದು ಹೂಂಕರಿಸಿ ಮೈಕೊಡವಿ ಎದ್ದು ಬೇರೆ ಯಾವ ಕಡೆಯೂ ತಪ್ಪಿಸಿಕೊಂಡು ಹೋಗಲು ಅವಕಾಶವಿಲ್ಲದಂತೆದರೆ ಇದ್ದುದರಿಂದ ಸಿದ್ದನ ಕಡೆಗೆ ನುಗ್ಗಿ, ಅವನನ್ನು ತುಸು ದೂರ ಹೊತ್ತು ಕೊಂಡು ಹೋಗಿ ಕುಸಿದು ಹಾಕಿ ಪರಾರಿಯಾಯಿತು. ಸಿದ್ದ 'ಅಯ್ಯೋ, ಭೈರಣ್ಣಾ, ಸತ್ತನಲ್ಲೊ! ಎಂದು ಕೂಗಿಕೊಂಡನು. ಪುಣ್ಯವಶದಿಂದ ಅವನಿಗೆ ಪ್ರಾಣಾಪಾಯ ಸಂಭವಿಸುವ ಗಾಯವಾಗಲಿ ಪೆಟ್ಟಾಗಲಿ ಆಗಿರಲಿಲ್ಲ. ತೊಡೆ ಮಾತ್ರ ಹಂದಿಯ ಕೋರೆದಾಡೆಗಳಿಂದ ಸುಮಾರು ಅರೆ ಅಡಿಯಷ್ಟು ಮಟ್ಟಿಗೆ ನೆಗೆದು ಹೋಗಿ ನೆತ್ತರು ಕೋಡಿ ಹರಿಯುತ್ತಿತ್ತು.

ಈ ರೀತಿ ಪ್ರಸಂಗ ನಡೆಯಿತು.

ಚಿನ್ನಯ್ಯನ ಮೀನು ಶಿಕಾರಿ

ಶ್ಯಾಮಯ್ಯಗೌಡರ ಮಗ ಚಿನ್ನಯ್ಯನು ತರುಣನು, ಅವನು ತೀರ್ಥಹಳ್ಳಿಯಲ್ಲಿ ಕೆಲವು ಕಾಲ ಓದಿ ಬಿಟ್ಟಿದ್ದನು. ಅವನಿಗೆ ಭೇಟಿ ಎಂದರೆ ಬಹಳ ಪ್ರೀತಿ ಹೊಟ್ಟೆಗೆ ಅನ್ನವಿಲ್ಲದಿದ್ದರೂ ಲಕ್ಷಿಸದೆ ಕೋವಿ ಹಿಡಿದು ಕಾಡಿನಲ್ಲಿ ತಿರುಗುವುದೆಂದರೆ ಅವನಿಗೆ ಪರಮಾಹ್ಲಾದ, ಬಳ್ಳೆಯ ಈಡುಗಾರನೂ ಹೌದು,

ಚಿನ್ನಯ್ಯನು "ಬೈಲು ಕೆರೆಗೆ ಮೀನು ಹೊಡೆಯೋಕೆ ಹೋಗಬೇಕು." ನಂಜನು, ಕಂಬಳಿಯ ಒಳಗೆ ತೊಡೆಯನ್ನು ಬರಬರನೇ ಕೆರೆದುಕೊಳ್ಳುತ್ತಾ ದೀರ್ಘವಾಗಿ "ಅದರಾಗೆಲ್ಲಿ ಮೀನು ಅವೆ! ಸಿಕ್ಕಿದೋರೆಲ್ಲಾ ಹೊಡೆದು ತೆಗೆದು ಬಿಟ್ಟಿದ್ದಾರೆ, ತೂಬಿನ ಕೆರೆಗಾದರೂ ಹೋಗ ಬೈದಿತ್ತು" ಎಂದನು.

ಚೆನ್ನಯ್ಯನು ತೋಟಾ ಕೋವಿಯನ್ನು ಆಳು ಕೇಪಿನ ಕೋವಿಯನ್ನು ಹೆಗಲ ಮೇಲಿಟ್ಟುಕೊಂಡು ಬೈಲು ಕೆರೆಗೆ ಮೀನು ಹೊಡೆಯಲು ಹೊರಟರು, ಅರ್ಧಗಂಟೆಯಲ್ಲಿ ಕೆರೆಯನ್ನು ಸೇರಿ, ಸರಕಾರಿ ರಸ್ತೆಗೆ ಎದುರು ದಡದಲ್ಲಿದ್ದ ಎರಡು ಮರಗಳ ಮೇಲೆ ಇಬ್ಬರೂ ಹತ್ತಿ ಬಂದರೂ ಹಿಡಿದು ಕುಳಿತರು, ಕೆರೆಯ ತುಂಬಾ ಪಾಚಿ ಬೆಳೆದಿತ್ತು. ಮೂಲೆ ಮೂಲೆಗಳಲ್ಲಿ ಕೇಸು ಜೊಂಡು ಆವಲ ಮೊದಲಾದ ಜಲ ಸಸ್ಯಗಳು ಬೆಳೆದು ಅರಣ್ಯವಾಗಿತ್ತು. ಅವುಗಳ ಮಧ್ಯೆ ಹುಂಡು ಕೋಳಿಗಳು, ಬೆಚ್ಚಿ ಬೆದರಿ ಚಲಿಸುತ್ತಿದ್ದವು. ಕೆಲವು ಕಪ್ಪೆಗಳು ಆಗಾಗ ವಟಗುಟ್ಟು ಹಾರಾಡುತ್ತಿದ್ದವು, ಹೊದಮಟ್ಟೆಗಳ ಕರಿ ಹಿಂಡುಗಳೂ ಅಲ್ಲಲ್ಲಿ ಮುಲುಗುಟ್ಟುತ್ತಿದ್ದವು. ಕೆರೆಯ ಮಧ್ಯೆ ಆಗಾಗ ಮೀನುಗಳು ನೀರು ಕಚ್ಚಿದಾಗ ನಿಶ್ಚಲವಾದ ಜಲವು ಕಂಪಿಸಿ ಅಲೆಯಲೆಯಾಗುತ್ತಿತ್ತು. ಒಂದೊಂದು ಸಲ ಮೀನುಗಳು ನೀರಿನ ಮೇಲೆ ತೇಲುತ್ತಿದ್ದ ಆಹಾರ ಪದಾರ್ಥಗಳಿಗೆ ಎರಗುತ್ತಿದ್ದುದರಿಂದ "ಟುಮ್ ಟುಮುಕ್" ಎಂದು ಸದ್ದಾಗುತ್ತಿತ್ತು. ಚೆನ್ನಯ್ಯನು ಕೂತಿದ್ದ ಕೊಂಟೆ ಕೆರೆಗೆ ಚೆನ್ನಾಗಿ ಬಗಿದ್ದುದರಿಂದ ತಾನು ಕೂತಿದ್ದ ಮರ, ತಾನು, ಬಂದೂಕು ಆಸನಕ್ಕೆ ಮತ್ತೆಗಾಗಿ ಹಾಕಿಕೊಂಡಿದ್ದ.

ತಾನು ಕೂತಿದ್ದ ಮರದಲ್ಲಿ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೆ ಚಕ್ರಾಕಾರವಾಗಿ ಬಲೆಯನ್ನು ಬೀಸಿ ಕಟ್ಟಿ ಅದರ ಕೇಂದ್ರದಲ್ಲಿ ನಿಶ್ಚಲವಾಗಿ ಮಂಡಿಸಿದ್ದ ಬಣ್ಣಬಣ್ಣದ ದೊಡ್ಡ ಸಲಗವೊಂದು, ಪ್ರತಿಬಿಂಬದಲ್ಲಿ ಆಕಾಶದ ನೀಲಕ್ಕೆದ್ದು ರಾಗಿ ಕಾಣುತ್ತಿತ್ತು. ಚೆನ್ನಯ್ಯನು ಎಲ್ಲಾ ಮೀನುಗಳು ಒಟ್ಟಾಗಿ ಬರುವುದನ್ನು ಕಾಯುತ್ತಾ ನಂತರ, ತಾಯಿ ಮೀನು ಬರುವುದನ್ನು ಕಂಡು, ಅವುಗಳ ಕಣ್ಣುಗಳನ್ನು ನೋಡುತ್ತಾ ಗುರಿಯಿಟ್ಟು ಮೀನು ಶಿಕಾರಿ ಬೇಟೆಯನ್ನು ಮಾಡುತ್ತಿದ್ದನು.

ಜೇನುಬೇಟೆ

ಚೈತ್ರಮಾಸದ ಪಾತ್ರಃ ಕಾಲದ ವಾಯುಮಂಡಲ ಸ್ಪಟಿಕದಂತೆ ದಟ್ಟವಾಗಿರುವ ಕಾಡು, ಈ ಬೆಟ್ಟ ಸಾಲಿನಲ್ಲಿ ಜೇನು ಕಟ್ಟಿರುವ ಗೂಡು. ಈ ಗೂಡಿಗೆ ಹೋಗಲು ಬೇಟೆಗಾರರಾಗಿ ಪುಟ್ಟಣ್ಣ ಕೆಚ್ಚೆದೆಯ ಕಡುಗಲಿ ಬೇಟೆಗಾರ, ಜೊತೆಗೆ ಹೆಗ್ಗಡೆ, ಇಬ್ರಾಹಿ, ಹಳೆಪೈಕದ ಪುಟ್ಟ, ಈ ಜೇನುಗೂಡನ್ನು ನೋಡಿದವನು ಹಳೆಪೈಕರ ಪುಟ್ಟ ಇವನ ತಲೆ ಮಲೆ ಜೇನು ತುಂಬಲು ಬೇಕಾಗಿದ್ದ ಒಂದು ಬೋಗುಣಿ ಸಾಮಾನು.

ಜೇನಿನಲ್ಲಿ ಹೆಜ್ಜೇನು, ತುಡುವೆ, ಕೋಲುಜೇನು, ನಸರಿ ಎಂಬ ಪ್ರಭೇದಗಳುಂಟು, ತುಡುವೆಯಲ್ಲಿ ಕರಿ, ಬಿಳಿ ಎಂಬ ಎರಡು ಜಾತಿ ಇವುಗಳ ತುಪ್ಪವೆಲ್ಲ ತಿನ್ನಲು ಮಧುರವಾದರೂ ಅವುಗಳ ಅಕಡಿತ, ಕಾಟ, ರುಚಿ, ಗುಣ ಇವುಗಳಲ್ಲಿ ವ್ಯತ್ಯಾಸವಿದೆ. ಹೆಜ್ಜೇನನ್ನು ಪ್ರಾಯಶಃ ಎಲ್ಲಾರು ನೋಡಿದರೆ ಪಟ್ಟಣಗಳಲ್ಲಿ ದೊಡ್ಡ ದೊಡ್ಡ ಸೌಧಗಳಲ್ಲಿ ಕರ್ರಗೆ ನೇತಾಡುವುವು ಮಲೆನಾಡಿನಲ್ಲಿ ದೊಡ್ಡ ದೊಡ್ಡ ಮರಗಳ ಶಾಖೆಗಳಿಂದ ಹಲ್ಲೆಗಳು ನೇತು ಬೀಳುತವೆ. ಅವನು ಕೀಳಬೇಕಾದರೆ ಅಥವಾ

ಕೊಯ್ಯಬೇಕಾದರೆ, ಜೇನು ಕಟ್ಟಿರುವ ಕೊಂಬೆಗೆ ನೇರವಾಗಿ ಕೆಳಭಾಗದಲ್ಲಿ ನೆಲದ ಮೇಲೆ ಬೆಂಕಿ ಹಾಕಿ ಬೆಂಕಿಗೆ ಹಸುರೆಲೆಗಳನ್ನು ಒಟ್ಟಿ ಹೊಗೆ ಮಾಡುತ್ತಾರೆ. ಆ ಧೂಮಪಾನವನ್ನು ಸಹಿಸಲಾರದ ಮಧುಪಗಳು ಹಲ್ಲೆಯನ್ನು ಬಿಟ್ಟು ದೂರ ಹೋಗುತ್ತವೆ. ಆಗ ಮರವನ್ನು ಹತ್ತಿ ಹಗ್ಗಕಟ್ಟಿದ ಬೋಗುಣಿಗೆ ಅದನ್ನು ಕೊಯ್ದು ಹಾಕಿ ಮೆಲ್ಲಗೆ ಇಳಿಸುತ್ತಾರೆ. ಒಂದು ಜೇನಿಗೆ ಒಮ್ದೇ ಹಲ್ಲೆ ಇರುತ್ತದೆ. ಆದರೆ ಬಹಳ ದೊಡ್ಡದು, ಹೆಜ್ಜೇನು ಹುಳು ಕಡಿದರೆ ತುಮ್ಬಾ ಯಾತನೆ, ಎಷ್ಟೋ ಜನರು ಪ್ರಾಣಿಗಳು ಅವುಗಳ ಕೈಗೆ ಸಿಕ್ಕಿ ಪ್ರಾಣ ಬಿಟ್ಟಿದ್ದಾರೆ. ಆದ್ದರಿಂದಲೇ ಹೆಜ್ಜೇನನ್ನು ಸಾಧಾರಣವಾಗಿ ಹಗಲು ಕೇಳುವುದಿಲ್ಲ. ತುಡವೆ, ಕೋಲುಜೇನು ಇವುಗಳನ್ನು ನೋಡಲು ಬಹಳ ಜನರಿಗೆ ಅವಕಾಶವಿಲ್ಲ. ಕೋಲುಜೇನು ಬಹಳ ಸಾಧುವಾದದು, ಇದರ ಗೂಡು ದೊಡ್ಡದು ಎಂದರೆ ಚೆನ್ನಾಗಿ ಬೆಳದ ಚಕ್ಕೋತದ ಕಾಯಿಯಷ್ಟು ದಪ್ಪವಿರುತ್ತದೆ. ಇದರಲ್ಲಿಯೂ ಒಂದು ಜೇನಿಗೆ ಒಂದೇ ಹಲ್ಲೆ. ತುರುವೆ ಜೇನು ಕೀಳಲು, ಕಾಡು ಮೆಣಸಿನ ಎಲೆಗಳನ್ನು ಚೆನ್ನಾಗಿ ಅಗಿದ್ದು ಅದರ ರಸವನ್ನು ಹುತ್ತದ ತೂತಿಗೆ ಉಗಿದು ಆ ತೂತಿನೊಳಕ್ಕೆ ಬುಸ್ ಬುಸ್ ಎಂದು ಉಸಿಕೊಡುವುದು, ಜೊತೆಗೆ ಮೆಣಸಿನ ಎಲೆ ಬೆಳ್ಳುಳ್ಳಿ ಘಾಟು ಇರುವ ಪದಾರ್ಥಗಳನ್ನು ಅಗಿದು ತೂತಿನೊಳಕ್ಕೆ ಉಗಿದು ಗಾಳಿ ಊದುವುದು, ಈ ರೀತಿ ನಮ್ಮ ಗ್ರಾಮಸ್ಥರು ರೈತರು ಜೇನು ಬೇಟೆಯನ್ನು ಮಾಡುತ್ತಿದ್ದರು.

ಮರಸುಬೇಟೆ

ಮರಸು ಬೇಟೆ ಎಂದರೆ ಮೃಗಗಳಿಗಾಗಿ ಒಂದೆಡೆ ಕುಳಿತು ಕಾಯುವುದು, ಬೇಟೆಗಾರ ಕೆಲವು ಸಾರಿ ಮರಗಳ ಮೇಲೆ ಕೂರುತ್ತಾನೆ. ಇನ್ನೂ ಕೆಲವು ಸಾರಿ ನೆಲದ ಮೇಲೆಯೇ ಪೊದೆಗಳ ನಡುವೆ ಮರೆಮಾಡಿಕೊಂಡು ಕೂತು ಪ್ರಾಣಿಗಳು ಬರುವುದನ್ನು ಜಾಗರೂಕತೆಯಿಂದ ನಿರೀಕ್ಷಿಸುತ್ತಾನೆ.

ಮರಸು ಬೇಟೆಗೆ ತಕ್ಕ ಸಮಯ, ಪ್ರಾತಃಕಾಲ ಸಂಧ್ಯಾಕಾಲ ಬೆಳ್ದಿಂಗಳ ರಾತ್ರಿ

ಏಕೆಂದರೆ ಕಣಿವೆಗಳಲ್ಲಿ ಗದ್ದೆಗಳಲ್ಲಿ ಅವುಗಳಿಗೆ ಮೇವು ಸಿಕ್ಕುವುದು ಸುಲಭ ಹಂದಿ, ಕಾಡು ಕುರಿ, ಮಿಗ ಮೊದಲಾದ ಪ್ರಾಣಿಗಳು.

ಮಲೆನಾಡಿನ ಕಾಡುಗಳಲ್ಲಿ ಹಣ್ಣಿನ ಮರಗಳಿಗೆ ಬರಗಾಲವಿಲ್ಲ. ಅದರಲ್ಲಿಯೂ ವಸಂತ ಋತುವಿನಲ್ಲಿ ಕೇಳಬೇಕಾದುದೇ ಇಲ್ಲ. ಎಲ್ಲಿ ನೋಡಿದರೂ ಹಣ್ಣು ಎತ್ತ ನೋಡಿದರೂ ಹೂವು! ಕಾಡಿಗೆ ಹಣ್ಣು ಹೂವುಗಳು ಹುಚ್ಚು ಹಿಡಿದು ಹೋಗಿರುವಂತೆ ತೋರುವುದು.

ಪುಟ್ಟಚಾರಿಯ ಕಾಡು ಕೋಳಿ ಬೇಟೆ

ಪುಟ್ಟಚಾರಿ ಬೆಳಿಗ್ಗೆ ನಸುಕು ಹರಿಯುವದರಲ್ಲಿಯೆ ಎದ್ದು ಕಮ್ಮಾರ ಸಾಲೆಯಲ್ಲಿ ಕೆಲಸಕ್ಕೆ ಶುರು ಮಾಡಿದ್ದನು ಮಾಡಬೇಕಾದ ಕೆಲಸಗಳೂ ವಿಪರೀತವಾಗಿದ್ದವು ತಿದಿಯನ್ನು ಸರಿಮಾಡಿ ಇದ್ದಲನ್ನು

ಕುಲುಮೆಗೆ ಹಾಕಿ ಬೆಂಕಿ ಹೊತ್ತಿಸಿದನು. ಬೇಕಾದ ಸಾಮಾನುಗಳನ್ನೆಲ್ಲಾ ಹತ್ತಿರ ರಾಶಿ ಹಾಕ್ಕೊಂಡು ಅಡಿಗಲ್ಲಿಗೆ ಎದುರಾಗಿ ಕುಳಿತನು. ಅಷ್ಟರಲ್ಲಿ ಕಾಡಿನಲ್ಲಿ ಕಾಡುಕೋಳಿಗಳು ಕೂಗುವ ನೀಳ್ದನಿಯನ್ನು ಕೇಳಿ ಅವನ ಮನಸ್ಸು ಅತ್ತ ಕಡೆ ಎಳೆಯಲಾರಂಭಿಸಿತು. ಅವನು ಹುಟ್ಟು ಕಮ್ಮಾರನಾಗಿದ್ದರೂ ಕಬ್ಬಿಣದ ಕೆಲಸಕ್ಕಿಂತ ಬೇಟೆಯ ಕಾಡಿನ ಕೆಲಸದಲ್ಲಿಯೇ ಅವನಿಗೆ ಮಮತೆ ಹೆಚ್ಚು. ಇವನ ಕಾಲು ಕಟ್ಟಿ ಹಾಕಿದ್ದ ಜೂಜಿನ ಕುದುರೆಯ ಕಾಲಾಗಿದ್ದವು. ಬೇಗಬೇಗನೆ ಕಾಡುಕೋಳಿಗಳ ಆಹ್ವಾನ ವಾಣಿಯನ್ನು ಕೇಳುತ್ತಾ ಅಡವಿಯೊಳಗೆ ಹೋಗುತ್ತಿದ್ದನು.

ಪುಟ್ಟಾಚಾರಿ ಕಾಡುಗೇರಿದನು ಕಾನುಬಾಗಿಲಿನಿಂದ ಮ್ಯಾರರ ಗುಡಿ ಹೊಂಡದ ಮಾರ್ಗವಾಗಿ ಕೆಮ್ಮಣ್ಣುಬ್ಬಿನ ಓರೆಯನ್ನು ಹಾದು ಬಿಳಗಲ್ಲು ತುಂಡು ನೆತ್ತಿಗೆ ಹೊರಟನು. ಆಗಲೆ ಸುಮಾರು ನಾಲ್ಕೈದು ಮೈಲಿಗಳ ಅರಣ್ಯ ಪೂರೈಸಿತ್ತು. ಹಾಳು ಕಾಡುಕೋಳಿಗಳು ಕೂಗುತ್ತಿದ್ದವೆ ಹೊರತು ಕಣ್ಣಿಗೆ ಕಾಣುತ್ತಿರಲಿಲ್ಲ. ಪುಟ್ಟಚಾರಿಯು ಒಂದು ಕಡೆ ಕುಳಿತು ಒಂದು ತೆಳುವಾದ ಚಿಗುರೆಲೆಯನ್ನು ಎರಡು ಹೆಬ್ಬೆರಳುಗಳ ನಡುವೆ ಇಟ್ಟುಕೊಂಡು ಹುಂಜದಂತೆ ಕೇಕಿ ಹಾಕಿದನು. ಹೇಂಟೆ ಹುಂಜವನ್ನು ಕರೆಯುವಂತೆ ಕೂಗಿದನು. ಈ ರೀತಿ ಬೇಟೆಯಾಟವನ್ನು ಆಡುತ್ತಿದ್ದನು.

ಮಲೆನಾಡಿನ ಗೋಪಾಲಕರು

ಮಲೆನಾಡಿನ ಗೋಪಾಲಕರು ದಿಟ್ಟರು, ಕೆಚ್ಚೆದೆಯೊಳುಗಳು ಅವರ ಉಡುಪೆರಿದರೆ ಮೊಳಕಾಲು ಮಾರದ ಕೊಳಕಾದ ಪಂಚೆ ಹರರು ಅಂಗಿ, ಕಂಬಳಿ ಇರುತ್ತದೆ. ಸೊಂಟಕ್ಕೆ ಒಡ್ಯಾಣವೆಂಬ ದನಿಯನ್ನು ಬಿಗಿಯುತ್ತಾರೆ.

ಇವರು ದಿನದಿನವೂ ಬೆಳಿಗ್ಗೆ ಎದ್ದು ಗಂಜಿಯುಂಡು ಹಾಲು ಕರೆದು ಮೇಲೆ ತುರುಗಳನ್ನೆಲ್ಲಾ ಮೇಯಿಸಲು ಹೊಡೆದುಕೊಂಡು ಹೋಗುವರು. ದಿನ ದಿನ ಮೇಯಿಸಲು, ಗೊತ್ತಾದ ಸ್ಥಳ, ಅದಕ್ಕೆ ಗೋಪಾಲಕರು ತಮ್ಮ ಪರಿಭಾಷೆಯಲ್ಲಿ "ತರುಬು ಗುಣೆ" ಎಂದು ಕರೆಯುತ್ತಾರೆ.

ಮಲೆನಾಡಿನಲ್ಲಿ ಹಿರಗ ಎಂಬ ದನ ಕಾಯುವವನಿದ್ದಾನೆ. ಅವನು ನಿಜವಾದ ಹೆಸರು ಹಿರಿಯಣ್ಣ ಎಂದು ಕರೆಯಲು ಸಂತೋಷಪಟ್ಟು 'ಹಿರಗ' 'ಹಿರಗ' ಎಂದು ಕರೆಯುತ್ತಾರೆ. ಅವನು ದನಕಾಯುವವರಿಗೆಲ್ಲಾ ಮಾದರಿ ಮಾರ್ಗದರ್ಶಿ, ಇವನಲ್ಲಿ ಒಂದು ವಿಧವಾದ ಓಜಸ್ಸಿದೆ ಅದು ಎಲ್ಲರನ್ನು ಆಕರ್ಷಿಸುತ್ತದೆ. ಕೊಳಲೂದುವುದರಲ್ಲಿ ಆತನಿಗೆ ಸಮಾನರಿಲ್ಲವೆಂದೇನೋ ಪಕ್ಕದ ಹಳ್ಳಿಗಳಲ್ಲೆಲ್ಲ ಪ್ರಸಿದ್ಧಿಯಾಗಿದ್ದಾನೆ.

'ಹಿರಗ' ನೊಂದು ನಾಯಿಯಿದೆ. ಅವನು ಅದರ ಬಾಲ ಕಡಿದಿದ್ದಾನೆ. ಆ ಕಂತ್ರಿ ನಾಯಿಗೆ ಇಂಗ್ಲೀಷಿನಲ್ಲಿ ಹೆಸರಿಡಬೇಕೆಂದು ಯಾರನ್ನೋ ಕೇಳಿದನಂತೆ ಅದಕ್ಕೆ ಅವರು 'ರಾಸ್ಕಲ್' ಎಂದು

ಹೆಸರಿಡು ಎಂದರಂತೆ, ಈಗ ಆ ಹೆಸರು ಯಾವ ಯಾವ ಅವಸ್ಥೆಗಳನ್ನೆಲ್ಲಾ ದಾಟಿ ರಾಸಿಕಲ್ಲು ಎಂದಾಗಿದೆ.

ದನಕಾಯುವರ ಜೀವನ ಏಕದೇಶೀಯವಾಗಿಲ್ಲ. ಪ್ರಪಂಚದ ಇತರ ಜೀವಗಳಂತೆ ಅವರ ಜೀವನವೂ ಸುಖದುಃಖ ಮಿಶ್ರವಾದುದಾಗಿದೆ. ಇವರು ಜೀವನ ತನ್ನದೇ ಒಂದು ಪ್ರಪಂಚವನ್ನು ಕಲ್ಪಿಸಿಕೊಂಡಿದೆ. ಜೀವನದ ಮಹಾ ಮಾರ್ಗಗಳಲ್ಲಿ ಅವರ ಮಾರ್ಗವೂ ಒಂದು, ಜಗತ್ತಿನ ಮಹಾಪದವಿಗಳಲ್ಲಿ ಅವರ ಪದವಿಯೂ ಒಂದು,

ಮಲೆನಾಡಿನ ಚಿತ್ರಗಳು

ಮಲೆನಾಡನ್ನು ಬಿಟ್ಟು ಬಂದು ಬಯಲು ಸೀಮೆಯಲ್ಲಿದ್ದಾಗ ನನ್ನ ಮನಸ್ಸು ಆಗಾಗ್ಗೆ ತವರು ನಾಡಿನ ಚೆಲವು ಗೆಲವುಗಳನ್ನು ದೃಶ್ಯಗಳನ್ನು ವ್ಯಕ್ತಿಗಳನ್ನು ಸನ್ನಿವೇಶಗಳನ್ನು ನೆನೆದು ಸುಖಪಡುತ್ತದೆ. ನನ್ನ ಆಪ್ತಮಿತ್ರರಿಗೆ ಅವುಗಳನ್ನು ಹೇಳಿ ನಲಿಯುತ್ತದೆ. ಅದರ ಪರಿಣಾಮವೇ ಈ ಮಲೆನಾಡಿನ ಚಿತ್ರಗಳು.

ಮಲೆನಾಡಿಗೆ ಬಾ

ಮಲೆನಾಡಮ್ಮನ ಮಡಿಲಿನಲಿ

ಕರ್ಮುಗಿಲೊಡಲಿನಲಿ

ಮನೆಮಾಡಿರುವೆನು ಸಿಡಿಲಿನಲಿ

ಮಿಂಚಿನ ಕಡಲಿನಲಿ

ಬನಗಳ ಬೀಡು

ಚೆಲ್ವಿನ ನಾಡು

ಮೋಹನ ಭೀಷಣ ಮಲೆನಾಡು!

ನೇಸರು ಮೂಡುವ ಪೆಂಪಿಹುದು

ಮುಳುಗುವ ಸೊಂಪಿಹುದು

ತಿಂಗಳ ಬೆಳಕಿನ ಕಾಂತಿಯಿದೆ

ಇರುಳಿನ ಶಾಂತಿಯಿದೆ

ಕೋಗಿಲೆಯಿಲ್ಲಿ

ಲಾವುಣಿಯಿಲ್ಲಿ

ಗಿಳಿಗಳ ಮಣ್ಚರವಿಹುದಿಲ್ಲ!

ಮೊರೆಯುತ ಹರಿಯುವ ತೊರೆಯಹುದು

ತುಂಬಿದ ಕೆರೆಯಹುದು

ಹಾಡು ತಲೇರಲು ಬೆಟ್ಟವಿದೆ

ಬಣ್ಣಿಸೆ ಘಟ್ಟವಿದೆ

ಬಿಸಿಲಿದೆ ತಂಪಿದೆ

ಹೂಗಳ ಕಂಪಿದೆ

ಹಸುರಿನ ಹಣ್ಣುಗಳಿಂಪಿನದೇ

ರನ್ನನು ಪಂಪನು ಬಹರಿಲ್ಲ!

ಶ್ರೀ ಗುರುವಿಹನಿಲ್ಲಿ!

ಮಿಲ್ಟನ್, ಪೆಲ್ಲಿ ಬಹರಿಲ್ಲ

ಕವಿವರರಿಹರಿಲ್ಲ!

ಮುದ್ದಿನಹಳ್ಳಿ

ಈ ಕುಪ್ಪಳ್ಳಿ

ಬಾ ಕಬ್ಬಿಗ ನಾನಿಹೆನಿಲ್ಲಿ

ಅಧ್ಯಾಯ – ೯

ಅಧ್ಯಯನದ ಫಲಿತಗಳು

ಈ ಕಾದಂಬರಿಗಳಲ್ಲಿ ನಿಜವಾದ ಸ್ವರೂಪ ಸಾಧನೆಗಳನ್ನು ಅರಿತುಕೊಳ್ಳುವುದಕ್ಕೆ ಅದರ ಹಿಂದಿರುವ ಮೂರು ಮುಖ್ಯ ಪ್ರೇರಣೆಗಳನ್ನು ಗುರುತಿಸುವುದು ಅವಶ್ಯವಿದೆ. ಮೊದಲನೆಯದು ತಮಗೆ ಅತ್ಯಂತ ಆತ್ಮೀಯವಾದ ಮಲೆನಾಡಿನ ಪರಿಸರವನ್ನು ಅದರ ಪ್ರಾಕೃತಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿವರಗಳೊಡನೆ ಐತಿಹಾಸಿಕ ದೃಷ್ಟಿಯಿಂದ ಗ್ರಹಿಸಿ ಅದನ್ನು ಭಾಷೆಯಲ್ಲಿ ಪ್ರತಿ ಸೃಷ್ಟಿಸುವುದು.

ಇಂತಹ ಪರಿಸರದ ಹಿನ್ನೆಲೆಯಲ್ಲಿ ಹಾಗೂ ಅದರ ಪ್ರಚೋದನೆಯಿಂದ ಹೂವಯ್ಯನಂಥ ಒಬ್ಬ ಸಂವೇದನಾಶೀಲ ಧ್ಯೇಯವಾದಿ ಯುವಕನ ಪ್ರಜ್ಞೆಯ ವಿಕಾಸದ ಕ್ರಮವನ್ನು ಕಂಡು ಹಿಡಿಯುವುದು, ಅವನ ಸಾಮಾಜಿಕ ಪರಿಸರ ಈ ದಿಕ್ಕಿನಲ್ಲಿ ಹೆಚ್ಚಾಗಿ ಪ್ರತಿರೋಧವನ್ನು ಒಡ್ಡುತ್ತದೆ.

ಪರಿಸರದ ಪ್ರತಿ ದ್ರುಷ್ಟಿಯಲ್ಲಿ ಪುಟ್ಟಪ್ಪ ಅವರು ಕಾನೂರು ಹೆಗ್ಗಡತಿ ಸಾಧಿಸಿದ ಯಶಸ್ಸು ಅವರಿಗಿಂತ ಮೊದಲಿನ ಯಾವ ಕಾದಂಬರಿಕಾರನಿಗೂ ಸಾಧ್ಯವಾಗಿರಲಿಲ್ಲ. ಮುತ್ತಳ್ಳಿ, ಕಾನೂರು, ಕೆಳಕಾನೂರು, ಸೀತೆಮನೆ, ನೆಲ್ಲುಹಳ್ಳಿ ಈ ಪಂಚ ಗ್ರಾಮಗಳನ್ನು ಕೇಂದ್ರವಾಗಿಟ್ಟುಕೊಂಡು, ಒಂದು ಕಾಲದ ಮಲೆನಾಡಿನ ಪ್ರಾಕೃತಿಕ ಕೌಟುಂಬಿಕ ಮತ್ತು ಗ್ರಾಮ ಜೀವನದ ದೊಡ್ಡ ಪ್ರಪಂಚವನ್ನೇ ಅವರು ನಮ್ಮೆದುರು ತೆರೆದಿಟ್ಟಿದ್ದಾರೆ. ಒಕ್ಕಲುತನ ಬೇಟೆ ಇಲ್ಲಿಯ ಜನರ ಮುಖ್ಯ ವ್ಯವಸಾಯಗಳು ಚಂದ್ರಯ್ಯಗೌಡ, ಶ್ಯಾಮಯ್ಯಗೌಡ, ಸಿಂಗಪ್ಪಗೌಡ, ಅಣ್ಣಯ್ಯಗೌಡ, ಪೆದ್ದೇಗೌಡರಂಥ ಒಕ್ಕಲಿಗರ ಮನೆತನಗಳು, ಅವರ ವ್ಯವಸಾಯಕ್ಕೆ ಬೇಕಾದ ವಿವಿಧ ಸ್ತರದ ವಿವಿಧ ಜಾತಿಗಳ ಆಳುಗಳು, ಇವರ ಧಾರ್ಮಿಕ ಆಚರಣೆಗಳು ನಡೆಸಿಕೊಡುವ ಅಗ್ರಹಾರದ ಜೋಯಿಸರ, ಇಲ್ಲಿಯ ಸಾಮಾಜಿಕ ಸ್ತರಗಳನ್ನು ಪ್ರತಿನಿಧಿಸುತ್ತಾರೆ. ಈಗೊಮ್ಮೆ ಆಗೋಮ್ಮೆ ಈ ಪರಿಸರವನ್ನು ಪ್ರವೇಶಿಸುವ ಪೋಲೀಸರು ಮಾಕನಂಥ ಅಧಿಕಾರಿಗಳು ಬಿಟ್ಟರೆ ಇಲ್ಲಿ ಹೊರಗಿನ ನಾಗರಿಕತೆಗೆ ಪ್ರವೇಶವಿಲ್ಲ. ಈ ಪರಿಸರದ ಅವಿಭಾಜ್ಯ ಅಂಗಗಳಾದ ಕೆರೆ–ಕಾಡುಗಳು ವನ್ಯ ಮತ್ತು ಪಾಲಿತ ಪಶುಗಳು, ಸಸ್ಯ ಪ್ರಪಂಚ ಅಮಾನವೀಯ ಆವರಣದ ಪ್ರತೀಕಗಳು ಮೀನು ಬೇಟೆ ಕಾಡುಹಂದಿಗಳ ಬೇಟೆ, ಹೊಂಡ ತೋಣಕುವುದು, ಏಡಿ ಶಿಕಾರಿ, ಕಳ್ಳು ಕಟ್ಟುವುದು, ಮರಕುಯ್ಯುವುದು, ಗದ್ದೆ ಉಳುವುದು, ಇಂತಹ ವ್ಯವಹಾರಗಳೆಲ್ಲ ಈ ಪರಿಸರಕ್ಕೆ ಸಹಜವಾದ ಚಟುವಟಿಕೆಗಳು ದೆಯ್ಯದ ಹರಕೆ, ಕೋಳಿಯಂಕ, ಭೂಮಿ ಹುಣ್ಣಿಮೆಯ ಹಬ್ಬ ಮುಂತಾದ ಹರಿದಿನಗಳು, ಜೋಯಿಸರ ಮಂತ್ರ– ತಾಯತಗಳು, ತೆಂಗಿನ ಕಾಯಿ, ಮಂತ್ರ ಶಕ್ತಿ ಪ್ರಯೋಗ, ಚಂದ್ರಮೌಳೀಶ್ವರನ ಪೂಜಾ ಪ್ರಸಂಗ, ಮದುವೆ ಮುಂತಾದ ಉತ್ಸವಗಳು ಈ ಪರಿಸರದ ಸಾಂಸ್ಕೃತಿಕ ಜೀವನದ ಅಂಶಗಳು ಮಲೆಗಳಲ್ಲಿ ಮದು ಮಗಳು, ಕಾದಂಬರಿಯ ಜಗತ್ತು ಕೂಡ ಹೆಚ್ಚು ಕಡಿಮೆ ಇದೇ ಆಗಿದೆ. ಕಾನೂರು ಮುತ್ತಳ್ಳಿ ಸೀತೆ ಮನೆಗಳಿಗೆ ಕೋಣೂರು ಹಳೆಮನೆ ಸಿಂಭಾವಿಗಳಿಗೂ ಏನೂ

ಅಂತರವಿಲ್ಲ. ಆದರೆ ಈ ಕಾದಂಬರಿಯ ಒಟ್ಟು ನಿಲುವು ಕಥೆಯಾಗಿದೆ. ಮುಕುಂದಯ್ಯನ ಪ್ರಣಯ, ದೇವಯ್ಯನ ಮತಾಂತರ ದೊಡ್ಡಣ್ಣ ಹೆಗ್ಗಡೆಯಾತ್ರೆ, ನಾಯಿಗುತ್ತಿ ಮತ್ತು ತಿಮ್ಮಿಯರ ಮದುವೆಯ ಪ್ರಸಂಗ ಅಂತಕ್ಕನ ಮಗಳು ಕಾವೇರಿಯ ಆತ್ಮಹತ್ಯೆ ಮೊದಲಾದ ಮಹತ್ವದ ಪ್ರಸಂಗಗಳು ಇಲ್ಲಿಯೂ ನಿಸರ್ಗ ಮನುಷ್ಯನ ವ್ಯವಹಾರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ.

ಹುಲಿಕಲ್ಲು ಶಿಖರವಿಲ್ಲದಿದ್ದರೆ, ಬಹುಶಃ ಚಿನ್ನಮ್ಮ ಮತ್ತು ಮುಕುಂದಯ್ಯನ ಪ್ರಣಯ ಸಫಲಗೊಳ್ಳುತ್ತಿರಲಿಲ್ಲ.

ಮೇಗರವಳ್ಳಿಯ ಹೆದ್ದಾರಿಯ ಮೇಲಿರುವ ಅಂತಕ್ಕನ ಕಾಫಿ ಹೋಟೆಲಿನಲ್ಲಿ ನಡೆಯುವುದಾದರು ಏನು? ಕಾಫಿ ಹೋಟೆಲು ಆಧುನಿಕತೆಯ ಒಂದು ಪ್ರತೀಕ, ಅದರ ಮಗ್ಗಲಿಗೇ ಇನ್ನೊಂದು ಆಧುನಿಕ ಸಂಸ್ಥೆ ತಲೆಯೆತ್ತುತ್ತಿದೆ. ಇನ್ನೂ ಪ್ರಾರಂಭೋತ್ಸವವನ್ನು ಕಾಣದಿರುವ ಒಂದು ಸ್ಕೂಲ್ ಕಟ್ಟಡ ಅಲ್ಲಿ ಒಂದು ಬಾವಿಯನ್ನು ಕಟ್ಟಿಸಬೇಕೆಂದಾಗ ಒಂದು ಕಡ್ಡಿಯ ಸಹಾಯದಿಂದ ನೀರಿರುವ ಸ್ಥಳವನ್ನು ಪತ್ತೆ ಮಾಡಲಾಗುತ್ತದೆ. ಕಣ್ಣಿಲ್ಲದ ಆ ನಿರ್ಜೀವ ಕಡ್ಡಿಯ ಸಹಾಯದಿಂದ ನೀರಿರುವ ಸ್ಥಳವನ್ನು ಪತ್ತೆ ಮಾಡಲಾಗುತ್ತದೆ. ಈ ರೀತಿ ಅನೇಕ ತರಹದ ಘಟನೆಗಳನ್ನು ಈ ಅಧ್ಯಯನದಲ್ಲಿ ನೋಡುತ್ತೇವೆ.

ಈ ಕಾದಂಬರಿಯಲ್ಲಿ ಇಸ್ಕೂಲ್ ಬಾವಿಯಲ್ಲಿ ಕಾವೇರಿಯ ಹೆಣ ತೇಲುತ್ತದೆ, ಗುತ್ತಿಯನ್ನು ಹಿಡಿದುಕೊಂಡು ಹೋಗುವ ಪೋಲಿಸ್ ಕಾಡಿನ ನಡುವೆ ಸುರಿಯುವ ಮಳೆಯಲ್ಲಿ

ಈ ಕಾದಂಬರಿಗಳ ಪರಿಸರ ನಮ್ಮ ಸುತ್ತಲಿನ ಸಮೂಹ ಸ್ಥಿತಿ ಎನಿಸಿದೆ ವಸ್ತು ವಿಷಯ ಭಾವಗಳ ವಿಭಿನ್ನ ಪರಿಸರಗಳು– ವಸ್ತು ಪರಿಸರ ಸಾಂಸ್ಕೃತಿಕ ಪರಿಸರ ಇದ್ದರೂ, ಪ್ರಚಲಿತದಲ್ಲಿ ನೆಲ, ಜಲ, ವಾಯು, ಕಾಡು– ನದಿ ಪ್ರಾಣಿ, ಪಕ್ಷಿಗಳ ಸಾವಯುವ ಬದುಕಿನ ಒಪ್ಪಂದಕ್ಕೆ ಪರಿಸರ ಎಂದು ಬಳಸಲಾಗುತ್ತದೆ. ಪ್ರಕೃತಿ–ಪ್ರಧಾನ ಪರಿಸರದ ವಿವೇಚನೆಯನ್ನು ಇಲ್ಲಿ ಮಾಡಬಹುದಾಗಿದೆ.

ಈ ಹಿಂದೆ ಕನ್ನಡ ಕಾವ್ಯ ಪರಂಪರೆಯಲ್ಲಿ ಅಷ್ಟಾದಶ ವರ್ಣನೆಗಳು ಸಾಂಪ್ರದಾಯಿಕವಾಗಿ ಬರುತ್ತಿದ್ದವು. ಅವುಗಳಲ್ಲಿ ಬಹುತೇಕ ಅಂಶಗಳು ಪರಿಸರಗಳ ಇನ್ನುಳಿದವು ವಿದ್ಯೆ ಕೌಶಲಗಳಿಗೆ ಸಂಬಂಧಪಡುತ್ತವೆ. ಕೆಲವು ಸಲ ಈ ಬಣ್ಣನೆಗಳು ಕಥೆಯ ವಸ್ತು, ಸನ್ನಿವೇಶಗಳಿಗೆ ಅಗತ್ಯವಾಗಿ ಸಮರ್ಪಕವಾಗಿ ಬರುತ್ತಿದ್ದರೆ, ಅನೇಕ ಸಲ ಕೇವಲ ರೂಢಿಯಂತೆ ಬರುತ್ತಿದ್ದವು. ಇವು ಬಹುತೇಕವಾಗಿ ವರ್ಣನಾಂಶಗಳಾಗಿದ್ದವೇ ಹೊರತು, ಮನುಷ್ಯನ ಬದುಕಿನ ನಿರ್ಣಾಯಕ ಸಂಗತಿಗಳಾಗಿರಲಿಲ್ಲ.

ಸಾವಿರಾರು ವರ್ಷಗಳಿಂದ ಪರಿಸರದ ತೊಟ್ಟಿಲಲ್ಲಿ ಮನುಕುಲದ ಸಂಸ್ಕೃತಿ ಅರಳಿದೆ. ಆಕಾರಗೊಂಡಿದೆ ಸುತ್ತಲಿನ ಗಾಳಿ, ನೀರು, ಜಲ, ನೆಲ ಬೆಟ್ಟ, ಗಿಡ ಮರ ಪಕ್ಷಿ ಪ್ರಾಣಿ ಪೈರು ಗದ್ದೆ ಇವುಗಳ ಒಡನಾಟದಲ್ಲಿ ಮನುಷ್ಯನ ಭಾವಕೋಶ ಮತ್ತು ಬುದ್ಧಿಕೋಶಗಳು ಬಲಗೊಂಡಿವೆ. ಆದರೆ ಇದರ ಪರಿವೆಯೂ ಇಲ್ಲದೆ ಬೇಕು ಬೇಡಗಳಿಗೆ ಸೊಪ್ಪು ಹಾಕದೆ, ಲಾಭ ಹನಿಗಳ ಲೆಕ್ಕಾಚಾರವಿಲ್ಲದೆ,

ಪರಿಸರವು ಕಾಲ ಕಾಲದಿಂದಲೂ ಉಳಿದು ಬಂದಿದೆ. ಕುವೆಂಪು ಕಾದಂಬರಿಗಳ ನುಗ್ಗುವ ಮಲೆಯುವ ಹಳುವಿನಂತೆ ಅದು ತುಂಬಿಕೊಂಡಿದೆ. ಇಲ್ಲಿಯ ಮಲೆನಾಡಿಗರಿಗೆ ಒಂದೊಂದು, ವ್ಯಕ್ತಿತ್ವವಿರುವಂತೆ ಮಲೆ, ನದಿ, ಕಾನು, ಬೆಟ್ಟ, ಹೊಂಡ, ಹಳ್ಳ, ಗಿಡ, ಮರಗಳಿಗೂ ವ್ಯಕ್ತಿತ್ವವಿದೆ.

ಇಲ್ಲಿ ಕುವೆಂಪು ಮಾನವ ಬದುಕಿನ ಜೊತೆಗೆ ಪ್ರಕೃತಿ ಬದುಕಿನ ಪರಿಸರದ ಸ್ಥಿತಿಗತಿಯ ಚಿತ್ರಣ ನೀಡುವರು. ಇಲ್ಲಿರುವುದು ಜೀವಂತವಾದ ತಲೆಮಾರುಗಳಿಂದ ಸಾಗಿಬಂದ ಮನುಷ್ಯನ ಬುದ್ಧಿ ಬಲಗಳ ಆಚೆಗಿನ ಪರಿಸರದ ಎಂಬುದನ್ನು ಸರಿಯಾಗಿ ಬಿಂಬಿಸಲಾಗಿದೆ.

ಈ ರೀತಿ ಅಧ್ಯಯನದ ಫಲಿತಗಳನ್ನು ತಿಳಿಯಬಹುದಾಗಿದೆ. ಈ ಪರಿಸರ ಬತ್ತರದ ಜಗತ್ತಿನಲ್ಲಿ ಮಹಾದ್ವಾರದ ವ್ಯಾಪಾರಿಗಳು ಜರುಗುತ್ತಿರುತ್ತವೆ. ಘೋರ ಸಂಗ್ರಾಮಗಳಾಗಿ ಕಿರೀಟ ಸಿಂಹಾಸನಗಳುರುಳಿ ರಾಜ್ಯಗಳೆದ್ದು ಬಿದ್ದು ಕಾಲುಗಳಾಗಿ ಹೋಗಿ ರಾಷ್ಟ್ರಗಳ ಜೀವನದಲ್ಲಿ ಮಹಾಪರಿವರ್ತನೆಗಳಾಗುತ್ತಿರುತ್ತವೆ. ಸಜೀವ ಜ್ವಾಲಾಮುಖಿಗಳಿಂದ ನಗರಗಳು ಭಸ್ಮವಾಗುತ್ತವೆ. ಅತಿ ಪ್ರವಾಹದಿಂದ ಪ್ರಾಂತ್ಯಗಳು ಕೊಚ್ಚಿ ಹೋಗುತ್ತವೆ.

ಎರಡು ಕಾದಂಬರಿಗಳು ಆರಂಭಗೊಳ್ಳುವ ಮತ್ತು ಅಂತ್ಯಗೊಳ್ಳುವ ಪರಿಯನ್ನು ಗಮನಿಸಿದರೆ, ಪರಿಸರವೆ ಮುಖ್ಯ ತತ್ವವಾಗಿ ಇಲ್ಲಿ ಕೆಲಸ ಮಾಡಿರುವುದು ಸೋಜಿಗದ ಸಂಗತಿಯಾಗಿದೆ.

ಇಲ್ಲಿ ಜನ ಹೆಜ್ಜೆ ಹೆಜ್ಜೆಗೆ ಇಂಬಳದಿಂದ ಹಿಡಿದು ಹುಲಿ ಚಿರತೆಗಳವರೆಗಿನ ಅಪಾಯಗಳಿಗೆ ಕಷ್ಟನಷ್ಟಗಳಿಗೆ ಒಳಗಾಗುತ್ತಾರೆ. ಆಸ್ತಿಪಾಸ್ತಿ ಪ್ರಾಣಿ ಪ್ರಾಣ ತೆಳೆದುಕೊಂಡಿದ್ದಾರೆ. ನೋವು ಸೋಲು ಅನುಭವಿಸಿದರೆ ನಾಯಿಗುತ್ತಿಯನ್ನು ಬಂಧಿಸಿ ಕರೆದಿದೊಯ್ಯುತ್ತಿದ್ದ ದಪೇದಾರ ಮಾನನಾಯಕ ಕಾಡಿನ ಜವುಗು ಪ್ರದೇಶದ ಉಸುಬಿನ ಕಂಪದಲ್ಲಿ ಸಿಕ್ಕು ಮುಳುಗಿ ಸಾಯುವ ಹಂತದಲ್ಲಿದ್ದನು. ನಾಯಿ ಗುತ್ತಿ ತಿಮ್ಮಿಯೊಂದಿಗೆ ಹುಲಿಕಲ್ಲು ಬೆಟ್ಟವೇರುವಾಗ ಕಿರಿದಂತರದಲ್ಲಿ ಹುಲಿಗರ್ಜನೆ ಕೇಳುವನು, ಓಡಿ ಬರುತ್ತಿದ್ದ ಕಾಡುಕೋಣಗಳ ಹಿಂಡಿಗೆ ಎದುರಾಗುತ್ತಾನೆ.

ಸುಬ್ಬಣ್ಣ ಹೆಗ್ಗಡೆಯವರ ಮಗ ದೊಡ್ಡಣ್ಣ ಹೆಗ್ಗಡೆ ಬೆನ್ನು ಹತ್ತಿ ಬರುತ್ತಿದ್ದ ನಾಯಿ ಹುಲಿಯ ಆಕ್ರಮಣದಿಂದ ಸ್ವಲ್ಪದರದಲ್ಲಿ ಪಾಲಾಗುವುದು,

ಒನ್ನಮ್ಮ ಕಾಡಿನ ಪ್ರಪಾತಕ್ಕೆ ಬೀಳುವಲ್ಲಿ ಮಿಂಚಿನ ಬೆಳಕಿನ ಮೂಲಕ ಉಳಿಯುವುದು, ಪುಟ್ಟಣ್ಣನ ಕಣೆ ಹಂದಿಯ ಬೇಟೆ ಇವೆಲ್ಲ ಮಲೆನಾಡಿನ ನೂರಾರು ಅಪಾಯಗಳಲ್ಲಿ ರುದ್ರವಾದ ಮುಖಗಳಲ್ಲಿ ಕೆಲವು ಮಾತ್ರ ಕೃಷಿಗೆ, ಬೈರ, ಸಿದ್ದ, ಹೊಲ ಉಳುವುದು, ಪುಟ್ಟಣ್ಣ, ಚಂದ್ರಗೌಡರು ಉಳುವುದು, ಜೇನು ಇದೇ ರೀತಿ ಪರಿಸರದ ಒಳಗೆ ಸೇರಿಕೊಂಡು ಅಪಾಯಗಳಲ್ಲಿ ಕಾಡಿನ ಬೇಟೆಗಾರರು ದಿನನಿತ್ಯ ಹಾಯ್ದುಬರುತ್ತಾರೆ. ಕಾಡಿನ ಪ್ರತಿಕೂಲ ಸ್ಥಿತಿಯಲ್ಲಿ ಪ್ರಾಣಿ ಬೇಟೆಗಾಗಿ ಯತ್ನಿಸುವ ಹಲವು ಚಿತ್ರಣಗಳು ಇಲ್ಲಿವೆ.

ಈ ಅಧ್ಯಯನದ ಫಲಿತಗಳಾಗಿವೆ.

ಈ ಕಾದಂಬರಿಯ ಆರಂಭ ಮುಕ್ತಾಯಗಳೆರಡು ಮಳೆಗಾಲದಲ್ಲಿಯೇ ಇವೆ. ಗುತ್ತಿ ಮಳೆಗಾಲದ ಒಂದು ದಿನ ಪ್ರಯಾಣಕ್ಕೆ ಹೊರಟು ಸಿದ್ದನಾಗಿ ನಿಂತಾಗ ಆಕಾಶದಲ್ಲಿ ಮೋಡಗಳು ಸೇರುತ್ತಿರುತ್ತವೆ.

ಆತ ಸ್ವಲ್ಪದೂರ ಹೋಗುವುದರಲ್ಲಿ ಮುಂಗಾರು ಜೋರಾಗಿ ಸುರಿದು ಪ್ರವಾಹದ ನೀರು ಉಕ್ಕಿ ಹರಿಯುತ್ತದೆ. ಕೊನೆಯಲ್ಲಿ ಮಳೆಗಾಲದ ಒಂದು ದಿನ ಚಿನ್ನಮ್ಮ ಸೌದೆ ಕೊಟ್ಟಿಗೆಯಲ್ಲಿ ಸ್ತ್ರೀ ಪ್ರಕೃತಿಯಂತೆ ಹೊರಗೆ ಕೂಡುವ ಸಂಗತಿಯೊಂದಿಗೆ ಬದುಕಿನ ಒಂದು ಪ್ರವಾಹವೇ ನಿಂತು ಬಿಡುತ್ತದೆ. ಕಾದಂಬರಿಯ ಒಟ್ಟು ಕಥೆ ಕಾಲ ಪ್ರವಾಹದ ಒಂದು ಕಿರುಭಾಗವನ್ನು ಕತ್ತರಿಸಿ ಬೆಳಕಿಗಿಟ್ಟು ಪರೀಕ್ಷಿಸಿದಂತಿದೆ.

ಕೊನೆಯಲ್ಲಿ ಮುಕುಂದಯ್ಯ ಚಿನ್ನಮ್ಮಮ ಪಿಂಚಲು ಗುತ್ತಿ ತಿಮ್ಮ ಪಿಜಣ ಅಕ್ಕಣಿ, ಅಕ್ಕಣಿ ಚೀಂಕ್ರ ವೆಂಕಟಣ್ಣ, ನಾಗಕ್ಕ ಹೀಗೆ ಹಲವು ಪ್ರೇಮ ಕಾಮದ ಸಂಬಂಧ ಸಂಘರ್ಷಗಳಿವೆ. ಒಟ್ಟು ಬದುಕಿನ ಸಮೃದ್ಧಿ ಸಾಧ್ಯತೆ ಸಂಬಂಧಗಳು ಅಚ್ಚರಿ ತರುತ್ತವೆ. ನನ್ನ ಸಾಹಿತ್ಯ ಹುಟ್ಟುವುದು, ಬದುಕಿನಿಂದ ಬದುಕಿಗಾಗಿ ಮತ್ತು ಬದುಕಿನಾಚೆಯ ಬದುಕಿಗಾಗಿ ಎಂಬ ಮಾತು ಇದಕ್ಕೆ ಅನ್ವಯಿಸುತ್ತದೆ.

ಈ ಕಾದಂಬರಿಗಳಲ್ಲಿ ಮಾನವ ಪ್ರವೃತ್ತಿಗಳ ಸಹಜ ಅಭಿವ್ಯಕ್ತಿಯನ್ನು ಕಾಣಬಹುದು. ಜೀವನವನ್ನು ಯಥಾವತ್ತಾಗಿ ನೋಡುವ ಅನುಭವಿಸುವ ಮತ್ತು ಕಲೆಯಾಗಿ ರೂಪಿಸುವ ಪ್ರಾಮಾಣಿಕ ಪ್ರಯತ್ನದ ಫಲ ಈ ಕಾದಂಬರಿ ಇಲ್ಲಿ ಬರುವ ಪಾತ್ರಗಳು ಪ್ರಕಟಿಸುವ ಸತ್ಯ ಅತ್ಯಂತ ನಿಷ್ಠುರವಾದದ್ದು, ಸಂಕೀರ್ಣ ಹಾಗೆಯೇ ಪ್ರಬಲ ಪ್ರವೃತ್ತಿಯಾದ ಕಾಮದ ಬಗ್ಗೆ ಅಂಥ ತಿರಸ್ಕಾರವುಳ್ಳ ನಾಗರಿಕತೆಯಿಂದ ದೂರವಾದ ಮಲೆನಾಡಿನ ದಟ್ಟಾರಣ್ಯದ ನಡುವೆ ಬದುಕುತ್ತಿರುವ ಇಲ್ಲಿನ ಪಾತ್ರಗಳು 'ಮಣ್ಣೆ'ನಿಂದ ಹೊರತಾದವರಲ್ಲ, ಕ್ರಿಯಾತ್ಮಕ ತುಡಿತಕ್ಕನುಗುಣವಾಗಿ ಯಾವ ಕೃತಕತೆಯೂ ಇಲ್ಲದೆ ಬದುಕುವಂಥವರು.

ಮಣ್ಣಿನ ಹೊರತಾದವರಲ್ಲ ಎಂಬ ಮಾತಿನ ಅರ್ಥ ನಿಸರ್ಗಕ್ಕೆ ಪರಕೀಯವಾಗದೆ, ನಿಸರ್ಗದಲ್ಲಿ ಭದ್ರವಾಗಿ ಬೇರುಬಿಟ್ಟು ಬೆಳೆದು ಬಾಳುವ ಹಂಬಲವಿರುವ ಪಾತ್ರಗಳು.

ಮಲೆಗಳಲ್ಲಿ ಮದುಮಗಳುವಿನಲ್ಲಿ ಕಾದಂಬರಿಯ ಪಾತ್ರವಾದ ಒಂದೇ ಒಂದು ಕೇಂದ್ರ ಪ್ರಜ್ಞೆ ಅನೇಕ ಅನುಭವಗಳಿಗೆ ತೋರಿಸುವ ಪ್ರತಿಕ್ರಿಯೆಗಳನ್ನು ಮುಂದೆ ಮಾಡದೆ ಅನೇಕ ಸನ್ನಿವೇಶಗಳು ಅನೇಕ ಪ್ರತಿಕ್ರಿಯೆಗಳು ಅನೇಕ ಜೀವನ ದೃಷ್ಟಿಗಳು ಮೊದಲಾದವನ್ನು ಸಮತೂಕವಾಗಿ ನೋಡಬೇಕೆಂಬ ಆಶಯವಿದೆ. ಈ ಕಾದಂಬರಿಗಳಲ್ಲಿ ತಂತ್ರ, ವಿಧಾನಗಳಲ್ಲಿರುವ ವ್ಯತ್ಯಾಸಗಳು ಈ ಆಶಯಕ್ಕೆ ಸಂಬಂಧಿಸಿವೆ. ಆದ್ದರಿಂದ ನಾವು ವಸ್ತುವಿನ ಮಟ್ಟದಲ್ಲಿ ಈ ಅಂಶಗಳಿಗೆ ಇರುವ ಸಂಬಂಧಕ್ಕೆ ಗಮನ ಕೊಡಬೇಕು.

ಜೀವ ಜಗತ್ತಿನಲ್ಲಿ ಅಪರೂಪವೆನಿಸಿದ ಮಾನವ ಬದುಕನ್ನು ದೊಡ್ಡದಾಗಿ ಕಂಡವರು ಕುವೆಂಪು ಬಹುಶಃ ಶಿವಶರಣರ ತರುವಾಯ ನಿಜವಾದ ಅರ್ಥದಲ್ಲಿ ಬದುಕು ಮತ್ತು ಸಾಹಿತ್ಯವನ್ನು ಬೆಸೆದು ಭೂತ–ವರ್ತಮಾನ ಸಂಸ್ಕೃತಿಗಳೆರಡನ್ನು ಮುಖಾಮುಖಿಯಾಗಿರಿಸಿ ಸರಿತಪ್ಪುಗಳನ್ನು ಪ್ರಖರವಾಗಿ ಅಭಿವ್ಯಕ್ತಿಸಿದವರು. ಸಾರ್ವತ್ರಿಕವಾದ ಸಾಮಾಜಿಕ ಕಳಕಳಿಯನ್ನು ಹೊಂದಿದ್ದ ಇವರು ಸಾಮ್ರಾಜ್ಯಶಾಹಿ ಬಂಡವಾಳಶಾಹಿ ಮತ್ತು ಅಧಿಕಾರಶಾಹಿ ಧೋರಣೆಯನ್ನು ಸಾಂಸ್ಥಿಕ ಧರ್ಮವನ್ನು ನಿರಾಕರಿಸಿ, ಗುಡಿ–ಚರ್ಚು–ಮಸೀದಿಗಳ ಬಿಟ್ಟು ಹೊರಬನ್ನಿರೆಂದು ಕರೆ ನೀಡಿದರು. ಪ್ರತಿಯೊಂದು ಚೈತನ್ಯವೂ ವಿಶ್ವಚೇತನವಾಗಬೇಕೆಂಬ ಕನಸು ಕಾಣುವ ಆಧುನಿಕ ಕನ್ನಡ ಸಾಹಿತ್ಯದ ಬೇರೆಲ್ಲಾ ಸಾಹಿತಿಗಳಿಗಿಂತ ಭಿನ್ನವಾಗಿ ನಿಂತವರು.

ಕೊನೆಗೊಂಡಿತು ಬರೋದ್ವರ ಗರ್ವದ ಕಾಲ ಇದು ಸರ್ವರ ಕಾಲ! ಶ್ರೀ ಸಾಮಾನ್ಯನ ದೀಕ್ಷಾ ಗೀತೆಯು ಕುವೆಂಪು ಅವರ ಜನ ಸಾಮಾನ್ಯರಿಗೆ ದೊರಕಿಸಿಕೊಟ್ಟ ಸಾಮಾಜಿಕ ಉಯಿಲು, ಮಕ್ಕಳಿಂದ ವೃದ್ಧರವರೆಗೆ ಎಲ್ಲಾ ವಯಸ್ಸಿನವರನ್ನು ಸೂಜಿಗಲ್ಲಿನಂತೆ ಸೆಳೆಯುವ ಕುವೆಂಪು, ಸಾಮಾಜಿಕ ಚಿಂತನೆ, ವೈಚಾರಿಕ ಮನೋಧರ್ಮವನ್ನು ಬಿತ್ತರಿಸಲು ಮುಖ್ಯವಾಗಿ ಅಪೇಕ್ಷಿಸಿದ್ದು, ಯುವಕರು, ಮತ್ತು ವಿದ್ಯಾರ್ಥಿಗಳನ್ನು ಆದುದರಿಂದಲೇ ವಿದ್ಯಾರ್ಥಿಗಳು ಭತ್ತ ತುಂಬುವ ಕಣಜಗಳಾಗದೆ, ಭತ್ತ ಬೆಳೆಯುವ ಗದ್ದೆಗಳಾಗಬೇಕೆಂದು ಕರೆ ನೀಡಿದರು.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸರ್ಕಾರಗಳು ರೈತರಿಂದ ಜಮೀನಿನ ಹುಟ್ಟುವಳಿಯ ಒಂದು ಭಾಗವನ್ನು ಕಂದಾಯವಾಗಿ ಪಡೆಯುತ್ತಾ ಬಂದಿವೆ. ಜಮೀನ್ದಾರಿ ಪದ್ಧತಿಯನ್ನು ಕುರಿತು, ಕನ್ನಡ ವಿಶ್ವಕೋಶದಲ್ಲಿ ಹೀಗೆ ತಿಳಿಸಿದೆ. "ಮೊಗಲರ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ವ್ಯಾಪಕವಾಗಿ ಜಾರಿಯಲ್ಲಿದ್ದು ಈ ಪದ್ಧತಿ ಹುಟ್ಟಿಕೊಂಡಿತು", ಮೊಗಲ್ ಸಾಮ್ರಾಜ್ಯ ಕ್ಷೀಣಿಸತೊಡಗಿದಾಗ ದೆಹಲಿಯ ಸರ್ಕಾರಕ್ಕೆ ತನ್ನ ಸಾಮ್ರಾಜ್ಯದ ರೂಢಿ ಪ್ರಾಂತ್ಯಗಳಿಂದ ಕಂದಾಯ ವಸೂಲಿ ಅಧಿಕಾರಿಗಳ ಮೇಲೆ ಸರಿಯಾದ ಹತೋಟಿ ಇಟ್ಟುಕೊಳ್ಳುವುದು ಸಾಧ್ಯವಾಗದೆ ಹೋಯಿತು.

ಬ್ರಾಹ್ಮಣರು ಮೈ ಬಗ್ಗಿಸಿ ದುಡಿಯುವರಲ್ಲ ಹಳ್ಳಿಗರಿಗೆ ಮೌಢ್ಯವನ್ನೆ ಉಪದೇಶ ಮಾಡಿ ನಿಮಿತ್ತ ಹೇಳುವುದು, ವಿಭೂತಿ ಕೊಡುವುದು, ಖಾಯಿಲೆ ಬಿದ್ದರೆ, ಔಷಧಿ ಮಾಡಿ ಎಂದು ಹೇಳುವ ಬದಲು ಬೂದಿ ಕುಂಕುಮ ಹಚ್ಚಿ ಮಂತ್ರ ಹಾಕುವುದು, ಇತ್ಯಾದಿ ಇವರಿಗೆ ವೇದಶಾಸ್ತ್ರ ಪುರಾಣಗಳೇ ಬಂಡವಾಳ.

ಬ್ರಾಹ್ಮಣರ ಅಗ್ರಹಾರದ ಊಟ ರಸಾಯನ, ಶೂದ್ರರ ಪಾಲಿಗೆ ಸ್ವರ್ಗ ಭೋಜನ ಇವರು ಜಾತಿ ಶ್ರೇಣಿಯ ತುತ್ತ ತುದಿಯಲ್ಲಿದ್ದಾರೆ.

ಮಂಜಪ್ಪಭಟ್ಟರಂತಹ- ಲೇವಾದೇವಿಯಿಂದ ಭೂ ಒಡೆತನವನ್ನು ಪಡೆದಿದ್ದಾರೆ. ಅದೇ ರೀತಿ ವೇದ ಪುರಾಣಗಳನ್ನು ಪ್ರಶ್ನಿಸುವ ಹೂವಯ್ಯ ದೇವಯ್ಯನಂತವರನ್ನು ಅವರು ಸಹಿಸರು- ತಮ್ಮ ವರ್ಗ ಹಿತಾಶಕ್ತಿಯನ್ನು ಕಾಪಾಡಿಕೊಳ್ಳಲು ಎಂತಹ ನೀಚ ಕೆಲಸಕ್ಕೆ ಇಳಿಯಬಹುದು.

ಒಕ್ಕಲಿಗರು ಅಥವಾ ಗೌಡರು ಭೂ ಮಾಲಿಕರು ತಮ್ಮನ್ನು ಬಿಟ್ಟು ಅನ್ಯರು ಭೂ ಮಾಲೀಕರಾಗಕೂಡದೆಂದು ಇವರ ತಗಾದೆ, ಬ್ರಾಹ್ಮಣರನ್ನು ಬಿಟ್ಟರೇ ಇವರೇ ಉತ್ತಮ ಜಾತಿಯವರು.

ಬಿಲ್ಲವರು- ಹಸಲರು- ಕುಂಬಾರರು ಹಳೆಪೈಕದವರು ಇತ್ಯಾದಿ

ಗಟ್ಟದ ಕೆಳಗಿನವರು

ಎಲ್ಲಾ ಅಸ್ಪೃಶ್ಯರು-ಹೊಲ-ಗದ್ದೆಗಳಲ್ಲಿ ದುಡಿಯುವ ಶ್ರಮಜೀವಿಗಳು ಗೌಡರ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡರೇ ಕೂಲಿಯಾಳುಗಳೇ ಆಗಲಿ, ಜೀತದಾಳುಗಳೇ ಆಗಲಿ, ಇವರಿಗೆ ಮುಸ್ಲಿಂರನ್ನು ಬಳಸಿಕೊಂಡು "ಹೊನ್ನಾಳಿ ಹೊಡೆತ" ದ ಮೂಲಕ ತಾವು ಹೇಳಿದ ಹಾಗೆ ಕೇಳುವಂತೆ ಮಾಡಿಕೊಳ್ಳುತ್ತಿದ್ದರು.

ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀಯರ ಸ್ಥಾನಮಾನ, ಮಹಿಳೆ ಹಾಸ್ಯದ ನೊಗ ಹೇರಿಕೊಂಡ ಮೊಟ್ಟಮೊದಲ ಮಾನವ ಜೀವಿ ಎಂಬುದನ್ನು ಚರಿತ್ರೆ ನಮಗೆ ಆಧಾರವಾಗಿಸುತ್ತದೆ. ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಪರಂಪರಾಗತವಾಗಿ ಮಹಿಳೆಯರ ಬದುಕಿನ ನಿರ್ದೇಶನ ಪುರುಷಾಧೀನಗೊಂಡಿರುವುದರ ಹಿಂದೆ ಹಲವಾರು ಒತ್ತಡಗಳಿವೆ. ಸ್ತ್ರೀಯರ ಬದುಕಿನ ಮನುಕುಲದ ಚರಿತ್ರೆಯ ಬೆಳವಣಿಗೆಯ ಪದರು ಪದರುಗಳನ್ನು ಬಿಚ್ಚುತ್ತಲೆ ನಿಚ್ಚಳವಾಗಿ ಕಾಣಬೇಕಾಗುತ್ತದೆ.

ಈ ರೀತಿ ಈ ಅಧ್ಯಯನದ ವ್ಯಾಪ್ತಿಯನ್ನು ನೋಡುತ್ತೇವೆ. ಅದೇ ರೀತಿ ಉದ್ದೇಶ, ಕಾದಂಬರಿಯಲ್ಲಿ ಕೃಷಿಯ ಒಂದು ನೋಟ ತಿಳಿಯುವ ಉದ್ದೇಶವಾಗಿದೆ.

ಈ ಕಾದಂಬರಿಯಲ್ಲಿ ಸ್ವರೂಪ, ಕೃಷಿ ಮಲೆನಾಡಿನ ಮಳೆ, ಗದ್ದೆ, ತೋಟ, ಬೇಟೆ, ಆಹಾರ ಪದ್ಧತಿ, ಉಡಿಗೆ-ತೊಡುಗೆಗಳು ಎಲ್ಲಾ ವಸ್ತುವಿನ ಚಿತ್ತಾರವನ್ನು ನೋಡುತ್ತವೆ. ದೇವಮಂದಿರಗಳನ್ನು ಸಹ ಕಾಣುತ್ತೇವೆ. ಇದೇ ಅಧ್ಯಯನದ ಸ್ವರೂಪವಾಗಿದೆ.

ಅಧ್ಯಾಯ – ೧೦

ಸಮಾರೋಪ

ಮನುಷ್ಯನ ಸಾಮಾಜಿಕ ಬದುಕಿಗೂ ಸಾಹಿತ್ಯ ಪ್ರಕಾರವಾದ ಕಾದಂಬರಿಗೂ ವಿಶಿಷ್ಟವಾದ ಕೆಲವು ಸಂಬಂಧಗಳಿವೆ. ತನ್ನ ಹುಟ್ಟಿನಿಂದಲೇ ಕಾದಂಬರಿ ಮನುಷ್ಯನ ಸಾಮಾಜಿಕ ಬದುಕಿನಲ್ಲಾಗುವ ಸ್ಥಿತ್ಯಂತರಗಳ ಅಭಿವ್ಯಕ್ತಿ ಮಾಧ್ಯಮವಾಗಿದೆ. ಈ ಕಾದಂಬರಿಗಳಲ್ಲಿಯು ಹಸಿರು ಕಣ್ಣಿಗೆ ಮುತ್ತಿಕೊಳ್ಳುತ್ತದೆ. ಮನಸ್ಸಿಗೆ ತುಂಬಿಕೊಳ್ಳುತ್ತದೆ. ಮನೆಯ ಹೊರಗೆ ಕಾಲಿಟ್ಟರೆ. ತಲೆಯೆತ್ತಿ ದೃಷ್ಟಿಸಿದರೆ ಪ್ರಕೃತಿಯ ಬಣ್ಣ ಬೆಡಗು ರಾರಾಜಿಸುತ್ತದೆ. ಪಕ್ಷಿಕಾಶಿಯ ಹಸರು ಕವನದ ಹೇಳಿಕೆ ಸತ್ಯವೆನಿಸುತ್ತದೆ.

ಹಸುರತ್ತಲ್! ಹಸುರಿತ್ತಲ್!

ಹಸುರೆತ್ತಲ್ ಕಡಲಿನಲಿ

ಹಸುರ್ಗಟ್ಟಿತೊಕವಿಯಾತ್ಮಂ

ಹಸುರ್ನೆತ್ತರ ಒಡಲಿನಲ್ಲಿ

ಈ ಪದ್ಯದ ಸಾಲನ್ನು ನೋಡಬಹುದಾಗಿದೆ.

ಮಳೆ ತೊಯ್ದು ಮಲೆನಾಡಿನ ಮೇಲೆ ಮೂಡಿದೆಳೆ ಬಿಸಿಲಿಗೆ, ರೈತರಿಗೆ, ಕೃಷಿಕಾರ್ಮಿಕರಿಗೆ, ಜೀತದಾಳುಗಳಿಗೆ, ವ್ಯವಸಾಯ ಮಾಡಲು ಅವಶ್ಯಕತೆ

ಹಿಂದೆ ಹುಲಿಕಲ್ಲು ನೆತ್ತಿಯ ಕಲ್ಲುಮಂಟಪವು ನಗರ ಸಂಸ್ಥಾನದ ಸೈನ್ಯದ ಕಾವಲ್ದಾಣವಾಗಿದ್ದಾಗ ನಡೆದಿದ್ದ ಯಾವುದಾದರೂ ಒಂದು ಘಟನೆ ಆ ಗಿರಿ ಮಸ್ತಕದ ಪ್ರಣಯಮಯ, ಸೂಕ್ಷ್ಮ ಪೃಥ್ವೀತತ್ವದಲ್ಲಿ ಅದಕ್ಕೆ ಸಂವಾದಿಯಾಗುತ್ತಿದ್ದ ಪ್ರಾಣಿ ಸದೃಶ್ಯ ಸಂಸ್ಕಾರದ ಆ ಬುದ್ಧಿ ಜೀವಿ ತಿಮ್ಮಯ ಪ್ರಾಣಮಯ ಸ್ವಪ್ನ ಪ್ರಜ್ಞೆಯ ಪ್ರಭಾವದಿಂದ ಪುನಃ ಸ್ಮೃತಿಯಾಗಿ ಆವಿರ್ಭವಿಸಿ ಅವಳಿಗೆ ದೃಗ್ಗೋಚರವಾಯಿತೋ? ಈ ಕಾದಂಬರಿಯ ಆತ್ಮ ಕೇಂದ್ರಿತದೃಷ್ಟಿಕೋನ, ಆತ್ಮಕಥಾನಕದಂತೆ ವಿವರಿಸುವ ಕ್ರಮ ಇಲ್ಲಿದೆ ಹೊಳೆದಂಡೆಯ ಮೇಲಿರುವ ಹುಲ್ಲಿನ ಗರಕೆ ಮತ್ತು ಗಗನ ಚುಂಬಿಯಾದ ವಟವೃಕ್ಷಗಳೆರಡೂ ತಂತಾನೆ ಆಗುವ ಮತ್ತು ಮಾಗುವ ಪರಿಗೆ ಇಲ್ಲಿ ಪ್ರಾಶಸ್ತ್ಯ ಆತ್ಮಸಂಸ್ಕಾರ ಮತ್ತು ಆತ್ಮ ವಿಕಾಸದ ಪಥದಲ್ಲಿ ಸಾಗುವ ಮತ್ತು ಸಾಗಲಾರದ ಬಗೆ ಬಗೆಯ ಪಾತ್ರಗ್ಳ ವ್ಯಕ್ತಿನಿಷ್ಠ ಪರಿಶೀಲನೆ ಇಲ್ಲಿದೆ.

ಜೀವನ ಕೇಂದ್ರಿತ ದೃಷ್ಟಿಕೋನ, ಬಂಧಕೇಂದ್ರಿತ ದೃಷ್ಟಿಕೋನ, ವರ್ಗ-ವರ್ಣ ಕೇಂದ್ರಿತ ದೃಷ್ಟಿಕೋನ, ವಸಾಹತುಶಾಹಿ ಕೇಂದ್ರಿತ ದೃಷ್ಟಿಕೋನ, ಈ ರೀತಿ ಕಾದಂಬರಿಯಲ್ಲಿ ಪಾತ್ರವು ಕಾಣುತ್ತೇವೆ. ರೈತರ ಸಮಸ್ಯೆ ಜೀತದಾಳುಗಳ ಸಮಸ್ಯೆ, ಮಹಿಳೆಯರ ಸಮಸ್ಯೆ ಎಲ್ಲ ದೃಷ್ಟಿಕೋನದಿಂದ ನೋಡುತ್ತೇವೆ.

ಸೃಷ್ಟಿ ಸೌಂದರ್ಯದ ಬಗೆಗಿನ ಒಲುಮೆಯೇ ಸೃಷ್ಟಿಕರ್ತನಿಗೆ ನಾವು ಸಲ್ಲಿಸುವ ಪೂಜೆ ಎಂದು ನಂಬಿದ್ದ ಕುವೆಂಪುರವರು ತಮ್ಮ ಕೃತಿಗಳಲ್ಲಿ ನಿಸರ್ಗ ಪ್ರೀತಿ ಮತ್ತು ಆಧ್ಯಾತ್ಮ ವಿಚಾರದೊಂದಿಗೆ ಕೃಷಿ ಜಾಲವನ್ನು ಒಡಮೂಡಿಸಿದ ಬಗೆ ಅನನ್ಯವಾದದ್ದು.

ಸಸಿ ನೆಟ್ಟಿಯಾಗಿದ್ದ ಗದ್ದೆಗಳಲ್ಲಿ ಇನ್ನೂ ಜಾತಿ ಇದ್ದುವೆಂದರೆ ಮನೆಯ ಬಳಿಯ ಅಡಕೆ ತೋಟಕ್ಕೆ ಮುಟ್ಟಿಕೊಂಡಂತಿದ್ದ ಮಕ್ಕಿಗದ್ದೆ ಆ ಮಕ್ಕಿ ಗದ್ದೆಯೂ ಉತ್ತು ಕೊರಡು ಹೊಡೆದು ನೀರು ಕಟ್ಟಿ ಸಸಿ ನೆಡೆಸಿಕೊಳ್ಳಲು ಸಿದ್ಧವಾಗಿ ನಿಂತಿತ್ತು.

ಮಾಗಿಯ ಚಳಿಗೆ ಶಾಲನ್ನು ಬಿಗಿಯಾಗಿ ಹೊದ್ದು ಕೊಳ್ಳುತ್ತಾ ಮುಕುಂದಯ್ಯ ಹೆಬ್ಬಾಗಿಲಾಚೆಗೆ ಕಣ್ಣು ಹಾಯಿಸಿದಾಗ ದಟ್ಟವಾಗಿ ಬೀಳುತ್ತಿದ ಮಾಗಿಯ ಮಂಜು ಹೊರಗಡೆಯಲೋಕ ಸಮಸ್ತವನ್ನು ನೋಡುತ್ತಿದ್ದನು.

ಐತಾ! ಕೊನೆ ತೆಗೆಇಯಾಕೆ ಯಾರ್ನಾದ್ರೂ ಕರೆಕೊಂಡು ಬರಬೇಕಲ್ಲೋ ಗದ್ದೆ ಕೊಯ್ಲಿಗೂ ಜನಾ ಗೊತ್ತು ಮಾಡಬೇಕೋ ಸುಮ್ಮನೆ ಕುತರೆ ಆಗಾದಿಲ್ಲ.

ಮಳೆ-ಬಿತ್ತನೆ-ಉಳುಮೆ-ಸಸಿನಾಟಿಯು ಗದ್ದೆ ಚಳಿಗಾಲ- ಮಾಗಿಯ ಮಂಜು ಅಡಿಕೆ ಕೊನೆ ಮತ್ತು ಗದ್ದೆ ಕೊಯ್ಲುಗಳ ಋತಬದ್ಧ ಕೃಷಿ ಪ್ರಕ್ರಿಯೆಯ ಪ್ರತ್ಯಕ್ಷ ಸಾಕ್ಷಿಯಂತಿರುವ ಮೇಲಿನ ಆಯ್ದ ಉಲ್ಲೇಖಗಳು ಪರೋಕ್ಷವಾಗಿ ಕಾದಂಬರಿಯ ಕಾಲಾನುಕ್ರಮಣಿಕೆಯನ್ನು ಸೂಚಿಸುತ್ತಿವೆ.

ಹೆಗ್ಗಾಡಿನಲ್ಲಿ ಒಂದು ಜಾತಿಯ ವಿಷಬಳ್ಳಿ ಇದೆ ಎಂದೂ ಅವನ್ನು ಮುಟ್ಟಿದವನು ಮನೆ ಸೇರುವ ಸಂಭವವಿಲ್ಲವೆಂದೂ ಹಳ್ಳಿಗರಲ್ಲಿ ಒಂದು ನಂಬಿಕೆ ರೂಢಿಯಾಗಿತ್ತು. ಆ ಬಳ್ಳಿ ಮುಟ್ಟಿ ಅನೇಕ ಜನರೂ ಜಾನುವಾರುಗಳೂ ಕಾಡಿನಲ್ಲಿ ದಿಕ್ಕು ತಪ್ಪಿ ಅಲೆದೂ ಅಲೆದೂ ಸತ್ತು ಹೋಗಿದ್ದುವೆಂಬ ಕಥೆಗಳು ಪ್ರಚಲಿತವಾಗಿದ್ದವು. ಸಾಯಂಕಾಲವಾಗುತ್ತಾ ಬಂದರೂ ಯಾವ ಊರಿನ ಸನಿಹವೂ ಕಿವಿಗಾಗಲಿ, ಕಣ್ಣಿಗಾಗಲಿ, ಗೋಚರವಾಗದಿದ್ದಾಗ, ಗುತ್ತಿಗೆ ತುಸು ದಿಗಿಲಾಯಿತು. ಹೊಟ್ಟೆ ಹಸಿದಾಗ ಬಗನಿ ಸಸಿಗಳನ್ನು ಕಿತ್ತು ಮರಕ್ಕೆ ಬಡಿದು ಅವುಗಳನ್ನು ತಿರುಳನ್ನು ತಿಂದಿದ್ದನು.

ಒಂದು ಕಡೆ ಹಲಸಿನ ಮರದಿಂದ ಬಿಳುವನ ಜಾತಿಯ ಹಣ್ಣನ್ನು ಕೆಡವಿ ಬಿದ್ದ ರಭಸಕ್ಕೆ ಬಿರಿದಿದ್ದ ಅದನ್ನು ನೆಗೆದು ತೊಳೆಗಳನ್ನು ನುಂಗಿದ್ದನು.

ಗುತ್ತಿ ಮಂಟಪದ ಮುಂದೆ ಓರೆಯಾಗಿ ಇಳಿದಿದ್ದ ಕಲ್ಲರೆಯ ಮೇಲೆ ನಾಲ್ಕು ಮಾರು ನಡೆದು ಹೋಗಿ ಕಾಡಿನ ಕಡೆ ನೋಡಿದನು. ಒಂದೆರಡು ನಿಮಿಶವಾದ ಮೇಲೆ ಕವಿದಿದ್ದ ಕತ್ತಲೆಯ ಹಳುವಿನಲ್ಲಿ ಮತ್ತೆ ಭಗ್ಗನೆ ಬೆಳಕು ಹೊತ್ತಿಕೊಂಡಂತಾಯಿತು, ನೋಡುತ್ತಾನೆ ಹಿಂಡುಕೊಂಡ ಸಾವಿರ ಲಕ್ಷ ಕೋಟಿ, ಕೋಟಿ ಮಿಣಕು ಹುಳುಗಳು ಒಮ್ಮೆಲೇ ಮಿಂಚಿ ಯಾವ ಲಾಟೀನು ಬೆಳಗಲಾರದಷ್ಟು ಪ್ರಕಾಶಮಾನವಾಗಿ ಗಿಡಮರ ಪೊದೆಯ ದಟ್ಟ ಹಳುವನ್ನು ಬೆಳಗುತ್ತಿವೆ. ಏ ಲಾಟೀನು ಬೆಳಕಲ್ಲ ಏನೂ ಅಲ್ಲ ಹೊನ್ನ ಹುಳದ ಹಿಂಡಿಂಡೇ ದೊಂದಿ ಬೀಸುತ್ತಿದ್ದವು.

ಬೆಮ್ಮಾಲರ ಹಣ್ಣು ಕಲ್ಸಂಪಗೆ ಹಣ್ಣು ಕಾಕಿಹಣ್ಣು- ಬಗೆಬಗೆಯ ಕಾಡು ಹಣ್ಣುಗಳನ್ನು ಸಂಗ್ರಹಿಸುವ ವಾಸುವಿನ ಪುಟ್ಟ ಹೃದಯ.

ಬೈರನು ಹೊಂಡ ತೊಣಕಿ ಸೋಸಲು ಮೀನು, ಚಟ್ಟಂಗಿ, ಸಿಗಡಿ, ತೊಳ್ಳೆಮೀನು ಮೂರುಗುಂಡು, ಗಿರಲು ಕೊಚ್ಚಲಿಗಳನ್ನು ಹಿಡಿಯುವುದು.

"ತೆಕೋ, ತೆಕ್ ತೆಕ್" ಕಾಡುಹುಂಜವನ್ನು ಗೋರಿಗೊಳಿಸಿ ಈಡು ಹೊಡೆಯುವ ಕೇಪಿನ ಕೋವಿಯ ಸೇರೆಗಾರ ರಂಗಪ್ಪ ಸೆಟ್ಟರು.

ಮೊರದಲ್ಲಿ ಲಕ್ಷಾಂತರ ಕೆಂಬಣ್ಣದ ಚಗಳಿಯಿರುವೆಗಳೂ ಅದಕ್ಕಿಂತ ಹೆಚ್ಚಾಗಿ ಬಿಳಿಯ ಕಿರುಮೊಟ್ಟೆಗಳೂ ತುಂಬಿಕೊಳ್ಳುವ ಬಾಡುಗಳ್ಳ ಸೋಮ ಕಳಮಶ್ರೀ ಆರಾಧನೆಯ ಹಬ್ಬ, ಬೆರಕೆ ಸೊಪ್ಪಿನ, ಪಲ್ಯಕ್ಕಾಗಿ ಹಬ್ಬದ ಹಿಂದಿನ ದಿನವೇ ಹುವಯ್ಯ-ರಾಮಯ್ಯ- ವಾಸು-ಪುಟ್ಟಣ್ಣ- ಬೇಲರ ಬೈರ-ಸಿದ್ದ ಇವರೆಲ್ಲ ಒಟ್ಟುಗೂಡಿ ಕಾಡುಗಳಿಗೆ ಹೋಗಿ ೬೦ ಬಗೆಯ ಸೊಪ್ಪುಗಳನ್ನು ನೂಲೆ ಗೆಣಸುಗಳನ್ನು ತರುವುದು.

ಸ್ವಾರ್ಲುಮೀನು ಚಟ್ನಿ ಕಾರೇಡಿ ಚನಿಗಳೊಂದಿಗೆ ಬಗೆಬಗೆಯ ಕಾಡು ಮೂಲದ ಚಟ್ನಿಗಳನ್ನು ತಯಾರಿಸುವ ಪಿಂಚಲ ಕಾಗಿನಹಳ್ಳಿ ಅಮ್ಮನವರ ಸೂಚನೆಯಂತೆ ಇಲಿ ಕಿವಿ ಸೊಪ್ಪಿನ ಹಸೂಳೆ ಮಾಡಿಕೊಳ್ಳುವುದು.

ಅಂಕೋಲೆ ಮುಳ್ಳು ಚೆಚ್ಚಿ ಕಾಲಿಗೆ ನಂಜೇರಿ ಜ್ವರ ಪೀಡತವಾದ ಕಾಡುವಿಗೆ ಚಿನ್ನಮ್ಮಳು ಕಾಡು ಜೀರಿಗೆ ತಿನ್ನಿಸಿ ಬಿಸಿ ನೀರು ಕುಡಿಸು ಮಲಗಿಸುವುದು, ಕುನ್ನೇರ್ಲು ಕುಡಿಕ ಸಾಯ ಕೊತ್ತುಂಬ್ರಿ ಬೀಜದ ಕಸಾಯ ಸೋಗದ ಬೇರಿನ ಕಸಾಯ, ಸಣಲೆಸದುಗನ ಬೇರಿನ ಕಸಾಯ- ಹೀಗೆ ಬಗೆಬಗೆಯ ಕಷಾಯಗಳಿಗೆ ನಿಷ್ಣರಾಗಿದ್ದ ಸುಬ್ಬಣ್ಣಹೆಗ್ಗಡೆಯವರು.

ಕಣ್ಣುಗಳೆರಡು ಗುಲಗಂಜಿಯಂತೆ ಕೆಂಪಾಗಿದ್ದು, ಇದ್ದಲಿನಂತೆ ಕರ್ರಗಿದ್ದ ಬಂದುವರೆ ಮೊಳುದ್ದದ ಅವಲು ಮೀನು ನೀರು ಕಚ್ಚುವ ಸಮಯವನ್ನು ನಿರೀಕ್ಷಿಸುವ ಚಿನ್ನಯ್ಯನು ಹೊಂದು

ಹಾಕುತ್ತಿರುವಂತೆಯೇ ಅವನಿಗೆ ತುಸು ದೂರದಲ್ಲಿ ಮೇಲಕ್ಕೆ ಒಂದು ಕೊಂಬೆಯಂತೆ ಮತ್ತೊಂದು ಕೊಂಬೆಗೆ ಚಕ್ರಾಕಾರವಾಗಿ ಬಲೆಯನ್ನು ಕಟ್ಟಿ, ಅದರ ಕೇಂದ್ರದಲ್ಲಿ ನಿಶ್ಚಲವಾಗಿ ಮಂಡಿಸಿದ್ದ ಹುಲಿಯ ಬಣ್ಣದ ದೊಡ್ಡ ಸಾಲಗವೊಂದು ತಾನು ಬಲಿಗಾಗಿ ಹೊಂಚುತ್ತಿರುವುದು.

ಇಲಿಕಿಲಿಸೊಪ್ಪು– ಇದು ಒಂದೆಲಗದ ಪ್ರಭೇದ, ಇದನ್ನೆ ಸಂಸ್ಕೃತದಲ್ಲಿ ಬ್ರಾಹ್ಮಿ ಎನ್ನುತ್ತಾರೆ.

ಸೊಗದೆ ಬೇರು ಇದಕ್ಕೆ ನಾಮದ ಬೆಳ್ಳಿ ನನ್ನಾರಿ ಸುಗಂಧಿಬೇರು ಮುಂತಾದ ಹೆಸರುಗಳಿವೆ ಸಂಸ್ಕೃತದಲ್ಲಿ "ಅನಂತಮೂಲ" ಎನ್ನುತ್ತಾರೆ.

ಕಾಡಿನಂಚಿನಲ್ಲಿ ಬೈಗುಪ್ಪಿನ ಮಬ್ಬಿನಲ್ಲಿ ಹೆಮ್ಮರದ ದಿಂಡಿನಲ್ಲಿರುವ ಮರಕುಟಿಕ ಗೂಡಿನ ಪೊಟರೆ ಅತ್ಯಂತ ಪೂರ್ವಕಾಲದ ಬಾಳಿನ ಯಾವುದೋ ಒಂದು ಕಗ್ಗವಿಯನ್ನೋ ಚೆಂಡಭೂತದ ಕಣ್ಣನೋ ಆಸ್ಮೃತಿಗೆ ತಂದು ಅನಿರ್ವಚನೀಯವಾದ ಭೀತಿಯನ್ನುಂಟು ಮಾಡಬಹುದು.

ಕಾಮಳ್ಳಿಯ ಇಂಪಾದ ಹಾಡು ಎದುರಿಗಿದ್ದ ಮರದ ನೆತ್ತಿಯಿಂದ ಬರುತ್ತಿರಲಿಲ್ಲ. ಅನಂತತೆಯ ಬಸಿರಿನಿಂದ ಅರ್ಥಪೂರ್ಣವಾಗಿ ಬರುತ್ತಿತ್ತು. ಅಲ್ಲಲ್ಲಿ ಶೋಭಿಸುತ್ತಿದ್ದ ಕಾಡು ಹೂವುಗಳು ಬರಿಯ ಹೂಗಳಾಗಿರಲಿಲ್ಲ. ಆತ್ಮದ ಮನೋಹರ ಭಾವ ಸಂದೇಶವನ್ನು ಹೊತ್ತು ತಂದ ದೇವದೂತರುಗಳಾಗಿದ್ದವು, ಇತ್ಯಾದಿ ವಿಷಯಗಳು ಮನೋ ರಾಜ್ಯದಲ್ಲಿ ಪ್ರವಹಿಸುತ್ತಿರಲು ಮರದ ಮೇಲೆ ಕೋಗಿಲೆಯೊಂದು ಕುವೂ ಕುಹೂ ಎಂದು ಕೂಗಿತು. ಆ ಕೂಗು ಹೂವಯ್ಯನಿಗೆ ನನ್ನಂತಾಗು, ನನ್ನಂತಾಗು ಎನ್ನುವಂತಿತ್ತು.

ಹೋದ ರಾತ್ರಿಯ ಮಾರಿಮಳೆಯಲ್ಲಿ ತೇಲಿಬಂದು ಕುತ್ತುರೆಯಾದಂತಿದೆ ಹಲಸಿನ ತರಗಿನ ನಡುವೆ ಬಿದ್ದಿದ್ದ ಒಂದು ಸೆಗಣೆ ಮುದ್ದೆಯಿಂದ ಒಂದು ಓಡುಹುಳು ಸಣ್ಣದೊಂದು ಉಂಡೆಯನ್ನು ರಚಿಸಿ ಅದನ್ನು ಹಿಂದು ಮುಂದಾಗಿ ತನ್ನ ಹಿಂಗಾಲುಗಳಿಂದ ನೂಕಿಕೊಂಡು ಹೋಗುತ್ತಿತ್ತು. ಗುತ್ತಿಯ ಮನಸ್ಸಿನ ಹೊರ ಅಂಚು ಅದರ ದೃಢತೆಯ ವಿಚಾರವಾಗಿ ಚಿಂತಿಸಿ ಶ್ಲಾಘಿಸುತ್ತಲೂ ಇತ್ತು.

ಮುದುಕನು (ಅಣ್ಣಯ್ಯಗೌಡರು) ಒಂದು ಸಾರಿ ತಲೆಯೆತ್ತಿ ನೋಡಿದನು, ಮರದ ಮೇಲೆ ಕಾಗೆಯೊಂದು ಕಾ! ಕಾ! ಎಂದು ಕರೆಯುತ್ತಿತ್ತು. ಮುದುಕನು ನಿಡ ಸುಯ್ದು ಮತ್ತೆ ತಲೆಬಾಗಿ ಮುಂದೆ ಸಾಗಿದನು. ಒಂದು ಓತಿಕ್ಯಾತ ಬೇಲಿಯ ಮೇಲೆ ಕುಳಿತು "ಹಾಗಾಗಬೇಕು, ಹಾಗಾಗಬೇಕು" ಎಂದು ತಲೆಯಲ್ಲಾಡಿಸಿ ಹಂಗಿಸುವಂತಿತ್ತು.

ಬೆಕ್ಕನ್ನು ಕಂಡು ಚಿನ್ನಮ್ಮನ ಹೃದಯದಲ್ಲಿ ಎಂತಹ ಆತ್ಮೀಯತೆ ಉಕ್ಕಿತೆಂದರೆ ತನ್ನ ಅವ್ವನೆ ಬೆಕ್ಕಿನ ನೆವದಲ್ಲಿ ತನ್ನನ್ನು ಸಂತೈಸಲು ಬಂದಿದ್ದಾಳೆಯೋ ಎನೋ ಎಂಬ ಅನುಭವ ಉಂಟಾಗಿ ಮೈ ಮೇಲಣ ರೋಮ ಮುಳ್ಳು ನಿಲ್ಲುವಂತಾಯ್ತು.

ಹಳ್ಳ ಇಳಿಯುವವರೆಗೂ ಅದನ್ನು ದಾಟುವ ಹಾಗಿರಲಿಲ್ಲ, ನಿಂತು ಬೇಸರವಾಗಿದ್ದುದರಿಂದ ಕಂಬಳಿ ಕೊಪ್ಸೆಯ ಒಂದು ಭಾಗವನ್ನೆ ಹಾಸನ್ನಾಗಿ ಉಪಯೋಗಿಸಿಕೊಂಡು ಹಸರು ಬೆಳದೊಂದು ಮಣ್ಣುದಿಬ್ಬದ ಮೇಲೆ "ಹಳ್ಳದ ಹೆಣಾ ಕಾಯ್ತಾ" ಕುಳಿತನು.

ಕಳಮಶ್ರೀಯ ಆರಾಧನೆಯ ಜೊತೆಗೆ ಕಲೋಪಾಸನೆಯೂ ಆಗುತ್ತದೆ. ಜಡಜಗತ್ತು ಸಸ್ಯಾದಿಗಳೂ ತತ್ವತಃ ಚೈತನ್ಯವೇ, ಆದುದರಿಂದ ವಂದನೀಯ ಎಂಬುದು ಆ ಪೂಜೆಯ ಅವ್ಯಕ್ತ ಬೊದೆ

ಅನಂತ ಔದಾರ್ಯದಿಂದಲೂ ಅಪಾರ ತ್ಯಾಗದಿಂದಲೂ ಎದೆ ತುಂಬಿ ತುಳುಕುತ್ತಾ ಹೂವಯ್ಯ ತಾನೊಬ್ಬನೆ ಕಾನೂರಿಗೆ ಹೊರಟನು. ಎತ್ತ ನೋಡಿದರತ್ತ ಸೃಷ್ಟಿ ಸ್ವರ್ಗೀಯವಾಗಿತ್ತು. ಹಸರು ಹುಲ್ಲಿಗೆ ನೋವಾಗಬಾರದೆಂದು ದಾರಿಯಲ್ಲಿ ಹುಲ್ಲು ಹುಟ್ಟದ ಕಡೆಯೇ ಹೆಜ್ಜೆಯಿಡುತ್ತಾ ನಡೆದಿದ್ದನು.

ಚುಕ್ಕಿಗಳಂತೂ, ಬಾನಿನ ಮೈಯಲ್ಲಿ ಎದ್ದ ಬೆಳ್ಳಿಯ ತುರಿಗಜ್ಜಿಗಳಂತೆ ಲಕ್ಷೋಪಲಕ್ಷವಾಗಿದ್ದವು. ಆಕಾಶಗಂಗೆ ಅಥವಾ ಅಮೃತ ಪಥವು ಚೆನ್ನಾಗಿ ತುರಿಸಿಕೊಂಡರೆ ಮೈಮೇಲೆ ಕಾಣುವ ಬೂದಿ ಬೂದಿಗೆಲೆಯಂತೆಯೂ ತೋರುತ್ತಿತ್ತು.

ಓಬಯ್ಯನು ಸ್ಪರ್ಶ ಮಾತ್ರದಿಂದಲೇ ಅಪಾಯವನ್ನು ಬಗೆದು ಮೈಮುದುರುಸಿ ನಿರ್ಜೀವವಾದಂತೆ ಉಂಡೆಯಾಗಿ ಬಿದ್ದುಕೊಳ್ಳುವ ಬಸವನ ಹುಳುವಿನಂತೆ ಚೌಕಿಯ ಮೂಲೆಯಲ್ಲಿ ಅಚಲನಾಗಿದ್ದನು.

ಹೂವಯ್ಯನ ಕಣ್ಣು ಮೊಟ್ಟೆಯ ಮೇಲೆ ಕಾವು ಕೊತ ಹಕ್ಕಿಯ ಕಣ್ಣಿನಂತೆ ಅಂತರ್ಮುಖವಾಗಿತ್ತು.

ಅಲ್ಲಲ್ಲಿ ಹೊಂದನೆಯ ಹಳದಿಯ ಪೈರನ್ನು ಕತ್ತರಿಸುದ್ದುದರಿಂದ ತಲೆಯ ಮೇಲೆ ಕ್ಷೌರದ ಪಟ್ಟೆ ಎಳೆದಿದ್ದಂತೆ ಬೋಳಾಗಿ ಕಾಣಿಸುತಿತ್ತು.

ಸುತ್ತಲೂ ವಿಸ್ತಾರವಾಗಿ ಅನಂತವಾಗಿ ಬೆಳೆದಿದ್ದ ಅರಣ್ಯಗಳಿಂದಲೂ ಕಣಿವೆಯ ಹುಲ್ಲುಗಾವಲುಗಳಿಂದಲೂ ನೆಲವೆಲ್ಲಾ ಹಸುರಾಗಿತ್ತು.

ಸುಬ್ಬಮ್ಮನ ಮನಃಸ್ಥಿತಿಯು ಮಾವಿನ ಕಾಯಿಯೂ ಸೇರೆಗಾರರ ಒಲುಮೆ ಗಿಳಿಯ ಕೊಕ್ಕಿನ ಕುತುಕಿಗೆ ಯೋಗ್ಯವಾಗುವಂತೆ ಹೆಣ್ಣಾಗುತ್ತಿತ್ತು.

ಅದೊಂದು ಭೀಮಕಾರದ ಮರವಾಗಿತ್ತು, ನಾಲ್ದೆಸೆಗಳಿಗೂ ಸ್ವಚ್ಛಂದವಾಗಿ ಹರಡಿಕೊಂಡು ತನ್ನದೇ ಆದ ಸಂಸಾರ ಹೂಡಿತು, ಅದರ ಸಣ್ಣ ಸಣ್ಣ ಬಿಳಲುಗಳು ತಪಸ್ಸಿಗೆ ಕುಳಿತ ಮಹರ್ಷಿಯ ಗಡ್ಡವನ್ನು ದಿಕ್ಕು ದಿಕ್ಕಿಗೆ ಧೀರವಾಗಿ ಕೈ ಚಾಚಿದ್ದ ಹೆಗ್ಗೊಂಬೆಗಳು ಗರಡಿ ಸಾಧನೆ ಮಾಡಿದವನ ಅಂಗ

ವಿನ್ಯಾಸನ್ನು ಭೂಮಿಗಿಳಿದು ಬೆಳೆದು ನಿಂತ ಹೆಬ್ಬಿಳಲು, ದೊಡ್ಡ ದೇವಾಲಯದ ಕಂಬಗಳ ಸಾಲ್ಗಳನ್ನು ನೆನಪಿಗೆ ತರುತ್ತಿದ್ದವು. ಉಷ್ಪ ಹಕ್ಕಿಗಳಿವೆ, ಈ ಕಾಡಿನ ಸೆರಗಿನಲ್ಲಿ ಅವೆಲ್ಲವೂ ಒಟ್ಟುಲಿದು ಕಾಡೆಲ್ಲಾ ಗಿಲಿಗಿಚ್ಚಿ ಆಡಿಸಿದ ಹಾಂಗಿರೆಯಲ್ಲಾ.

ಮಲೆಯ ಹಸುರನ್ನೇ ಸದಾ ನೋಡುತ್ತಿದ್ದ ಆ ಕಣ್ಣಿಗೆ ಮುಪ್ಪಾಗಿದ್ದರೂ ದೃಷ್ಟಿ ಮಂದವಾಗಿರಲಿಲ್ಲ.

ಪಂಜರ ಮೋಕ್ಷಕ್ಕಾಗಿ ಪ್ರಾಣಿಗಳೆಲ್ಲಾ ಒಂದೇ ತಡವೇ ಮುಮುಕ್ಷುಗಳಾಗಿ ನುಗ್ಗತೊಡಗಿದುದರಿಂದ ಗಲಾಟೆ ನೆರಯೇರಿತು.

ಹಸುಳೆ ಬಿಸಿಲಿನ ಬಾಲ್ಯದ ಬೆಚ್ಚನೆಯ ಸೋಂಕಿ ಗೆಳಸಿ ಸುಬ್ಬಣ್ಣ ಹೆಗ್ಗಡೆಯವರು ಮುಪ್ಪಿನ ಮೇಯ್ಗೆ ಸುತ್ತಿದ್ದ ಕರಿಕಂಬಳಿಯನ್ನು ಬಿಚ್ಚಿ ಹಂದಿಯೊಟ್ಟೆಯ ಮೇಲಿಟ್ಟಾರು. ಬೆನ್ನಿಗೆ ಬಿದ್ದ ಬಿಸಲು ನಾಲಿಗೆಗೆ ಬೀಳುವ ಜಿವವಾಗಿತ್ತು. ಹೆಗ್ಗಡೆಯವರು ಸ್–ಸ್–ಸ್ ಆಯ್ ಎನ್ನುತ್ತಾ ಮುಂಡಾಡುವ ರೀತಿಯಲ್ಲಿ ಬೆನ್ನು ನೀವಿಕೊಂಡರು.

ಮೊದಮೊದಲು ಅಲ್ಲೊಂದು ಇಲ್ಲೊಂದು ಕೂಗಲು ತೊಡಗಿದ್ದ ಜೀರುಂಡೆಗಳು ಬರಬರುತ್ತಾ ಸುತ್ತ ನಾಲ್ಕು ದಿಕ್ಕಿನಿಂದಲೂ ಜೀರ್–ಜೀರ್–ಜೀರ್– ಎಂಬ ಕೊರೆಯುವ ಕರ್ಕಶ ಧ್ವನಿಯ ಗರಗಸ ಬಲೆಯನ್ನೇ ನೇಯ್ದು ಕಾಡಿನ ಮೇಲೆ ಬೀಸಿದ್ದವು.

ಎರಡು ಕಾದಂಬರಿಗಳಿಂದ ಸಸ್ಯ–ಕ್ರಿಮಿ–ಕೀಟ–ಪಕ್ಷಿ–ಪ್ರಾಣಿ–ಮನುಷ್ಯ–ವ್ಯವಸಾಯ– ಪರಿಸರ–ಐಕ್ಯ ಸ್ಥಲವೊಂದು ಅನುಭವಕ್ಕೆ ಬರುತ್ತದೆ.

ಬೇಟೆ ಸಾರ್ವತ್ರಿಕ ಅಂಶವಾದರೂ ಮಲೆನಾಡಿನ ಬೇಟೆಗೆ ವಿಶಿಷ್ಟತೆಯಿದೆ. ಅನುಭವಾತೀತವಾದ ಅನೇಕ ಬಗೆಯ ಬೇಟೆಗಳು ವಿಸ್ಮಯಗೊಳಿಸುತ್ತದೆ. ಮಲೆನಾಡಿನ ಬದುಕಿಗೆ ಸಾಹಸದ ವೈವಿಧ್ಯತೆಯನ್ನು ತಂದುಕೊಡುತ್ತದೆ. ರೋಮಾಂಚನದ ಮಿಂಚನ್ನು ಹರಿಸುತ್ತದೆ. ಅದು ಬೈರ ಸಿದ್ದರ ಏಡಿ ಶಿಕಾರಿಯಾಗಲಿ ಬೈಲು ಕೆರೆಯಲ್ಲಿ ಚಿನ್ನಯ್ಯ ಮಾಡುವ ಮೀನು ಶಿಕಾರಿಯಲ್ಲಿ ಅತ್ಯಂತ ಸಾಮಾನ್ಯವೆಂದು ನಿರ್ಲಕ್ಷ್ಯ ಮಾಡುವಂತಿಲ್ಲ. ಅದೇ ರೀತಿ ದೊಡ್ಡಣ್ಣ ಹೆಗ್ಗಡೆಯವರ ಹುಲಿಬೇಟೆಯಾಗಲಿ, ಅಥವಾ ಹಂದಿ ಬೇಟೆಯಾಗಲಿ ರೋಮಾಂಚನಕಾರಿಯಾಗಿದ್ದ ಮಲೆನಾಡಿನ ಕಾದಂಬರಿಗಳಲ್ಲಿ ಕಾಣುತ್ತವೆ. ಅದೇ ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಕೃಷ್ಣಪ್ಪನ ಹುಲಿಬೇಟೆಯು ತನ್ನ ಪ್ರಾಣವನ್ನು ಕೊಡುತ್ತಾನೆ. ಅದೇ ರೀತಿ ಹಂದಿ ಬೇಟೆ ನಾವು ಕಾಣಬಹುದಾಗಿದೆ.

ಕುವೆಂಪುರವರ ದೊಡ್ಡ ಬೇಟೆಯ ಪ್ರಸಂಗದಲ್ಲಿ ಸೂರ್ಯನೆತ್ತಿ ಮೇಲೆ ಬಂದಾಗ ಹೊಟ್ಟೆ ಚುರುಗುಡುವುದು, ಹಸಿವಿನ ಅರಿವನ್ನು ಹೊಟ್ಟೆ ಸೂಚಿಸುವ ಪ್ರಸಂಗ "ಹಳ್ಳದ ಹಾಸು ಬಂಡೆಗಳ

ಮೇಲೆಯ ಹೊಂಗೆಯ ನೆರಳಲ್ಲಿ ಉಣ್ಣಲು ಕುಳಿತು ಬುತ್ತಿಯ ಗಂಟನ್ನು ಬಿಚ್ಚಿದಾಗ ಏಲಕ್ಕಿ ಕೊತ್ತಂಬರಿ ಸೊಪ್ಪಿನ ಗಮಗಮ ಕಂಪಿನ ಆ ಮೊಸರನ್ನದ ಬುತ್ತಿ ಕಳಲೆ ಉಪ್ಪಿನ ಕಾಯಿಯ ಸಾನಿಧ್ಯದಲ್ಲಿ ಆ ಕಾಡಿನ ನಡುವೆ ನಿರ್ಝುರಿಯ ದಣಿದ ಅವರಿಗೆ ಅಮೃತ ದೌತಣವನ್ನು ನಾಚಿಸುವಂತಿತ್ತು. ಹಳ್ಳದ ನೀರನ್ನೇ ಬುತ್ತಿ ಅನ್ನಕ್ಕೆ ಹಾಕಿಕೊಂಡು ಉಂಡು ಆ ನೀರನ್ನು ಕುಡಿದೆವು?" ಕುವೆಂಪುರವರ ಮಾತುಗಳು ಗಮನಾರ್ಹವಾದವು.

ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಹೆಂಡ ಮತ್ತು ಬಾಡಿನ ವ್ಯಾಮೋಹದ ಅಲೆಗಳನ್ನು ಕುವೆಂಪು ತಮ್ಮ ಹಾಸ್ಯಭರಿತ ಶೈಲಿಯಲ್ಲಿ ಚಿತ್ರಿಸುತ್ತಾರೆ. ಕೆಳವರ್ಗದ ದಲಿತರು ಮಾತ್ರವಲ್ಲದೆ ಶೂದ್ರ ಸಮುದಾಯ ದುಡಿಯುವ ವರ್ಗ ಕೂಡ ಹೆಂಡದ ಗುಲಾಮರಾಗಿ ವರ್ತಿಸುತ್ತಾರೆ. ಮೇಲ್ಜಾತಿಯವರು ಅಮಲಿಗಾಗಿ ಕುಡಿದರೆ ಕೆಳಜಾತಿಯವರು, ದುಃಖದುಮ್ಮಾನಗಳ ಮತ್ತು ದೇಹಶ್ರಮದಿಂದ ಬಿಡುಗಡೆ ಪಡೆಯಲು ಕುಡಿಯುತ್ತಾರೆ.

ಕುವೆಂಪು ಎಂಬ ಕಾವ್ಯನಾಮದಲ್ಲಿಯೇ ಕನ್ನಡ ಭಾಷೆಯ ಪೆಂಪು ಮತ್ತು ಕಾವ್ಯದ ಇಂಪು ಎರಡೂ ಅಡಗಿದೆ. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ಅಚ್ಚಮಾಲೆನಾಡಿಗರ ಬದುಕನ್ನು ಹಸಿರಾಗಿದ್ದರೂ ಒಣಗಿದರೂ ಜೀವಂತಿಕೆಯನ್ನು ಕಳೆದುಕೊಳ್ಳುವ ಅಲ್ಲಿನ ಪಾತ್ರಗಳನ್ನು ತಮ್ಮ ಮಹಾನ್ ಕಾದಂಬರಿಗಳಲ್ಲಿ ಕೆತ್ತಿದ ಮಹಾಕಾದಂಬರಿಕಾರರು, ಕವಿಯಾಗಿ ಅವರ ಕವಿತ್ವವು ರೆಕ್ಕೆಗಳನ್ನು ಅಗಲಿಸಿ ಬಾನಾಡಿಯಾಗಿ ಮಲೆನಾಡಿನ ಮೂಲೆ ಮೂಲೆ ಸೌಂದರ್ಯವನ್ನು ಅರಸಿ ಅದನ್ನು ಶಬ್ಧಗಳಲ್ಲಿ ಮುತ್ತಾಗಿಸಿ ಮಾಲೆಕಟ್ಟಿ ಕನ್ನಡ ಭುವನೇಶ್ವರಿಯ ಮುಡಿಗೇರಿಸಿದವರು. ರಾಮಾಯಣ ದರ್ಶನಂನಂತಹ ದಾರ್ಶನಿಕ ಬೃಹತ್ ಗ್ರಂಥವನ್ನು ಸಾಹಿತ್ಯ ಭಂಡಾರಕ್ಕೆ ಅರ್ಪಿಸಿ ಭಾರತೀಯ ಪುರಾಣವೊಂದಕ್ಕೆ ಕೊಡಬಹುದಾದ ಎಲ್ಲಾ ಹೊಸ ಸಾಧ್ಯತೆಗಳನ್ನು ಆಯಾಮಗಳನ್ನು ಕೊಟ್ಟು ಜ್ಞಾನಪೀಠ ಪ್ರಶಸ್ತಿಗೆ ಭಾಜನರಾದರು. ಪಂಪ ಪ್ರಶಸ್ತಿಯನ್ನು ಪಡೆದ ಮೊದಲಿಗರಾದರು.

ಸರ್ವ ಸಮಾನತೆಯಲ್ಲಿ ಪೂರ್ಣವಿಶ್ವಾಸವಿಟ್ಟವರು ರಾಷ್ಟ್ರಕವಿ ಕುವೆಂಪು ಅವರ ಸಾರಿದ ಸಂದೇಶ ಮನುಜಮತ ವಿಶ್ವಪಥ ದಿಟವಾಗಿಯೂ ವಿಶ್ವಮಾನವರಾಗಿ ವಿಶ್ವದಾದ್ಯಂತ ಜಾತಿ ಮತ ಮೂಢನಂಬಿಕೆಗಳು, ಬಹುದೇವತಾರಾಧನೆಗಳನ್ನು ತೊಲಗಿಸಿ ಪ್ರೇರೇಪಿಸಿದರು. ಮನುಷ್ಯರೆಲ್ಲರೂ ಒಂದೇ ಎಂಬ ಭಾವನೆ ಸ್ಫುರಿಸಿ ವಿದ್ಯೆಯ ಬೆಳಕು ಸರ್ವವ್ಯಾಪಿಯಾಗಿ ಅಹಿಂಸೆ ಎಂದರೆ ಬಲಹೀನತೆಯಲ್ಲ ಎಂಬ ಅರಿವು ಉಂಟಾಗಬೇಕಾದರೆ, ಕುವೆಂಪುರವರ ಸಮಗ್ರ ಜೀವನದ ಪರಿಚಯ ಇಂದಿನ ಪೀಳಿಗೆಗೆ ಆಗಬೇಕು. ಅವರ ಕವಿತೆಗಳ ರಸಾಸ್ವಾದನೆಯಿಂದ ಜಾಗತೀಕರಣದಿಂದುಂಟಾಗುತ್ತಿರುವ ನಾಡು, ಜಲ, ನೆಲ, ಕಾಡು ಬೆಟ್ಟಗಳನ್ನು ಉಳಿಸಿಕೊಳ್ಳುವ ಛಲ ಮೂಡಬೇಕು, ಕುವೆಂಪುರವರ ಸಾಹಿತ್ಯವಷ್ಟೆ ಅಲ್ಲ ಅವರ ಸಮಗ್ರ ಬದುಕೇ ಒಂದು ಆರೋಗ್ಯಕಾರಕ ಜ್ಞಾನದಾಯಕ ಸಂದೇಶವಾಗಿದೆ. ನಿಸರ್ಗದ ಮಡಿಲಿನ ಶಿಶುವಾಗಿ ಬೆಳೆದ ಕುವೆಂಪುರವರಲ್ಲಿ ಕವಿ ಸಹಜವಾದ ಭಾವುಕತೆ ಏಕಾಂತ ಪ್ರಿಯತೆಗಳಿದ್ದವು. ಕುವೆಂಪು

ಬಾಲ್ಯದಿಂದಲೇ ಪ್ರಕೃತಿಯನ್ನು ಆರಾಧಿಸುತ್ತಾ ಬೆಳೆದವರು ಅವರು ಗುಡಿಗೋಪುರಗಳಿಗೆ ತೆರಳಿ ಪೂಜಿಸಿದ್ದಾಗಲೀ ಜಾತಿ ಸೂಚಕವಾದ ಆಚರಣೆಗಳನ್ನು ಕೈಗೊಂಡಿದ್ದಾಗಲೀ ಇಲ್ಲವೇ ಇಲ್ಲ, ಅವರು ಪ್ರತಿಪಾದಿಸಿದ ಅನುಸರಿಸಿದ ಧರ್ಮ 'ಸರ್ವರಿಗೂ ಸಮಪಾಲು– ಸಮಬಾಳು' ಎಂಬುದರ ಬುನಾದಿಯ ಮೇಲೆ ಕಟ್ಟಲ್ಪಟ್ಟ ವಿಶ್ವಮಾನವ ಧರ್ಮ.

ಆಧ್ಯಾತ್ಮಿಕತೆ ಅಖಂಡ ಪ್ರವಾಹವಾಗಿ ನಮ್ಮ ಜೀವತಮಾರ್ಗದ ಪಾರ್ಶ್ವದಲ್ಲೆ ಹರಿಯುತ್ತದೆ. ಅದನ್ನು ಹೊಕ್ಕು ಅದರ ಶಕ್ತಿ ಅನಂತತೆಗಳನ್ನು ಅನುಭವಿಸಿ ದಿವ್ಯಾನಂದವನ್ನು ಪಡೆಯಲು ನಾವು ಸಜ್ಜಾಗಬೇಕೆಂಬುದು ಕುವೆಂಪುರವರ ಸಂದೇಶವೆನಿಸುತ್ತದೆ.

ಜೀವನದಲ್ಲಿ ನಾವು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಕಡೆಗಣಿಸದೇಯೇ ಆತ್ಮ ಸಾಕ್ಷಾತ್ಕಾರವನ್ನು ಸಾಧಿಸಬೇಕೆನ್ನುವುದು ಕುವೆಂಪುರವರ ಆಶಯವಾಗಿತ್ತು. ನಮ್ಮ ಆತ್ಮವು ಸದಾ ಸಜೀವ ಜ್ವಾಲೆಯಾಗಿ ಈಶ್ವರನನ್ನು ಸೋಕುತ್ತಲೇ ಇರಬೇಕು. ಕ್ಷಣ ಕ್ಷಣವೂ ಆತ್ಮವು ಪರಮಾತ್ಮನನ್ನು ಸ್ಪರ್ಶಿಸುವಂತೆ ದರ್ಶಿಸುವಂತೆ ಶಾಂತಿ ಇದಕ್ಕೆ ಬುದ್ಧಿ ತಾಕ್ಷತೆಯೊಂದಿದ್ದರೆ ಸಾಲದು ಹೃದಯ ತೀವ್ರತೆಯೂ ಇರಬೇಕು.

"ಇಷ್ಟ ದೈವವು ಭಕ್ತನ ಮನದಲ್ಲಿರುವ ಕಲ್ಪಿತಭಾವವಾಗಿರದೆ ರಕ್ತ ಮಾಂಸಗಳಿಂದ ಕೂಡಿದ ಮೂರ್ತಿಯಂತೆ ನಲಿಯುತ್ತದೆ. ಇದು ಬ್ರಹ್ಮ ಸಾಕ್ಷಾತ್ಕಾರ ಮೊದಲ ಮೆಟ್ಟಿಲಾಗಿದೆ" ಎಂದು ಕುವೆಂಪು ಬರೆದಿದ್ದಾರೆ. ಕುವೆಂಪುರವರು ಮಲೆನಾಡಿನ ನಿಸರ್ಗ ರಮ್ಯ ಪ್ರಕೃತಿಯನ್ನು ತಮ್ಮ ಕವಿತೆಗಳನ್ನೇ ಜಪಮಂತ್ರಗಳನ್ನಾಗಿಸಿ ಆರಾಧಿಸಿದರು. ಋಷಿಯ ಸಂಯಮ ನಿಗ್ರಹಗಳೊಂದಿಗೆ ಕವಿಯಾಗಿ ತಮ್ಮ ಬದುಕಿನಲ್ಲಿ ನವರಸಗಳನ್ನು ತಂದರು. ಅಭಿವ್ಯಕ್ತಿಸಿದರು. ಲೌಕಿಕವನ್ನು ಸಾರ್ಥಕತೆಯ ಸೀಮಾ ರೇಖೆಯೊಳಗೆ ಸಂಪ್ರದಾಯಗಳ ಗಡಿಯನ್ನು ಮೀರಿ ಸಾಕ್ಷಾತ್ಕರಿಸಿಕೊಂಡರು.

ಜಲಗಾರ ನಾಟಕದಲ್ಲಿ ಜಲಗಾರನು ಹೇಳುವ ಮಾತುಗಳು ಕರ್ಮಾರಾಧನೆ ಸೇವೆಯೇ ಪೂಜೆ ನನ್ನ ಭಾಗಕ್ಕೆ ಪೊರಕೆ ಆರತಿ ಗುಡಿಸುವುದೇ ನನ್ನ ದೇವರಪೂಜೆ ಯಾವುದೇ ವ್ಯಕ್ತಿ ವಸ್ತು ಕನಿಷ್ಟವಲ್ಲ, ಎಲ್ಲವೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾದವುಗಳೇ ಎಂಬ ಅಭಿಪ್ರಾಯವನ್ನು ಸಂಕೇತಿಸುತ್ತದೆ.

ಕುವೆಂಪುರವರು ಪ್ರತಿಪಾದಿಸುತ್ತಲೇ ಬಂದರು, ಕಲೆಯನ್ನಾಗಲಿ, ಕಾವ್ಯವನ್ನಾಗಲೀ ನಮ್ಮ ಆತ್ಮವಿಕಾಸದ ಮತ್ತು ಆಧ್ಯಾತ್ಮಿಕ ಉದ್ಧಾರದ ಓರೆಗಲ್ಲಿನ ಮೇಲೆಯೇ ಉಜ್ಜಿ ಕಟ್ಟಬೇಕಾಗುತ್ತದೆ. ಬರಿಯ ಮನೋಲ್ಲಾಸದ ಅಥವಾ ಸುಖಸ್ಥಾಪನೆಯ ದೃಷ್ಟಿ ಮಾತ್ರದಿಂದಲ್ಲ, ಎಂದು ಕುವೆಂಪು ತಿಳಿಸಿದರು.

ಈಗ ಕಾದಂಬರಿಯ ಆರಂಭದಲ್ಲಿಯೇ ಹೇಳುವ

"ಇಲ್ಲಿ ಯಾವುದಕ್ಕೂ ಮೊದಲಿಲ್ಲ:

ಯಾವುದಕ್ಕೂ ತುದಿಯಿಲ್ಲ:

ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ:

ಕೊನೆ ಮುಟ್ಟುವುದೂ ಇಲ್ಲ!"

ಎಂಬ ಮಾತು ಓದುಗನ ಮನಸ್ಸಿನಲ್ಲಿ ಸದಾ ಅನುರಣವಗೊಳ್ಳುತ್ತದೆ.

ಆ. ಕುವೆಂಪು ಕೃತಿಗಳು

ಕವನ ಸಂಕಲನ, ಮಹಾಕಾವ್ಯ, ಖಂಡಕಾವ್ಯ, ಕವನ ಸಂಕಲನ:

೧೯೨೨	–	Beginner's Muse –ಪ್ರಾರಂಭದ ಇಂಗ್ಲೀಷ್ ಕವನ ಸಂಕಲ
೧೯೨೪	–	ಅಮಲನ ಕಥೆ– ಮಕ್ಕಳಿಗಾಗಿ ಬರೆದ ಲಘುಕಾಲ್ಪನಿಕ ಕಾವ್ಯ
೧೯೨೬	–	ಹಾಳೂರು– ನೀಳ್ಗವನ
೧೯೨೮	–	ಬೊಮ್ಮನಹಳ್ಳಿಯ ಕಿಂದರಜೋಗಿ: ನೀಳ್ಗಾವ್ಯ ಮೊದಲು ಕಿರಿಯರ ಕಾಣಿಕೆಯಲ್ಲಿ ಪ್ರಕಟವಾಯಿತು.
೧೯೩೦	–	ಕೊಳಲು– ಕುವೆಂಪು ಅವರ ಮೊದಲನೆಯ ಪ್ರಾತಿನಿಧಿಕ ಕವನ ಸಂಕಲನ
೧೯೩೩	–	ಪಾಂಚಜನ್ಯ– ಕ್ರಾಂತಿ ಕವನಗಳು
೧೯೩೪	–	ನವಿಲು– ಪ್ರಕೃತಿ ಪ್ರಧಾನವಾದ ಕವನಗಳು
೧೯೩೪	–	ಕಲಾಸುಂದರಿ ಪ್ರಕೃತಿ ಪ್ರಧಾನವಾದ ಕವನಗಳು
೧೯೩೬	–	ಕಿಂದರಜೋಗಿ ಮತ್ತು ಇತರ ಕಥನ ಕವನಗಳು
೧೯೪೪	–	ಚಿತ್ರಾಂಗದಾ– ಸರಳರಗಳೆಯ ಖಂಡಕಾವ್ಯ
೧೯೪೬	–	ಕೋಗಿಲೆ ಮತ್ತು ಸೋವಿಯತ್ ರಶ್ಯಾ–ಕ್ರಾಂತಿ ಕವನಗಳು
೧೯೪೬	–	ನನ್ನ ಮನೆ– ಶಿಶು ಗೀತೆಗಳು
೧೯೪೬	–	ಕೃತ್ತಿಕೆ– ಪ್ರಧಾನವಾದ ಸಾನೆಟ್ಟುಗಳ ಕವನ ಸಂಕಲನ
೧೯೪೬	–	ಪಕ್ಷಿಕಾಶ್ಮೀರ– ಪ್ರೇಮಗೀತೆಗಳು
೧೯೪೬	–	ಅಗ್ನಿಹಂಸ– ಅನುಭಾವ ಪ್ರಧಾನವಾದ ಕವನಗಳು
೧೯೪೬	–	ಕಿಂಕಿಣಿ–ವಚನ ಕವನಗಳು
೧೯೪೬	–	ಶಿಶುಗೀತಾಂಜಲಿ
೧೯೪೭	–	ಮೇಘಪುರ–ಶಿಶುಗೀತೆಗಳು
೧೯೪೭	–	ಮರಿವಿಜ್ಞಾನ– ಶಿಶುಗೀತೆಗಳು

೧೯೪೭	–	ಷೋಡಶಿ– ಪ್ರೇಮಗೀತೆಗಳು
೧೯೪೭	–	ಶ್ರೀ ಸ್ವಾತಂತ್ರ್ಯೋದಯ ಮಹಾಗಾಥಾ ದೀರ್ಘಕವಿತೆ
೧೯೪೮	–	ಬಾಪೂಜಿಗೆ ಭಾಷ್ಪಾಂಜಲಿ – ಏಳು ಕವಿತೆಗಳು ಎರಡು ಭಾಷಣಗಳು.
೧೯೪೯	–	ಶ್ರೀ ರಾಮಾಯಣ ದರ್ಶನಂ– ಸಂಪುಟ– ೧ ಮಹಾಛಂದಸ್ಸಿನ ಕಾವ್ಯ
೧೯೫೧	–	ಶ್ರೀ ರಾಮಾಯಣ ದರ್ಶನಂ– ಸಂಪುಟ–೨, ಮಹಾಛಂದಸ್ಸಿನ ಕಾವ್ಯ
೧೯೫೪	–	ಚಂದ್ರ ಮಂಚಕೆ ಬಾ ಚಕೋರಿ! – ಪ್ರೇಮಕವನಗಳು
೧೯೫೭	–	ಇಕ್ಷು ಗಂಗೋತ್ರಿ–ದೇಶ–ಸಮಾಜವನ್ನು ಕುರಿತು ಕವನಗಳು
೧೯೬೩	–	ಅನಿಕೇತನ– ಅನುಭಾವ ಪ್ರಧಾನವಾದ ಕವಿತೆಗಳು
೧೯೬೫	–	ಅನುತ್ತಾರಾ– ಪ್ರೇಮ ಕವಿತೆಗಳು
೧೯೬೬	–	ಮಂತ್ರಾಕ್ಷತೆ– ಸಂಕೀರ್ಣ ಪುಡಿ ಕವನಗಳು
೧೯೬೭	–	ಪ್ರೇತ–ಕ್ಯೂ–ಸಾಮಾಜಿಕ, ರಾಜಕೀಯ ಸ್ಥಿತಿಗತಿಯನ್ನು ಕುರಿತ ಕವನಗಳು
೧೯೬೭	–	ಕುಟೀಚಕ– ಅನುಭಾವ ಪ್ರಧಾನವಾದ ಕವನಗಳು
೧೯೬೭	–	ಕದರಡಕೆ–ಪ್ರಕೃತಿ ಪ್ರಧಾನವಾದ ಕವನಗಳು
೧೯೭೬	–	ಹೊನ್ನಹೊತ್ತಾರ– ಕವಿತೆಗಳ ಸಂಕಲನ
೧೯೭೩	–	ಎಲಿಯನ್ ಹಾರ್ಪ್– ಇಂಗ್ಲೀಷ್ ಕವನಗಳು
೧೯೮೧	–	ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ
೧೯೮೧	–	ಸಮುದ್ರ ಲಂಘನ– ಸರಳರಗಳೆಯ ಖಂಡಕಾವ್ಯ
೧೯೮೫	–	ಮಹಾದರ್ಶನ ಮತ್ತು ಪ್ರಾಯಶ್ಚಿತ– ಸರಳರಗಳೆಯ ಎರಡು ಖಂಡಕಾವ್ಯಗಳು
೧೯೯೭	–	ಶ್ರೀ ರಾಮಾಯಣದರ್ಶನಂ– ಹಸ್ತಾಕ್ಷರದ ಮೂಲಪ್ರತಿಯ ಪ್ರತಿಕೃತಿ ಪ್ರಕಟಣೆ

ನಾಟಕಗಳು:

೧೯೨೬	–	ಮೋಡಣ್ಣನ ತಮ್ಮ– ಮಕ್ಕಳ ನಾಟಕ
೧೯೨೮	–	ಯಮನ ಸೋಲು
೧೯೨೮	–	ಜಲಗಾರ
೧೯೩೦	–	ನನ್ನ ಗೋಪಾಲ
೧೯೩೦	–	ಬಿರುಗಾಳಿ
೧೯೩೧	–	ಮೂರು ನಾಟಕಗಳು, ಮಹಾಶಿವರಾತ್ರಿ, ಸ್ಮಶಾನ ಕುರುಕ್ಷೇತ್ರಂ, ಜಲಗಾರ
೧೯೩೧	–	ವಾಲ್ಮೀಕಿಯ ಭಾಗ್ಯ
೧೯೩೧	–	ರಕ್ತಾಕ್ಷಿ
೧೯೪೪	–	ಶೂದ್ರತಪಸ್ವಿ
೧೯೪೭	–	ಬಲಿದಾನ
೧೯೭೬	–	ರಾಷ್ಟ್ರಕವಿ ಭಾಷಣಗಳು
೧೯೭೮	–	ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ– ಭಾಷಣ ಸಂಗ್ರಹ
೧೯೮೩	–	ದಾರ್ಶನಿಕ ಕಾವ್ಯಮೀಮಾಂಸೆ– ಆಯ್ದ ವಿಮರ್ಶಾ ಲೇಖನಗಳ ಸಂಕಲನ
೧೯೮೯	–	ಮುನ್ನುಡಿ ತೋರಣ
೧೯೭೪	–	ಕುವೆಂಪು ಪತ್ರಗಳು
೧೯೯೩	–	ಶ್ರೀರಾಮಕೃಷ್ಣ ವಚನವೇದ ನುಡಿನಮನ– ಕಿರುಪುಸ್ತಿಕೆ

ಭಾಷಾಂತರ:

೧೯೩೩	–	ವಿವೇಕವಾಣಿ-ವಿವೇಕಾನಂದರ ಬರಹಗಳಿಂದ ಆಯ್ದ ಭಾಗಗಳ ಭಾಷಾಂತರ ಹಾಗೂ ಪ್ರೇರಿತ ಕವನ, ಗದ್ಯ ಚಿತ್ರಗಳು
೧೯೩೪	–	ವೇದಾಂತ– ಸ್ವಾಮಿ ವಿವೇವಕಾನಂದರ ಭಾಷಣದ ಅನುವಾದ ಪುಸ್ತಿಕೆ
೧೯೫೦	–	ಜನಪ್ರಿಯ ವಾಲ್ಮೀಕಿ ರಾಮಾಯಣ– ಮೂಲರಾಮಾಯಣದ ಕಥೆ
೧೯೫೪	–	ಗುರುವಿನೊಡನೆ ದೇವರಡಿಗೆ ಭಾಗ–೧, ಶ್ರೀ ಸ್ವಾಮಿ ಶಿವಾನಂದರ ಮಾತುಕತೆಗಳು
೧೯೬೪	–	ಗುರುವಿನೊಡನೆ ದೇವರಡಿಗೆ ಭಾಗ–೨, ಶ್ರೀ ಸ್ವಾಮಿ ಶಿವಾನಂದರ ಮಾತುಕತೆಗಳು

ಜೀವನ ಚರಿತ್ರೆ, ಆತ್ಮಚರಿತ್ರೆ:

೧೯೩೨	–	ಸ್ವಾಮಿ ವಿವೇಕಾನಂದ ಜೀವನ ಚರಿತ್ರೆ
೧೯೩೪	–	ಶ್ರೀ ರಾಮಕೃಷ್ಣ ಪರಮಹಂಸ– ಜೀವನ ಚರಿತ್ರೆ
೧೯೮೦	–	ನೆನಪಿನ ದೋಣಿಯಲ್ಲಿ ಭಾಗ–೧, ಆತ್ಮಕಥೆ
೧೯೮೫	–	ನೆನಪಿನ ದೋಣಿಯಲ್ಲಿ ಭಾಗ–೨, ಆತ್ಮಕಥೆ

ಸಂಪಾದಿತ:

೧೯೫೮	–	ಕರ್ಣಾಟಕ ಭಾರತ ಕಥಾಮಂಜರಿ (ಮಾಸ್ತಿಯೊಂದಿಗೆ ಸಹ ಸಂಪಾದಿತ ಕೃತಿ)
೧೯೬೩	–	ಚಂದ್ರಹಾಸ
೧೯೭೪	–	ಕಾನೀನ
೧೯೯೫	–	ಸ್ಮಶಾನ ಕುರುಕ್ಷೇತ್ರಂ ಮತ್ತು ಮಹಾಶಿವರಾತ್ರಿ
೧೯೯೫	–	ಸ್ಮಶಾನ ಕುರುಕ್ಷೇತ್ರಂ ಮತ್ತು ಬೆರಳ್ಗೆ ಕೊರಳ್

ಕಾದಂಬರಿ, ಕಥೆ, ಗದ್ಯ, ಚಿತ್ರ:

೧೯೩೦	–	ನರಿಗಳಿಗೇಕೆ ಕೋಡಿಲ್ಲ– ಮಕ್ಕಳ ಕಥೆ
೧೯೩೩	–	ಮಲೆನಾಡಿನ ಚಿತ್ರಗಳು– ಗದ್ಯ ಚಿತ್ರಗಳ ಸಂಕಲನ
೧೯೩೬	–	ಸಂನ್ಯಾಸಿ ಮತ್ತು ಇತರ ಕಥೆಗಳು–ಸಣ್ಣ ಕಥೆಗಳ ಸಂಕಲನ
೧೯೩೬	–	ಕಾನೂರು ಹೆಗ್ಗಡತಿ– ಕುವೆಂಪು ಅವರ ಪ್ರಥಮ ಮಹಾಕಾದಂಬರಿ
೧೯೪೦	–	ನನ್ನ ದೇವರು ಮತ್ತು ಇತರ ಕಥೆಗಳು, ಕಥಾಸಂಕಲನ
೧೯೬೭	–	ಮಲೆಗಳಲ್ಲಿ ಮದುಮಗಳು– ಕುವೆಂಪು ಅವರ ಎರಡನೆ ಕಾದಂಬರಿ
೧೯೮೫	–	ಕವಿತೆಗಳೊಡನೆ ಆರಂಭದಲ್ಲಿ–ಕಥಾಸಂಕಲನ

ಕಾವ್ಯಮೀಮಾಂಸೆ, ಸಾಹಿತ್ಯ ವಿಮರ್ಶೆ, ಭಾಷಣ, ಪತ್ರಗಳು:

೧೯೪೪	–	ಸಾಹಿತ್ಯ ಪ್ರಚಾರ– ಭಾಷಣಗಳ ಸಂಗ್ರಹ
೧೯೪೪	–	ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ– ಭಾಷಣಗಳ ಸಂಕಲನ
೧೯೪೬	–	ಕಾವ್ಯವಿಹಾರ– ವಿಮರ್ಶಾತ್ಮಕ ಲೇಖನಗಳು
೧೯೫೦	–	ತಪೋನಂದನ– ದಾರ್ಶನಿಕ ವಿಮರ್ಶೆ
೧೯೫೩	–	ವಿಭೂತಿ ಪೂಜೆ– ವಿಮರ್ಶೆಯ ಲೇಖನಗಳು
೧೯೫೯	–	ವಿಶ್ವವಿದ್ಯಾನಿಲಯದ ಪ್ರಸಾರಂಗ, ಕುಲಪತಿ ಭಾಷಣಗಳ ಆಯ್ದ ಭಾಗಗಳು
೧೯೬೦	–	ದ್ರೌಪದಿಯ ಶ್ರೀಮುಡಿ–ಸಾಹಿತ್ಯ ವಿಮರ್ಶೆ ಮತ್ತು ಕಾವ್ಯಮೀಮಾಂಸೆ
೧೯೬೨	–	ರಸೋವೈಸಃ– ಸಾಹಿತ್ಯ ವಿಮರ್ಶೆ ಮತ್ತು ಕಾವ್ಯಮೀಮಾಂಸೆ
೧೯೬೪	–	ಷಷ್ಟಿನಮನ– ಭಾಷಣ, ಲೇಖನ, ಮುನ್ನುಡಿಗಳ ಸಂಗ್ರಹ
೧೯೬೬	–	ಶ್ರೀ ಕುವೆಂಪು ಭಾಷಣಗಳು– ಭಿನ್ನವತ್ತಳೆಗಳು
೧೯೭೦	–	ಇತ್ಯಾದಿ– ವಿಮರ್ಶಾ ಸಂಕಲನ
೧೯೭೧	–	ಮನುಜಮತ ವಿಶ್ವಪಥ– ಭಾಷಣ ಲೇಖನ ಸಂಗ್ರಹ
೧೯೭೬	–	ವಿಚಾರಕ್ರಾಂತಿಗೆ ಆಹ್ವಾನ– ಭಾಷಣ ಸಂಕಲನ

ಆಯ್ದ ಕವನ ಸಂಕಲನಗಳು:

೧೯೬೫	–	ಕಾವ್ಯರ್ಷಿ ಕುವೆಂಪು ಕೊಟ್ಟ ಕನ್ನಡ ದೀಕ್ಷೆ
೧೯೬೮	–	ಕನ್ನಡಿ ಡಿಂಡಿಮ
೧೯೭೨	–	ಪ್ರಾರ್ಥನಾ ಗೀತಾಂಜಲಿ
೧೯೭೩	–	ಕಬ್ಬಿಗನ ಕೈಬುಟ್ಟಿ
೧೯೭೭	–	ಕ್ರಾಂತಿ ಕಹಳೆ
೧೯೮೪	–	ಆಯ್ದ ಕುವೆಂಪು ಕವನಗಳು

೩. ಕುವೆಂಪು ಅವರಿಗೆ ಸಂದ ಪ್ರಶಸ್ತಿಗಳು, ಗೌರವಗಳು:–

೧. ಪ್ರಶಸ್ತಿಗಳು:

೧. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ – ೧೯೫೫

೨. ಪದ್ಮಭೂಷಣ – ೧೯೫೮

೩. ರಾಷ್ಟ್ರಕವಿ – ೧೯೬೫

೪. ಜ್ಞಾನಪೀಠ ಪ್ರಶಸ್ತಿ – ೧೯೬೭

೫. ಕೇಂದ್ರಸಾಹಿತ್ಯ ಅಕಾಡೆಮಿ ಫೆಲೋಶಿಪ್ – ೧೯೭೯

೬. ಪದ್ಮವಿಭೂಷಣ – ೧೯೮೮

೭. ಪಂಪ ಪ್ರಶಸ್ತಿ – ೧೯೮೮

೮. ಕರ್ನಾಟಕ ರತ್ನ – ೧೯೯೨

೨. ಗೌರವ ಡಾಕ್ಟರೇಟ್ ಪದವಿಗಳು:

೧. ಮೈಸೂರು ವಿಶ್ವವಿದ್ಯಾನಿಲಯ – ೧೯೫೬

೨. ಕರ್ನಾಟಕ ವಿಶ್ವವಿದ್ಯಾನಿಲಯ – ೧೯೬೬

೩. ಬೆಂಗಳೂರು ವಿಶ್ವವಿದ್ಯಾನಿಲಯ – ೧೯೬೬

೪. ಗುಲ್ಬರ್ಗಾ ವಿಶ್ವವಿದ್ಯಾನಿಲಯ – ೧೯೮೫

೫. ಕಲಾ ಮತ್ತು ಸಾಂಸ್ಕೃತಿಕ ವಿಶ್ವ

ಅಕಾಡೆಮಿ ಸ್ಯಾನ್ ಫ್ರಾನ್ಸಿಸ್ಕೊ – ೧೯೫೬

೬. ಮಂಗಲೂರು ವಿಶ್ವವಿದ್ಯಾನಿಲಯ – ೧೯೮೬

೭. ಕಾನ್‌ಪುರ ವಿಶ್ವವಿದ್ಯಾನಿಲಯ – ೧೯೯೩

೮. ಕುವೆಂಪು ವಿಶ್ವವಿದ್ಯಾನಿಲಯ – ೧೯೯೩


ಕುವೆಂಪುರವರು ಕೃಷಿಗಾಗಿ ಬಳಸಿದ ಸಾಮಾಗ್ರಿಗಳು



ಭತ್ತ ಮತ್ತು ರಾಗಿ ತುಂಬುವ ಕಣಜ



ಕೃಷಿಗೆ ಬಳಸುತ್ತಿದ್ದ ಸಾಮಾಗ್ರಿಗಳು, ನೇಗಿಲು, ನೊಗ, ಹಲುಬೆ, ಗುದ್ದಲಿ



ಎತ್ತಿನ ಗಾಡಿ ಮತ್ತು ಒಳಕಲ್ಲು



ಔಷಧಿ ಸಿಂಪಡಿಸುವ ಯಂತ್ರ

ಅ. ಗ್ರಂಥಋಣ

೧. ಕುವೆಂಪು: ಮಲೆಗಳಲ್ಲಿ ಮದುಮಗಳು

ಪ್ರ: ಉದಯರವಿ ಪ್ರಕಾಶನ, ವಾಣೀವಿಲಾಸ ಪುರಂ

೨. ಡಾ.ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ.

ಜೆ.ಸಿ.ರಸ್ತೆ, ಬೆಂಗಳೂರು– ೫೬೦೦೦೨

೩. ಟಿ.ಪಿ. ಅಶೋಕ: ಕುವೆಂಪು ಕಾದಂಬರಿಗಳು ಎರಡು ಅಧ್ಯಯನ, ಅಕ್ಷರ ಪ್ರಕಾಶನ ಹೆಗ್ಗೋಡು, ಬೆಂಗಳೂರು.

೪. ಡಾ.ಚಕ್ಕೆರೆ ಶಿವಶಂಕರ್: ಸಹ್ಯಾದ್ರಿಯ ಸೂರ್ಯ ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್, ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು–೧೮

೫. ಡಾ. ಉದ್ದಂಡಯ್ಯ: ಕುವೆಂಪು ಕಥನ, ಅಧ್ಯಯನ ಮಂಡಲ, ಆರ್.ವಿ.ರೋಡ್, ಬಸವನಗುಡಿ, ಬೆಂಗಳೂರು–೫೬೦೦೦೪

೬. ಪ್ರೊ. ಸೋಮಶೇಕರಗೌಡ: ಕುವೆಂಪು: ಅನುಸಂಧಾನ, ಸಿವಿಜಿ ಪ್ರಕಾಶನ, ನಂ.೭೦ ಎರಡನೇ ಮುಖ್ಯರಸ್ತೆ, ಜಬ್ಬರ್ ಬ್ಲಾಕ್, ವಯ್ಯಾಲಿಕವಲ್, ಬೆಂಗಳೂರು–೫೬೦೦೦೩

೭. ಡಾ.ಯು.ಆರ್.ಅನಂತಮೂರ್ತಿ: ಪ್ರಜ್ಞೆ ಮತ್ತು ಪರಿಸರ ಅಕ್ಷರ ಪ್ರಕಾಶನ, ಸಾಗರ.

೮. ಡಿ.ಆರ್.ನಾಗರಾಜು: ಅಮೃತ ಮತ್ತು ಗರುಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೯. ಜವರೇಗೌಡ ದೇ. ಸಹ್ಯಾದ್ರಿ, ಪರಮಶಿವಯ್ಯ ಜೀ. ಸಂ. ಕೃಷ್ಣಕುಮಾರ, ಸಿ.ಪಿ. ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

೧೦. ಮ.ನ.ಜವರಯ್ಯ: ಪರಂಪರೆ ಮತ್ತು ದಲಿತ ಬಂಡಾಯ ಸಮಗ್ರ ಅಧ್ಯಯನ

೧೧. ಡಾ. ಅರವಿಂದ ಮಾಲಗತ್ತಿ: ದಲಿತ ಯುಗ ಮತ್ತು ಕನ್ನಡ ಸಾಹಿತ್ಯ

೧೨. ಗಿರಡ್ಡಿ ಗೋವಿಂದರಾಜು– ನವ್ಯ ವಿಮರ್ಶೆ

೧೩. ಮು. ಶಿವನಂಜಯ್ಯ: ಕುವೆಂಪು ಕಾದಂಬರಿಗಳಲ್ಲಿ ಜನ ಜೀವನ.

೧೪. ಎಸ್.ಚನ್ನಪ್ಪ: ಕುವೆಂಪು ಸಾಹಿತ್ಯ ಸಹ್ಯಾದ್ರಿ

೧೫. ಕೃಷ್ಣಪ್ಪ ಬಿ. : ಶ್ರೀ ಕುವೆಂಪು, ಪ್ರಸಾರಾಂಗ, ಬೆಂಗಳೂರು, ವಿ.ವಿ. ಬೆಂಗಳೂರು–೪೬

೧೬. ದೇ.ಜವರೇಗೌಡ : ಕುವೆಂಪು ಸಾಹಿತ್ಯ ಚಿಂತನ, ಸಹ್ಯಾದ್ರಿ ಪ್ರಕಾಶನ, ಮೈಸೂರು.

೧೭. ಕುವೆಂಪು ಕೃತಿ ವಿಮರ್ಶೆ, ಪ್ರೊ. ಅರವಿಂದ ಮಾಲಗತ್ತಿ– ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ–೨೦೦೬

ಲೇಖನಗಳ ಆಕರ ಸೂಚಿ

❖ ಕಾದಂಬರಿಯಲ್ಲಿ ವೈಚಾರಿಕತೆ: ಡಾ. ಗಿರಡ್ಡಿ ಗೋವಿಂದ ರಾಜ.

ಮನ್ವಂತರ–೨ ಸಂ–ಜೆ–ಬಿ ಜೋಶಿ ಮನ್ವಂತರ ಪ್ರಕಾಶನ, ಧಾರವಾಡ, ೧೯೬೮

❖ ಮಲೆಗಳಲ್ಲಿ ಮದುಮಗಳು ಪಾತ್ರಗಳ ಅಭ್ಯಾಸ: ಶ್ರೀ ಕೃಷ್ಣ ಆಲನಹಳ್ಳಿ

ಗಂಗೋತ್ರಿ– ಪ–ಸ–ಹಾ.ಮಾ.ನಾಯಕ, ಈತಾ ಬುಕ್‌ಹೌಸ್, ಮೈಸೂರು–೧೯೬೮

❖ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು– ಡಾ.ಎಂ.ಜಿ. ಕೃಷ್ಣಮೂರ್ತಿ

ಆಧುನಿಕ ಭಾರತೀಯ ಸಾಹಿತ್ಯ ಅಕ್ಷರ ಪ್ರಕಾಶನ, ಸಾಗರ, ೧೯೭೦

❖ ಎರಡನ್ನೂ ಬಿಟ್ಟು ನೋಡಿದಾಗ– ವಿ.ಎಂ.ಇನಾಂದಾರ

ಕುವೆಂಪು ಕಾದಂಬರಿಗಳು, ಉಷಾ ಸಾಹಿತ್ಯ ಮಾಲೆ ಮೈಸೂರು–೧೯೩೯

❖ ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರ– ಟಿ.ಕೃಷ್ಣಪ್ಪ.

ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ೧೯೮೦

❖ ಕುವೆಂಪು ಕಥನ ಶೈಲಿ– ದೇ. ಜವರೇಗೌಡ

ಸಹ್ಯಾದ್ರಿ ಪ್ರಕಾಶನ, ಮೈಸೂರು–೧೯೯೧

❖ ಕುವೆಂಪು ಕಾದಂಬರಿಗಳಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ– ಜಿ.ಎಸ್.ಆಮೂರ

ಕನ್ನಡ ಕಥನ ಸಾಹಿತ್ಯ ಕಾದಂಬರಿ– ಶ್ರೀಹರಿ ಪ್ರಕಾಶನ ಧಾರವಾಡ–೧೯೯೪

❖ ಕುವೆಂಪು ಕಾದಂಬರಿಗಳು– ಒಂದು ಸ್ತ್ರೀವಾದಿ ಓದು– ಡ.ಟಿ.ಎನ್.ಸುಮಿತ್ರಾಬಾಯಿ

ಸ್ತ್ರೀವಾದ ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

❖ ಕುವೆಂಪು ಕಾದಂಬರಿಗಳಲ್ಲಿ ಪರಿಸರ: ಡಾ. ಗುರುಪಾದ ಮರಿಗುದ್ದಿ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ –೧೯೯೯

❖ ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ: ವಿ.ಚಂದ್ರಶೇಖರ ನಂಗಲಿ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೧